ಮಂಗಳವಾರ, ಫೆಬ್ರುವರಿ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 39 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಕೋವಿಡ್‌ಗೆ ತುತ್ತಾದವರಲ್ಲಿ ಚೇತರಿಕೆಯ ನಂತರವೂ ಸುಸ್ತಿನ ಲಕ್ಷಣಗಳು ಕಾಣುತ್ತವೆ. ಕೋವಿಡ್ ಚೇತರಿಕೆಯ ನಂತರ ಈ ಸುಸ್ತು ಏಕಾಗುತ್ತಿದೆ? ಇದಕ್ಕೆ ಪರಿಹಾರಗಳೇನು?



ಸಂಖ್ಯೆ-ಸುದ್ದಿ
ಕುಬೇರ ರಾಜಕೀಯ ಪಕ್ಷ ಬಿಜೆಪಿ

ಆದಿತ್ಯನಾಥ ವಿರುದ್ಧ ಶುಭವತಿ ಕಣಕ್ಕೆ 6
‘ಎಸ್‌ಪಿ ಗೆದ್ದರೆ ಅಪರಾಧಿಗಳ ಕನಸು ನನಸು’ 6

ಸೆನ್ಸೆಕ್ಸ್ 57,621
ನಿಫ್ಟಿ 17,213

ಚಿಕ್ಕಮಗಳೂರಿನಲ್ಲಿ ಹಿಜಾಬ್ ಬೆಂಬಲಕ್ಕೆ ನಿಂತ ನೀಲಿ ಶಾಲು

ಹಿಜಾಬ್–ಶಾಲು: ಹಬ್ಬಿದ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ-ಕಾಲೇಜುಗಳಲ್ಲಿ ಹಿಜಾಬ್ (ಶಿರವಸ್ತ್ರ)–ಕೇಸರಿ ಶಾಲಿಗೆ ನಿರ್ಬಂಧ ವಿಧಿಸಿ, ಸಮವಸ್ತ್ರ ಕಡ್ಡಾಯಗೊಳಿಸಿರುವ ಶಿಕ್ಷಣ ಇಲಾಖೆ ಆದೇಶವನ್ನು ವಿದ್ಯಾರ್ಥಿಗಳು ಧಿಕ್ಕರಿಸಿದ್ದಾರೆ. ಈ ಬೆನ್ನಲ್ಲೇ, ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿದ್ದ ‘ವಸ್ತ್ರ ರಾಜಕೀಯ ವಿವಾದ’ ಸೋಮವಾರ ಮತ್ತಷ್ಟು ಜಿಲ್ಲೆಗಳಿಗೆ ಹಬ್ಬಿದೆ.

ಏತನ್ಮಧ್ಯೆ, ಹಿಜಾಬ್‌ಗೆ ನಿರ್ಬಂಧ ವಿಧಿಸಿರುವ ಸರ್ಕಾರದ ಆದೇಶವನ್ನು ವಿರೋಧಿಸಿ ಕೆಲವು ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ, ಹಿಜಾಬ್‌ಗೆ ಬೆಂಬಲ ಸೂಚಿಸಿದರು. ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಬೇಕೆಂಬ ಪಟ್ಟು ಹಿಡಿದಿರುವ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿಕೊಂಡು ಪ್ರತಿಭಟಿಸಿದ್ದೂ ನಡೆದಿದೆ. ಇದು ಕೆಲವು ಕಡೆ ವಾಗ್ವಾದಗಳಿಗೂ ಕಾರಣವಾಗಿದೆ.

ಚಿಕ್ಕಮಗಳೂರಿನ ಐಡಿಎಸ್‌ಜಿ ಸರ್ಕಾರಿ ಕಾಲೇಜಿನಲ್ಲಿ ಹಿಜಾಬ್–ಕೇಸರಿ ಶಾಲಿನ ಪೈಪೋಟಿಗೆ ಪರ್ಯಾಯವಾಗಿ, ಹಿಜಾಬ್ ಬೆಂಬಲಕ್ಕೆ ನಿಂತ ಬಹುಜನ ವಿದ್ಯಾರ್ಥಿ ಸಂಘಟನೆಯ ವಿದ್ಯಾರ್ಥಿಗಳು ನೀಲಿ ಶಾಲು ಧರಿಸಿ ಬಂದಿದ್ದಲ್ಲದೇ, ಜೈ ಭೀಮ್ ಘೋಷಣೆ ಕೂಗಿದರು. ಕೇಸರಿ–ನೀಲಿ ಶಾಲುಗಳನ್ನು ಹಾಕಿಕೊಂಡಿದ್ದ ವಿದ್ಯಾರ್ಥಿಗಳು ಕೆಲಹೊತ್ತು ಪರಸ್ಪರ ಮುಖಾಮುಖಿಯಾದರು. ಹಾವೇರಿಯಲ್ಲಿ ರಾಷ್ಟ್ರಧ್ವಜ ಹಿಡಿದು ಬಂದಿದ್ದ ಎಸ್‌ಎಫ್‌ಐ ನೇತೃತ್ವದ ವಿದ್ಯಾರ್ಥಿಗಳ ತಂಡ, ವಿದ್ಯಾರ್ಥಿಗಳ ಏಕತೆ ಮುರಿಯಲು ಹಿಜಾಬ್–ಕೇಸರಿ ಶಾಲು ವಿವಾದ ಸೃಷ್ಟಿಸಲಾಗಿದೆ ಎಂದು ಆಪಾದಿಸಿತು.

ಎಲ್ಲ ಶಾಲೆ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಸಮವಸ್ತ್ರ ಸಂಹಿತೆ ಪಾಲಿಸಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಶುಕ್ರವಾರ ಆದೇಶ ಹೊರಡಿಸಿತ್ತು. ವಿವಾದ ಕೊನೆಗೊಳ್ಳುವ ಬದಲು, ಮತ್ತಷ್ಟು ಜಿಲ್ಲೆಗಳಿಗೆ ವ್ಯಾಪಿಸಲು ಈ ಆದೇಶ ಕಾರಣವಾದಂತಾಗಿದೆ.

ಗದಗ, ಮೈಸೂರು, ಚಾಮರಾಜನಗರ, ಬೆಳಗಾವಿ, ಹೊಸಪೇಟೆ, ವಿಜಯಪುರ, ಯಾದಗಿರಿ, ಶಹಾಪುರ, ಹುಬ್ಬಳ್ಳಿ, ತುಮಕೂರು ಜಿಲ್ಲೆ ತಿಪಟೂರು ಸೇರಿ ಹಲವು ಕಡೆಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದರೆ, ಅದಕ್ಕೆ ಪ್ರತಿಯಾಗಿ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಬಂದಿದ್ದರು. ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದ ಕರ್ನಾಟಕ ರಾಜ್ಯ ಮಹಿಳಾ ಒಕ್ಕೂಟದ ಕಾರ್ಯಕರ್ತರು, ‘ಹಿಜಾಬ್ ನಮ್ಮ ಹಕ್ಕು, ನಮ್ಮ ಕಿರೀಟ, ನಮ್ಮ ಸೌಂದರ್ಯ. ಇದನ್ನು ಹತ್ತಿಕ್ಕಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಘೋಷಣೆ ಕೂಗಿದರು. ರಾಜ್ಯದ ಹಲವು ಕಡೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಬೆಂಬಲಿಸಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿ, ಬಿಜೆಪಿ ಸರ್ಕಾರ ಮತ್ತು ಸಂಘ ಪರಿವಾರದ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದರು.

ಬೈಂದೂರು ತಾಲ್ಲೂಕಿನ ಉಪ್ಪುಂದ ಪ್ರೌಢಶಾಲೆಯಲ್ಲಿ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಹಾಗೂ ಕೇಸರಿ ಶಾಲು ಧರಿಸಿ ಬಂದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ಪರೀಕ್ಷೆ ನಡೆಯುತ್ತಿರುವುದರಿಂದ ಶಾಲಾ ಆಡಳಿತ ಮಂಡಳಿ ಈ ನಿರ್ಧಾರ ತೆಗೆದುಕೊಂಡಿದ್ದು, ಹಿಜಾಬ್ ಹಾಕಿಕೊಂಡಿದ್ದ ವಿದ್ಯಾರ್ಥಿನಿಯರು ಹಾಗೂ ಕೇಸರಿ ಶಾಲು ಹೊದ್ದಿದ್ದ ವಿದ್ಯಾರ್ಥಿಗಳು ತರಗತಿಯಲ್ಲಿ ಒಟ್ಟಿಗೆ ಕುಳಿತು ಪರೀಕ್ಷೆ ಬರೆದರು.

ಕುಂದಾಪುರದ ಸರ್ಕಾರಿ ಜೂನಿಯರ್ ಕಾಲೇಜಿಗೆ ಹಿಜಾಬ್ ಸಹಿತ ಬಂದ ವಿದ್ಯಾರ್ಥಿನಿಯರನ್ನು ಪ್ರತ್ಯೇಕ ಕೊಠಡಿಯಲ್ಲಿ ಕೂರಿಸಲಾಯಿತು. ಬಸ್ರೂರು ಶಾರದಾ ಕಾಲೇಜಿನಲ್ಲೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಯಿತು. ಕುಂದಾಪುರದ ಆರ್‌ಎನ್ ಶೆಟ್ಟಿ ಕಾಲೇಜಿಗೆ ಸೋಮವಾರ ರಜೆ ಘೋಷಿಸಲಾಗಿತ್ತು. ಕುಂದಾಪುರದ ವೆಂಕಟರಮಣ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಹಳೆ ಬಸ್ ನಿಲ್ದಾಣದಿಂದ ಕಾಲೇಜಿನವರೆಗೂ ಮೆರವಣಿಗೆ ನಡೆಸಿದರು.

ತನಿಖೆಗೆ ಮನವಿ: ‘ಉಡುಪಿಯಲ್ಲಿ ಶಿರವಸ್ತ್ರ ಧರಿಸಿ ತರಗತಿಯಲ್ಲಿ ಕೂರುವ ಬಗ್ಗೆ ಪಟ್ಟು ಹಿಡಿದ ಆರು ವಿದ್ಯಾರ್ಥಿನಿಯರ ಹಿಂದೆ ಯಾರು ಇದ್ದಾರೆ. ಯಾವ ಕುಮ್ಮಕ್ಕಿನಿಂದ ಈ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಬೇಕು’ ಎಂದು ಉಡುಪಿ ಶಾಸಕ ರಘುಪತಿ ಭಟ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಪತ್ರ ಬರೆದಿದ್ದಾರೆ.

ಇನ್ನಷ್ಟು ಸುದ್ದಿಗಳು 5



ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜು ಆವರಣಕ್ಕೆ ಸೋಮವಾರ ನೀಲಿ ಶಾಲು ಧರಿಸಿ ಬಂದ ವಿದ್ಯಾರ್ಥಿಗಳು

ಸಮವಸ್ತ್ರ ಸುತ್ತೋಲೆ ಪಾಲಿಸಿ: ಬೊಮ್ಮಾಯಿ ಮನವಿ

ನವದೆಹಲಿ: ದೇಶದ ಶಾಲೆ-ಕಾಲೇಜುಗಳಲ್ಲಿ ಯಾವ ರೀತಿಯ ಸಮವಸ್ತ್ರ ಇರಬೇಕು ಎಂಬುದನ್ನು ದೇಶದ ಸಂವಿಧಾನ ಸ್ಪಷ್ಟವಾಗಿ ತಿಳಿಸಿದೆ. ಸಮವಸ್ತ್ರ ಸಂಬಂಧ ಸರ್ಕಾರ ಈಗಾಗಲೇ ಹೊರಡಿಸಿರುವ ಸುತ್ತೋಲೆಯನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಮುಖ್ಯ. ಪರೀಕ್ಷೆಗಳು ಹತ್ತಿರ ಆಗುತ್ತಿರುವುದರಿಂದ ಹಿಜಾಬ್ ಮತ್ತು ಕೇಸರಿ ಶಾಲಿನ ಕುರಿತು ಗೊಂದಲ ಉಂಟು ಮಾಡಬಾರದು ಎಂದು ಕೋರಿದರು.

ಈ ಪ್ರಕರಣ ಹೈಕೋರ್ಟ್ ಮುಂದಿದ್ದು, ವಿಚಾರಣೆಯ ನಂತರ ತೀರ್ಮಾನ ಹೊರಬೀಳಲಿದೆ. ಅಲ್ಲಿಯವರೆಗೆ ಸುತ್ತೋಲೆಯನ್ನು ಪಾಲಿಸಬೇಕು. ಯಾರೂ ಶಾಂತಿಯನ್ನು ಕದಡುವ ಕೆಲಸಕ್ಕೆ ಮುಂದಾಗಬಾರದು ಎಂದು ಅವರು ಮನವಿ ಮಾಡಿದರು.

ಹೈಕೋರ್ಟ್‌ನಲ್ಲಿ ಅರ್ಜಿ ವಿಚಾರಣೆ ಇಂದು



ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಹಿಜಾಬ್ (ಶಿರವಸ್ತ್ರ) ಧರಿಸುವುದಕ್ಕೆ ನಿರ್ಬಂಧ ವಿಧಿಸಿರುವುದನ್ನು ಪ್ರಶ್ನಿಸಲಾದ ರಿಟ್ ಅರ್ಜಿಯ ಜತೆಗೆ ಇನ್ನೂ ನಾಲ್ಕು ಅರ್ಜಿಗಳು ಹೈಕೋರ್ಟ್‌ನಲ್ಲಿ ದಾಖಲಾಗಿವೆ.

ಈ ಅರ್ಜಿಗಳನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠ ಮಂಗಳವಾರ (ಫೆ.8) ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ. ರಾಜ್ಯದ ಎಲ್ಲ ಶಾಲೆ ಕಾಲೇಜುಗಳಲ್ಲಿ ಸಮವಸ್ತ್ರ ಕುರಿತಂತೆ ಸರ್ಕಾರ ಕಳೆದ ತಿಂಗಳ 31ರಂದು ಹೊರಡಿಸಿರುವ ಸುತ್ತೋಲೆಯನ್ನು ಪ್ರಶ್ನಿಸಿದ ಅರ್ಜಿಯೂ ಇವುಗಳಲ್ಲಿ ಸೇರಿದೆ.

> ಕೇಸರಿ ಬಟ್ಟೆ ಇಲ್ಲವೇ ಹಿಜಾಬ್ ಹಾಕಿಕೊಂಡ ತಕ್ಷಣ ಸಮಾಜ ಉದ್ಧಾರ ಆಗುವುದಿಲ್ಲ. ಇದನ್ನೆಲ್ಲ ನೋಡಿದರೆ ನಮ್ಮ ರೈತ ಮಕ್ಕಳು ಹಳ್ಳಿ ಶಾಲೆಗಳಿಗೆ ಹಸಿರು ಶಾಲು ಹಾಕಿಕೊಂಡು ಹೋಗಿ ಎಂದು ಕರೆ ಕೊಡಬೇಕಾಗುತ್ತದೆ.
>
> **ಎಚ್‌.ಡಿ. ಕುಮಾರಸ್ವಾಮಿ**, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜೈಲಿಗೆ ಕಳುಹಿಸುತ್ತೇವೆ ಹೈಕೋರ್ಟ್ ಎಚ್ಚರಿಕೆ

ಕೈಮುಗಿದು ಬೇಡಿಕೊಂಡ ಪಾಲಿಕೆ ಮುಖ್ಯ ಎಂಜಿನಿಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಿಂದೀಗಲೇ ನಿಮ್ಮನ್ನು ಸೇವೆಯಿಂದ ಅಮಾನತು ಮಾಡಿ ಜೈಲಿಗೆ ಅಟ್ಟುವಂತೆ ಆದೇಶಿಸುತ್ತೇನೆ. ನಿಮ್ಮ ಕರ್ತವ್ಯ ನಿರ್ಲಕ್ಷ್ಯವನ್ನು ನೋಡಿಕೊಂಡು ಕೋರ್ಟ್ ಸುಮ್ಮನೇ ಕೂರಲಾಗುವುದಿಲ್ಲ. ಕಳೆದ ವಾರವಷ್ಟೇ ರಸ್ತೆ ಗುಂಡಿ ತಪ್ಪಿಸಲು ಹೋಗಿ ಮಹಿಳೆಯೊಬ್ಬರು ಪ್ರಾಣ ಕಳೆದುಕೊಂಡಿದ್ದಾರೆ... ಇದಕ್ಕೆಲ್ಲಾ ಯಾರು ಹೊಣೆ...?



ಬಿ.ಎಸ್.ಪ್ರಹ್ಲಾದ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್ ಅವರನ್ನು (ಬಿಬಿಎಂಪಿ) ಹೈಕೋರ್ಟ್, ಸೋಮವಾರ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಪರಿ ಇದು.

‘ನಗರದಲ್ಲಿನ ರಸ್ತೆ ಗುಂಡಿಗಳಿಂದ ಸಾರ್ವಜನಿಕರು ಸಾವು ನೋವುಗಳಿಗೆ ಈಡಾಗುತ್ತಿದ್ದಾರೆ’ ಎಂದು ಆಕ್ಷೇಪಿಸಿ ಕೋರಮಂಗಲದ ವಿಜಯನ್ ಮೆನನ್ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಾಲಯದ ನಿರ್ದೇಶನದಂತೆ ಖುದ್ದು ಹಾಜರಾಗಿದ್ದ ಬಿ.ಎಸ್. ಪ್ರಹ್ಲಾದ್, ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ಕಾರಣಗಳನ್ನು ನೀಡಲು ಮುಂದಾದರು.

ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ನ್ಯಾಯಪೀಠ, ‘ಎಸಿ ಕಚೇರಿಯಲ್ಲಿ ಕೂರುವ ನಿಮಗೆ ಜನರ ಕಷ್ಟ ಅರ್ಥವಾಗುವುದಿಲ್ಲ. ಇಲ್ಲಿ ಬಂದು ಬರೀ ಕಾರಣಗಳನ್ನು ಹೇಳುತ್ತೀರಿ. ಕಳೆದ ವಾರ ಮಹಿಳೆಯೊಬ್ಬರು ರಸ್ತೆ ಗುಂಡಿ ತಪ್ಪಿಸಲು ಹೋಗಿ ಬೈಕ್‌ನಿಂದ ಕೆಳಗೆ ಬಿದ್ದು ಸಾವನ್ನಪ್ಪಿದ್ದಾರೆ. ಇದಕ್ಕಿಂತ ಹೀನಾಯ ಸ್ಥಿತಿ ಮತ್ತೇನಿದೆ’ ಎಂದು ಕಟುವಾಗಿ ಪ್ರಶ್ನಿಸಿತು.

3B ಪುಟ ನೋಡಿ

ಸಾವಿರ ಕೋಟಿ ಖರ್ಚು...!

‘ರಸ್ತೆ ಗುಂಡಿ ರಿಪೇರಿ ಮಾಡಲು ಬಿಬಿಎಂಪಿ ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ಯಾವ ಲೆಕ್ಕದಲ್ಲಿ ಎಂಬುದೇ ತಿಳಿಯುತ್ತಿಲ್ಲ’ ಎಂಬ ಅಂಶವನ್ನು ಅರ್ಜಿದಾರರ ಪರ ವಕೀಲೆ ಎಸ್.ಆರ್.ಅನುರಾಧಾ ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಹುಬ್ಬೇರಿಸಿದ ನ್ಯಾಯಪೀಠ, ‘ಅಷ್ಟೊಂದು ಹಣ ರಸ್ತೆ ರಿಪೇರಿ ಮಾಡಲಿಕ್ಕೋ ಅಥವಾ ರಸ್ತೆಗಳನ್ನೇ ನಿರ್ಮಿಸಲಿಕ್ಕೋ’ ಎಂದು ಕುಟುಕಿತು.

> ನ್ಯಾಯಾಲಯದ ಆದೇಶಗಳನ್ನು ಪಾಲಿಸದ ನೀವು ಈತನಕ ನೆಪಗಳನ್ನೇ ಹೇಳಿಕೊಂಡು ಬರುತ್ತಿದ್ದೀರಿ. ನಿಮ್ಮ ನಿರ್ಲಕ್ಷ್ಯಕ್ಕೆ ಜನರು ರಸ್ತೆಗುಂಡಿಗಳನ್ನು ತಪ್ಪಿಸಲು ಹೋಗಿ ಬೀದಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವಂತಾಗಿದೆ
>
> **ಋತುರಾಜ್ ಅವಸ್ಥಿ**, ಮುಖ್ಯ ನ್ಯಾಯಮೂರ್ತಿ



ಪಾಂಡುರಂಗ ಗರಗ್ ವಿರುದ್ಧ ತನಿಖೆ ಆರಂಭ

ಬೆಂಗಳೂರು: ವಿವಿಧ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನಡೆದಿರುವ ಅಕ್ರಮಗಳಲ್ಲಿ ಶಾಮೀಲಾದ ಆರೋಪದಡಿ ಸಹಕಾರ ಸಂಘಗಳ ನಿವೃತ್ತ ಜಂಟಿ ರಿಜಿಸ್ಟ್ರಾರ್ ಪಾಂಡುರಂಗ ಗರಗ್ ವಿರುದ್ಧ ಎಸಿಬಿ ತನಿಖೆ ಆರಂಭಿಸಿದೆ. 2


ಶಿಕ್ಷಣ ಸಚಿವ ನಾಗೇಶ್‌ಗೆ ಘೇರಾವ್

ಮೈಸೂರು: ಹಿಜಾಬ್ ನಿರ್ಬಂಧ ವಿಚಾರವಾಗಿ ನಗರದಲ್ಲಿ ಸೋಮವಾರ ವಿವಿಧ ಸಂಘಟನೆಗಳ ಮುಖಂಡರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಘೇರಾವ್ ಹಾಕಿದರು. 5

‘ತುಕ್ಡೆ, ತುಕ್ಡೆ ಗ್ಯಾಂಗ್‌ನ ನಾಯಕ ಕಾಂಗ್ರೆಸ್’

ನವದೆಹಲಿ (ಪಿಟಿಐ): ಸರ್ಕಾರದ ಕಾರ್ಯವೈಖರಿಯನ್ನು ಸಂಸತ್ತಿನಲ್ಲಿ ಬಲವಾಗಿ ಸಮರ್ಥಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಪಕ್ಷವನ್ನೇ ಗುರಿಯಾಗಿಸಿ ವ್ಯಂಗ್ಯದ ಮಾತುಗಳಿಂದ ತೀವ್ರ ವಾಗ್ದಾಳಿ ನಡೆಸಿದರು. 11

ಒಳ ಪುಟ



ಬಡ್ಡಿ ದರ ಹೆಚ್ಚಳ ಭೀತಿ, ಕುಸಿದ ಸೆನ್ಸೆಕ್ಸ್ 11

ಚಿನಕುರಳಿ
ಪ್ರಕಾಶ್ ಶೆಟ್ಟಿ



ಅಕ್ರಮ ಆರೋಪ ಪಿಎಸ್‌ಐ ನೇಮಕಾತಿ ಸ್ಥಗಿತ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ‘545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿ ಅಕ್ರಮ ನಡೆದಿದೆ’ ಎಂಬ ಆರೋಪ ಕೇಳಿಬಂದ ಬೆನ್ನಲ್ಲೇ, ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ.

ಈ ಬಗ್ಗೆ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪಾಲ್ ಅವರು ರಾಜ್ಯದ ಹಿರಿಯ ಅಧಿಕಾರಿಗಳಿಗೆ ಸೋಮವಾರ ತುರ್ತು ಸಂದೇಶ ಕಳುಹಿಸಿದ್ದಾರೆ. ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಜ. 25ರಂದು ‘ಪಿಎಸ್‌ಐ ನೇಮಕಾತಿಯಲ್ಲೂ ಅಕ್ರಮ?’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

‘ಸಿವಿಲ್ ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡು, ಘಟಕವಾರು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಹಾಗೂ ದಾಖಲೆ ಪರಿಶೀಲನಾ ಕಾರ್ಯ ಕೈಗೊಳ್ಳುವಂತೆ ಜ. 21ರಂದು ಬರೆದಿದ್ದ ಪತ್ರದಲ್ಲಿ ಸೂಚಿಸಲಾಗಿತ್ತು. ಇದೀಗ, ಆಡಳಿತಾತ್ಮಕ ಕಾರಣದಿಂದ ನೇಮಕಾತಿ ಪ್ರಕ್ರಿಯೆಯನ್ನು ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸಲಾಗಿದೆ’ ಎಂದು ಸಂದೇಶದಲ್ಲಿ ತಿಳಿಸಲಾಗಿದೆ.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅಮ್ರಿತ್ ಪಾಲ್, ‘ಪಿಎಸ್‌ಐ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವ ದೂರುಗಳು ಬಂದಿದೆ. ಆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ನಡೆದಿದ್ದು, ನೇಮಕಾತಿ ಪ್ರಕ್ರಿಯೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ’ ಎಂದರು.

ಶಾಂತಿಶ್ರೀ ಪಂಡಿತ್ ಜೆಎನ್‌ಯು ಕುಲಪತಿ



ನವದೆಹಲಿ (ಪಿಟಿಐ): ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಮೊದಲ ಮಹಿಳಾ ಕುಲಪತಿಯಾಗಿ ಶಾಂತಿಶ್ರೀ ಧೂಲಿಪುಡಿ ಪಂಡಿತ್ ಅವರನ್ನು ಶಿಕ್ಷಣ ಸಚಿವಾಲಯ ಸೋಮವಾರ ನೇಮಕ ಮಾಡಿದೆ.

ಇವರ ಅಧಿಕಾರಾವಧಿ 5 ವರ್ಷಗಳು. 59 ವರ್ಷದ ಪಂಡಿತ್ ಅವರು ಪ್ರಸ್ತುತ ಮಹಾರಾಷ್ಟ್ರದ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯದ ರಾಜಕೀಯ ಮತ್ತು ಸಾರ್ವಜನಿಕ ಆಡಳಿತ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ.

ಜೆಎನ್‌ಯು ಹಳೆಯ ವಿದ್ಯಾರ್ಥಿಯೂ ಆಗಿರುವ ಶಾಂತಿಶ್ರೀ, ಎಂ.ಫಿಲ್ ಮತ್ತು ಪಿಎಚ್‌.ಡಿ ಪದವಿ ಪಡೆದಿದ್ದಾರೆ. ಗೋವಾ ಯೂನಿವರ್ಸಿಟಿಯಲ್ಲಿ 1988ರಲ್ಲಿ ಬೋಧನಾ ವೃತ್ತಿಯನ್ನು ಆರಂಭಿಸಿದರು. 1993ರಲ್ಲಿ ಪುಣೆ ವಿ.ವಿಯಲ್ಲಿ ವೃತ್ತಿ ಮುಂದುವರಿಸಿದರು. ಅವರು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮತ್ತು ಐಸಿಎಸ್‌ಎಸ್‌ಆರ್‌ನ ಸದಸ್ಯೆಯೂ ಆಗಿದ್ದಾರೆ.

3ನೇ ಪುಟ ನೋಡಿ

ಹಿಮಪಾತದಲ್ಲಿ ಸಿಲುಕಿದ 7 ಸೈನಿಕರು

ನವದೆಹಲಿ (ರಾಯಿಟರ್ಸ್): ಅರುಣಾಚಲ ಪ್ರದೇಶದ ಕಮೆಂಗ್ ಎಂಬಲ್ಲಿ ಭಾನುವಾರ ಸಂಭವಿಸಿದ ಹಿಮಪಾತದಲ್ಲಿ ಭಾರತೀಯ ಸೇನೆಯ (ಗಡಿ ಗಸ್ತು ಪಡೆ) ಏಳು ಸೈನಿಕರು ಸಿಲುಕಿದ್ದಾರೆ. ಸೈನಿಕರನ್ನು ಕಾಪಾಡಲು ರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

‘ಗಸ್ತು ಪಡೆಯು ಹಿಮಾಲಯದ ಎತ್ತರದ ಪ್ರದೇಶವಾದ ಕಮೆಂಗ್ ಎಂಬಲ್ಲಿ ಕರ್ತವ್ಯ ನಿರ್ವಹಿಸುತ್ತಿತ್ತು. ಈ ಪ್ರದೇಶದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ಕಳೆದ ಕೆಲವು ದಿನಗಳಿಂದ ಭಾರೀ ಹಿಮಪಾತವಾಗುತ್ತಿದೆ’ ಎಂದು ರಕ್ಷಣಾ ಸಚಿವಾಲಯದ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಹರ್ಷವರ್ಧನ್ ಪಾಂಡೆ ಹೇಳಿದ್ದಾರೆ.‘ರಕ್ಷಣಾ ತಂಡಕ್ಕೆ ನೆರವಾಗಲು ವಿಶೇಷ ತಂಡಗಳನ್ನು ವಿಮಾನದ ಮೂಲಕ ರವಾನಿಸಲಾಗಿದೆ’ ಎಂದಿದ್ದಾರೆ.

ಭಾರತವು ಇತ್ತೀಚಿನ ವರ್ಷಗಳಲ್ಲಿ ಅರುಣಾಚಲ ಪ್ರದೇಶದಲ್ಲಿ ಗಸ್ತು ತೀವ್ರಗೊಳಿಸಿದೆ.

ರಾಜ್ಯದ ಸಂಸದರೊಂದಿಗೆ ಮುಖ್ಯಮಂತ್ರಿ ಬೊಮ್ಮಾಯಿ ಸಭೆ

ಯೋಜನೆಗಳ ಅನುಷ್ಠಾನಕ್ಕೆ ಒತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ನೀರಾವರಿ, ನಗರಾಭಿವೃದ್ಧಿ, ರೈಲ್ವೆ, ಬಂದರು, ರಸ್ತೆ ಅಭಿವೃದ್ಧಿಗಾಗಿ ಕರ್ನಾಟಕ ಕೈಗೆತ್ತಿಕೊಳ್ಳಲಿರುವ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವು ಕೋರಲು ನಿರ್ಧರಿಸಲಾಗಿದೆ. ಇದಕ್ಕಾಗಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲು ಕರ್ನಾಟಕದ ಸಂಸದರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಡೆಸಿದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕೇಂದ್ರ ಸರ್ಕಾರದ ನೆರವಿನ ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಕರ್ನಾಟಕದ ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರೊಂದಿಗೆ ಬಸವರಾಜ ಬೊಮ್ಮಾಯಿ ಸೋಮವಾರ ಸಭೆ ನಡೆಸಿದರು.



ಬಸವರಾಜ ಬೊಮ್ಮಾಯಿ

ನೀರಾವರಿ, ರೈಲ್ವೆ ಮತ್ತು ರಸ್ತೆ ಅಭಿವೃದ್ಧಿ ಕುರಿತ ಯೋಜನೆಗಳಿಗೆ ಇರುವ ಅಡ್ಡಿ– ಆತಂಕಗಳ ನಿವಾರಣೆಗೆ ರಾಜ್ಯ ಸರ್ಕಾರ ಶ್ರಮಿಸಬೇಕು ಎಂದು ಸಭೆಯಲ್ಲಿದ್ದ ಸದಸ್ಯರು ಮನವಿ ಸಲ್ಲಿಸಿದರು.

ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಘೋಷಿಸಿರುವ ನೆರವನ್ನು ಸಮರ್ಪಕವಾಗಿ ಬಿಡುಗಡೆ ಮಾಡಲಾಗುವುದು. 15ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ರಾಜ್ಯಕ್ಕೆ ಅಗತ್ಯ ಹಣಕಾಸಿನ ನೆರವು ನೀಡಲಾಗುವುದು ಎಂದು ಹಾಜರಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭರವಸೆ ನೀಡಿದರು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ನಾರಾಯಣಸ್ವಾಮಿ, ಭಗವಂತ ಖೂಬಾ ಕೂಡ ಇದ್ದರು.

ಕೇಂದ್ರ ಸಚಿವರಿಗೆ ಮನವಿ: ಹೊರ ರಾಜ್ಯದ ಗಣಿಗಳಿಂದ ರಾಜ್ಯಕ್ಕೆ ಕಲ್ಲಿದ್ದಲು ಸಾಗಣೆಗೆ ಅನುಕೂಲ ಕಲ್ಪಿಸಲು ಅಗತ್ಯ ಪ್ರಮಾಣದ ರೇಕ್‌ಗಳನ್ನು ಪೂರೈಸುವಂತೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಈ ಕುರಿತು ರೈಲ್ವೆ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಚಿವರಿಂದ ಭರವಸೆ ದೊರೆತಿದೆ ಎಂದು ಭೇಟಿಯ ನಂತರ ಅವರು ಸುದ್ದಿಗಾರರಿಗೆ ತಿಳಿಸಿದರು.

3B ಪುಟ ನೋಡಿ

ಮಂಗಳವಾರದ ಉಷ್ಣಾಂಶ 30° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ನಂತರ ಭಾಗಶಃ ಮೋಡ ಕವಿದ ವಾತಾವರಣ

ಹವಾಮಾನ: ಬುಧವಾರ 30° 15° | ಗುರುವಾರ 31° 16° | ಶುಕ್ರವಾರ 31° 17°

ಐಒಸಿ ಮೊದಲ ನಿರ್ದೇಶಕಿಯಾಗಿ ಶುಕ್ಲಾ ಮಿಸ್ತ್ರಿ


ಶುಕ್ಲಾ ಮಿಸ್ತ್ರಿ

ನವದೆಹಲಿ (ಪಿಟಿಐ): ಶುಕ್ಲಾ ಮಿಸ್ತ್ರಿ ಅವರು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಮೊದಲ ಮಹಿಳಾ ಕಾರ್ಯಕಾರಿ ನಿರ್ದೇಶಕರಾಗಿ ಸೋಮವಾರ ಅಧಿಕಾರ ಸ್ವೀಕರಿಸಿದರು.

ಶುಕ್ಲಾ ಅವರು ಕಂಪನಿಯ ಸಂಸ್ಕರಣಾ ಘಟಕಗಳ ನಿರ್ದೇಶಕಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಶುಕ್ಲಾ ಅವರು ಬೆಂಗಾಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಟಲರ್ಜಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ಪ್ರಥಮ ಪಿಯುಸಿ: ಮಾರ್ಚ್ 28ರಿಂದ ಏಪ್ರಿಲ್ 13ರವರೆಗೆ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಪಿಯುಸಿ ವಾರ್ಷಿಕ ಮತ್ತು ಪೂರಕ ಪರೀಕ್ಷೆಗಳನ್ನು ಜಿಲ್ಲಾಮಟ್ಟದಲ್ಲಿ ನಡೆಸುವಂತೆ ಎಲ್ಲ ಜಿಲ್ಲೆಗಳ ಉಪ ನಿರ್ದೇಶಕರಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಸೂಚನೆ ನೀಡಿದ್ದಾರೆ.

ವಾರ್ಷಿಕ ಪರೀಕ್ಷೆಗಳನ್ನು ಮಾರ್ಚ್ 28ರಿಂದ ಏಪ್ರಿಲ್ 13ರವರೆಗೆ ಮಧ್ಯಾಹ್ನ 2.30ರಿಂದ 5.45ರ ಅವಧಿಯಲ್ಲಿ ನಡೆಸಬೇಕು. ಈ ವೇಳಾಪಟ್ಟಿಗೆ ಅನುಗುಣವಾಗಿ ಪರೀಕ್ಷೆಗಳನ್ನು ನಡೆಸಬೇಕು ಎಂದು ಅವರು ಸೂಚಿಸಿದ್ದಾರೆ.

ಮೌಲ್ಯಮಾಪನವನ್ನು ಏಪ್ರಿಲ್ 20ರೊಳಗೆ ಪೂರ್ಣಗೊಳಿಸಿ, ಆಯಾ ಕಾಲೇಜುಗಳಲ್ಲಿ 30ರಂದು ಫಲಿತಾಂಶ ಪ್ರಕಟಿಸಬೇಕು. ಅನುತ್ತೀರ್ಣರಾದವರಿಗೆ ಪೂರಕ ಪರೀಕ್ಷೆಗೆ ಶುಲ್ಕ ಕಟ್ಟಲು ಮೇ 16 ಕೊನೆಯ ದಿನ. ಮೇ 25ರಿಂದ ಜೂನ್6ವರೆಗೆ ಪೂರಕ ಪರೀಕ್ಷೆಗಳನ್ನು ನಡೆಸಬೇಕು. ಜೂನ್ 15ರಂದು ಫಲಿತಾಂಶ ಪ್ರಕಟಿಸಬೇಕು ಎಂದೂ ಅವರು ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆಗಳ ತಯಾರಿ ಮತ್ತು ಮುದ್ರಣ ಕಾರ್ಯವನ್ನು ಜಿಲ್ಲಾ ಹಂತದಲ್ಲಿ ಜಿಲ್ಲಾ ಉಪ ನಿರ್ದೇಶಕರ ನೇತೃತ್ವದಲ್ಲಿಯೇ ನಡೆಸಬೇಕು. ನೋಡಲ್ ಕೇಂದ್ರಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಇಟ್ಟು, ವೇಳಾಪಟ್ಟಿಗೆ ಅನುಗುಣವಾಗಿ ಪ್ರಶ್ನೆ ಪತ್ರಿಕೆಗಳನ್ನು ಕಾಲೇಜುಗಳ ಪ್ರಾಂಶುಪಾಲರಿಗೆ ನೀಡಬೇಕು ಎಂದೂ ನಿರ್ದೇಶಕರು ತಿಳಿಸಿದ್ದಾರೆ.

ಎಲ್‌ಎಲ್‌ಎಂ ಪರೀಕ್ಷೆ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಎಲ್‌ಎಲ್‌ಎಂ ಪದವಿಯ ಮೊದಲನೇ ಹಾಗೂ ಮೂರನೇ ಸೆಮಿಸ್ಟರ್ ಮತ್ತು ರೂರಲ್ ಮ್ಯಾನೇಜ್‌ಮೆಂಟ್ ಪಿ.ಜಿ.ಡಿಪ್ಲೊಮಾ ಕೋರ್ಸ್‌ನ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿದೆ.

ಎಲ್‌ಎಲ್‌ಎಂ ಮೊದಲ ಹಾಗೂ ಮೂರನೇ ಸೆಮಿಸ್ಟರ್ ಪರೀಕ್ಷೆಗಳು ಈ ತಿಂಗಳ ಕೊನೆಯ ವಾರದಲ್ಲಿ ನಿಗದಿಯಾಗಿವೆ. ರೂರಲ್ ಮ್ಯಾನೇಜ್‌ಮೆಂಟ್ ಪರೀಕ್ಷೆಯು ಇದೇ 18ರಂದು ಆರಂಭವಾಗಿ ಮಾರ್ಚ್ 3ಕ್ಕೆ ಮುಗಿಯಲಿದೆ.

ಹೆಚ್ಚಿನ ಮಾಹಿತಿಗೆ www.bangaloreuniversity.ac.in ಗೆ ಭೇಟಿ ನೀಡಬಹುದು.

ಗೃಹ ನಿರ್ಮಾಣ ಸಹಕಾರ ಸಂಘಗಳ ಅಕ್ರಮದಲ್ಲಿ ಶಾಮೀಲು ಆರೋಪ

ಪಾಂಡುರಂಗ ಗರಗ್ ವಿರುದ್ಧ ತನಿಖೆ ಆರಂಭಿಸಿದ ಎಸಿಬಿ

ಪ್ರಜಾವಾಣಿ ವಾರ್ತೆ


ಪಾಂಡುರಂಗ

ಬೆಂಗಳೂರು: ವಿವಿಧ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ನಡೆದಿರುವ ಅಕ್ರಮಗಳಲ್ಲಿ ಶಾಮೀಲಾಗಿರುವ ಆರೋಪದ ಮೇಲೆ ಸಹಕಾರ ಸಂಘಗಳ ನಿವೃತ್ತ ಜಂಟಿ ರಿಜಿಸ್ಟ್ರಾರ್ ಪಾಂಡುರಂಗ ಗರಗ್ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ತನಿಖೆ ಆರಂಭಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರಿಗೆ ಸೀಮಿತವಾಗಿ ಅಸ್ತಿತ್ವಕ್ಕೆ ಬಂದಿದ್ದ ಸಮಾಜ ಕಲ್ಯಾಣ ಇಲಾಖೆ ಗೃಹ ನಿರ್ಮಾಣ ಸಹಕಾರ ಸಂಘವನ್ನು ವಿದ್ಯಾಗಿರಿ ನೌಕರರ ಗೃಹ ನಿರ್ಮಾಣ ಸಂಘ ಎಂಬುದಾಗಿ ಬದಲಿಸಿ ₹ 400 ಕೋಟಿ ಮೊತ್ತದ ಅಕ್ರಮ ನಡೆಸಿರುವುದು, ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದ ಅಕ್ರಮಗಳಿಗೆ ಬೆಂಬಲ ನೀಡಿರುವುದು ಮತ್ತು ಕೇತಮಾರನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನೇರವಾಗಿ ಪಾಲುದಾರರಾಗಿ ಅಕ್ರಮ ನಡೆಸಿರುವ ಆರೋಪ ಗರಗ್ ಮೇಲಿದೆ.

ಪಾಂಡುರಂಗ ಗರಗ್ 2015ರಿಂದ 2018ರವರೆಗೂ ಬೆಂಗಳೂರು ವಿಭಾಗದ ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್ ಹುದ್ದೆಯಲ್ಲಿದ್ದರು. ಈ ಅವಧಿಯಲ್ಲಿ ಅಕ್ರಮ ನಡೆಸಿದ್ದಾರೆ ಎಂದು ಜಯನಗರ ನಿವಾಸಿ ಜೆ.ಡಿ. ಕುಮಾರಸ್ವಾಮಿ ಎಂಬುವವರು 2020ರ ಮೇ ತಿಂಗಳಲ್ಲಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು. ದೂರನ್ನು ಎಸಿಬಿಗೆ ವರ್ಗಾಯಿಸಿದ್ದ ಲೋಕಾಯುಕ್ತರು, ತನಿಖೆ ನಡೆಸುವಂತೆ ನಿರ್ದೇಶನ ನೀಡಿದ್ದರು.

ಆರೋಪಗಳ ಕುರಿತು ಎಸಿಬಿ ಅಧಿಕಾರಿಗಳು ಪ್ರಾಥಮಿಕ ತನಿಖೆ ನಡೆಸಿದ್ದರು. ಗರಗ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಅನುಮತಿ ಕೋರಿ ಎಸಿಬಿ ಅಧಿಕಾರಿಗಳು 2021ರ ಸೆಪ್ಟೆಂಬರ್ 20ರಂದು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ತನಿಖೆಗೆ ಅನುಮತಿ ನೀಡಿ ಸಹಕಾರ ಇಲಾಖೆ 2021ರ ಡಿಸೆಂಬರ್ 3ರಂದು ಆದೇಶ ಹೊರಡಿಸಿತ್ತು.

ಕೆಲವು ತಿಂಗಳ ಹಿಂದೆ ಆರೋಪಿತರು ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದರು. ಸಹಕಾರ ಇಲಾಖೆಯಿಂದ ತನಿಖೆಗೆ ಅನುಮತಿ ಬಂದ ಬಳಿಕ ಮತ್ತೆ ಪ್ರಕ್ರಿಯೆ ಆರಂಭಿಸಿದ ಎಸಿಬಿ ಅಧಿಕಾರಿಗಳು, ಶುಕ್ರವಾರ (ಫೆಬ್ರುವರಿ 4) ದೂರುದಾರರ ಹೇಳಿಕೆ ದಾಖಲಿಸಿಕೊಂಡಿದ್ದರು. ಅದೇ ದಿನ ಪಾಂಡುರಂಗ ಗರಗ್ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಇಬ್ರಾಹಿಂ ಮನವೊಲಿಕೆಗೆ ಮುಂದಾದ ಸಿದ್ದರಾಮಯ್ಯ


ಸಿದ್ದರಾಮಯ್ಯ

ಬೆಂಗಳೂರು: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನ ಕೈ ತಪ್ಪಿದ ಬೆನ್ನಲ್ಲೇ ಕಾಂಗ್ರೆಸ್ ತೊರೆಯಲು ನಿರ್ಧರಿಸಿರುವ ಸಿ.ಎಂ. ಇಬ್ರಾಹಿಂ ಅವರ ಮನವೊಲಿಸಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮುಂದಾಗಿದ್ದಾರೆ. ತಮ್ಮ ಆಪ್ತ ಎಚ್‌.ಸಿ. ಮಹದೇವಪ್ಪ ಮೂಲಕ ಇಬ್ರಾಹಿಂ ಜೊತೆ ಸಂಧಾನ ನಡೆಸಲು ಸಿದ್ದರಾಮಯ್ಯ ಪ್ರಯತ್ನ ನಡೆಸಿದ್ದಾರೆ.

ಇಬ್ರಾಹಿಂ ಅವರ ಮನೆಗೆ ಸೋಮವಾರ ಭೇಟಿ ನೀಡಿ ಕೆಲಹೊತ್ತು ಮಾತುಕತೆ ನಡೆಸಿರುವ ಮಹದೇವಪ್ಪ, ಸಿದ್ದರಾಮಯ್ಯ ಅವರ ಸಂದೇಶವನ್ನು ತಲುಪಿಸಿದ್ದಾರೆ. 'ಕಾಂಗ್ರೆಸ್ ತ್ಯಜಿಸಬೇಡಿ, ಮುಂದೆ ಸ್ಥಾನಮಾನ ಸಿಗುತ್ತದೆ' ಎಂದು ಮನವರಿಕೆ ಮಾಡಿದ್ದಾರೆ ಎನ್ನಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಇಬ್ರಾಹಿಂ ಜೊತೆ ಮಾತನಾಡಿರುವುದಾಗಿ ಮಹದೇವಪ್ಪ ಹೇಳಿದ್ದಾನೆ. ಎಲ್ಲರೊಂದಿಗೆ ಚರ್ಚಿಸುತ್ತೇನೆ ಎಂದು ಮಹದೇವಪ್ಪನಿಗೆ ಇಬ್ರಾಹಿಂ ಹೇಳಿದ್ದಾನೆ. ನಾನು ಕರೆ ಮಾಡಿಯಷ್ಟೇ ಅಲ್ಲ, ಮನೆಗೂ ಹೋಗಿ ಮಾತನಾಡುತ್ತೇನೆ' ಎಂದರು.


ಉಲ್ಲಾಳು ಉಪನಗರದಲ್ಲಿ 272 ಕುಟುಂಬಗಳಿಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹಕ್ಕುಪತ್ರ ವಿತರಿಸಿದರು. ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಅನಿಲ್ ಕುಮಾರ್, ಬಿಜೆಪಿ ನಗರ ಮಂಡಲ ಅಧ್ಯಕ್ಷ ಅನಿಲ್ ಚಳಗೇರಿ, ಪ್ರಧಾನ ಕಾರ್ಯದರ್ಶಿ ವಾಜರಹಳ್ಳಿ ಎಸ್‌.ಶಶಿಕುಮಾರ್, ವಾರ್ಡ್ ಅಧ್ಯಕ್ಷ ಜಯರಾಮು, ಬಿಜೆಪಿ ಮುಖಂಡ ಶಶಿಕುಮಾರ್ ಇದ್ದಾರೆ.

272 ಕುಟುಂಬಗಳಿಗೆ ಹಕ್ಕು ಪತ್ರ

ರಾಜರಾಜೇಶ್ವರಿನಗರ: 'ಉಲ್ಲಾಳು ಸರ್ವೆ ಸಂಖ್ಯೆ 199ರ 5 ಎಕರೆ ಜಮೀನು ಸ್ಮಶಾನಕ್ಕಾಗಿ ಮೀಸಲಿಡಲಾಗಿತ್ತು. ಅಲ್ಲಿ ಬಡವರು ಮನೆ ನಿರ್ಮಿಸಿಕೊಂಡು, ಹಕ್ಕುಪತ್ರಕ್ಕಾಗಿ ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದು, ಎಲ್ಲರಿಗೂ ಮುಂದಿನ ದಿನಗಳಲ್ಲಿ ಹಕ್ಕುಪತ್ರ ನೀಡಲಾಗುವುದು' ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹೇಳಿದರು.

ಉಲ್ಲಾಳು ಉಪನಗರದಲ್ಲಿ 94ಸಿಸಿ ಯೋಜನೆ ಅಡಿ 272 ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, 'ಹಲವು ದಶಕಗಳ ಹಿಂದೆ ಈ ಭಾಗದಲ್ಲಿ ಬಡವರಿಗೆ ಸರ್ಕಾರಿ ಜಮೀನಿನಲ್ಲಿ ನಿವೇಶನ ನೀಡಲಾಗಿತ್ತು. ಫಲಾನುಭವಿಗಳು ಮನೆ ನಿರ್ಮಿಸಿಕೊಂಡಿದ್ದರು. ಅವರಿಗೆ ಹಕ್ಕುಪತ್ರ ನೀಡಲಾಗುತ್ತಿದೆ' ಎಂದರು.

ಹಿಜಾಬ್‌ಗೆ ನಿರ್ಬಂಧ: ಆಡಳಿತ ಮಂಡಳಿ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಡುಪಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ವಿಚಾರ ಮುಂದಿಟ್ಟುಕೊಂಡು ಮುಸ್ಲಿಂ ವಿದ್ಯಾರ್ಥಿನಿಯರನ್ನು ಅವಮಾನವೀಯವಾಗಿ ನಡೆಸಿಕೊಳ್ಳುತ್ತಿರುವ ಆಡಳಿತ ಮಂಡಳಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಫಾರ್ವರ್ಡ್ ಟ್ರಸ್ಟ್‌ನ ಕಾರ್ಯದರ್ಶಿ ಫಿರ್ದೌನ್ ಖಾನ್ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಜಾಬ್ ಧರಿಸಿದ ಕಾರಣಕ್ಕೆ ಕಾಲೇಜಿನ ಆವರಣದೊಳಗೆ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರ್ಬಂಧಿಸಿರುವ ಘಟನೆಗಳು ನಡೆದಿವೆ. ಮುಸ್ಲಿಮರ ಭಾವನೆಗಳ ವಿರುದ್ಧ ಶಿಕ್ಷಣ ಸಂಸ್ಥೆಗಳು ನಡೆದುಕೊಳ್ಳುತ್ತಿರುವ ರೀತಿ ಮತ್ತು ವಿದ್ಯಾರ್ಥಿಗಳ ಹಕ್ಕುಗಳನ್ನು ರಕ್ಷಿಸುವ ಬಗ್ಗೆ ಸರ್ಕಾರ ಯಾವುದೇ ನಿಲುವು ತೋರದಿರುವುದು ಖಂಡನೀಯ' ಎಂದು ದೂರಿದರು.

ಜಮಾತ್ ಇ ಇಸ್ಲಾಮೀ ಹಿಂದ್ ಸಂಘಟನೆಯ ಉಡುಪಿ ಜಿಲ್ಲಾ ಸಂಚಾಲಕಿ ಕುಲ್ ಸುಮ್ ಅಬೂಬಕ್ಕರ್,'ಹಿಜಾಬ್ ಇಸ್ಲಾಂ ಧರ್ಮದ ಅವಿಭಾಜ್ಯ ಅಂಗ. ಹಿಜಾಬ್ ಧರಿಸುವುದು ಮುಸ್ಲಿಂ ಹೆಣ್ಣಿನ ವಿಶ್ವಾಸದ ಭಾಗವಾಗಿದೆ. ಆದರೆ, ವಿದ್ಯಾ ಸಂಸ್ಥೆಗಳಲ್ಲಿ ಹಿಜಾಬ್ ವಿಚಾರದಲ್ಲಿ ಧರ್ಮ ಪಕ್ಷಪಾತದ ನಿಲುವು ಇರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದರು.

ಹೋರಾಟಕ್ಕೆ ಎನ್‌ಡಬ್ಲ್ಯುಎಫ್ ಬೆಂಬಲ

ಹಿಜಾಬ್ ನೆಪದಲ್ಲಿ ವಿದ್ಯಾರ್ಥಿನಿಯರಿಗೆ ಕಾಲೇಜು ಪ್ರವೇಶ ನಿರಾಕರಿಸಿರುವುದು ಅವರ ಅಸ್ಮಿತೆಯ ಮೇಲಿನ ದಾಳಿ. ಇದರ ವಿರುದ್ಧ ಮುಸ್ಲಿಂ ವಿದ್ಯಾರ್ಥಿನಿಯರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುವುದಾಗಿ ನ್ಯಾಷನಲ್ ವುಮೆನ್ಸ್ ಫ್ರಂಟ್ (ಎನ್‌ಡಬ್ಲ್ಯುಎಫ್) ತಿಳಿಸಿದೆ.

'ಉಡುಪಿಯ ಸರ್ಕಾರಿ ಕಾಲೇಜುವೊಂದರಲ್ಲಿ ಹಿಜಾಬ್ ಘಟನೆ ನಡೆದ ನಂತರ ಕುಂದಾಪುರದ ಭಂಡಾರ್ಕರ್ಸ್ ಕಾಲೇಜು, ಆರ್.ಎನ್.ಶೆಟ್ಟಿ ಪಿ.ಯು. ಕಾಲೇಜು, ಬೈಂದೂರು ಪಿ.ಯು.ಕಾಲೇಜು, ಬಿ.ಬಿ.ಹೆಗ್ಡೆ ಪದವಿ ಕಾಲೇಜು, ನಾವುಂದದ ಸರ್ಕಾರಿ ಪಿ.ಯು. ಕಾಲೇಜು ಹಾಗೂ ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಲ್ಲೂ ಅದೇ ಕ್ರಮಗಳನ್ನು ಕೈಗೊಂಡಿರುವುದು ಬೇಸರದ ಸಂಗತಿ.'

'ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ಲಿಂಗ, ವರ್ಗ ಮತ್ತು ಧರ್ಮಾಧಾರಿತ ತಾರತಮ್ಯ ನಿಷೇಧ. ಹಿಜಾಬ್ ಧರಿಸಿದ ಕಾರಣಕ್ಕೆ ತರಗತಿ ಪ್ರವೇಶ ನಿರಾಕರಿಸಿರುವ ಶಿಕ್ಷಣ ಸಂಸ್ಥೆಗಳ ನಿರ್ಣಯ ಖಂಡನೀಯ. ವಿದ್ಯಾರ್ಥಿಗಳು ತಮ್ಮ ನಂಬಿಕೆ ಆಚರಿಸುವ ಮೂಲಭೂತ ಹಕ್ಕನ್ನು ಮಾತ್ರ ಕೇಳುತ್ತಿದ್ದಾರೆ' ಎಂದು ಹೇಳಿದೆ.

'ಎಲ್ಲ ಧರ್ಮದ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕು ರಕ್ಷಿಸಿ'

'ಶಿಕ್ಷಣ ಸಂಸ್ಥೆಗಳಲ್ಲಿ ಭುಗಿಲೆದ್ದಿರುವ ವಸ್ತ್ರ ವಿವಾದವನ್ನು ಕೂಡಲೇ ತಿಳಿಗೊಳಿಸಬೇಕು. ಸರ್ಕಾರ ಎಲ್ಲ ಧರ್ಮದ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

'ಉಡುಪಿಯ ಕಾಲೇಜುವೊಂದರಲ್ಲಿ ಆರಂಭವಾದ ಹಿಜಾಬ್ ವಿವಾದ ಬೇರೆ ಜಿಲ್ಲೆಗಳಿಗೂ ಹಬ್ಬುತ್ತಿರುವುದು ಅನಗತ್ಯ ಬೆಳವಣಿಗೆ. ಕೋಮುವಾದಿ ಶಕ್ತಿಗಳು ವಸ್ತ್ರವಿವಾದವನ್ನು ತಂದು, ಶೈಕ್ಷಣಿಕ ವಾತಾವರಣ ಹಾಳು ಮಾಡುತ್ತಿವೆ. ಆದರೆ, ಸರ್ಕಾರ ಈ ವಿವಾದದ ಬೆಂಕಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕುಟಿಲತೆ ಮೆರೆದಿದೆ' ಎಂದು ಸಂಘಟನೆಯ ಅಧ್ಯಕ್ಷೆ ದೇವಿ ದೂರಿದ್ದಾರೆ.

'ಸರ್ಕಾರ ಯಾವುದೇ ಕೋಮುವಾದಿ ಶಕ್ತಿಗಳ ಕೈಗೊಂಬೆಯಾಗದೆ, ಸಾಂವಿಧಾನಿಕ ಹೊಣೆಗಾರಿಕೆಯಡಿ ಕಾರ್ಯನಿರ್ವಹಿಸಬೇಕು. ಉದ್ದೇಶಪೂರ್ವಕವಾಗಿ ಶೈಕ್ಷಣಿಕ ವಾತಾವರಣ ಹಾಳು ಮಾಡುತ್ತಿರುವವರನ್ನು ನಿಯಂತ್ರಿಸಬೇಕು. ಎಲ್ಲರಿಗೂ ಸಮಾನ ಶಿಕ್ಷಣದ ಹಕ್ಕನ್ನು ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ವಸೂಲಿ ಆಗದ ನಿವೇಶನ ನವೀಕರಣ ದರ: ನಾಲ್ವರು ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಆರೋಪ

ಬಿಡಿಎಗೆ ₹2.37 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನ ಜೈನ್ ಶ್ವೇತಾಂಬರ ಮೂರ್ತಿ ಪೂಜಕ್ ಸಂಘಕ್ಕೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದ ನಿವೇಶನದ ನವೀಕರಣ ದರ ವಸೂಲು ಮಾಡದೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ₹2.37 ಕೋಟಿ ನಷ್ಟ ಮಾಡಲಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾದ ನಾಲ್ವರು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸಲು ಅನುಮತಿ ನೀಡುವ ಅಥವಾ ತಿರಸ್ಕರಿಸುವ ಸಂಬಂಧ ನಿರ್ಧಾರ ಕೈಗೊಳ್ಳಬಹುದು ಎಂದು ನಗರಾಭಿವೃದ್ಧಿ ಇಲಾಖೆಯ ಮುಖ್ಯ ಜಾಗೃತ ಅಧಿಕಾರಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಿದ್ದಾರೆ. ಈ ಪ್ರಕರಣವನ್ನು ಎಸಿಬಿ ವಿಚಾರಣೆಗೆ ಒಪ್ಪಿಸಲು ಮುಖ್ಯಮಂತ್ರಿಯವರು ಒಲವು ತೋರಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಬಿಡಿಎ ಉಪಕಾರ್ಯದರ್ಶಿಯಾಗಿದ್ದ ಡಾ.ಎನ್.ಸಿ.ವೆಂಕಟರಾಜು, ಹಿರಿಯ ಶ್ರೇಣಿ ಕಾರ್ಯದರ್ಶಿಯಾಗಿದ್ದ ಬಸವರಾಜು, ನಗರಾಭಿವೃದ್ಧಿ ಇಲಾಖೆಯ ಎಸ್ಟೇಟ್ ಅಧಿಕಾರಿ ನೂರ್ ಜಹರಾ ಖಾನಂ, ಬಿಡಿಎ ಪ್ರಥಮದರ್ಜೆ ಸಹಾಯಕ ಕೆ. ರಾಜೇಂದ್ರ ಕುಮಾರ್ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–1988ರ ಕಲಂ 17(ಎ)ರ ಅಡಿಯಲ್ಲಿ ವಿಚಾರಣೆ ಅಥವಾ ತನಿಖೆ ಕೈಗೊಳ್ಳಲು 'ಎಸಿಬಿ'ಗೆ ಅನುಮತಿ ನೀಡಲು ಯಾವುದೇ ಸಮರ್ಥನೀಯ ಅಂಶಗಳು ಕಂಡು ಬಂದಿಲ್ಲ ಎಂದು ಪ್ರಾಧಿಕಾರದ ಆಯುಕ್ತರು ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾವಾಣಿ ವಿಶೇಷ

ಆದರೆ, ನವೀಕರಣ ದರ ₹2,37,88,625 ಮೊತ್ತವನ್ನು 90 ದಿವಸಗಳ ಒಳಗೆ ಪಾವತಿಸುವ ಷರತ್ತಿಗೆ ಒಳಪಡಿಸಿ 2012ರ ಜನವರಿ 13ರಂದೇ ನವೀಕರಣ ಹಂಚಿಕೆ ಪತ್ರ ನೀಡಲಾಗಿತ್ತು. ಆದರೂ, ಇದುವರೆಗೂ ಈ ಹಣವನ್ನು ವಸೂಲು ಮಾಡದೆಯೇ ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಮಾಡಲಾಗಿದೆ ಎಂದು ಮುಖ್ಯ ಜಾಗೃತ ಅಧಿಕಾರಿಯವರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಜಯನಗರದ 4ನೇ ಬ್ಲಾಕ್‌ನ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಗಳ ನಿವೇಶನವನ್ನು (ಸಿ.ಎ.) ರಾಜಸ್ಥಾನ ಜೈನ್ ಶ್ವೇತಾಂಬರ ಮೂರ್ತಿ ಪೂಜಕ್ ಸಂಘಕ್ಕೆ ನೀಡಲಾಗಿತ್ತು. ಈ ಪ್ರಕರಣದ ಬಗ್ಗೆ ಬಿಡಿಎ ಆಯುಕ್ತರು ವರದಿ ನೀಡಿದ್ದಾರೆ.

ರಾಜಸ್ಥಾನ ಜೈನ್ ಶ್ವೇತಾಂಬರ ಮೂರ್ತಿ ಪೂಜಕ್ ಸಂಘಕ್ಕೆ ಜಯನಗರ 4ನೇ ಬ್ಲಾಕ್‌ನಲ್ಲಿನ (210 + 86)2x545' ಅಳತೆಯ ಸಿ.ಎ. ನಿವೇಶನವನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ದೇವಾಲಯ, ವಿದ್ಯಾರ್ಥಿ ನಿಲಯ, ಧರ್ಮಶಾಲಾ, ಆಶ್ರಮ ಮತ್ತಿತರ ಸಾಮಾಜಿಕ ಚಟುವಟಿಕೆಗಳಿಗೆ ಹಲವು ಷರತ್ತುಗಳನ್ನು ವಿಧಿಸಿ ಗುತ್ತಿಗೆ ಕರಾರು ಪತ್ರವನ್ನು ನೋಂದಾಯಿಸಲಾಗಿತ್ತು. ಈ ಸಂದರ್ಭದಲ್ಲಿ ₹68,595 ಗುತ್ತಿಗೆ ಮೊತ್ತ ಪಾವತಿಸುವಂತೆ ಷರತ್ತಿನಲ್ಲಿ ಸೂಚಿಸಲಾಗಿತ್ತು. ಈ ಮೊತ್ತವನ್ನು ಮೂವತ್ತು ವರ್ಷಗಳ ಅವಧಿಯಲ್ಲಿ ಸಮಾನ ವಾರ್ಷಿಕ ಕಂತು ₹2,286.50 ಪಾವತಿಸಬೇಕು ಎಂದು ತಿಳಿಸಲಾಗಿತ್ತು. ಈ ಬಗ್ಗೆ ಗುತ್ತಿಗೆ ಕರಾರು ಪತ್ರವನ್ನು ನೋಂದಾಯಿಸಿ 1966ರ ಡಿಸೆಂಬರ್ 14ರಂದು ಸ್ವಾಧೀನ ಪತ್ರ ನೀಡಲಾಗಿತ್ತು.

ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ನಿಯಮ-1989 ಜಾರಿಗೆ ಬರುವ ಮುನ್ನವೇ ಸಿ.ಎ. ನಿವೇಶನ ಮಂಜೂರು ಮಾಡಲಾಗಿತ್ತು. ಆದರೆ, ಈ ನಿಯಮ ಜಾರಿಗೆ ಬಂದ ನಂತರ 30 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ಸೀಮಿತಗೊಳಿಸಲಾಗಿತ್ತು. ಹೀಗಾಗಿ, ಗುತ್ತಿಗೆ ಅವಧಿಯು 1996ರ ಅಕ್ಟೋಬರ್ 24ಕ್ಕೆ ಮುಕ್ತಾಯವಾಗಿದ್ದು, ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿ ನವೀಕರಿಸಿಕೊಳ್ಳಬೇಕು. ಜತೆಗೆ, ಇದುವರೆಗಿನ ಗುತ್ತಿಗೆ ಮೊತ್ತವನ್ನು ಪಾವತಿಸಿರುವ ಚಲನ್‌ಗಳನ್ನು ಸಲ್ಲಿಸುವಂತೆಯೂ ಸೂಚಿಸಲಾಗಿತ್ತು.

1996ರ ಅಕ್ಟೋಬರ್ 24ರಂದು 30 ವರ್ಷಗಳ ಗುತ್ತಿಗೆ ಮುಗಿದಿತ್ತು. ಹೀಗಾಗಿ, ಸಂಘದ ಕೋರಿಕೆ ಮೇರೆಗೆ ನಿವೇಶನದ ನೋಂದಣಿಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸಲಾಗಿತ್ತು. ಈ ನಿವೇಶನವನ್ನು ಧಾರ್ಮಿಕ ಉದ್ದೇಶಕ್ಕೆ ಹಂಚಿಕೆಯಾಗಿರುವುದರಿಂದ ಮಾರ್ಗಸೂಚಿ ದರದ ಅನ್ವಯ ಒಟ್ಟಾರೆ ಗುತ್ತಿಗೆ ಮೌಲ್ಯವು ಪ್ರತಿ ಚದರ ಅಡಿಗೆ ₹9 ಸಾವಿರದಂತೆ ಲೆಕ್ಕಾಚಾರ ಹಾಕಿದಾಗ ನಿವೇಶನಕ್ಕೆ ಒಟ್ಟು ₹2,37,88,625 ನಿಗದಿಪಡಿಸಲಾಗಿತ್ತು.

ಆದರೆ, ಸಂಘವು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತ್ತು. ನಿವೇಶನವನ್ನು 99 ವರ್ಷಗಳ ಅವಧಿಗೆ ನೀಡಲಾಗಿದ್ದು, 2065ರಲ್ಲಿ ಮುಗಿಯಲಿದೆ. ಗುತ್ತಿಗೆ ಸಂದರ್ಭದಲ್ಲಿನ ಷರತ್ತುಗಳಂತೆ ದೇವಾಲಯ ನಿರ್ಮಿಸಲಾಗಿದ್ದು, ಭಕ್ತಾದಿಗಳ ದೇಣಿಗೆಯಿಂದ ನಿರ್ವಹಿಸಲಾಗುತ್ತಿದೆ. ಹೀಗಾಗಿ, ಈ ಮೊದಲಿನಂತೆಯೇ 1966ರ ಮೂಲ ಗುತ್ತಿಗೆಯನ್ನು ಪರಿಗಣಿಸಬೇಕು ಎಂದು ಕೋರಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿದ್ದ ಬಿಡಿಎ, '2026ರ ಅಕ್ಟೋಬರ್ 24ರವರೆಗೆ ನವೀಕರಣ ಮಾಡಲಾಗಿದೆ. ನಿವೇಶನ ನವೀಕರಣದ ದರ ಕಡಿಮೆ ಮಾಡುವುದನ್ನು ಪರಿಗಣಿಸಲು ಸಾಧ್ಯ ಇಲ್ಲ' ಎಂದು ಸಂಘಕ್ಕೆ ತಿಳಿಸಿತ್ತು.

ನಂತರ, ಗುತ್ತಿಗೆ ಕರಾರಿನಲ್ಲಿನ ಅಂಶಗಳನ್ನು ಗಮನದಲ್ಲಿರಿಸಿಟ್ಟು ಕೊಂಡು ಸಿ.ಎ. ನಿವೇಶನವನ್ನು ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎನ್ನುವ ಬಗ್ಗೆ ಸಮಗ್ರ ವರದಿಯನ್ನು ಕಾರ್ಯಪಾಲಕ ಎಂಜಿನಿಯರ್ ಅವರು ಸಹ ಸಲ್ಲಿಸಿದ್ದರು.

ಈ ಪ್ರಕರಣದ ಕುರಿತಾದ ಎಲ್ಲ ವರದಿಗಳ ಅನ್ವಯ, ಸಂಸ್ಥೆಯು ಗುತ್ತಿಗೆ ಮೊತ್ತವನ್ನು ಪಾವತಿಸಲು ವಿಳಂಬ ಮಾಡಿದ ಅವಧಿಗೆ, ಬಾಕಿ ಗುತ್ತಿಗೆ ಮೊತ್ತದ ಮೇಲೆ ಶೇಕಡ 18ರಷ್ಟು ಬಡ್ಡಿಯನ್ನು ಸಂಸ್ಥೆಗೆ ವಿಧಿಸಲಾಗಿದೆ. ಇದರಿಂದ, ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟಾಗದಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲು ಎಸಿಬಿಗೆ ಅನುಮತಿ ನೀಡಲು ಸಮರ್ಥನೀಯ ಅಂಶಗಳು ಕಂಡು ಬಂದಿಲ್ಲ ಎಂದು ಪ್ರಾಧಿಕಾರದ ಆಯುಕ್ತರು ಅಭಿಪ್ರಾಯಪಟ್ಟಿದ್ದಾರೆ.

ಬಿಡಿಎ ಭ್ರಷ್ಟಾಚಾರ: ನ್ಯಾಯಾಂಗ ತನಿಖೆಗೆ ಸಿಪಿಎಂ ಆಗ್ರಹ

'ಬಿಡಿಎ ಭ್ರಷ್ಟಾಚಾರದ ಕೂಪವಾಗಿದೆ. ಬಿಡಿಎ ಅಕ್ರಮಗಳನ್ನು ಸಮಗ್ರ ತನಿಖೆಗೆ ಒಳಪಡಿಸಲು ನ್ಯಾಯಾಂಗ ತನಿಖೆ ಮಾಡಬೇಕು' ಎಂದು ಸಿಪಿಎಂ ಬೆಂಗಳೂರು ಉತ್ತರ-ದಕ್ಷಿಣ ಜಿಲ್ಲಾ ಸಮಿತಿಗಳು ಆಗ್ರಹಿಸಿವೆ.

'ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಬಿಡಿಎ ನಿರ್ಮಿಸಿರುವ ಬಡಾವಣೆಗಳಲ್ಲಿ ಒಬ್ಬರಿಗೆ ಹಂಚಿಕೆಯಾಗಿರುವ ನಿವೇಶನವನ್ನು ಮತ್ತೊಬ್ಬರಿಗೆ ಶುದ್ಧ ಕ್ರಯಪತ್ರ ಮಾಡಿರುವ ಪ್ರಕರಣಗಳಿವೆ. ಭ್ರಷ್ಟ ಅಧಿಕಾರಿಗಳಿಂದ ಇಂತಹ ಅಕ್ರಮಗಳು ನಡೆಯುತ್ತಿವೆ' ಎಂದು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹರಾಜಿನ ಮೂಲಕ ಹಂಚಿಕೆ ಮಾಡಬೇಕಾದ ಮೂಲೆ ನಿವೇಶನಗಳನ್ನು ವಸತಿ ನಿವೇಶನಕ್ಕೆ ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗುತ್ತಿದೆ. ನಿವೇಶನದಾರರ ಗಮನಕ್ಕೆ ಬಾರದೆ ಅವರ ನಿವೇಶನ ಹಂಚಿಕೆ ರದ್ದುಪಡಿಸಿ ಬೇರೆ ಯಾರದೋ ಹೆಸರಿಗೆ ಅದನ್ನು ಬದಲಿ ನಿವೇಶನವನ್ನಾಗಿ ನೀಡಿರುವ ಅಕ್ರಮಗಳು ನಡೆದಿವೆ' ಎಂದು ವಿವರಿಸಿದ್ದಾರೆ.

'ನಕಲಿ ದಾಖಲೆಗಳನ್ನು ಸೃಷ್ಟಿಸುವ, ನೋಂದಣಿ ಪುಸ್ತಕಗಳ ಹಾಳೆಗಳನ್ನೇ ಬದಲಾಯಿಸುವ ಮೂಲಕ ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

ಬಿಡಿಎ ಅಧ್ಯಕ್ಷರು ಸಹ ಅಕ್ರಮಗಳ ಕುರಿತು ಪರಿಶೀಲಿಸದೆಯೇ ಉದಾಸೀನ ತೋರಿದ್ದಾರೆ ಎಂದು ದೂರಿದ್ದಾರೆ.

ಶಾಂತಿಶ್ರೀ ಪಂಡಿತ್ ಜೆಎನ್‌ಯು ಕುಲಪತಿ

ಒಂದನೇ ಪುಟದಿಂದ

ಜೆಎನ್‌ಯು ಕುಲಪತಿಯಾಗಿದ್ದ ಎಂ.ಜಗದೀಶ್ ಕುಮಾರ್ ಕಳೆದ ವಾರವಷ್ಟೇ ವಿಶ್ವವಿದ್ಯಾಲಯದ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷರಾಗಿ ನೇಮಕವಾಗಿದ್ದರು. ತೆರವಾದ ಸ್ಥಾನಕ್ಕೆ ಪಂಡಿತ್ ನೇಮಕಗೊಂಡಿದ್ದಾರೆ.

ಈ ಬಗ್ಗೆ ಅವರು ಹೇಳಿಕೆ ನೀಡಿದ್ದು, ನೇಮಕಕ್ಕಾಗಿ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಗುಣಮಟ್ಟದ ಶಿಕ್ಷಣ ನೀಡಲು ಸ್ವಚ್ಛ ಆಡಳಿತ ನೀಡುವುದು, ವಿದ್ಯಾರ್ಥಿ ಸ್ನೇಹಿ ಮತ್ತು ಲಿಂಗಸಂವೇದಿ ಪರಿಸರವನ್ನು ರೂಪಿಸುವುದು ನನ್ನ ಆದ್ಯತೆ ಎಂದಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿ –2020 ಜಾರಿಗೊಳಿಸಲು ಆದ್ಯತೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ನೇಮಕ ಆದೇಶ ಹೊರಬೀಳುತ್ತಿದ್ದಂತೆಯೇ ಈ ಹಿಂದೆ ಅವರು ಮಾಡಿದ್ದ ಟ್ವೀಟ್‌ಗಳು ಜಾಲತಾಣದಲ್ಲಿ ಪ್ರಾಮುಖ್ಯತೆ ಪಡೆದವು. ಕ್ರೈಸ್ತರಿಗೆ ಅಕ್ಕಿ ಚೀಲ ಪರಿವರ್ತಕರು ಮತ್ತು ಎಡಪಂಥೀಯರಿಗೆ ಜಿಹಾದಿಗಳು ಎಂದು ಉಲ್ಲೇಖಿಸಿದ್ದರು. ಲವ್ ಜಿಹಾದ್ ಅನ್ನು ಟೀಕಿಸಿದ್ದ ಅವರು, ಕಾಂಗ್ರೆಸ್ ಬದಲಿಗೆ ಭಾರತೀಯ ಜನತಾ ಪಕ್ಷಕ್ಕೆ ಮತ ನೀಡಬೇಕು ಎಂದು ಕೋರಿದ್ದರು. ಈ ಟ್ವೀಟ್‌ಗಳು ಸುದ್ದಿಗೆ ಗ್ರಾಸವಾದಂತೆ ಅವರ ಟ್ವೀಟ್ ಖಾತೆಯನ್ನು ಅಳಿಸಿಹಾಕಲಾಗಿದೆ.

ವಿದ್ಯಾರ್ಥಿಗಳು ಸರ್ಕಾರದ ಜೊತೆಗೆ ನೇರ ಸಂಘರ್ಷಕ್ಕೆ ಇಳಿಯುವ ಕಾರಣಕ್ಕೆ ಕಳೆದ ಐದು ವರ್ಷದಲ್ಲಿ ದೇಶದ ಗಮನಸೆಳೆದಿದ್ದ ಜೆಎನ್‌ಯುವಿನ ಕುಲಪತಿಯ ಕಾರ್ಯಭಾರ ವಹಿಸಿಕೊಳ್ಳುತ್ತಿದ್ದಾರೆ. 2016ರಲ್ಲಿ ವಿದ್ಯಾರ್ಥಿ ಮುಖಂಡರ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಿದ್ದರೆ, 2020ರಲ್ಲಿ ಕ್ಯಾಂಪಸ್‌ಗೆ ನುಗ್ಗಿದ್ದ ಕಿಡಿಗೇಡಿಗಳು ವಿದ್ಯಾರ್ಥಿಗಳ ಮೇಲೆ ತೀವ್ರ ಹಲ್ಲೆ ನಡೆಸಿದ್ದರು.

ಶುಲ್ಕ ಏರಿಕೆ, ನೇಮಕಾತಿ ಪ್ರಕ್ರಿಯೆ ಕುರಿತು ಅಪಸ್ವರ ವ್ಯಕ್ತವಾಗಿದ್ದು, ಹಿಂದಿನ ಕುಲಪತಿ ಜಗದೀಶ್ ಕುಮಾರ್ ಅವರ ವಿರುದ್ಧ ತೀವ್ರ ಪ್ರತಿಭಟನೆಯೂ ನಡೆದಿತ್ತು.

ಜಲಮಂಡಳಿ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಬೆಂಗಳೂರು ಜಲಮಂಡಳಿಯಲ್ಲಿನ ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಮತ್ತು ಹೆಚ್ಚುವರಿ ಆಯ್ಕೆ ಪ್ರಕಟಿಸಲಾಗಿದೆ.

ಸಹಾಯಕ, ಕೆಮಿಸ್ಟ್ ಗ್ರೇಡ್-2, ಕಿರಿಯ ಸಹಾಯಕ, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಹಾಗೂ ಬೆರಳಚ್ಚುಗಾರ ಅಥವಾ ಡಿಇಒ ಹುದ್ದೆಗಳ ಅಂತಿಮ ಮುಖ್ಯ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿ ಪ್ರಕಟಿಸಲಾಗಿದೆ.

ಬೆಂಗಳೂರು ಜಲಮಂಡಳಿಯು 2018ರ ಆಗಸ್ಟ್ 24ರಂದು ಈ ಹುದ್ದೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿತ್ತು.

ಮಾಹಿತಿಗೆ www.bwssb.karnataka.gov.inನಲ್ಲಿ ವೀಕ್ಷಿಸಬಹುದಾಗಿದೆ.

ಜೀರೊ ಟ್ರಾಫಿಕ್: ಮರು ವಿಚಾರಣೆಗೆ ನಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶಶಿಕಲಾ ಜೊಲ್ಲೆ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಆಗಮಿಸುವ ವೇಳೆ ಅವರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ಏರ್‌ಪೋರ್ಟ್‌ನಿಂದ ವಿಧಾನಸೌಧದವರೆಗೆ ಜೀರೊ ಟ್ರಾಫಿಕ್ ಕಲ್ಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮರುವಿಚಾರಣೆ ನಡೆಸಲು ಹೈಕೋರ್ಟ್ ನಿರಾಕರಿಸಿದೆ.

ಜೀರೊ ಟ್ರಾಫಿಕ್ ನೀಡಿದ್ದ ಪೊಲೀಸರ ಕ್ರಮ ಪ್ರಶ್ನಿಸಿ ನಗರದ ಜಿ.ಬಾಲಾಜಿ ನಾಯ್ಡು ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಅರ್ಜಿಯನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ. ಅರ್ಜಿದಾರರು ನೀಡಿದ ದೂರಿನ ಮೇರೆಗೆ ಸರ್ಕಾರ ಕೈಗೊಂಡ ಕ್ರಮದ ವರದಿಯನ್ನು ನಿಮಗೆ ನೀಡಲಾಗುವುದು. ಆದೇಶದ ಕುರಿತು ಆಕ್ಷೇಪವಿದ್ದಲ್ಲಿ ಮೇಲ್ಮನವಿ ಸಲ್ಲಿಸಬಹುದು' ಎಂದು ಅರ್ಜಿದಾರರಿಗೆ ತಿಳಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

2021ರ ಆಗಸ್ಟ್ 4ರಂದು ನಡೆದ ಸಚಿವರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶಶಿಕಲಾ ಜೊಲ್ಲೆ ಅವರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನದವರೆಗೆ ಜೀರೊ ಟ್ರಾಫಿಕ್ ಕಲ್ಪಿಸಲಾಗಿತ್ತು. 'ಇದು ಸಂವಿಧಾನದ 15ನೇ ವಿಧಿಯ ಉಲ್ಲಂಘನೆ. ಆದ್ದರಿಂದ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ವೈಯಾಲಿಕಾವಲ್ ಸೊಸೈಟಿ: ಯಥಾಸ್ಥಿತಿಗೆ ಆದೇಶ

ಬೆಂಗಳೂರು: ವೈಯಾಲಿ ಕಾವಲ್ ಸೊಸೈಟಿಯ 55 ನಿವೇಶನದಾರರಿಗೆ ನಾಗರಿಕ ಸೌಲಭ್ಯಕ್ಕೆ ಮೀಸಲಾದ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಿವೇಶನದಾರರಾದ ವಿ.ಆರ್.ಪದ್ಮಾವತಿ ಸೇರಿದಂತೆ 53 ಮಂದಿ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಮಧ್ಯಂತರ ಆದೇಶ ನೀಡಿದೆ. 'ಸದ್ಯಕ್ಕೆ ನಿರ್ಮಾಣವಾಗಿರುವ ಯಾವುದೇ ಕಟ್ಟಡವನ್ನು ತೆರವುಗೊಳಿಸದಂತೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ವೈಯಾಲಿಕಾವಲ್ ಸೊಸೈಟಿಗೆ ನ್ಯಾಯಪೀಠ ಆದೇಶಿಸಿದೆ.

'ನಾಗರಿಕ ಸೌಲಭ್ಯಕ್ಕೆ ಮೀಸಲಾದ ನಿವೇಶನಗಳನ್ನು ಹಂಚಿಕೆ ಮಾಡಿದ್ದರೆ ಅಂತಹವುಗಳನ್ನು ತೆರವುಗೊಳಿಸಬೇಕು' ಎಂದು ಹೈಕೋರ್ಟ್ ಈ ಹಿಂದೆ ಆದೇಶಿಸಿತ್ತು. ನಿವೇಶನದಾರರು ಇದನ್ನು ಪ್ರಶ್ನಿಸಿ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ.



ಸೆಲ್ಫಿ ಸಂಭ್ರಮ ನಗರದ ಕಬ್ಬನ್ ಪಾರ್ಕ್‌ನಲ್ಲಿ ವರ್ಣರಂಜಿತ ಬೊಗೆನ್ವಿಲ್ಲಾ ಪೇಪರ್ ಹೂವುಗಳ ಎದುರು ನಿಂತು ವಿದ್ಯಾರ್ಥಿನಿಯರು ಸೋಮವಾರ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು — ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ: ಅತಿಥಿ–ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ಎಚ್.ಸಿ.ಕಿಶೋರ್ ಚಂದ್ರ, ಆಯೋಜನೆ–ಪೊಲೀಸ್ ಇಲಾಖೆ, ಸ್ಥಳ–ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಬೆಳಿಗ್ಗೆ 9

'ಬಜೆಟ್–2022' ಕುರಿತು ಚರ್ಚೆ: ಉದ್ಘಾಟನೆ–ಲಿಂಗರಾಜ ಗಾಂಧಿ, ಮಾತನಾಡುವವರು–ಕೆ.ಗುರುರಾಜ ಆಚಾರ್ಯ, ಅಧ್ಯಕ್ಷತೆ–ಸಿ.ಎನ್. ಶ್ರೀಧರ್, ಆಯೋಜನೆ–ವಾಣಿಜ್ಯ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ (ಬಿಸಿಯು), ಸ್ಥಳ–ಸೆನೆಟ್ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10

ಎಸ್.ಕೃಷ್ಣಮೂರ್ತಿ ಜನ್ಮಶತಮಾನೋತ್ಸವ: ಉದ್ಘಾಟನೆ–ಎಸ್.ಶಂಕರ್, ಅತಿಥಿಗಳು–ಕುಸುಮಾ, ಅಧ್ಯಕ್ಷತೆ–ಆನೂರು ಅನಂತಕೃಷ್ಣ ಶರ್ಮ, ಆಯೋಜನೆ–ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 5

'ಮನುಜಮತ ವಿಶ್ವಪಥ' ಕುವೆಂಪು ಗೀತೋತ್ಸವ: ಉದ್ಘಾಟನೆ–ಅ. ದೇವೇಗೌಡ, ಅಧ್ಯಕ್ಷತೆ–ಮಹೇಶ್ ಜೋಶಿ, ಅತಿಥಿಗಳು–ಎಸ್. ಜಿ.ಸುಶೀಲಮ್ಮ, ಸಂತೋಷ್ ಹಾನಗಲ್ಲ, ಬಂಡ್ಲಹಳ್ಳಿ ವಿಜಯಕುಮಾರ್, ಆಯೋಜನೆ–ರಂಗ ಸಂಸ್ಥಾನ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

62 ಮಂದಿ ಗ್ರೇಡ್–2 ತಹಶೀಲ್ದಾರ್‌ಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾರ್ಥ ತರಬೇತಿ (ಪ್ರೊಬೇಷನರಿ) ಅವಧಿಯಲ್ಲಿದ್ದ 62 ಮಂದಿ ಗ್ರೇಡ್–2 ತಹಶೀಲ್ದಾರ್‌ಗಳನ್ನು ವಿವಿಧ ಹುದ್ದೆಗಳಿಗೆ ವರ್ಗಾವಣೆಗೊಳಿಸಿ ಕಂದಾಯ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ವರ್ಗಾವಣೆಗೊಂಡಿರುವ ಅಧಿಕಾರಿಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಿಯುಕ್ತಿಗೊಂಡಿರುವವರ ವಿವರ ಹೀಗಿದೆ: ಅಶ್ವತ್ಥ್ ಮಲ್ಲೇನಹಳ್ಳಿ ಬಸವಲಿಂಗಪ್ಪ– ಬೆಂಗಳೂರು ಜಲಮಂಡಳಿ; ಅಮೃತ್ ಎಚ್.ಆರ್. ಆತ್ರೇಶ್– ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ; ದೀಪ್ತಿ ಎನ್.– ಮುಜರಾಯಿ ತಹಶೀಲ್ದಾರ್, ಬೆಂಗಳೂರು ನಗರ ಜಿಲ್ಲೆ; ಲೋಕೇಶ್ ಕೆ.ಎನ್.– ರೇರಾ, ಬೆಂಗಳೂರು; ರಶ್ಮಿ ಯು.– ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ನಗರ; ಪವನ್ ಕುಮಾರ್ ಎಸ್.– ಎಸ್ಟೇಟ್ ವಿಭಾಗ, ಬಿಬಿಎಂಪಿ; ಸುದರ್ಶನ್ ಯಾದವ್ ಕೆ.ಆರ್.– ಬಿಎಂಆರ್‌ಸಿಎಲ್; ಹರ್ಷವರ್ಧನ್ ಜಿ.ಪಿ.– ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಬಿ.ಎಂ. ಸಂಜನಾ– ನಗರ ಆಸ್ತಿ ಹಕ್ಕುಗಳ ದಾಖಲೆ ವಿಭಾಗ, ಬೆಂಗಳೂರು; ರುಖಿಯಾ ನಾಜ್‌ನೀನ್– ಸಂಶೋಧನಾಧಿಕಾರಿ, ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯ; ವಿಮಲ ಸುಪ್ರಿಯ ಡಿ.– ಕರ್ನಾಟಕ ಸರೋವರ ರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ; ಸ್ವಾಮಿ ಬಿ.ಎನ್.– ಬೆಂಗಳೂರು ಮಹಾನಗರ ಕಾರ್ಯಪಡೆ; ವಿಜಯಕುಮಾರ್ ಆರ್.– ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ; ಸುರೇಶಾಚಾರ್ ಟಿ.ಜಿ.– ಚುನಾವಣಾ ತಹಶೀಲ್ದಾರ್, ಬೆಂಗಳೂರು ಗ್ರಾಮಾಂತರ ಜಿಲ್ಲೆ; ರೇಖಾ ಟಿ.– ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು; ಲೋಕೇಶ್ ಎಸ್.ವಿ.– ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ; ಭಾನುಪ್ರಿಯಾ ಎಚ್.– ಭಾರತೀಯ ಅನಿಲ ಪ್ರಾಧಿಕಾರ, ಬೆಂಗಳೂರು; ಮುನಿಶಾಮಿರೆಡ್ಡಿ– ಸಾಮಾಜಿಕ ಅಭಿವೃದ್ಧಿ ಅಧಿಕಾರಿ, ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ (ಕೆಶಿಪ್); ಬಸವರೆಡ್ಡಪ್ಪ ರೋಣದ– ಜಾರಿ ಕೋಶ, ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ; ವಿನೋದ ಲಕ್ಷ್ಮಣ ಹತ್ತಳ್ಳಿ– ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ.

ಅರುಣ ಎಚ್. ದೇಸಾಯಿ– ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ನಗರ; ಶಿವಕುಮಾರ್ ಕಾಸ್ನೂರ್– ಕರ್ನಾಟಕ ಪಾನೀಯ ನಿಗಮ; ಬಸವರಾಜ ತೆನ್ನಳ್ಳಿ– ಸಾಮಾಜಿಕ ಭದ್ರತಾ ಯೋಜನೆ ನಿರ್ದೇಶನಾಲಯ; ರಾಗವಿ ವಿನೋದ ನಾಯಕ್– ಆಡಳಿತಾಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ; ಅಶ್ವಿನಿ ಜಿ.– ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ; ಪ್ರಶಾಂತ್ ಕೆ. ಪಾಟೀಲ– ವಿಶೇಷಾಧಿಕಾರಿ, ಪರಿಹಾರ ಮತ್ತು ಪುನರ್ವಸತಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ; ಗೌರಮ್ಮ ಪಿ.– ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತಾ ಯೋಜನೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕಿಡ್ನಿ ಚಿಕಿತ್ಸೆ: ಯುನೈಟೆಡ್ ಆಸ್ಪತ್ರೆಯಲ್ಲಿ ವಿಶೇಷ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಇಎಸ್‌ಡಬ್ಲ್ಯುಎಲ್ ದಿನಾಚರಣೆ ಪ್ರಯುಕ್ತ ಜಯನಗರದ ಯುನೈಟೆಡ್ ಆಸ್ಪತ್ರೆಯು ಕಿಡ್ನಿ ಕಲ್ಲು ಚಿಕಿತ್ಸೆ ಪಡೆಯುವವರಿಗೆ ವಿಶೇಷ ರಿಯಾಯಿತಿ ನೀಡಲು ನಿರ್ಧರಿಸಿದೆ.

'ಆಸ್ಪತ್ರೆಯು ಎಕ್ಸ್ಟ್ರಾಕಾರ್ಪೋರಿಯಲ್ ಶಾಕ್‌ವೇವ್ ಲಿಥೋಟ್ರಿಪ್ಸಿ ಚಿಕಿತ್ಸಾ ವಿಧಾನ ಅಳವಡಿಸಿಕೊಂಡಿದೆ. ಇದರಿಂದ ಶಸ್ತ್ರಚಿಕಿತ್ಸೆ ಇಲ್ಲದೆಯೇ ಕಿಡ್ನಿಯೊಳಗಿನ ಕಲ್ಲು ಸುಲಭವಾಗಿ ಕರಗಿಸಬಹುದಾಗಿದೆ. ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗಬೇಕು. ಈ ಉದ್ದೇಶದಿಂದಲೇ ರಿಯಾಯಿತಿ ಪ್ರಕಟಿಸಿದ್ದೇವೆ' ಎಂದು ಆಸ್ಪತ್ರೆಯ ಮೂತ್ರರೋಗ ತಜ್ಞ ಡಾ.ರಾಜೀವ್ ಬಾಶೆಟ್ಟಿ ತಿಳಿಸಿದರು.

ಹೆಚ್ಚಿನ ಮಾಹಿತಿಗೆ 9916977777 ಅಥವಾ info@unitedhospital.inಗೆ ಇ–ಮೇಲ್ ಕಳುಹಿಸಬಹುದು.

ಸಂಚಾರ ಪೊಲೀಸರ ವಿರುದ್ಧ ವಾಹನ ಸವಾರರ ಆಕ್ರೋಶ • ದೂರು ನೀಡಿದರೆ ಕ್ರಮ– ಜಂಟಿ ಕಮಿಷನರ್

ಎಚ್‌ಎಸ್‌ಆರ್‌ಪಿ ಫಲಕ: ನಿಯಮಬಾಹಿರ ದಂಡ?

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಾಹನಗಳ ಸುರಕ್ಷತೆ ದೃಷ್ಟಿಯಿಂದ ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಕೆ ಸಂಬಂಧ ಕೇಂದ್ರ ಸರ್ಕಾರ ಕೆಲವು ನಿಯಮಗಳನ್ನು ರೂಪಿಸಿದ್ದು, ಅವುಗಳ ಜಾರಿ ನೆಪದಲ್ಲಿ ನಗರದ ಸಂಚಾರ ಪೊಲೀಸರು ಕಾನೂನುಬಾಹಿರವಾಗಿ ದಂಡ ವಸೂಲಿ ಮಾಡುತ್ತಿರುವ ಆರೋಪಗಳು ಕೇಳಿಬರುತ್ತಿವೆ.

ಕೇಂದ್ರ ಮೋಟಾರು ವಾಹನಗಳ ಕಾಯ್ದೆಗೆ 2018ರಲ್ಲಿ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರ, 2019ರ ಏಪ್ರಿಲ್ 1ರಿಂದ ಹೊಸದಾಗಿ ನೋಂದಣಿ ಆಗುವ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಕಡ್ಡಾಯಗೊಳಿಸಿದೆ. ಇದಕ್ಕೆ ಸಂಬಂಧ ಪಟ್ಟ ನೋಂದಣಿ ಫಲಕಗಳ ಮಾದರಿಗಳನ್ನು 2018ರ ಡಿಸೆಂಬರ್ 6ರ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಎಚ್‌ಎಸ್‌ಆರ್‌ಪಿ ಕಡ್ಡಾಯ ನಿಯಮದ ಪರಿಶೀಲನೆ ನಡೆಸುವಂತೆ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಮಾತ್ರ ಸೂಚನೆ ನೀಡಲಾಗಿದೆ. ದಂಡ ವಿಧಿಸುವ ಬಗ್ಗೆ ಇದುವರೆಗೂ ತೀರ್ಮಾನ ಕೈಗೊಂಡಿಲ್ಲ. ಜೊತೆಗೆ, ಸಂಚಾರ ಪೊಲೀಸ ರಿಗೂ ಯಾವುದೇ ನಿರ್ದೇಶನವನ್ನೂ ನೀಡಿಲ್ಲ. ಇಷ್ಟಾದರೂ ಸಂಚಾರ ಪೊಲೀಸರು, 'ಎಚ್‌ಎಸ್‌ಆರ್‌ಪಿ ಕಡ್ಡಾಯ' ಎಂಬ ನೆಪ ಮಾಡಿಕೊಂಡು ಬೇಕಾ ಬಿಟ್ಟಿಯಾಗಿ ದಂಡ ಸಂಗ್ರಹಿಸು ತ್ತಿದ್ದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.



ಸಂಚಾರ ಪೊಲೀಸರು, ಕಾರು ಮಾಲೀಕರೊಬ್ಬರಿಗೆ ಕಳುಹಿಸಿರುವ ಎಸ್‌ಎಂಎಸ್



ಕಾನೂನುಬದ್ಧ ನೋಂದಣಿ ಫಲಕ ಮಾದರಿ

ಸಂಚಾರ ನಿಯಮ ಉಲ್ಲಂಘನೆ ಹಾಗೂ ದಂಡದ ವಿವರವನ್ನು ವಾಹನಗಳ ಮಾಲೀಕರ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ಕಳುಹಿಸಲಾಗುತ್ತಿದೆ. ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳದ ವಾಹನಗಳ ಹಲವು ಮಾಲೀಕ ರಿಗೂ ದಂಡದ ಸಂದೇಶ ಬಂದಿದೆ.

'ನಮ್ಮ ವಾಹನದ ಫಲಕ ಕಾನೂನು ಪ್ರಕಾರವೇ ಇದೆ' ಎಂದು ಮಾಲೀಕರು ಪ್ರಶ್ನಿಸಿದರೆ, 'ಎಚ್‌ಎಸ್‌ಆರ್‌ಪಿ ಇಲ್ಲ' ಎಂಬುದಾಗಿ ಪೊಲೀಸರು ಉತ್ತರಿಸುತ್ತಿದ್ದಾರೆ. 'ಎಚ್‌ಎಸ್‌ಆರ್‌ಪಿ ಕಡ್ಡಾಯ' ದಂಡದ ಬಗ್ಗೆ ಆದೇಶ ತೋರಿಸಿ ಎಂದರೆ, ಪೊಲೀಸರ ಬಳಿ ಉತ್ತರವೇ ಇಲ್ಲ.

'2019ರ ಏಪ್ರಿಲ್ 1ರಿಂದ ಹೊಸದಾಗಿ ನೋಂದಣಿ ಆಗುವ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಕಡ್ಡಾಯ. ಅದಕ್ಕೂ ಮುಂಚಿನ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಕಡ್ಡಾಯವಲ್ಲ. ಹಳೇ ವಾಹನಗಳಿಗೆ ಫಲಕ ಅಳವಡಿಕೆಯ ಅಂತಿಮ ದಿನವನ್ನೂ ಕೇಂದ್ರ ಸರ್ಕಾರ ನಿಗದಿ ಮಾಡಿಲ್ಲ. ಜೊತೆಗೆ, ಫಲಕ ವಿಚಾರದಲ್ಲಿ ಹಳೇ ಹಾಗೂ ಹೊಸ ವಾಹನಗಳಿಗೆ ದಂಡ ವಿಧಿಸುವ ಬಗ್ಗೆ ಯಾವುದೇ ಆದೇಶವೂ ಹೊರಬಿದ್ದಿಲ್ಲ' ಎಂದು ಸಾರಿಗೆ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸುಖಾಸುಮ್ಮನೇ ₹ 500 ದಂಡ: 'ವಾಹನಗಳ ನೋಂದಣಿ ಫಲಕ ಹೇಗಿರಬೇಕು ? ಎಂಬ ಬಗ್ಗೆ ಬೆಂಗಳೂರು ಸಂಚಾರ ಪೊಲೀಸರು ಟ್ವಿಟರ್‌ನಲ್ಲಿ ಮಾದರಿ ಚಿತ್ರಗಳನ್ನು ಹಾಕಿದ್ದರು. ಅದರ ಪ್ರಕಾರವೇ ಕಾರಿಗೆ ಫಲಕ ಅಳವಡಿಸಲಾಗಿದೆ. ಅಷ್ಟಾದರೂ ನನ್ನ ಕಾರಿಗೆ ₹ 500 ದಂಡ ವಿಧಿಸಲಾಗಿದೆ' ಎಂದು ಖಾಸಗಿ ಕಂಪನಿ ಉದ್ಯೋಗಿ ರಾಹುಲ್‌ಕುಮಾರ್ ಟ್ವೀಟ್ ಮಾಡಿದ್ದಾರೆ.

'ಫಲಕ ಕಾನೂನು ಪ್ರಕಾರ ಇರುವುದಾಗಿ ಪೊಲೀಸರಿಗೆ ಹೇಳಿದಾಗ, 'ಎಚ್‌ಎಸ್‌ಆರ್‌ಪಿ ಇಲ್ಲ' ಎಂದಿದ್ದರು. 2018ರ ಜೂನ್‌ನಲ್ಲಿ ನೋಂದಣಿಯಾಗಿರುವ ಕಾರಿಗೆ ಎಚ್‌ಎಸ್‌ಆರ್‌ಪಿ ಏಕೆ ? ಎಂದು ಪ್ರಶ್ನಿಸಿದಾಗ, ದೂರು ನೀಡುವಂತೆ ಹೇಳಿದ್ದರು. ಸುಖಾಸುಮ್ಮನೇ ದಂಡ ವಿಧಿಸಿ, ದೂರು ನೀಡುವಂತೆ ಹೇಳುತ್ತಿರುವುದು ಯಾವ ನ್ಯಾಯ' ಎಂದೂ ಅವರು ಪ್ರಶ್ನಿಸಿದ್ದಾರೆ.

'ಬಹುತೇಕ ಜನ, ₹ 500 ಕೊಟ್ಟು ಹೊರಟು ಹೋಗುತ್ತಾರೆ. ಪೊಲೀಸರ ವರ್ತನೆಯನ್ನು ಪ್ರಶ್ನಿಸಿ, ಅವರ ಮೇಲೆ ದೂರು ನೀಡಲು ಸಮಯವಿರುವುದಿಲ್ಲ. ಇದುವೇ ಪೊಲೀಸರಿಗೆ ಅನುಕೂಲ ಮಾಡಿಕೊಟ್ಟಿದೆ. ನಿಯಮಬಾಹಿರ ದಂಡ ವಸೂಲಿ ವಿರುದ್ಧ ದೂರು ನೀಡಬೇಕು. ಹಿರಿಯ ಅಧಿಕಾರಿಗಳು, ಪೊಲೀಸರಿಗೆ ನಿಯಮಗಳ ಪಾಠ ಮಾಡಬೇಕು' ಎಂದೂ ಅವರು ಹೇಳಿದ್ದಾರೆ.

ಪ್ರಜಾವಾಣಿ ವಿಶೇಷ

'ಎಚ್‌ಎಸ್‌ಆರ್‌ಪಿ' ದಂಡ ಕೇಳಿದರೆ ದೂರು ನೀಡಿ'



ಬಿ.ಆರ್. ರವಿಕಾಂತೇಗೌಡ

'ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಉಲ್ಲಂಘನೆಗೆ ದಂಡ ವಿಧಿಸುವ ಬಗ್ಗೆ ಪೊಲೀಸ್ ಇಲಾಖೆಗೆ ಯಾವುದೇ ಆದೇಶಗಳು ಬಂದಿಲ್ಲ. ಹೀಗಾಗಿ, ದಂಡ ವಿಧಿಸುವುದಿಲ್ಲ. ಯಾರಾದರೂ ದಂಡ ವಿಧಿಸಿದರೆ ದೂರು ನೀಡಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

'ಮೋಟಾರು ವಾಹನಗಳ ಕಾಯ್ದೆ ಅನ್ವಯ ನೋಂದಣಿ ಫಲಕ ಹಾಕಿಕೊಳ್ಳಬೇಕು. ಆ ರೀತಿ ಇಲ್ಲದ ಫಲಕಗಳನ್ನು ದೋಷಪೂರಿತ ನೋಂದಣಿ ಫಲಕವೆಂದು ಹೇಳಿ, ಅಂಥ ವಾಹನಗಳಿಗೆ ದಂಡ ವಿಧಿಸಲಾಗುತ್ತಿದೆ. ಫಲಕಗಳನ್ನೂ ತೆರವು ಮಾಡಿ, ಎಚ್ಚರಿಕೆ ನೀಡಲಾಗುತ್ತಿದೆ' ಎಂದೂ ರವಿಕಾಂತೇಗೌಡ ತಿಳಿಸಿದರು.

ಏನಿದು ಎಚ್‌ಎಸ್‌ಆರ್‌ಪಿ?

'ವಾಹನಗಳ ಸಾಮಾನ್ಯ ನೋಂದಣಿ ಫಲಕಕ್ಕಿಂತ ಎಚ್‌ಎಸ್‌ಆರ್‌ಪಿ (ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್) ಹೆಚ್ಚು ಪರಿಣಾಮಕಾರಿ. 'ಇಂಡಿಯಾ' ಎಂಬ ಪದದ ಜೊತೆಯಲ್ಲಿ ಹಾಲೋಗ್ರಾಮ್ ಸಹಿತವಾಗಿ ವಾಹನದ ನೋಂದಣಿ ಸಂಖ್ಯೆ ಇರುತ್ತದೆ. ಇಂಥ ಫಲಕವನ್ನು ವಿರೂಪಗೊಳಿಸುವುದು ಹಾಗೂ ಬದಲಿಸುವುದು ಕಷ್ಟ' ಸಾರಿಗೆ ಅಧಿಕಾರಿ ಹೇಳಿದರು.



'ಪುನೀತ' ಪಟ...

ಬೆಂಗಳೂರಿನ ಹನುಮಂತನಗರದ 'ಸಂಗೀತಾ ಫೋಟೊ ಫ್ರೇಮ್ಸ್' ಮಳಿಗೆಯಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟಕ್ಕೆ ಇಡಲಾಗಿದೆ. ಪುನೀತ್ ನಿಧನರಾದ ಬಳಿಕ ಈವರೆಗೆ ಸುಮಾರು 500ಕ್ಕೂ ಹೆಚ್ಚು ಭಾವಚಿತ್ರಗಳು ಇಲ್ಲಿ ಮಾರಾಟವಾಗಿವೆ

-ಪ್ರಜಾವಾಣಿ ಚಿತ್ರ/ರಂಜು ಪಿ.

ಬಾಡಿ ವೋರ್ನ್ ಕ್ಯಾಮೆರಾ 'ಸರಿಯಾಗಿ ಬಳಸಿ'– ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿಗೆ ಅಳವಡಿಸಲು ಖರೀದಿಸಲಾಗುವ ಬಾಡಿ ವೋರ್ನ್ ಕ್ಯಾಮೆರಾಗಳನ್ನು ಸಮರ್ಪಕ ರೀತಿಯಲ್ಲಿ ಬಳಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಸ್ಮಾರ್ಟ್ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆ ಜಾರಿಗಾಗಿ ಆ ಬಾಡಿ ವೋರ್ನ್ ಕ್ಯಾಮೆರಾಗಳನ್ನು ಸಮರ್ಪಕವಾಗಿ ಬಳಕೆ ಮಾಡಬೇಕು. ಕರ್ತವ್ಯ ನಿರ್ವಹಣೆ ವೇಳೆ, ಕ್ಯಾಮೆರಾಗಳನ್ನು ಧರಿಸುವಂತೆ ಪೊಲೀಸ್ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿ, ಅರ್ಜಿ ವಿಲೇವಾರಿ ಮಾಡಿದೆ.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಬಾಡಿ ವೋರ್ನ್ ಕ್ಯಾಮೆರಾಗಳ ಖರೀದಿಗೆ ಹೊರಡಿಸಲಾಗಿರುವ ಕಾರ್ಯಾದೇಶವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. 'ಒಟ್ಟು 2,680 ಕ್ಯಾಮೆರಾಗಳ ಖರೀದಿಗೆ 3 ಪ್ರತ್ಯೇಕ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈಗಾಗಲೇ 1,092 ಕ್ಯಾಮರಾಗಳನ್ನು ಕಂಪನಿಗಳು ಪೂರೈಸಿವೆ. ಉಳಿದ ಕ್ಯಾಮೆರಾಗಳನ್ನು ಖರೀದಿಸಿದ ನಂತರ, ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿ ಅವುಗಳ ಬಳಕೆ ಮಾಡಲಾಗುವುದು' ಎಂದು ತಿಳಿಸಿದರು.

ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್, ಈ ಹಿಂದೆಯೂ ಸರ್ಕಾರ ₹ 75 ಲಕ್ಷ ವೆಚ್ಚ ಮಾಡಿ 50 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಿತ್ತು. ಆದರೆ, ಅವುಗಳನ್ನು ಬಳಕೆ ಮಾಡಿರಲಿಲ್ಲ' ಎಂದು ಆಕ್ಷೇಪಿಸಿದರು. 'ಈಗ ಖರೀದಿಸುವ ಕ್ಯಾಮೆರಾಗಳನ್ನೂ ಹಿಂದಿನಂತೆಯೇ ಬಳಕೆ ಮಾಡದಂತೆ ಇಡಬಾರದು. ಈ ಕುರಿತು ಸರ್ಕಾರಕ್ಕೆ ನಿರ್ದೇಶಿಬೇಕು' ಎಂದು ಕೋರಿದರು.

ಏನಿದು ಅರ್ಜಿ?: 'ಬಾಡಿ ಕ್ಯಾಮೆರಾ ಅಳವಡಿಸಿಕೊಳ್ಳುವುದರಿಂದ ಪೊಲೀಸ್ ಸಿಬ್ಬಂದಿಯ ಕಾರ್ಯವೈಖರಿಯನ್ನು ಸಂಬಂಧಿಸಿದ ಠಾಣೆಗಳಿಂದಲೇ ಮೇಲ್ವಿಚಾರಣೆ ನಡೆಸಬಹುದು. ಭ್ರಷ್ಟಾಚಾರಕ್ಕೂ ಕಡಿವಾಣ ಹಾಕಬಹುದು. ಆದ್ದರಿಂದ, ರಾಜ್ಯದಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬಾಡಿ ಕ್ಯಾಮೆರಾ ಖರೀದಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಸುದ್ದಿ 2 ನಿಮಿಷ

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹದಾಯಿ ಸಮಸ್ಯೆ ಇತ್ಯರ್ಥ'

ಬೆಂಗಳೂರು: 'ಮಹದಾಯಿ ವಿಚಾರವಾಗಿ ರಾಜ್ಯದ ಹಿತಾಸಕ್ತಿ ಕಾಪಾಡಲು ಕಾಂಗ್ರೆಸ್ ಬದ್ಧವಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಇತ್ಯರ್ಥ ಮಾಡುತ್ತೇವೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಎಂ.ಬಿ. ಪಾಟೀಲ ಹೇಳಿದರು.

ಗೋವಾ ಚುನಾವಣಾ ಪ್ರಣಾಳಿಕೆಯಲ್ಲಿ ಮಹದಾಯಿ ಯೋಜನೆಗೆ ಸಮ್ಮತಿ ಇಲ್ಲ ಎಂದು ಕಾಂಗ್ರೆಸ್ ಹೇಳಿರುವ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈ ಯೋಜನೆಯ ವಿಚಾರದಲ್ಲಿ ನಾವು ನಮ್ಮ ರಾಜ್ಯದ ಹಿತ ಕಾಪಾಡುತ್ತೇವೆ. ಎರಡೂ ರಾಜ್ಯಗಳಿಗೂ ನ್ಯಾಯ ಸಿಗಬೇಕಿದೆ. ಗೋವಾ ಜನರನ್ನು ಮಾತುಕತೆ ಮೂಲಕ ಒಪ್ಪಿಸುತ್ತೇವೆ' ಎಂದರು.



'ಆ ರಾಜ್ಯದ (ಗೋವಾ) ಪರ ಅಲ್ಲಿಯವರಿದ್ದಾರೆ. ನಮ್ಮ ರಾಜ್ಯದ ಪರ ನಾವೆಲ್ಲರೂ ಇದ್ದೇವೆ. ಇಬ್ಬರಿಗೂ ಅನ್ಯಾಯ ಆಗಬಾರದು. ನಾವು ಕುಡಿಯುವ ನೀರು ಕೇಳಿದ್ದೇವೆ. ಅಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರ ಜೊತೆ ಉತ್ತಮ ಬಾಂಧವ್ಯ ಅವಶ್ಯಕತೆ ಇದೆ. ಇಬ್ಬರೂ ಸೋಲಬಾರದು, ಇಬ್ಬರೂ ಗೆಲ್ಲಬಾರದು. ಇಬ್ಬರಿಗೂ ಒಳ್ಳೆಯದಾಗಬೇಕು. ಆ ನಿಟ್ಟಿನಲ್ಲಿ ಸಮಸ್ಯೆ ಬಗೆಹರಿಸುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿನಯ್ ಕುಲಕರ್ಣಿ ಅರ್ಜಿ ವಜಾ

ನವದೆಹಲಿ: ಧಾರವಾಡ ಜಿಲ್ಲಾ ಪಂಚಾಯ್ತಿ ಸದಸ್ಯ ಯೋಗೇಶಗೌಡ ಗೌಡರ್ ಕೊಲೆ ಪ್ರಕರಣದ ಸಿಬಿಐ ತನಿಖೆಯ ಸಿಂಧುತ್ವವನ್ನು ಪ್ರಶ್ನಿಸಿ ಮಾಜಿ ಸಚಿವ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ರವೀಂದ್ರ ಭಟ್ ಹಾಗೂ ಪಿ.ಎಸ್. ನರಸಿಂಹ ಅವರಿದ್ದ ಪೀಠವು 2016ರಲ್ಲಿ ನಡೆದಿದ್ದ ಕೊಲೆ ಪ್ರಕರಣದ ಸಿಬಿಐ ತನಿಖೆಯನ್ನು ಪ್ರಶ್ನಿಸಿ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತು.

ಒಂದು ಗಂಟೆ ಕಾಲ ವಿಚಾರಣೆ ನಡೆಸಿದ ಪೀಠವು, ಈ ಸಂಬಂಧ ವಿಚಾರಣೆ ನಡೆಸಿರುವ ಹೈಕೋರ್ಟ್ ಅರ್ಜಿ ವಜಾ ಮಾಡಿ ಸೂಕ್ತ ತೀರ್ಪು ಪ್ರಕಟಿಸಿದೆ. ಸಿಬಿಐ ತನಿಖೆಯ ಸಿಂಧುತ್ವ ಪ್ರಶ್ನಿಸಲಾದ ಈ ಅರ್ಜಿ ವಿಚಾರಣೆಗೆ ಅರ್ಹವಲ್ಲ ಎಂದು ಅಭಿಪ್ರಾಯಪಟ್ಟು ವಜಾಗೊಳಿಸಿತು.

ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರವು 2019ರಲ್ಲಿ ಪ್ರಕರಣದ ಸಿಬಿಐ ತನಿಖೆಗೆ ಆದೇಶಿಸಿತ್ತು. ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಭಾಗಿಯಾಗಿದ್ದಾರೆ ಎಂದು ಯೋಗೇಶಗೌಡ ಕುಟುಂಬ ಸದಸ್ಯರು ಆರೋಪಿಸಿದ್ದರು. ಪ್ರಕರಣದಲ್ಲಿ ಸಿಬಿಐನಿಂದ ಬಂಧನಕ್ಕೆ ಒಳಗಾಗಿದ್ದ ವಿನಯ್ ಕುಲಕರ್ಣಿ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

ವಕ್ಫ್ ಭೂಮಿಯಿಂದ ಎಷ್ಟು ಬಾಡಿಗೆ ಬರುತ್ತೆ: ಇಬ್ರಾಹಿಂಗೆ ಉಗ್ರಪ್ಪ ಪ್ರಶ್ನೆ

ದಾವಣಗೆರೆ: 'ಬೆಂಗಳೂರಿನ ಕುಂಬಾರ ಪೇಟೆಯಲ್ಲಿ ವಕ್ಫ್ ಬೋರ್ಡ್‌ನ ಭೂಮಿಯನ್ನು ಹೊಡೆದುಕೊಂಡಿದ್ದೀರಿ. ಅದರಿಂದ ಎಷ್ಟು ಬಾಡಿಗೆ ಬರುತ್ತದೆ' ಎಂದು ಕಾಂಗ್ರೆಸ್ ಡಿಜಿಟಲ್ ನೋಂದಣಿ ಅಭಿಯಾನದ ಜಿಲ್ಲಾ ವೀಕ್ಷಕ ವಿ.ಎಸ್. ಉಗ್ರಪ್ಪ ಅವರು ಸಿ.ಎಂ. ಇಬ್ರಾಹಿಂ ಅವರನ್ನು ಪ್ರಶ್ನಿಸಿದ್ದಾರೆ.

ದಾವಣಗೆರೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, '1978ರಲ್ಲಿ ಒಂದೇ ಬಾರಿ ಚುನಾವಣೆ ಗೆದ್ದಿರುವ ನೀವು ಬಳಿಕ ಎಲ್ಲಿ ಗೆದ್ದಿದ್ದೀರಿ? 1980ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾದಿರಿ. 1981ರಲ್ಲಿ ರೋಲೆಕ್ಸ್ ವಾಚ್ ಹಗರಣ ಮತ್ತು ಫ್ಲೋರ್‌ಮಿಲ್ ಹಗರಣದಲ್ಲಿ ರಾಜೀನಾಮೆ ನೀಡಿದಿರಿ. ಬಳಿಕ ದೇವೇಗೌಡರ ಜತೆಗೆ ಹೋಗಿ ರಾಜ್ಯಸಭಾ ಸದಸ್ಯರಾಗಿ ಕೇಂದ್ರ ಸಚಿವರಾದಿರಿ. ಅಲ್ಪಸಂಖ್ಯಾತರ ಬಗ್ಗೆ, ಬಡವರ ಬಗ್ಗೆ, ರೈತರ ಬಗ್ಗೆ ನೀವು ಏನಾದರೂ ಮಾತನಾಡಿದ್ದೀರಾ? ಅಲ್ಪಸಂಖ್ಯಾತರಿಗೆ ನಿಮ್ಮ ಕೊಡುಗೆ ಏನು? ಭದ್ರಾವತಿಯ ಜನ ನಿಮ್ಮನ್ನು ಏಕೆ ಸೋಲಿಸಿದರು' ಎಂದು ಪ್ರಶ್ನೆಗಳ ಸರಮಾಲೆ ಮುಂದಿಟ್ಟರು.

'ನಾನು ವಕೀಲ. ಇಬ್ರಾಹಿಂ ನನ್ನ ಕಕ್ಷಿದಾರ. ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡಿರುವುದು ಸರಿಯಲ್ಲ. ಇದು ಸಂಸ್ಕೃತಿಹೀನ ವರ್ತನೆ. ಹತಾಶರಾಗಿ, ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ. ಫೆ.14ರಂದು ದಾವಣಗೆರೆಯಲ್ಲಿ ಜೆಡಿಎಸ್‌ಗೆ ಸೇರುವುದಾಗಿ ಹೇಳಿದ್ದು ಮಾಧ್ಯಮಗಳಲ್ಲಿ ಬಂದಿದೆ. ಅಲ್ಪಸಂಖ್ಯಾತರು ಈ ಬಗ್ಗೆ ಎಚ್ಚರದಿಂದ ಇರಿ' ಎಂದು ಉಗ್ರಪ್ಪ ಹೇಳಿದರು.

ಎನ್‌ಟಿಎಂ ಶಾಲಾ ಕಟ್ಟಡ ಮಧ್ಯರಾತ್ರಿ ನೆಲಸಮ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮಹಾರಾಣಿ (ಮಾದರಿ) ಎನ್‌ಟಿಎಂ ಶಾಲೆಯ ಹಳೆಯ ಕಟ್ಟಡದ ನೆಲಸಮ ಕಾರ್ಯವನ್ನು ಜಿಲ್ಲಾಡಳಿತ ಸೋಮವಾರ ತಡರಾತ್ರಿ ಆರಂಭಿಸಿತು. ಈ ವೇಳೆ ಪ್ರತಿರೋಧ ತೋರಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು.

ಕಾರ್ಯಾಚರಣೆ ಆರಂಭಕ್ಕೂ ಮುನ್ನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿ ಸಂಚಾರವನ್ನು ನಿರ್ಬಂಧಿಸಲಾಯಿತು. 200ಕ್ಕೂ ಅಧಿಕ ಪೊಲೀಸರು ಸ್ಥಳದಲ್ಲಿ ಜಮಾಯಿಸಿದರು. ಕಟ್ಟಡ ಇರುವ ಸ್ಥಳಕ್ಕೆ ಹೋಗಲು ಮುಂದಾದ ಜೆಸಿಬಿ ಯಂತ್ರದ ಮುಂದೆ ಮಹಾರಾಣಿ (ಮಾದರಿ) ಎನ್‌ಟಿಎಂ ಶಾಲೆ ಉಳಿಸಿ ಹೋರಾಟ ಒಕ್ಕೂಟದ ಮುಖಂಡರು ಮಲಗಿ ಪ್ರತಿಭಟನೆ ನಡೆಸಿದರು.

ಡ್ರಗ್ಸ್ ನಶೆಯಲ್ಲಿದ್ದ ಐವರಿಕೋಸ್ಟ್ ಪ್ರಜೆಯ ಬಂಧನ

ಠಾಣೆ ಎದುರು 'ಮಚ್ಚು' ಹಿಡಿದು ಪುಂಡಾಟ

ಬೆಂಗಳೂರು: ಹೆಣ್ಣೂರು ಠಾಣೆ ಎದುರು ಮಚ್ಚು ಹಿಡಿದು ಕೂಗಾಡಿ ಪೊಲೀಸರಿಗೆ ಜೀವ ಬೆದರಿಕೆ ಹಾಕಿರುವ ಆರೋಪದಡಿ ಓಕಾವೊ ಲಿಯಾನೊ ಎಂಬಾತನನ್ನು ಬಂಧಿಸಲಾಗಿದೆ.

'ಐವರಿಕೋಸ್ಟ್ ಪ್ರಜೆಯಾದ ಓಕಾವೊ, ಕೆಲ ತಿಂಗಳ ಹಿಂದಷ್ಟೇ ನಗರಕ್ಕೆ ಬಂದಿದ್ದ. ಭಾನುವಾರ ಸಂಜೆ ಹೆಣ್ಣೂರು ಠಾಣೆಗೆ ಮಚ್ಚು ಹಿಡಿದುಕೊಂಡು ಬಂದು, ಗಲಾಟೆ ಮಾಡಿದ್ದ. ಮಫ್ತಿಯಲ್ಲಿದ್ದ ಸಿಬ್ಬಂದಿ, ಆತನನ್ನು ಸುತ್ತುವರೆದು ಹಿಡಿದುಕೊಂಡಿದ್ದರು' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ ಹೇಳಿದರು.

'ಆರೋಪಿಯನ್ನು ಸೆರೆ ಹಿಡಿದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಆರೋಪಿ ಡ್ರಗ್ಸ್ ನಶೆಯಲ್ಲಿ ಕೃತ್ಯ ಎಸಗಿರುವ ಅನುಮಾನವಿದೆ. ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬರಬೇಕಿದೆ' ಎಂದೂ ತಿಳಿಸಿದರು.

'ನಿಮ್ಮನ್ನೆಲ್ಲ ಸಾಯಿಸುವೆ' ಎಂಬುದಾಗಿ ಚೀರಾಡುತ್ತಿದ್ದ: 'ಬ್ಯಾಗ್‌ನಲ್ಲಿ ಮಚ್ಚು ಇಟ್ಟುಕೊಂಡು ಠಾಣೆ ಬಳಿ ಬಂದಿದ್ದ ಆರೋಪಿ, 'ನಿಮ್ಮನ್ನೆಲ್ಲ ಸಾಯಿಸುವೆ' ಎಂದು ಚೀರಾಡಿದ್ದ. ಠಾಣೆ ಎದುರು ನಿಂತಿದ್ದ ಸಿಬ್ಬಂದಿ ಜೊತೆಯೇ ವಾಗ್ವಾದಕ್ಕೆ ಇಳಿದಿದ್ದ. ಅದೇ ಸಂದರ್ಭದಲ್ಲೇ ಬ್ಯಾಗ್‌ನಲ್ಲಿದ್ದ ಮಚ್ಚು ಹೊರಗೆ ತೆಗೆದು, ರೌಡಿಗಳ ರೀತಿಯಲ್ಲಿ ವರ್ತಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಿಡಿಯಲು ಹೋದ ಎಎಸ್‌ಐ ಮೇಲೆಯೇ ಆರೋಪಿ ಹಲ್ಲೆ ಮಾಡಿದ್ದ. ಮಫ್ತಿಯಲ್ಲಿದ್ದ ಸಿಬ್ಬಂದಿ, ಆತನನ್ನು ಹಿಡಿದುಕೊಂಡು ವಶಕ್ಕೆ ಪಡೆದಿದ್ದರು. ಮಚ್ಚು ಸಹ ಜಪ್ತಿ ಮಾಡಿದ್ದರು' ಎಂದೂ ತಿಳಿಸಿವೆ.

'ಬಂಧಿತ ಆರೋಪಿ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣಗಳು ದಾಖಲಾಗಿಲ್ಲ. ಆದರೆ, ಆತ ಮಚ್ಚು ಹಿಡಿದು ಠಾಣೆಗೆ ಬಂದಿದ್ದು ಏಕೆ? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಆತನ ಹಿನ್ನೆಲೆಯನ್ನು ತಿಳಿದುಕೊಳ್ಳುತ್ತಿದ್ದೇವೆ' ಎಂದೂ ಮೂಲಗಳು ಹೇಳಿವೆ.

'ಡ್ರಗ್ಸ್' ದಂಧೆ: ವಿದೇಶಿಯರ ಮನೆ ಮೇಲೆ ದಾಳಿ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿ ಡ್ರಗ್ಸ್ ದಂಧೆ ನಡೆಸುತ್ತಿರುವವರ ವಿರುದ್ಧ ಕಾರ್ಯಾಚರಣೆ ಆರಂಭಿಸಿರುವ ಸಿಸಿಬಿ ಪೊಲೀಸರು, 43 ಮನೆಗಳ ಮೇಲೆ ಸೋಮವಾರ ದಾಳಿ ಮಾಡಿದರು.

'ನೈಜೀರಿಯಾ, ಐವರಿಕೋಸ್ಟ್ ಹಾಗೂ ಇತರೆ ದೇಶಗಳಿಂದ ನಗರಕ್ಕೆ ಬರುವ ವಿದೇಶಿಯರು, ವೀಸಾ ಅವಧಿ ಮುಗಿದರೂ ವಾಪಸು ಹೋಗುತ್ತಿಲ್ಲ. ಇಲ್ಲಿಯೇ ಡ್ರಗ್ಸ್ ದಂಧೆಯಲ್ಲಿ ನಿರತರಾಗುತ್ತಿದ್ದಾರೆ. 100 ಮಂದಿಯ ತಂಡ ರಚಿಸಿ ಶ್ವಾನ ದಳದ ಸಮೇತ ದಾಳಿ ನಡೆಸಲಾಯಿತು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಕೆ.ಆರ್.ಪುರ, ರಾಮಮೂರ್ತಿನಗರ, ಹೆಣ್ಣೂರು, ಬಾಣಸವಾಡಿ, ಕೊತ್ತನೂರು, ಸಂಪಿಗೇಹಳ್ಳಿ, ಬಾಗಲೂರು ಹಾಗೂ ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿದ್ದಾರೆ. ಆ ಪೈಕಿ 43 ವಿದೇಶಿಯರ ಮನೆ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಲಾಯಿತು' ಎಂದೂ ತಿಳಿಸಿದರು.

'78 ವಿದೇಶಿಯರ ದಾಖಲೆಗಳನ್ನು ಪರಿಶೀಲಿಸಲಾಯಿತು. ಆ ಪೈಕಿ 27 ವಿದೇಶಿಯರ ದಾಖಲೆಗಳು ಸೂಕ್ತವಾಗಿರಲಿಲ್ಲ. ಅವರನ್ನು ಅಕ್ರಮ ವಲಸಿಗರ ಕೇಂದ್ರಕ್ಕೆ ಕಳುಹಿಸಲು ವಿದೇಶಿಯರ ಪ್ರಾದೇಶಿಕ ನೋಂದಣಿ ಕೇಂದ್ರದ (ಎಫ್‌ಆರ್‌ಆರ್‌ಒ) ಅಧಿಕಾರಿಗಳನ್ನು ಕೋರಲಾಗಿದೆ. ಒಬ್ಬನ ವಿರುದ್ಧ ಹೆಣ್ಣೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದೂ ಹೇಳಿದರು.

ಗಾಂಜಾ ನಶೆಯಲ್ಲಿ ಹೊಡೆದಾಟ

ಯಲಹಂಕದ ಮುಖ್ಯರಸ್ತೆಯಲ್ಲಿ ಗಾಂಜಾ ನಶೆಯಲ್ಲಿದ್ದ ಯುವಕರಿಬ್ಬರು ಪರಸ್ಪರ ಹೊಡೆದಾಡಿಕೊಂಡಿದ್ದು, ಈ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಇಬ್ಬರು ಯುವಕರು ಕೈ ಕೈ ಮಿಲಾಯಿಸಿ ಹೊಡೆದಾಡಿದ್ದರು. ಬಟ್ಟೆ ಹರಿದುಕೊಂಡಿದ್ದರು. ಈ ದೃಶ್ಯ ವಿಡಿಯೊದಲ್ಲಿದೆ. ಅದನ್ನು ಹಂಚಿಕೊಂಡಿರುವ ಸಾರ್ವಜನಿಕರು, 'ಯಲಹಂಕ ಸುತ್ತಮುತ್ತ ಡ್ರಗ್ಸ್ ಮಾರಾಟವಿದೆ. ಹೀಗಾಗಿಯೇ, ಮಧ್ಯಾಹ್ನವೇ ಡ್ರಗ್ಸ್ ತೆಗೆದುಕೊಂಡು ಅದರ ನಶೆಯಲ್ಲಿ ಯುವಕರು ಹೊಡೆದಾಡಿಕೊಂಡಿದ್ದಾರೆ' ಎಂದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಯಲಹಂಕ ನ್ಯೂ ಟೌನ್ ಪೊಲೀಸರು, ಇಬ್ಬರು ಯುವಕರನ್ನು ಬಂಧಿಸಿದ್ದಾರೆ.

ಮಹಿಳೆಗೆ ಜೀವ ಬೆದರಿಕೆ ಠಾಣೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯೊಬ್ಬರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುವ ಪೊಲೀಸರು, ಅದನ್ನು ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದಾರೆ' ಎಂದು ಆರೋಪಿಸಿ ಹೆಣ್ಣೂರು ಠಾಣೆ ಎದುರು ಮಹಿಳೆ ಸಂಬಂಧಿಕರು ಪ್ರತಿಭಟನೆ ನಡೆಸಿದರು.

ದಲಿತ ಸಂಘರ್ಷ ಸಮಿತಿ ಸದಸ್ಯರ ನೇತೃತ್ವದಲ್ಲಿ ಠಾಣೆ ಎದುರು ಸೇರಿದ್ದ ಸಂಬಂಧಿಕರು, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮಕ್ಕಾಗಿ ಆಗ್ರಹಿಸಿದರು.

'ಗೆದ್ದಲಹಳ್ಳಿ ನಿವಾಸಿ ಸಾವಿತ್ರಮ್ಮ ಎಂಬುವರು ಆಸ್ತಿ ಗಲಾಟೆ ಸಂಬಂಧ ಸ್ಥಳೀಯ ನಿವಾಸಿಯೊಬ್ಬರ ವಿರುದ್ಧ ದೂರು ನೀಡಿದ್ದರು. ದೂರು ಪಡೆದಿದ್ದ ಇನ್‌ಸ್ಪೆಕ್ಟರ್ ವಸಂತ್‌ಕುಮಾರ್, ಎಫ್‌ಐಆರ್ ದಾಖಲಿಸಲು ನಿರಾಕರಿಸಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ಮಹಿಳೆ ಹಾಗೂ ಅವರ ಕಡೆಯವರಿಗೆ ಜೀವ ಬೆದರಿಕೆಯೊಡ್ಡಿದ್ದರು. ಆರೋಪಿ ಪರ ನಿಂತಿದ್ದರು' ಎಂದು ಪ್ರತಿಭಟನಕಾರರು ಹೇಳಿದರು.

'ಮಹಿಳೆ ದೂರು ಆಲಿಸದೇ ಪೊಲೀಸರು ಕರ್ತವ್ಯ ಲೋಪ ಎಸಗಿದ್ದಾರೆ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದೂ ಎಚ್ಚರಿಸಿದರು.

ಎಸಿಪಿ ತನಿಖೆ: ಸ್ಥಳಕ್ಕೆ ಬಂದ ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ, 'ಘಟನೆ ಬಗ್ಗೆ ಎಸಿಪಿ ಅವರಿಂದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

ತಾಂತ್ರಿಕ ದೋಷ: ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ಮಾಗಡಿ ರಸ್ತೆಯ ಮೆಟ್ರೊ ನಿಲ್ದಾಣದಲ್ಲಿ ಒಂದು ರೈಲಿನಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿದ್ದರಿಂದ ಒಂದು ಗಂಟೆಗೂ ಹೆಚ್ಚು ಕಾಲ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು.

ಬೆಳಿಗ್ಗೆ 9 ಗಂಟೆ 10 ನಿಮಿಷದಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿತ್ತು. ಆದ್ದರಿಂದ ಬೈಯಪ್ಪನಹಳ್ಳಿ –ಕೆಂಗೇರಿ ಮಾರ್ಗದಲ್ಲಿ 1 ಗಂಟೆ 20 ನಿಮಿಷಗಳ ಕಾಲ ರೈಲು ಸಂಚಾರ ಸ್ಥಗಿತಗೊಂಡಿತ್ತು. ವಿಜಯನಗರ, ಮೆಜೆಸ್ಟಿಕ್, ಎಂ.ಜಿ. ರಸ್ತೆಯಲ್ಲಿ ಸೇರಿ ಕೆಲ ನಿಲ್ದಾಣಗಳಲ್ಲಿ ರೈಲುಗಳನ್ನು ನಿಲ್ಲಿಸಲಾಗಿತ್ತು. ತಾಂತ್ರಿಕ ತೊಂದರೆಯನ್ನು ಪೂರ್ಣಗೊಳಿಸಿ 10 ಗಂಟೆ 30 ನಿಮಿಷದ ವೇಳೆಗೆ ರೈಲುಗಳ ಸಂಚಾರ ಸಹಜಗೊಂಡಿತು ಎಂದು ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ನಿಗಮ) ತಿಳಿಸಿದೆ.

ಸಾಮಾಜಿಕ ಜಾಲತಾಣದಲ್ಲಿ ಧಾರ್ಮಿಕ ಕೇಂದ್ರಕ್ಕೆ ಅವಮಾನ

ಹರಿಹರದಲ್ಲಿ ಬಿಗುವಿನ ವಾತಾವರಣ ಪೊಲೀಸ್ ಜೀಪಿಗೆ ಕಲ್ಲೇಟು

ಪ್ರಜಾವಾಣಿ ವಾರ್ತೆ

ಹರಿಹರ: ಯುವಕನೊಬ್ಬ ಸಾಮಾಜಿಕ ಜಾಲತಾಣಗಳಲ್ಲಿ ಧಾರ್ಮಿಕ ಸ್ಮಾರಕಗಳನ್ನು ಅವಹೇಳನಕಾರಿಯಾಗಿ ಬಿಂಬಿಸಿದ ಪ್ರಕರಣ ಸೋಮವಾರ ರಾತ್ರಿ ನಗರದಲ್ಲಿ ಬಿಗುವಿನ ವಾತಾವರಣ ನಿರ್ಮಿಸಿತು. ಪೊಲೀಸ್ ಠಾಣೆಯ ಎದುರು ಸೇರಿದ್ದ ಜನರನ್ನು ಚದುರಿಸಿ ಲಘು ಲಾಠಿ ಪ್ರಹಾರ ನಡೆಸಲಾಗಿದ್ದು, ಉದ್ರಿಕ್ತ ಜನರ ಕಲ್ಲು ತೂರಾಟದಿಂದ ಪೊಲೀಸ್ ಜೀಪಿನ ಗಾಜು ಒಡೆದಿದೆ.



ಧಾರ್ಮಿಕ ಕೇಂದ್ರದ ಅವಹೇಳನ ಖಂಡಿಸಿ ಹರಿಹರದಲ್ಲಿ ಸೋಮವಾರ ರಾತ್ರಿ ಠಾಣೆ ಮುಂದೆ ಸೇರಿದ್ದ ಒಂದು ಸಮುದಾಯದ ಜನರನ್ನು ಚದುರಿಸಲು ಪೊಲೀಸರು ಹರಸಾಹಸ ಪಟ್ಟರು.

ಆರೋಪಿಯನ್ನು ಬಂಧಿಸಲು, ಕಾನೂನು ಕ್ರಮ ಕೈಗೊಳ್ಳಲು ಆಗ್ರಹಿಸಿ ಒಂದು ಸಮುದಾಯದ ಯುವಕರು ನಗರಠಾಣೆಯ ಮುಂದೆ ರಾತ್ರಿ 8ಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರು. ಮಾಹಿತಿ ಪಡೆದ ಪೊಲೀಸರು ಆರೋಪಿಯನ್ನು ಪತ್ತೆಹಚ್ಚಿ, ವಶಕ್ಕೆ ಪಡೆದರು.

ನಂತರವೂ ಯುವಕರ ಗುಂಪು ಠಾಣೆ ಮುಂದೆ ಸೇರಿ, ಘೋಷಣೆ ಕೂಗಲು ಆರಂಭಿಸಿತು. ಆಗ ಸಿಪಿಐ ಸತೀಶ್ ಕುಮಾರ್, ಎಸ್‌ಐ ಸುನೀಲ್ ಕುಮಾರ್ ತೇಲಿ ಮಾತನಾಡಿ, 'ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಆತನ ವಿರುದ್ಧ ದೂರು ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಮನೆಗಳಿಗೆ ತೆರಳಿ' ಎಂದು ಮಾಡಿಕೊಂಡ ಮನವಿಗೆ ಸ್ಪಂದನ ಸಿಗಲಿಲ್ಲ.

ಸ್ಥಳಕ್ಕೆ ಒಂದು ಸಮುದಾಯದ ಮುಖಂಡರು, ನಗರಸಭಾ ಸದಸ್ಯರು ಬಂದು ಶಾಂತವಾಗಿ ಮನೆಗೆ ತೆರಳಲು ಕೋರಿದರು. ಆದರೂ ಜನ ಚದುರದೇ ಇದ್ದಾಗ ಪೊಲೀಸರು ಲಾಠಿ ಹಿಡಿದು ಚದುರಿಸಲು ಮುಂದಾದರು. ಆಗ ಕೆಲ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಒಂದು ಪೊಲೀಸ್ ಜೀಪಿನ ಮುಂಭಾಗದ ಗಾಜು ಪುಡಿಯಾಯಿತು.

ನಂತರ ರಾತ್ರಿ 9.30ಕ್ಕೆ ಸ್ಥಳಕ್ಕೆ ಧಾವಿಸಿದ ಡಿವೈಎಸ್‌ಪಿ ಬಸವರಾಜ್, 'ಸಾಮಾಜಿಕ ತಾಣಗಳಲ್ಲಿ ಏನೋ ಸಂದೇಶ ರವಾನಿಸಿದರೆಂದು ಉದ್ವೇಗಕ್ಕೆ ಒಳಗಾಗಬಾರದು. ಕಾನೂನು ಉಲ್ಲಂಘನೆಯಾಗಿದ್ದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ನೆರೆದವರನ್ನು ಚದುರಿಸಿದರು. ಮುಂಜಾಗ್ರತೆಯ ಕ್ರಮವಾಗಿ ಗಾಂಧಿ ವೃತ್ತ ಹಾಗೂ ಮುಖ್ಯ ರಸ್ತೆಯ ಅಂಗಡಿಗಳನ್ನು ಪೊಲೀಸರು ಬಂದ್ ಮಾಡಿಸಿದರು. ಹೆಚ್ಚಿನ ಪೊಲೀಸ್ ಬಲವನ್ನು ಕರೆಸಲಾಗಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಫೆ.8ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬಸವೇಶ್ವರ ನಗರ, ವಿಜಯ ನಗರ, ಗೋವಿಂದರಾಜ ನಗರ, ಕಾಮಾಕ್ಷಿಪಾಳ್ಯ, ಆರ್‌ಪಿಸಿ ಲೇಔಟ್, ಬಿನ್ನಿ ಲೇಔಟ್, ಮಾರೇನಹಳ್ಳಿ, ಹೊಸಹಳ್ಳಿ, ತಿಮ್ಮೇನಹಳ್ಳಿ, ವಿನಾಯಕ ಬಡಾವಣೆ, ಕಾವೇರಿಪುರ, ರಂಗನಾಥಪುರ, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ನಾಗರಬಾವಿ, ಸಿದ್ದಯ್ಯ ಪುರಾಣಿಕ್ ರೋಡ್, ಕೆಎಚ್‌ಬಿ ಕಾಲೋನಿ, ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ ಸುತ್ತಮುತ್ತ ಪ್ರದೇಶಗಳು.

ಬಾಲಕಿಯ ಅತ್ಯಾಚಾರ: ಅಪರಾಧಿಗೆ 20 ವರ್ಷ ಶಿಕ್ಷೆ

ದಾವಣಗೆರೆ: ಚನ್ನಗಿರಿ ತಾಲ್ಲೂಕಿನಲ್ಲಿ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಅಪರಾಧಿಗೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು (ಪೋಕ್ಸೊ ವಿಶೇಷ ನ್ಯಾಯಾಲಯ) 20 ವರ್ಷ ಕಾರಾಗೃಹ ಶಿಕ್ಷೆ ಹಾಗೂ ₹ 15 ಸಾವಿರ ದಂಡ ವಿಧಿಸಿದೆ.

ಸಂತ್ರಸ್ತೆಯ ತಾಯಿ ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಕಾರ್ಖಾನೆಯ ಕ್ರಮ ಖಂಡಿಸಿ 69 ದಿನಗಳಿಂದ ಮುಷ್ಕರ

ಐಟಿಐ ಕಾರ್ಮಿಕರ ವಜಾ ವಿರೋಧಿಸಿ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಐಟಿಐ ಕಾರ್ಖಾನೆಯಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ 80 ಕಾರ್ಮಿಕರನ್ನು ಕಾನೂನುಬಾಹಿರವಾಗಿ ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಆರೋಪಿಸಿ ಕರ್ನಾಟಕ ಜನರಲ್ ಲೇಬರ್ ಯುನಿಯನ್, ಐಟಿಐ ಕಾರ್ಮಿಕ ಘಟಕ ಹಾಗೂ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಮತ್ತು ಕರ್ನಾಟಕ ಜನಾಂದೋಲನ ಸಂಘಟನೆ ವತಿಯಿಂದ ಸೋಮವಾರ ಪ್ರತಿಭಟನ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು.

ಐಟಿಐ ಕ್ರಮ ಖಂಡಿಸಿ ಸತತ 69 ದಿನಗಳಿಂದ ಐಟಿಐ ಗೇಟ್ ಬಳಿ ಮುಷ್ಕರ ನಡೆಸುತ್ತಿದ್ದ ಸ್ಥಳದಿಂದ ಕೆ.ಆರ್.ಪುರದ ಪೆಟ್ರೋಲ್ ಬಂಕ್ ಹತ್ತಿರದ ಕಾರ್ಪೊರೇಟ್ ಕಚೇರಿವರೆಗೆ ಕಾರ್ಯಕರ್ತರು ರ‍್ಯಾಲಿ ನಡೆಸಿದರು.



ಐಟಿಐನಲ್ಲಿ 80 ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವುದನ್ನು ವಿರೋಧಿಸಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಕೆ.ಆರ್. ಪುರದಲ್ಲಿ ಪ್ರತಿಭಟನ ರ‍್ಯಾಲಿ ನಡೆಸಿದರು

ಅಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ರಾಜ್ಯ ಸಮಿತಿ ಸದಸ್ಯೆ ಮೈತ್ರೇಯಿ ಕೃಷ್ಣನ್ ಮಾತನಾಡಿ, 'ಭಾರತದ ಮೊದಲ ಸಾರ್ವಜನಿಕ ವಲಯದ ಉದ್ದಿಮೆಯಾಗಿರುವ ಐಟಿಐನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರು ಸಂಘಟನೆಯೊಂದು ಕಟ್ಟಿಕೊಂಡು ಆ ಮೂಲಕ ತಮ್ಮ ಕಾನೂನುಬದ್ಧ ಹಕ್ಕುಗಳಿಗಾಗಿ ಒತ್ತಾಯಿಸಿದ್ದಾರೆ. ಈ ಕಾರಣಕ್ಕೆ 80 ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಲಾಗಿದೆ' ಎಂದು ಹೇಳಿದರು.

'ವಜಾಗೊಳಿಸಿರುವ ಎಲ್ಲ ಕಾರ್ಮಿಕರನ್ನು ಮರು ನೇಮಕ ಮಾಡಿಕೊಳ್ಳಬೇಕು. ಸಂಘಟನೆ ಕಟ್ಟಿ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡುವುದನ್ನು ಸಹಿಸದ ಆಡಳಿತ ಮಂಡಳಿ ಕಾರ್ಮಿಕರಿಗೆ ಕೆಲಸ ನಿರಾಕರಿಸಿರುವುದು ಕಾನೂನುಬಾಹಿರವಾಗಿರುತ್ತದೆ. ಕಾರ್ಮಿಕರು ಐಟಿಐ ಕೆಲಸವನ್ನು ನಂಬಿ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಘಟಕದ ಅಧ್ಯಕ್ಷ ಮಾವಳ್ಳಿ ಶಂಕರ್ ಮಾತನಾಡಿ, 'ಕಾರ್ಮಿಕರನ್ನು ಕಾನೂನು ಬಾಹಿರವಾಗಿ ಕೆಲಸದಿಂದ ವಜಾಗೊಳಿಸಿರುವ ಐಟಿಐ ಆಡಳಿತ ಮಂಡಳಿ ವಿರುದ್ಧ 69 ದಿನಗಳಿಂದಲೂ ಅಹೋರಾತ್ರಿ ಧರಣಿ ನಡೆಸಿದರೂ ಆಡಳಿತ ಮಂಡಳಿಯಿಂದ ಬೇಡಿಕೆ ಈಡೇರಿಸುವ ಭರವಸೆ ಸಿಕ್ಕಿಲ್ಲ. ಇನ್ನೂ ಎರಡು ದಿನದಲ್ಲಿ ಸಮಸ್ಯೆ ಬಗೆಹರಿಯದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಬಯ್ಯಾರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ರಾಜ್ಯ ಸಂಚಾಲಕ ಕೆ.ವಿ.ಭಟ್, ಐಟಿಐ ಕಾರ್ಮಿಕ ಘಟಕದ ಅಧ್ಯಕ್ಷ ಕೆ. ಹೇಮಂತ್ ಕುಮಾರ್, ಪ್ರಧಾನ ಕಾರ್ಯದರ್ಶಿ ಆರ್ ರಾಜೇಶ್, ದಲಿತ ಸಂಘರ್ಷ ಸಮಿತಿ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಮುನಿನಂಜಪ್ಪ, ಬಾಬು ಇದ್ದರು.

ಹೊರವಲಯಗಳಲ್ಲಿ ಸವಾರರು ಹೈರಾಣು; ಜನರ ಪ್ರಾಣಕ್ಕೂ ಇಲ್ಲವಾದ ಬೆಲೆ

ಗಡುವು ಮುಗಿದರೂ ರಸ್ತೆ ಗುಂಡಿಗಿಲ್ಲ ಮುಕ್ತಿ


ಸುಮನಹಳ್ಳಿ ಸಿಗ್ನಲ್ ಬಳಿ ರಸ್ತೆಯಲ್ಲಿ ಗುಂಡಿಗಳು ಹಾಗೇ ಉಳಿದಿರುವುದು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ವಿಷಯದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಚಾಟಿ ಬೀಸುತ್ತಿದ್ದಾರೆ. ಆದರೂ, ನಗರದ ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಒಂದಷ್ಟು ರಸ್ತೆಗಳು ಡಾಂಬರು ಕಂಡಿದ್ದು ಬಿಟ್ಟರೆ, ಹೊರವಲಯದ ರಸ್ತೆಗಳು ಗುಂಡಿ ಮುಕ್ತವಾಗಿಲ್ಲ.

ಗುಂಡಿ ಮಾತ್ರವಲ್ಲ ಹೊಂಡದಂತಾಗಿದ್ದ ರಸ್ತೆಗಳು ರಾಜಧಾನಿಯಲ್ಲಿ ಸಾಕಷ್ಟು ಇವೆ. ಮಳೆಗಾಲದ ನೆಪದಲ್ಲಿ ಒಂದಷ್ಟು ಕಾಲ ತಳ್ಳಿದ್ದ ಬಿಬಿಎಂಪಿ, ಮಳೆಗಾಲ ಮುಗಿದ ಬಳಿಕ ಸಿಬಿಡಿಯಲ್ಲಿನ ಕೆಲವು ರಸ್ತೆಗಳಿಗೆ ಡಾಂಬರು ಕಾಣಿಸಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಕೆಲ ರಸ್ತೆಗಳಿಗೆ ಹೊಸದಾಗಿ ಡಾಂಬರು ಹೊದಿಸಲಾಗಿದೆ. ರಾಜಭವನ ರಸ್ತೆ, ರೇಸ್‌ಕೋರ್ಸ್ ರಸ್ತೆ, ರಾಜ್‌ಕುಮಾರ್ ರಸ್ತೆ ಸೇರಿ ನಗರದ ಕೇಂದ್ರ ಭಾಗದ ರಸ್ತೆಗಳೆಲ್ಲವೂ ಬಹುತೇಕ ಅಭಿವೃದ್ಧಿಯಾಗಿವೆ.

ಹಳೇ ಮೈಸೂರು ರಸ್ತೆ, ತುಮಕೂರು ರಸ್ತೆಗಳ ಸ್ಥಿತಿ ಹಾಗೇ ಇವೆ. ಮಾಗಡಿ ರಸ್ತೆ, ಮೈಸೂರು ರಸ್ತೆ... ಹೀಗೆ ನಗರದ ಹೊರ ವಲಯಕ್ಕೆ ಹೋದಂತೆಲ್ಲ ರಸ್ತೆಗಳು ಗುಂಡಿಮಯವಾಗಿವೆ.

ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ಬಿಬಿಎಂಪಿ ಅಲ್ಲಲ್ಲಿ ನಿರ್ವಹಿಸಿದೆ. ದೊಡ್ಡ ದೊಡ್ಡ ಗುಂಡಿಗಳನ್ನು ಮೊದಲಿಗೆ ಮುಚ್ಚಿ ಸಣ್ಣ ಗುಂಡಿಗಳನ್ನು ಹಾಗೇ ಬಿಡಲಾಗಿತ್ತು. ಅವುಗಳೇ ಮತ್ತೆ ದೊಡ್ಡದಾಗಿ ಒಂದೊಂದು ರಸ್ತೆಯಲ್ಲಿ ಎರಡು-ಮೂರು ಬಾರಿ ಗುಂಡಿ ಮುಚ್ಚಲಾಗಿದೆ.

‘ಮಹಾಕವಿ ಕುವೆಂಪು ರಸ್ತೆಯಲ್ಲಿ ಮೂರು ಬಾರಿ ಗುಂಡಿ ಮುಚ್ಚಲಾಗಿದೆ. ಆದರೂ, ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಕಷ್ಟಪಡಬೇಕಾಗಿದೆ. ಈಗ ಅಲ್ಲಲ್ಲಿ ದೊಡ್ಡ ದೊಡ್ಡ ರಸ್ತೆ ಉಬ್ಬುಗಳನ್ನು ಹಾಕಲಾಗಿದೆ. ಗುಂಡಿಗಳನ್ನೇ ಮುಚ್ಚದ ರಸ್ತೆಗೆ ಅವೈಜ್ಞಾನಿಕವಾಗಿ ಉಬ್ಬುಗಳನ್ನು ಹಾಕುವ ಅಗತ್ಯವಿತ್ತೆ’ ಎಂಬುದು ಸ್ಥಳೀಯರ ಪ್ರಶ್ನೆ.

ಹಳೇ ಮೈಸೂರು ರಸ್ತೆಯಲ್ಲಿ ವಾಹನ ಸಂಚಾರವೇ ದುಸ್ತರವಾಗಿದೆ. ಮೆಜೆಸ್ಟಿಕ್‌ನಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಸಾಗುವುದೆಂದರೆ ನರಕ ನೆನಪಾಗುತ್ತದೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡುವುದು ಸಾಹಸದ ಕೆಲಸ. ಒಂದೆಡೆ ದೂಳು, ಇನ್ನೊಂದೆಡೆ ಗುಂಡಿಗಳು ವಾಹನ ಸವಾರರನ್ನು ಹೈರಾಣಾಗಿಸಿವೆ.

‘ದ್ವಿಚಕ್ರ ವಾಹನ ಸವಾರರಂತೂ ಜೀವ ಬಿಗಿ ಹಿಡಿದು ವಾಹನ ಚಾಲನೆ ಮಾಡಬೇಕಾದ ಸ್ಥಿತಿ ಇದೆ. ಗುಂಡಿ ತಪ್ಪಿಸಲು ಯತ್ನಿಸಿದರೆ ಹಿಂದಿನಿಂದ ಬರುವ ವಾಹನಗಳಿಗೆ ಬಲಿಯಾಗುವ ಅಪಾಯವೂ ಇದೆ. ಮಾಗಡಿ ರಸ್ತೆಯ ಅಂಜನಾನಗರ ಕ್ರಾಸ್ ಬಳಿ ಮಹಿಳೆಯೊಬ್ಬರ ಮೇಲೆ ಲಾರಿ ಹರಿದ ದೃಶ್ಯ ಕಣ್ಮುಂದೆ ಬರುತ್ತಿದೆ. ಗುಂಡಿ ಮುಚ್ಚುವ ಕೆಲಸವನ್ನೂ ಸರಿಯಾಗಿ ಮಾಡದ ಬಿಬಿಎಂಪಿ ಅಸ್ತಿತ್ವದಲ್ಲಿದ್ದು ಪ್ರಯೋಜನವೇನು’ ಎಂಬುದು ಸವಾರರ ಪ್ರಶ್ನೆ.


ಮಾಗಡಿ ರಸ್ತೆಯ ಕಾಮಾಕ್ಷಿಪಾಳ್ಯದ ಬಳಿಯ ರಸ್ತೆಯಲ್ಲಿ ಗುಂಡಿ ಮತ್ತು ದೂಳಿನ ನಡುವೆ ಸಾಗುತ್ತಿರುವ ವಾಹನ ಸವಾರರು
–ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

ಬಿಬಿಎಂಪಿ–ಕೆಆರ್‌ಡಿಸಿಎಲ್ ತಿಕ್ಕಾಟ

ಒಂದೆಡೆ ರಸ್ತೆಯಲ್ಲಿ ಜನ ಪ್ರಾಣ ಕಳೆದುಕೊಳ್ಳುತ್ತಿದ್ದರೆ, ಇನ್ನೊಂದೆಡೆ ಜವಾಬ್ದಾರಿ ಹೊರುವ ವಿಷಯದಲ್ಲಿ ಬಿಬಿಎಂಪಿ ಮತ್ತು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ (ಕೆಆರ್‌ಡಿಸಿಎಲ್) ನಡುವೆ ಜಟಾಪಟಿ ಏರ್ಪಟ್ಟಿದೆ.

ಮಾಗಡಿ ರಸ್ತೆಯ ಅಂಜನಾನಗರ ಕ್ರಾಸ್ ಲಾರಿ ಹರಿದು ಶಿಕ್ಷಕಿ ಮೃತಪಟ್ಟಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬಿಬಿಎಂಪಿ, ‘12 ದಟ್ಟಣೆ ಕಾರಿಡಾರ್ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ಈ ರಸ್ತೆಯೂ ಒಳಗೊಂಡಿದೆ. ಈ ಯೋಜನೆಯನ್ನು ಕೆಆರ್‌ಡಿಸಿಎಲ್ ಅನುಷ್ಠಾನಗೊಳಿಸುತ್ತಿದೆ’ ಎಂದು ಹೇಳಿದೆ.

ಇದಕ್ಕೆ ಪ್ರತಿಕ್ರಿಯೆ ರೂಪದಲ್ಲಿ ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತರಿಗೆ ಪತ್ರ ಬರೆದಿರುವ ಕೆಆರ್‌ಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ‘ಯೋಜನೆಗೆ ಮರು ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದೆ. ಟೆಂಡರ್ ಸಮಿತಿಯಿಂದ ಅನುಮೋದನೆ ಪಡೆದ ಬಳಿಕ ಆರ್ಥಿಕ ಬಿಡ್‌ಗಳನ್ನು ತೆರೆದು ಅರ್ಹ ಗುತ್ತಿಗೆದಾರರನ್ನು ಗುರುತಿಸಿ ಸರ್ಕಾರದ ಅನುಮೋದನೆ ಪಡೆಯಬೇಕಿದೆ. ಈ ಪ್ರಕ್ರಿಯೆಗಳೆಲ್ಲವೂ ಪೂರ್ಣಗೊಂಡ ಬಳಿಕ ರಸ್ತೆಯನ್ನು ಬಿಬಿಎಂಪಿಯಿಂದ ಹಸ್ತಾಂತರ ಮಾಡಿಕೊಳ್ಳಲಾಗುತ್ತದೆ. ಅಲ್ಲಿಯ ತನಕ ಬಿಬಿಎಂಪಿಯೇ ನಿರ್ವಹಣೆ ಮಾಡಬೇಕು’ ಎಂದು ತಿಳಿಸಿದ್ದಾರೆ.


ಹಳೇ ಮೈಸೂರು ರಸ್ತೆಯಲ್ಲಿನ ಗುಂಡಿಗಳು

‘ಅಮಾನತು ಶಿಕ್ಷೆ ಸಾಲದು, ಜೈಲಿಗೆ ಕಳುಹಿಸಬೇಕು’



‘ರಸ್ತೆಗಳ ಗುಂಡಿಯನ್ನೂ ಸಮರ್ಪಕವಾಗಿ ಮುಚ್ಚದ ಬಿಬಿಎಂಪಿ ಬೇಜವಾಬ್ದಾರಿಗೆ ನಾಗರಿಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಧಿಕಾರಿಗಳನ್ನು ಕೇವಲ ಅಮಾನತು ಮಾಡಿದರೆ ಸಾಲದು, ಕನಿಷ್ಠ 6 ತಿಂಗಳು ಜೈಲಿಗೆ ಕಳುಹಿಸಬೇಕು’ ಎಂದು ಬೆಂಗಳೂರು ಪ್ರಜಾ ವೇದಿಕೆಯ ಡಿ.ಎಸ್. ರಾಜಶೇಖರ್ ಹೇಳಿದರು.

‘ಬಡಾವಣೆಯ ರಸ್ತೆಗಳ ಸ್ಥಿತಿ ಹಾಗಿರಲಿ, ಮುಖ್ಯ ರಸ್ತೆಗಳಲ್ಲೇ ಸಂಚಾರಕ್ಕೆ ಕಷ್ಟವಾಗಿದೆ. ಪೂರ್ವ ಭಾಗದಲ್ಲಿ ಯಾವ ರಸ್ತೆಗೆ ಹೋದರೂ ಸಂಚಾರ ಕಷ್ಟವಾಗಿದೆ. ಉಳಿದ ಭಾಗದಲ್ಲೂ ಸ್ಥಿತಿ ಇದಕ್ಕೆ ಹೊರತಾಗಿಲ್ಲ. ಜನ ರಸ್ತೆಯಲ್ಲಿ ಪ್ರಾಣ ಕಳೆದುಕೊಂಡರೂ ಬೆಲೆ ಇಲ್ಲ ಎನ್ನುವುದಾದರೆ ಅಧಿಕಾರಿಗಳು ಎಷ್ಟು ದಪ್ಪ ಚರ್ಮದವರು ಎಂಬುದು ಅರ್ಥವಾಗುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಹೈಕೋರ್ಟ್ ಚಾಟಿ ಬೀಸಿದರೂ ಎಚ್ಚೆತ್ತುಕೊಳ್ಳುತ್ತಿಲ್ಲ. ಸಾಮಾನ್ಯ ಜನರ ಪ್ರಾಣ ಹೋಗಿದೆ. ಒಬ್ಬ ಅಧಿಕಾರಿಯನ್ನು ಜೈಲಿಗೆ ಕಳುಹಿಸುವ ಶಿಕ್ಷೆ ನೀಡಿದರೆ ಮಾತ್ರ ಸರ್ಕಾರಕ್ಕೆ ಬುದ್ಧಿ ಬರಲಿದೆ. ಈ ಕೆಲಸವನ್ನು ಹೈಕೋರ್ಟ್ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ’ ಎಂದು ಹೇಳಿದರು.

‘ಇತ್ತ ರಸ್ತೆಯಲ್ಲಿ ಜನ ಸಾಯುತ್ತಿದ್ದರೆ, ಮುಖ್ಯಮಂತ್ರಿ ಅವರು ಸಚಿವ ಸಂಪುಟ ವಿಸ್ತರಣೆಯಲ್ಲಿ ಮಗ್ನರಾಗಿದ್ದಾರೆ. ಸರ್ಕಾರ ಉಳಿಸಿಕೊಳ್ಳುವ ವಿಷಯಕ್ಕೆ ಕೊಡುವ ಮಹತ್ವವನ್ನು ನಾಗರಿಕರ ಸಮಸ್ಯೆಗಳಿಗೆ ಕೊಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಪಾರದರ್ಶಕತೆ ಇಲ್ಲ, ಭ್ರಷ್ಟಾಚಾರವೇ ಎಲ್ಲ’



‘ಪ್ರತಿಯೊಂದು ವಾರ್ಡ್‌ಗೆ ಐದು ವರ್ಷಗಳ ಅವಧಿಯಲ್ಲಿ ₹50 ಕೋಟಿಯಿಂದ ₹250 ಕೋಟಿ ತನಕ ಬಜೆಟ್ ನಿಗದಿಯಾಗುತ್ತದೆ. ಅದರಲ್ಲಿ ಶೇ 70ರಷ್ಟು ಹಣ ರಸ್ತೆ ಅಭಿವೃದ್ಧಿಗೇ ನಿಗದಿಯಾಗುತ್ತದೆ. ಆದರೆ, ರಸ್ತೆಗಳ ಸ್ಥಿತಿ ಮಾತ್ರ ಹಾಗೇ ಇರುತ್ತದೆ’ ಎಂದು ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್ ಹೇಳಿದರು.

‘ಗುತ್ತಿಗೆದಾರರ ಸಂಘವೇ ಹೇಳಿದಂತೆ ಶೇ 40ರಷ್ಟು ಲಂಚಕ್ಕೆ ಹೋಗುತ್ತಿದ್ದರೆ ಅಭಿವೃದ್ಧಿಯನ್ನು ಜನ ನಿರೀಕ್ಷೆ ಮಾಡುವುದು ಹೇಗೆ? ಸರ್ಕಾರದ ಹಣ ಲೂಟಿಕೋರರ ಜೇಬು ಸೇರುತ್ತಿದೆ. ರಸ್ತೆಗಳು ಮಾತ್ರ ಹಾಗೇ ಉಳಿದುಕೊಂಡಿವೆ’ ಎಂದರು.

‘ಪ್ರತಿ ವಾರ್ಡ್‌ಗೆ ₹60 ಲಕ್ಷವನ್ನು ಮೂರು ತಿಂಗಳ ಹಿಂದೆ ಬಿಡುಗಡೆ ಮಾಡಿದ್ದ ಬಿಬಿಎಂಪಿ ಮುಖ್ಯ ಆಯುಕ್ತರು, ಅದರಲ್ಲಿ ₹20 ಲಕ್ಷವನ್ನು ರಸ್ತೆ ಗುಂಡಿ ಮುಚ್ಚಲು ನಿಗದಿ ಮಾಡಿದ್ದರು. ಆ ಹಣವೂ ಖಾಲಿಯಾಗಿದೆ, ಗುಂಡಿಗಳು ಮಾತ್ರ ಹಾಗೇ ಉಳಿದಿವೆ. ಅಧಿಕಾರಿಗಳನ್ನು ಕೇಳಿದರೆ ಉಡಾಫೆಯ ಉತ್ತರ ನೀಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ವಾರ್ಡ್ ಸಮಿತಿ ಸಭೆಗಳನ್ನು ನೆಪಕ್ಕೆ ನಡೆಸಲಾಗುತ್ತದೆ. ಪಾರದರ್ಶಕತೆ ಮತ್ತು ಜನರನ್ನು ಒಳಗೊಳ್ಳದ ಕಾರಣದಿಂದಲೇ ರಸ್ತೆಗಳಲ್ಲಿ ಗುಂಡಿಗಳು ಹಾಗೇ ಉಳಿದುಕೊಂಡಿವೆ’ ಎಂದರು.

ಜೈಲಿಗೆ ಕಳುಹಿಸುತ್ತೇವೆ: ಹೈಕೋರ್ಟ್ ಎಚ್ಚರಿಕೆ

ಒಂದನೇ ಪುಟದಿಂದ

‘ನಗರದ ರಸ್ತೆಗಳೆಲ್ಲಾ ಗುಂಡಿಮಯವಾಗಿವೆ. ನಿಮ್ಮ ನಿರ್ಲಕ್ಷ್ಯಕ್ಕೆ ಜನ ಈ ಗುಂಡಿಗಳಲ್ಲಿ ಬಿದ್ದು ಸಾಯಬೇಕೇ, ಇಂದೇ ನಿಮ್ಮನ್ನು ಸೇವೆಯಿಂದ ಅಮಾನತು ಮಾಡಿ ಜೈಲಿಗೆ ಕಳುಹಿಸುತ್ತೇವೆ. ಇಲ್ಲವೇ, ಅಮಾನತು ಮಾಡಲು ಹಾಗೂ ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಲು ಸರ್ಕಾರಕ್ಕೆ ನಿರ್ದೇಶಿಸುತ್ತೇವೆ’ ಎಂದು ಇನ್ನಿಲ್ಲದಂತೆ ವಾಗ್ದಾಳಿ ನಡೆಸಿತು.

ನ್ಯಾಯಪೀಠದ ಈ ಕೂರಂಬುಗಳಿಗೆ ಬಿ.ಎಸ್.ಪ್ರಹ್ಲಾದ್ ತತ್ತರಿಸಿ ಹೋದರು. ಯಾವುದೇ ಕ್ರಮ ಜರುಗಿಸದಂತೆ ಪೀಠಕ್ಕೆ ಕೈಮುಗಿದು ಪರಿಪರಿಯಾಗಿ ಬೇಡಿಕೊಂಡರು. ಈ ಸಂದರ್ಭದಲ್ಲಿ ಪ್ರಹ್ಲಾದ್ ಅವರ ನೆರವಿಗೆ ನಿಂತ ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ, ಕಠಿಣ ಕ್ರಮ ಜರುಗಿಸದಂತೆ ನ್ಯಾಯಪೀಠಕ್ಕೆ ಬಾರಿ ಬಾರಿ ಮನವಿ ಮಾಡಿದರು. ‘ಈ ಕುರಿತು ಹಿರಿಯ ಅಧಿಕಾರಿಗಳ ಜೊತೆ ನಾನೇ ಖುದ್ದಾಗಿ ಚರ್ಚಿಸಿ ಸಮಸ್ಯೆ ಸರಿಪಡಿಸಲು ಯತ್ನಿಸುತ್ತೇನೆ’ ಎಂದು ವಿವರಿಸುವ ಮೂಲಕ ನ್ಯಾಯಪೀಠದ ಕೋಪವನ್ನು ಶಮನಗೊಳಿಸುವಲ್ಲಿ ಯಶಸ್ವಿಯಾದರು.

ನ್ಯಾಯಪೀಠದ ಕಟ್ಟಾಜ್ಞೆ

‘ನಿಮ್ಮ ಮಾತಿನ ಮೇಲೆ ಭರವಸೆ ಇಟ್ಟು ಒಂದು ವಾರ ಕಾಲಾವಕಾಶ ನೀಡುತ್ತೇವೆ. ಆದರೆ, ಮುಂದಿನ ವಿಚಾರಣೆ ಸಂದರ್ಭದಲ್ಲಿಯೂ ಪಾಲಿಕೆ ಮುಖ್ಯ ಎಂಜಿನಿಯರ್ ಹಾಜರಿರಬೇಕು’ ಎಂದು ನ್ಯಾಯಪೀಠ ಬಿಬಿಎಂಪಿ ವಕೀಲರಿಗೆ ಖಡಕ್ ನಿರ್ದೇಶನ ನೀಡಿದೆ.

‘ರಸ್ತೆ ಗುಂಡಿಗಳನ್ನು ಯಾರು, ಹೇಗೆ ಮುಚ್ಚುತ್ತಾರೆ ಎಂಬುದು ನಮಗೆ ಮುಖ್ಯವಲ್ಲ. ರಸ್ತೆಗಳು ಗುಣಮಟ್ಟದಿಂದ ಕೂಡಿರಬೇಕು. ಈ ನಿಟ್ಟಿನಲ್ಲಿ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಸ್ತೆ ಗುಂಡಿ ಮುಚ್ಚಲು ಯಾವ ತಂತ್ರಜ್ಞಾನ ಅನುಸರಿಸಲಾಗುತ್ತಿದೆ ಎಂಬುದರ ಕುರಿತೂ ಮಾಹಿತಿ ನೀಡಿ. ಮುಂದಿನ ವಿಚಾರಣೆ ವೇಳೆಗೆ ಯಾವುದೇ ಸಬೂಬುಗಳನ್ನು ಹೇಳಬಾರದು’ ಎಂದು ಮುಖ್ಯ ಎಂಜಿನಿಯರ್‌ಗೆ ಕಟ್ಟಾಜ್ಞೆ ವಿಧಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿದೆ.

ಅವೈಜ್ಞಾನಿಕ ರಸ್ತೆ ಉಬ್ಬು: ತರಾಟೆ

ಬೆಂಗಳೂರು: ಮಲ್ಲೇಶ್ವರದ ಮಾರ್ಗೋಸಾ ರಸ್ತೆಯ 15ನೇ ಅಡ್ಡರಸ್ತೆಯ ಸಿಗ್ನಲ್ ಬಳಿ ಅವೈಜ್ಞಾನಿಕ ರಸ್ತೆ ಉಬ್ಬು ನಿರ್ಮಿಸಿರುವ ಬಿಬಿಎಂಪಿ ಅಧಿಕಾರಿಗಳನ್ನು ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ತರಾಟೆಗೆ ತೆಗೆದುಕೊಂಡರು. ಸ್ಥಳೀಯ ಶಾಸಕರೂ ಆಗಿರುವ ಅವರು ಕ್ಷೇತ್ರದ ಸಮಸ್ಯೆಗಳ ಕುರಿತು ಚರ್ಚಿಸಲು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

‘ಮಾರ್ಗೋಸಾ ರಸ್ತೆಯ ವೀಣಾ ಸ್ಟೋರ್ಸ್ ಜಂಕ್ಷನ್ ಬಳಿ ನಿರ್ಮಿಸಿರುವ ರಸ್ತೆ ಉಬ್ಬು ವಾಹನ ಸವಾರರ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿದೆ. ಇದರಿಂದ ಈಗಾಗಲೇ ಹಲವು ಅಪಘಾತಗಳೂ ಆಗಿವೆ. ಇದನ್ನು ಕೂಡಲೇ ಸರಿಪಡಿಸಿ. ಇಲ್ಲದಿದ್ದರೆ ನಿಮ್ಮ ವಿರುದ್ಧವೇ ಪ್ರಕರಣ ದಾಖಲಿಸುತ್ತೇನೆ’ ಎಂದು ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರವೀಣ್ ಅವರಿಗೆ ಎಚ್ಚರಿಕೆ ನೀಡಿದರು. ‘ಮಾರ್ಗೋಸಾ ರಸ್ತೆಯಲ್ಲಿ ನಿತ್ಯವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ರಸ್ತೆ ಉಬ್ಬಿಗೆ ಬಿಳಿ ಬಣ್ಣದ ಪಟ್ಟೆಗಳನ್ನಾಗಲಿ, ರಾತ್ರಿ ಹೊತ್ತು ಈ ಉಬ್ಬು ಇರುವುದು ಗೊತ್ತಾಗುವಂತೆ ರೇಡಿಯಂ ಫಲಕಗಳನ್ನಾಗಲಿ ಅಳವಡಿಸಿಲ್ಲ. ನೀವು ಜನರ ಪ್ರಾಣದ ಜೊತೆ ಚೆಲ್ಲಾಟವಾಡುವುದನ್ನು ಬಿಡಬೇಕು. ಕ್ಷೇತ್ರ ವ್ಯಾಪ್ತಿಯಲ್ಲಿ ಈ ರೀತಿ ಅಪಾಯಕಾರಿ ಉಬ್ಬುಗಳು ಅಥವಾ ಗುಂಡಿಗಳು ಇದ್ದರೆ ಅವುಗಳನ್ನು ಗುರುತಿಸಿ ಕೂಡಲೇ ಸರಿಪಡಿಸಬೇಕು’ ಎಂದು ಸೂಚಿಸಿದರು.

ಮಾರ್ಗೋಸಾ ರಸ್ತೆಯಲ್ಲಿ ನಿರ್ಮಿಸಿರುವ ಉಬ್ಬಿನಿಂದಾಗಿ ಇತ್ತೀಚೆಗೆ ಹಲವು ಅಪಘಾತಗಳು ಸಂಭವಿಸಿದ್ದವು. ಈ ಕುರಿತು ನಾಗರಿಕರು ಸಚಿವರಿಗೆ ದೂರು ನೀಡಿದ್ದರು.

ಆರ್ಥಿಕ ಅಪರಾಧ ಪ್ರಕರಣದ ಆರೋಪಿ

ಮಧುಕರ ಅಂಗೂರ್ ಜಾಮೀನು ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಅಪರಾಧಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿರುವ ಅಲಯನ್ಸ್ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಮಧುಕರ ಅಂಗೂರ್ ಅವರಿಗೆ ಜಾಮೀನು ನೀಡಲು ನಗರದ ವಿಶೇಷ ನ್ಯಾಯಾಲಯ ನಿರಾಕರಿಸಿದೆ.

ಈ ಕುರಿತಂತೆ ಮಧುಕರ ಅಂಗೂರ್ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶ ಅನಿಲ್ ಬಿ ಕಟ್ಟಿ ತಿರಸ್ಕರಿಸಿದ್ದಾರೆ. ‘ಈ ಪ್ರಕರಣದಲ್ಲಿ ಆರೋಪಿಯು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಿ ಅದನ್ನು ಅಕ್ರಮವಾಗಿ ಅನ್ಯ ಖಾತೆಗೆ ವರ್ಗಾಯಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅಂತೆಯೇ, ತನಿಖೆ ಬಾಕಿ ಇದ್ದು ಈ ಹಂತದಲ್ಲಿ ಜಾಮೀನು ನೀಡಲಾಗದು’ ಎಂದು ನ್ಯಾಯಾಧೀಶರು ಇದೇ 2ರಂದು ನೀಡಿರುವ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಪ್ರಕರಣವೇನು?: ‘ಅಲಯನ್ಸ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಯಾವುದೇ ಆರ್ಥಿಕ ವಹಿವಾಟು ನಡೆಸಬಾರದು ಎಂದು ಬೆಂಗಳೂರು ಸಿವಿಲ್ ನ್ಯಾಯಾಲಯ ಮಧುಕರ ಅಂಗೂರ್ ಅವರಿಗೆ ನಿರ್ದೇಶಿಸಿತ್ತು. ಆದರೂ ಅವರು, ಮೆಸರ್ಸ್ ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ಮೆಸರ್ಸ್ ಶ್ರೀವಾರಿ ಶೈಕ್ಷಣಿಕ ಸೇವೆಗಳು ಹೆಸರಿನ ಸಂಸ್ಥೆಯ ಅಡಿಯಲ್ಲಿ 2016ರಿಂದ 2017ರ ನಡುವೆ ಪ್ರತ್ಯೇಕ ಖಾತೆ ತೆರೆದು 4,500 ವಿದ್ಯಾರ್ಥಿಗಳಿಂದ ₹ 107 ಕೋಟಿ ಮೊತ್ತವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ’ ಎಂದು ಆರೋಪಿಸಲಾಗಿತ್ತು.

ಈ ಆರೋಪಕ್ಕೆ ಸಂಬಂಧಿಸಿದಂತೆ ಆನೇಕಲ್, ಜೆ.ಪಿ ನಗರ, ಮಡಿವಾಳ ಮತ್ತು ಶಂಕರಪುರ ಪೊಲೀಸ್ ಠಾಣೆಗಳಲ್ಲಿ ಐಪಿಸಿ ಕಲಂ 420ರ ಅಡಿಯಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಾಗಿದ್ದವು. ಈ ಸಂಬಂಧ ಇ.ಡಿ, ಅಕ್ರಮ ಹಣ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಮಧುಕರ ಅಂಗೂರ್ ಅವರನ್ನು ಬಂಧಿಸಿತ್ತು. ಇ.ಡಿ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿ: ₹5,030 ಕೋಟಿ ಅನುದಾನಕ್ಕೆ ಮನವಿ

ನವದೆಹಲಿ: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ ಅಡಿ ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷವಾಗಿ ₹ 5,030 ಕೋಟಿ ಅನುದಾನ ಒದಗಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಈ ಕುರಿತ ಮನವಿ ಸಲ್ಲಿಸಿದರು. ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ಜಿಲ್ಲೆಗಳಿಗೆ 371(ಜೆ) ವಿಧಿಯ ಅನ್ವಯ ವಿಶೇಷ ಸ್ಥಾನಮಾನ ನೀಡಿ, ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಒದಗಿಸಲಾಗಿದೆ. ಆದರೆ, ಈ ಭಾಗವು ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವುದರಿಂದ ವಿಶೇಷ ಗಮನ ನೀಡುವ ಅಗತ್ಯವಿದೆ. ತಿರುಪತಿಯಲ್ಲಿ ಇತ್ತೀಚೆಗೆ ನಡೆದ ದಕ್ಷಿಣ ವಲಯ ಮಂಡಳಿ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ ಎಂದು ಅವರು ಸಚಿವರ ಗಮನಕ್ಕೆ ತಂದರು.

ನೀತಿ ಆಯೋಗ ಬಿಡುಗಡೆ ಮಾಡಿರುವ ಬಡತನ ಸೂಚ್ಯಂಕದಲ್ಲೂ ಈ ಜಿಲ್ಲೆಗಳು ಹಿಂದುಳಿದಿರುವುದು ಬಹಿರಂಗಗೊಂಡಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಕೇಂದ್ರ ಪುರಸ್ಕೃತ ಯೋಜನೆಗಳ ಅಡಿ ನೆರವು ನೀಡುವಂತೆ ಅವರು ಕೋರಿದರು.

ಮೈಸೂರು ಬಂದ್ ಕೆಲವೆಡೆ ಕಲ್ಲೆಸೆತ

ಮೈಸೂರು: ರಾಯಚೂರು ಜಿಲ್ಲಾ ನ್ಯಾಯಾಲಯದಲ್ಲಿ ಗಣರಾಜ್ಯೋತ್ಸವದ ದಿನ ಅಂಬೇಡ್ಕರ್ ಭಾವಚಿತ್ರ ತೆಗೆದ ಪ್ರಕರಣ ಖಂಡಿಸಿ, ಸಂವಿಧಾನ ರಕ್ಷಣಾ ಸಮಿತಿ ಸೋಮವಾರ ಕರೆ ನೀಡಿದ್ದ ಮೈಸೂರು ಬಂದ್‌ನಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಪ್ರತಿಭಟನಕಾರರು ಬಲವಂತದಿಂದ ಅಂಗಡಿಗಳನ್ನು ಮುಚ್ಚಿಸಿದರು. ಬಸ್‌ಗಳ ಮೇಲೆ ಕಲ್ಲೆಸೆದರು.

ಪೀಣ್ಯ ಮೇಲ್ಸೇತುವೆಯಲ್ಲಿ ಪರೀಕ್ಷೆ

45 ದಿನಗಳಾದರೂ ಮುಗಿಯದ ದುರಸ್ತಿ ಕಾಮಗಾರಿ: ಸವಾರರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುರಸ್ತಿ ಕಾರ್ಯ ನಡೆಯುತ್ತಿರುವ ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯಲ್ಲಿ ಸಾಮರ್ಥ್ಯ ಪರೀಕ್ಷೆ (ಲೋಡ್ ಟೆಸ್ಟಿಂಗ್) ನಡೆಸಲಾಗಿದೆ.

ಭಾನುವಾರ ಮತ್ತು ಸೋಮವಾರ ಈ ಪರೀಕ್ಷೆ ಕೈಗೊಳ್ಳಲಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯ(ಐಐಎಸ್ಸಿ) ತಜ್ಞರು ಈಗಾಗಲೇ ಮೇಲ್ಸೇತುವೆ ದುರಸ್ತಿ ಕಾಮಗಾರಿ ಪರಿಶೀಲಿಸಿದ್ದಾರೆ. ತಜ್ಞರು ಅನುಮೋದನೆ ನೀಡಿದ ಬಳಿಕ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸುವ ಸಾಧ್ಯತೆ ಇದೆ. ಬಹುತೇಕ ಈ ವಾರಾಂತ್ಯಕ್ಕೆ ವಾಹನ ಸಂಚಾರಕ್ಕೆ ಅವಕಾಶ ನೀಡಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕೊನೆಗೂ ಸಾಮರ್ಥ್ಯ ಪರೀಕ್ಷೆ ಪ್ರಕ್ರಿಯೆ ಆರಂಭವಾಗಿದೆ’ ಎಂದು ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ಅವರು ಟ್ವೀಟ್ ಮಾಡಿದ್ದಾರೆ.


ಪೀಣ್ಯ ಮೇಲ್ಸುತುವೆಯಲ್ಲಿ ಸಾಮರ್ಥ್ಯ ಪರೀಕ್ಷೆ ನಡೆಸಲಾಯಿತು.

ಈ ಮೇಲ್ಸೇತುವೆಯ 102 ಮತ್ತು 103ನೇ ಕಂಬಗಳನ್ನು ಸಂಪರ್ಕಿಸುವ ಕೇಬಲ್‌ಗಳಲ್ಲಿ ದೋಷ ಕಂಡು ಬಂದಿದ್ದರಿಂದ ಡಿಸೆಂಬರ್ 25ರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ವಾಹನ ಸಂಚಾರ ನಿರ್ಬಂಧಿಸಿ ದುರಸ್ತಿ ಕಾಮಗಾರಿ ಕೈಗೊಂಡಿತ್ತು.

ಈ ಮೇಲ್ಸೇತುವೆಯ ಎರಡು ಪಥಗಳಲ್ಲಿ ಪ್ರತಿ ದಿನ ಸಾವಿರಾರು ವಾಹನಗಳು ಸಂಚರಿಸುತ್ತಿದ್ದವು. ಸಂಚಾರಕ್ಕೆ ನಿರ್ಬಂಧ ವಿಧಿಸಿದ ಬಳಿಕ ಸರ್ವಿಸ್ ರಸ್ತೆಯಲ್ಲಿ ಪ್ರತಿ ನಿತ್ಯ ದಟ್ಟಣೆಯಾಗಿ ವಾಹನ ಚಾಲಕರು ಪರದಾಡುವಂತಾಗಿದೆ.

ಮೇಲ್ಸೇತುವೆಯ ದುರಸ್ತಿ ವಿಳಂಬಕ್ಕೆ ವಾಹನ ಸವಾರರು ಪ್ರತಿನಿತ್ಯ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

‘45 ದಿನಗಳಾದರೂ ದುರಸ್ತಿ ಕಾರ್ಯ ಕೈಗೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ಇದರಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಈ ಮಾರ್ಗದಲ್ಲಿ ಸಂಚರಿಸಲು ಹರಸಾಹಸ ಮಾಡಬೇಕಾಗಿದೆ. ಎನ್‌ಎಚ್‌ಎಐ ವಾಹನ ಸವಾರರ ತಾಳ್ಮೆ ಪರೀಕ್ಷಿಸುತ್ತಿದೆ’ ಎಂದು ಕಿಡಿಕಾರಿದ್ದಾರೆ.

‘ಕೇವಲ ಒಂದು ವಾರದಲ್ಲಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಸಂಚಾರ ಪೊಲೀಸರಿಗೆ ಎನ್‌ಎಚ್‌ಎಐ ತಿಳಿಸಿತ್ತು. ಆದರೆ, ಇದುವರೆಗೂ ಸಾಧ್ಯವಾಗಿಲ್ಲ’ ಎಂದು ದೂರಿದ್ದಾರೆ.

‘ಪೀಣ್ಯ ಮೇಲ್ಸೇತುವೆಯಲ್ಲಿನ ದುರಸ್ತಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಮೇಲ್ಸೇತುವೆಯಲ್ಲಿ ಸಂಚಾರ ನಿರ್ಬಂಧ ವಿಧಿಸಿರುವುದರಿಂದ ನಾಗರಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಈ ಮಾರ್ಗದಲ್ಲಿ ಸಂಚಾರ ನಿರ್ಬಂಧ ತೆರವುಗೊಳಿಸುವ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿಯೂ ಇಲ್ಲ’ ಎಂದು ಸಂಸದ ಡಿ.ವಿ. ಸದಾನಂದಗೌಡ ಹಾಗೂ ಶಾಸಕ ಆರ್.ಮಂಜುನಾಥ್ ಅವರು ಎನ್‌ಎಚ್‌ಎಐ ಪ್ರಾದೇಶಿಕ ಅಧಿಕಾರಿಗೆ ಪತ್ರ ಬರೆದಿದ್ದರು.

ಸಕ್ರಿಯ ಪ್ರಕರಣ 87 ಸಾವಿರಕ್ಕೆ ಇಳಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು ಗಣನೀಯ ಇಳಿಕೆಯಾಗಿವೆ. ಸದ್ಯ 87,080 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.


ಸೋಂಕಿತರ ಹೊಸ ಪ್ರಕರಣಗಳೂ ತಗ್ಗಿವೆ. ಒಂದು ದಿನದಲ್ಲಿ 6,151 ಜನರು ಸೋಂಕಿಗೊಳಪಟ್ಟಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆಯು 39.02 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣವು ಶೇ 6.19ರಷ್ಟು ವರದಿಯಾಗಿದೆ. ಹಿಂದಿನ 24 ಗಂಟೆಗಳಲ್ಲಿ 16,802 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರ ಒಟ್ಟು ಸಂಖ್ಯೆ 37.75 ಲಕ್ಷದಷ್ಟಿದೆ.

ಕೋವಿಡ್ ಪೀಡಿತರ ಪೈಕಿ ಸೋಮವಾರ 49 ಜನ ಅಸುನೀಗಿದ್ದಾರೆ. ಈವರೆಗೆ 39,396 ಮಂದಿ ಸಾವಿಗೀಡಾಗಿದ್ದು, ಮರಣ ಪ್ರಮಾಣ ದರವು ಶೇ 0.79ರಷ್ಟು ದಾಖಲಾಗಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಕೆಯಾಗಿದೆ. 24 ಗಂಟೆಗಳಲ್ಲಿ 99,254 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಜಿಲ್ಲೆಗಳಲ್ಲೂ ಸೋಂಕಿತರ ಪ್ರಕರಣಗಳು ತಗ್ಗಿವೆ. ಬೆಂಗಳೂರಿನಲ್ಲಿ 2,718 ಮಂದಿಗೆ ಹೊಸದಾಗಿ ಸೋಂಕು ತಗುಲಿದೆ. 16 ಜಿಲ್ಲೆಗಳಲ್ಲಿ ಇದು ಮೂರಂಕಿಗೆ ಇಳಿದಿದ್ದು, 13 ಜಿಲ್ಲೆಗಳಲ್ಲಿ ಎರಡಂಕಿಯಷ್ಟು ವರದಿಯಾಗಿದೆ.



ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 15 ಮಂದಿ ಮೃತರಾಗಿದ್ದಾರೆ. ಮೈಸೂರಿನಲ್ಲಿ 6, ತುಮಕೂರು ಹಾಗೂ ಉಡುಪಿಯಲ್ಲಿ ತಲಾ 4, ದಕ್ಷಿಣ ಕನ್ನಡದಲ್ಲಿ 3, ಬೆಳಗಾವಿ, ಧಾರವಾಡ, ಹಾಸನ ಹಾಗೂ ಉತ್ತರ ಕನ್ನಡದಲ್ಲಿ ತಲಾ 2, ಬಾಗಲಕೋಟೆ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿತ್ರದುರ್ಗ, ಹಾವೇರಿ, ಮಂಡ್ಯ, ರಾಯಚೂರು, ರಾಮನಗರ ಜಿಲ್ಲೆಗಳಲ್ಲಿ ತಲಾ ಒಬ್ಬರು ಅಸುನೀಗಿದ್ದಾರೆ.



ಯೋಜನೆಗಳ ಅನುಷ್ಠಾನಕ್ಕೆ ಒತ್ತು

ಒಂದನೇ ಪುಟದಿಂದ

ವಿದ್ಯುತ್ ಕಂಪನಿಗಳು (ಎಸ್ಕಾಂಗಳು)ಅಂತರ ಇಲಾಖಾ ಬಿಲ್ ಪಾವತಿಸಬೇಕು ಎಂಬ ಷರತ್ತು ವಿಧಿಸಲಾಗಿದೆ. ಈ ಷರತ್ತುಗಳನ್ನು ರದ್ದುಗೊಳಿಸುವಂತೆ ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಅವರನ್ನು ಭೇಟಿ ಮಾಡು ಕೋರಲಾಯಿತು ಎಂದ ಅವರು, ಬಿಲ್ ಪಾವತಿ ಪ್ರಕ್ರಿಯೆ ರದ್ದುಪಡಿಸಿದಲ್ಲಿ ಎಸ್ಕಾಂಗಳಿಗೆ ಬ್ಯಾಂಕ್‌ನಿಂದ ಸಾಲ ಸೌಲಭ್ಯ ದೊರೆಯಲಿದೆ ಎಂದರು. ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕವು ವಿದ್ಯುತ್ ಬಳಕೆದಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಹಾಯಧನ ನೀಡುತ್ತಿದೆ. ಅಂದಾಜು ₹ 15,000 ಕೋಟಿಯಷ್ಟು ಸಹಾಯಧನ ನೀಡಲಾಗುತ್ತಿದೆ. ಹಿಂದಿನ ವರ್ಷಗಳ ಬಾಕಿ ಮೊತ್ತವನ್ನು ಪಾವತಿಸಲು ಮತ್ತಷ್ಟು ಸಮಯಾವಕಾಶ ಒದಗಿಸುವ ಅಗತ್ಯವಿದೆ ಎಂದೂ ಸಚಿವರಿಗೆ ಮನವರಿಕೆ ಮಾಡಲಾಗಿದೆ ಎಂದು ಹೇಳಿದರು. ಕೇಂದ್ರದ ಆರೋಗ್ಯ ಸಚಿವ ಮನಸುಖ್ ಮಾಂಡವಿಯಾ ಅವರನ್ನು ಭೇಟಿ ಮಾಡಿ ಕೋವಿಡ್ ಸ್ಥಿತಿಗತಿ ಕುರಿತು ಚರ್ಚಿಸಲಾಗಿದೆ ಎಂದೂ ತಿಳಿಸಿದರು.ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೂ ಭೇಟಿ ಮಾಡಿ ಚರ್ಚಿಸಲಾಗಿದೆ. ರಾಜ್ಯಗಳಿಗೆ 50 ವರ್ಷಗಳ ಅವಧಿಗೆ ಬಡ್ಡಿರಹಿತವಾಗಿ ₹ 1 ಲಕ್ಷ ಕೋಟಿ ಸಾಲ ಮಂಜೂರು ಮಾಡುವ ಕಾರ್ಯಕ್ರಮದಡಿ ಕರ್ನಾಟಕಕ್ಕೆ ಅಗತ್ಯ ನೆರವು ನೀಡುವಂತೆ ಮನವಿ ಮಾಡಲಾಗಿದೆ. ಅಂದಾಜು ₹ 4,000 ಕೋಟಿ ಸಾಲ ದೊರೆಯಬಹುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ವಿವರಿಸಿದರು.

ರಾಜ್ಯಗಳಿಗೆ ನೀಡುವ ಜಿಎಸ್‌ಟಿ ಪರಿಹಾರವನ್ನು 2024-25ರವರೆಗೆ ವಿಸ್ತರಿಸಲು ಕೋರಲಾಗಿದೆ ಎಂದು ಮಾಹಿತಿ ನೀಡಿದರು.

‘ಕಸಾಪ ಬೈ–ಲಾ ತಿದ್ದುಪಡಿಗೆ ಆತುರವೇಕೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಭವಿಷ್ಯದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವುದರತ್ತ ಗಮನ ಕೇಂದ್ರೀಕರಿಸುವ ಬದಲು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈ–ಲಾ ತಿದ್ದುಪಡಿಗೆ ಏಕಿಷ್ಟು ಆತುರ ತೋರುತ್ತಿದ್ದೀರಿ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ, ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಪ್ರಶ್ನಿಸಿದ್ದಾರೆ.

ಈ ಕುರಿತು ಮಹೇಶ ಜೋಶಿ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

‘ಕಸಾಪ ಜಿಲ್ಲಾಧ್ಯಕ್ಷರು ಅಧಿಕಾರ ವಹಿಸಿಕೊಂಡಿದ್ದಾರೆ. ಕೆಲವು ತಾಲ್ಲೂಕು ಹಾಗೂ ಹೋಬಳಿಗಳಿಗೂ ಅಧ್ಯಕ್ಷರ ನೇಮಕ ಆಗಿದೆ. ಉಳಿದ ನೇಮಕಾತಿಗಳಿಗೆ ನೀವು ಪೂರ್ಣ ಅವಕಾಶ ನೀಡಿಲ್ಲ ಎಂಬ ಸುದ್ದಿ ಇದೆ. ಪರಿಷತ್ತಿನ ಅಧ್ಯಕ್ಷರಾದ ನೀವು ಎಲ್ಲಾ ಹಂತದ ಪದಾಧಿಕಾರಿಗಳನ್ನು ಒಳಗೊಂಡ ಯೋಜನೆ ರೂಪಿಸಬೇಕು. ಅದು ನಿಮ್ಮ ಹೊಣೆ. ಪರಿಷತ್ತು ಕೈಗೊಳ್ಳಬಹುದಾದ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಆದ್ಯತೆಯ ವಿಷಯವಾಗಬೇಕೆ ಹೊರತು ಬೈ–ಲಾ ತಿದ್ದುಪಡಿಯಲ್ಲ. ಯಾವುದೇ ಕಾರ್ಯಕ್ರಮವನ್ನೂ ಸಂಘಟಿಸದೆ ಬೈ–ಲಾ ತಿದ್ದುಪಡಿಗೆ ನೀವು ನೀಡುತ್ತಿರುವ ಆದ್ಯತೆಯು ಖಂಡಿತ ಅಪೇಕ್ಷಣೀಯವಲ್ಲ’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ಕನ್ನಡ ಮತ್ತು ಕನ್ನಡ ಸಾಹಿತ್ಯದ ಒಳಿತಿಗಾಗಿ ಕ್ರಿಯಾ ಯೋಜನೆಗಳನ್ನು ರೂಪಿಸುವುದು ನಿಮ್ಮ ಆದ್ಯತೆಯಾಗಬೇಕು. ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಸಾಹಿತ್ಯಾಭಿರುಚಿ ಮೂಡಿಸುವ ಕೆಲಸಗಳಾಗಬೇಕು. ಇಲ್ಲಿಯವರೆಗೆ ಇಂತಹ ಯಾವ ಕಾರ್ಯಗಳನ್ನೂ ನೀವು ಮಾಡದಿರುವುದು ವಿಷಾದದ ಸಂಗತಿ’ ಎಂದಿದ್ದಾರೆ.

‘ಚಂದ್ರಶೇಖರ ಪಾಟೀಲರು (ಚಂಪಾ) ನಿಧನರಾದ ಬಳಿಕ ಅವರಿಗೆ ಪರಿಷತ್ತಿನಿಂದ ನುಡಿನಮನ ಸಲ್ಲಿಸುವ ಕೆಲಸವನ್ನು ನೀವು ಮಾಡಲಿಲ್ಲ. ಆನ್‌ಲೈನ್ ಕಾರ್ಯಕ್ರಮವನ್ನಾದರೂ ಸಂಘಟಿಸಬಹುದಿತ್ತು. ಅದೂ ಆಗಲಿಲ್ಲ. ಆದರೆ ಬೈ–ಲಾ ತಿದ್ದುಪಡಿಗೆ ಮಾತ್ರ ಆತುರಪಡುತ್ತಿದ್ದೀರಿ. ಮೊದಲು ಒಂದಷ್ಟು ಕೆಲಸಗಳನ್ನು ಮಾಡಿ. ಆನಂತರ ಬೈ–ಲಾ ತಿದ್ದುಪಡಿ ಬಗ್ಗೆ ಯೋಚಿಸಿ’ ಎಂದು ಸಲಹೆ ನೀಡಿದ್ದಾರೆ.

ಅರಿವಿನ ಬೆಳಕು ನೀಡಬೇಕಿದ್ದ ಕೇಂದ್ರಕ್ಕೆ ಸ್ಮಶಾನದ ಕಳೆ

ಅಲ್ಲಮಪ್ರಭು ಪೀಠಕ್ಕೂ ಸರ್ಕಾರದ ಅನಾದರ

• ಉದಯ ಯು.

ಮಂಗಳೂರು: ಕರಾವಳಿಯಲ್ಲಿ ಶರಣರ ತತ್ವಗಳನ್ನು, ವಿಶೇಷವಾಗಿ ಅಲ್ಲಮಪ್ರಭುವಿನ ವಿಚಾರಗಳನ್ನು ಪ್ರಚುರಪಡಿಸುವ ಉದ್ದೇಶದಿಂದ ಕಾರ್ಕಳ ತಾಲ್ಲೂಕು ಕಾಂತಾವರದಲ್ಲಿ ಆರಂಭಿಸಲಾದ 'ಅಲ್ಲಮಪ್ರಭು ಪೀಠ'ಕ್ಕೆ ಬಾಲಗ್ರಹ ಕಾಡಿದಂತಾಗಿದೆ.

ಇಲ್ಲಿ ಸುಮಾರು ₹ 75 ಲಕ್ಷ ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ನಡೆಸಲಾಗಿದ್ದು, ಅರೆಬರೆಯಾಗಿರುವ ಅನುದಾನದ ಕೊರತೆಯಿಂದ ನಿರ್ವಹಣೆ ಮಾಡದ್ದರಿಂದ ನಾಶವಾಗುವ ಆತಂಕ ಎದುರಾಗಿದೆ.

ಹಿನ್ನೆಲೆ: ಅಲ್ಲಮಪ್ರಭುವಿನ ವಿಚಾರಗಳನ್ನು ಕರಾವಳಿಯಲ್ಲಿ ಪ್ರಚುರಪಡಿಸುವ ಉದ್ದೇಶದಿಂದ 2010ರಲ್ಲಿ ಒಂದಷ್ಟು ಮಂದಿ ಸಮಾನ ಮನಸ್ಕರು ಸೇರಿ, 'ಅಲ್ಲಮಪ್ರಭು ಪೀಠ, ಕಾಂತಾವರ' ರಚಿಸಿದ್ದರು. ಡಾ. ನಾ. ಮೊಗಸಾಲೆ, ದಿವಂಗತ ಡಿ.ಕೆ. ಚೌಟ, ಸಿ.ಕೆ. ಪಡಿವಾಳ, ಯಶೋಧರ ವಿ. ಕೆಕೇರ, ಪ್ರೊ. ಎ.ವಿ. ನಾವಡ ಮುಂತಾದವರು ಇದರ ಬೆನ್ನೆಲುಬಾಗಿದ್ದರು.

2011ರಲ್ಲಿ ಪೀಠಕ್ಕಾಗಿ 3.65 ಎಕರೆ ಜಾಗವನ್ನು ಖರೀದಿಸಿ, ಅಲ್ಲಿ ಬಯಲು ರಂಗಮಂದಿರ, ಅಲ್ಲಮನ ಮಹಾಮನೆ ನೆನಪಲ್ಲಿ ಒಂದು 'ಮಹಾಮನೆ' ನಿರ್ಮಿಸುವ ಯೋಜನೆ ರೂಪಿಸಲಾಯಿತು. ಒಂದಷ್ಟು ಹಣವನ್ನು ದಾನಿಗಳ ಮೂಲಕ ಸಂಗ್ರಹಿಸಲಾಯಿತು. ದಿವಂಗತ ಡಿ.ಕೆ. ಚೌಟ ಅವರು ಸ್ವಂತ ಖರ್ಚಿನಲ್ಲಿ ಸುಂದರವಾದ ಬಯಲು ರಂಗಮಂದಿರ ನಿರ್ಮಿಸಿಕೊಟ್ಟರು.

ಈ ನಡುವೆ, ಪೀಠದ ವಿವಿಧ ಯೋಜನೆಗಳಿಗಾಗಿ ₹5 ಕೋಟಿ ಆರ್ಥಿಕ ನೆರವು ನೀಡುವಂತೆ ಸಮಿತಿಯವರು, ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಕೋರಿದಾಗ, ₹50 ಲಕ್ಷವನ್ನು ಅವರು ಮಂಜೂರು ಮಾಡಿದ್ದರು. 2011ರ ಮೇ 6ರಂದು ಕಟ್ಟಡಕ್ಕೆ ಶಿಲಾನ್ಯಾಸವೂ ನೆರವೇರಿತು. 'ಕಾಂತಾವರವು ಶರಣ ತತ್ವಕ್ಕೂ ನೆಲೆಯಾಗುತ್ತಿದೆ' ಎಂದು ಸ್ಥಳೀಯರು ಖುಷಿಪಟ್ಟಿದ್ದರು.

ಸರ್ಕಾರ ಬಿಡುಗಡೆ ಮಾಡಿರುವ ಹಣದಿಂದ ನಿರ್ಮಾಣ ಕಾರ್ಯ ಆರಂಭವಾಗಿ, ಒಂದು ಹಂತಕ್ಕೆ ಬಂದು ನಿಂತಿತ್ತು. ಆದರೆ, ಕೆಲವೇ ದಿನಗಳಲ್ಲಿ ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರ ಪತನವಾಗಿ, ಡಿ.ವಿ. ಸದಾನಂದ ಗೌಡ, ಅನಂತರ ಜಗದೀಶ ಶೆಟ್ಟರ ಅವರು ಮುಖ್ಯಮಂತ್ರಿಯಾದರು. ಪೀಠಕ್ಕೆ ಇನ್ನುಳಿದ ಹಣ ಬಿಡುಗಡೆ ಮಾಡುವಂತೆ ಇಬ್ಬರಲ್ಲೂ ಮಾಡಿದ ಮನವಿ ಫಲಿಸಲಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ನಂತರ, ವೀರಪ್ಪ ಮೊಯಿಲಿ ಅವರ ಮುಖಾಂತರ ಸರ್ಕಾರಕ್ಕೆ ಮತ್ತೊಂದು ಮನವಿ ಸಲ್ಲಿಸಲಾಯಿತು. ಆಗ ಸರ್ಕಾರ ₹10 ಲಕ್ಷ ಬಿಡುಗಡೆ ಮಾಡಿತ್ತು. ಒಟ್ಟು ₹60 ಲಕ್ಷ ವೆಚ್ಚದಲ್ಲಿ ಮಹಾಮನೆಯ ಕಟ್ಟಡದ ತಳಮಟ್ಟದ ಒಂದು ಭಾಗ ನಿರ್ಮಾಣವಾಯಿತು. ಅದಾದ ನಂತರ ಅನುದಾನದ ಕೊರತೆ ಅಲ್ಲಮ ಪೀಠವನ್ನು ತೀವ್ರವಾಗಿ ಕಾಡತೊಡಗಿದೆ.

ಈ ನಡುವೆ ವಿ. ಜಯಶ್ರೀ ಅವರು ಸಂಸದರ ಪ್ರದೇಶಾಭಿವೃದ್ಧಿ ನಿಧಿಯಿಂದ ₹15 ಲಕ್ಷ ನೀಡಿ, ಕಲಾವಿದರ ಕುಟೀರವೊಂದನ್ನು ನಿರ್ಮಿಸಲು ನೆರವಾದರು. ಆದರೆ ಈಗ ನಿರ್ವಹಣೆಯ ಕೊರತೆಯಿಂದ ಎಲ್ಲವೂ ಪಾಳು ಕೊಂಪೆಯಂತಾಗಿದೆ. ಬಯಲು ರಂಗಮಂದಿರದ ಗ್ಯಾಲರಿ ಅಲ್ಲಲ್ಲಿ ಜರಿದು ಬಿದ್ದಿದೆ. ಮಹಾಮನೆಯ ಸುತ್ತ ಕಟ್ಟಡವೇ ಕಾಣಿಸದಷ್ಟು ಗಿಡಗಂಟಿಗಳು ಬೆಳೆದಿವೆ. ಅಲ್ಲಮನ ತತ್ವಗಳ ಮೂಲಕ ಜಗತ್ತಿಗೆ ಬೆಳಕು ನೀಡಬೇಕಾಗಿದ್ದ ಈ ಕೇಂದ್ರವು ಸ್ಮಶಾನದ ಕಳೆಹೊತ್ತು ನಿಂತಿದೆ.

ಪೀಠದ ಪ್ರಧಾನ ನಿರ್ದೇಶಕರಾಗಿದ್ದ ಡಾ. ನಾ. ಮೊಗಸಾಲೆ ಅವರು ಸರ್ಕಾರದ ನಿರ್ಲಕ್ಷ್ಯದಿಂದ ನಿರಾಸೆಗೊಂಡು, ತಮ್ಮ ಸ್ಥಾನಕ್ಕೆ ಈಚೆಗೆ ರಾಜೀನಾಮೆ ನೀಡಿದ್ದಾರೆ. ಹೊಸ ನಿರ್ದೇಶಕ ಸತೀಶ್ ಕುಮಾರ್ ಕೆಮ್ಮಣ್ಣು ಅವರು ಈಗ ಪೀಠದ ಜವಾಬ್ದಾರಿಯನ್ನು ಹೊತ್ತಿದ್ದಾರೆ.



ದಿವಂಗತ ಡಿ.ಕೆ. ಚೌಟ ಅವರು ನಿರ್ಮಿಸಿಕೊಟ್ಟಿದ್ದ ಬಯಲು ರಂಗಮಂದಿರದ ಈಗಿನ ಸ್ಥಿತಿ

ನಿರಂತರ ಕಾರ್ಯಕ್ರಮ

ಅಲ್ಲಮಪ್ರಭು ಪೀಠದ ವತಿಯಿಂದ 2012ರಿಂದ ತಿಂಗಳಿಗೊಂದರಂತೆ ನಿರಂತರವಾಗಿ 'ಅನುಭವದ ನುಡಿ' ಎಂಬ ಉಪನ್ಯಾಸ ಕಾರ್ಯಕ್ರಮ ನಡೆಸಿಕೊಂಡು ಬರಲಾಗಿದೆ. ನಾಡಿನ ವಿವಿಧ ಭಾಗಗಳ ವಿಷಯ ತಜ್ಞರು ಬಂದು ಉಪನ್ಯಾಸ ನೀಡಿದ್ದಾರೆ.

ಈ ವಿದ್ವತ್ಪೂರ್ಣ ಉಪನ್ಯಾಸಗಳ 'ಕರಣ ಕಾರಣ' ಹೆಸರಿನ ಸಂಪುಟಗಳನ್ನೂ ಪ್ರಕಟಿಸಲಾಗಿದೆ. ಈವರೆಗೆ 101 ಉಪನ್ಯಾಸಗಳು ನಡೆದಿದ್ದು 'ಕರಣ ಕಾರಣ'ದ ಏಳು ಸಂಪುಟಗಳು ಬಿಡುಗಡೆಯಾಗಿವೆ. ಹಿಂದೆ ಮೈಸೂರು ವಿ.ವಿ ಪ್ರಕಟಿಸುತ್ತಿದ್ದ 'ಪ್ರಬುದ್ಧ ಕರ್ನಾಟಕ'ಕ್ಕೆ ಈ ಸಂಪುಟಗಳನ್ನು ತುಲನೆ ಮಾಡಲಾಗುತ್ತಿದೆ.

'ಬಯಲು ರಂಗಮಂದಿರದ ಉದ್ಘಾಟನೆಯ ಸಂದರ್ಭದಲ್ಲಿ ಮೂರು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿದ್ದವು. ಕೊರೊನಾ ನಂತರ ಎಲ್ಲ ಚಟುವಟಿಕೆಗಳು ಸ್ಥಗಿತಗೊಂಡಿವೆ' ಎಂದು ಡಾ.ನಾ. ಮೊಗಸಾಲೆ ತಿಳಿಸಿದರು.

ಸರ್ಕಾರಕ್ಕೆ ಮತ್ತೆ ಮನವಿ ಸಲ್ಲಿಸಿದ್ದೇವೆ. ಈ ಸಾಲಿನ ಬಜೆಟ್‌ನಲ್ಲಾದರೂ ಹಣ ಮಂಜೂರಾಗಬಹುದೆಂಬ ನಿರೀಕ್ಷೆಯಲ್ಲಿದ್ದೇವೆ.
ಸತೀಶ್ ಕುಮಾರ್, ಅಲ್ಲಮಪ್ರಭು ಪೀಠದ ಹೊಸ ನಿರ್ದೇಶಕ


ಪ್ರಜಾವಾಣಿ ವಿಶೇಷ

ಪೀಠದ ಬೇಡಿಕೆಗಳು

'ಕಾಂತಾವರದ ಪೀಠವು ವಿಶ್ವವಿದ್ಯಾನಿಲಯವಾಗಿ ಬೆಳೆಯಬೇಕು ಎಂಬುದು ನಮ್ಮ ಬಯಕೆಯಾಗಿತ್ತು. ಅಲ್ಲಮನ ತತ್ವಗಳ ಪ್ರಚಾರ ಕೇಂದ್ರವಾಗಬೇಕು, ಇದರೊಂದಿಗೆ ಅಧ್ಯಾತ್ಮ, ಯೋಗ, ಪ್ರಕೃತಿ ಚಿಕಿತ್ಸಾ ಕೇಂದ್ರವಾಗಬೇಕು, ಗ್ರಂಥಾಲಯ ಸ್ಥಾಪನೆಯಾಗಬೇಕು. ಒಂದು ವಿಶ್ವವಿದ್ಯಾಲಯದ ಅಧ್ಯಯನ ಪೀಠವಾಗಿ ಹೆಚ್ಚಿನ ಕೆಲಸಗಳು ಇಲ್ಲಿ ನಡೆಯುವಂತಾಗಬೇಕು, ಅಲ್ಲಮ ಸ್ಮೃತಿ ಮತ್ತು ವಚನ [illegible] ಕೇಂದ್ರವಾಗಬೇಕು [illegible]. ಆದರೆ ಹಲವು ಚಿಂತನೆಗಳಿದ್ದವು. ಇವೆಲ್ಲ ಆಗಬೇಕೆಂದರೆ ಒಟ್ಟಾರೆ ₹5 ಕೋಟಿ ಬೇಕು. ಅದಕ್ಕಾಗಿ ನಾವು ಸರ್ಕಾರದ ಮೊರೆಹೋಗಿದ್ದೆವು' ಎನ್ನುತ್ತಾರೆ ಡಾ. ಮೊಗಸಾಲೆ ಹಾಗೂ ಹೊಸ ನಿರ್ದೇಶಕ ಸತೀಶ್ ಕುಮಾರ್.

'ಉತ್ತರ ಕರ್ನಾಟಕದ ಕೆಲವು ಸಂಸ್ಥೆಗಳಿಗೆ ನೀಡಿರುವಂತೆ ಈ ಕೇಂದ್ರಕ್ಕೂ ಸರ್ಕಾರ ಶಾಶ್ವತ ಅನುದಾನ ನೀಡಬೇಕು. ಈ ಬಾರಿಯ ಬಜೆಟ್‌ನಲ್ಲಾದರೂ ಸರ್ಕಾರ ಕಣ್ಣು ತೆರೆಯಬೇಕು' ಎಂಬುದು ಅವರ ಬೇಡಿಕೆಯಾಗಿದೆ.

ಕಂಬಾರರಿಗೆ 'ಸೇವಾ' ಪ್ರಶಸ್ತಿ



ಬೆಂಗಳೂರು: ಮೈಸೂರು ಕನ್ನಡ ಬಳಗದ ವತಿಯಿಂದ ನೀಡಲಾಗುವ 'ರಾಜ್ಯಶ್ರೀ ಬಾಪ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ'ಗೆ ಸಾಹಿತಿ ಚಂದ್ರಶೇಖರ ಕಂಬಾರ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ₹1 ಲಕ್ಷ ನಗದು ಒಳಗೊಂಡಿದೆ. ಫೆಬ್ರುವರಿ 13ರಂದು ಬೆಂಗಳೂರಿನ ಪ್ರಶಸ್ತಿ ಪ್ರದಾನ ನಡೆಯಲಿದೆ.

'ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಂಜಮ್ಮ ಜೋಗತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ಬಾಪ್ ಬಿಡದಿ ಘಟಕದ ವಾಣಿಜ್ಯಾಧಿಕಾರಿ ಎಚ್.ವಿ.ಹೊಂಬಳೆ, ಮೈಸೂರು ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ವಿ.ಜಿ.ಕೆ. ನಾಯರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನಿಧನ ವಾರ್ತೆ

ಮೂಲಾ ರಮೇಶ್ ಬಾಬು



ದಾವಣಗೆರೆ: ನಗರದ ಸಿದ್ಧವೀರಪ್ಪ ಬಡಾವಣೆಯ 12ನೇ ಕ್ರಾಸ್‌ನ ನಿವಾಸಿಯಾಗಿದ್ದ ಮದ್ಯ ಸಗಟು ವ್ಯಾಪಾರಿ ಮೂಲಾ ರಮೇಶ್ ಬಾಬು (80) ಅವರು ವಯೋಸಹಜ ಕಾಯಿಲೆಯಿಂದ ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಯಶೋದಾ, ಪುತ್ರ ಮೂಲಾ ಸಾಯಿದೀಪ್, ಸೊಸೆ ಸೌಮ್ಯಾ ಹಾಗೂ ಮೊಮ್ಮಗ ಶ್ರೇಯಸ್ ಇದ್ದಾರೆ.

ಆರ್ಯ ಈಡಿಗ ಹಾಸ್ಟೆಲ್‌ಗೆ ವಿವಿಧ ಬಗೆಯ ದಾನಗಳನ್ನು ಮಾಡಿದ್ದ ಮೂಲಾ ರಮೇಶ್ ಬಾಬು ಅವರು, ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್ ಕಂಪನಿಯ ಷೇರುದಾರರೂ ಆಗಿದ್ದರು. ನಗರದಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ನದಿ ಜೋಡಣೆ: ರಾಜ್ಯಕ್ಕೆ ಸಮರ್ಪಕ ಪಾಲು ಬೇಕು'

ನವದೆಹಲಿ: ಕೇಂದ್ರ ಸರ್ಕಾರದ ಪ್ರಸ್ತಾವಿತ ನದಿ ಜೋಡಣೆ ಯೋಜನೆಯಿಂದ ಕರ್ನಾಟಕಕ್ಕೆ ಸಮರ್ಪಕ ಪಾಲು ದೊರೆಯಬೇಕಿದೆ. ಈ ಸಂಬಂಧ ಕೇಂದ್ರ ಜಲಶಕ್ತಿ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ನದಿ ಕಣಿವೆಯಲ್ಲಿ ಲಭ್ಯವಿರುವ ನೀರು, ನದಿ ಜೋಡಣೆಯಿಂದ ದೊರೆಯುವ ನೀರು ನಮ್ಮ ಅಗತ್ಯವನ್ನು ಪೂರೈಸುವಂತಾಗಬೇಕು. ಕೂಡಲೇ ಆಯಾ ರಾಜ್ಯಗಳ ಪಾಲು ನಿರ್ಧಾರವಾಗಬೇಕು ಎಂಬುದು ನಮ್ಮ ನಿಲುವು' ಎಂದರು.

ನದಿ ಜೋಡಣೆಯ ವಿಸ್ತೃತ ಯೋಜನಾ ವರದಿಯನ್ನು ಅಂತಿಮಗೊಳಿಸುವ ಮೊದಲು, ನದಿ ಕಣಿವೆ ವ್ಯಾಪ್ತಿಯ ಎಲ್ಲ ರಾಜ್ಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಕೋರಲಾಗಿದೆ. ರಾಜ್ಯಕ್ಕೆ ನೀರಿನ ನ್ಯಾಯಸಮ್ಮತ ಪಾಲನ್ನು ಪಡೆದುಕೊಳ್ಳಲು ಎಲ್ಲ ರೀತಿಯ ಪ್ರಯತ್ನ ಮಾಡಲಾಗುವುದು ಎಂದು ಅವರು ಹೇಳಿದರು.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಸಂ:ಕೆಆರ್‌ಐಡಿಎಲ್/GST Cell/ಟೆಂಡರ್/2021–22 ದಿನಾಂಕ: 07.02.2022

ಟೆಂಡರ್ ಪ್ರಕಟಣೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆ ಬೆಂಗಳೂರು–09 ರಲ್ಲಿ ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳಿಗೆ GST ಸ್ವೀಕರಿಸುವ / ಪಾವತಿಸುವ, ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಮತ್ತು ಇತರೆ ಪ್ರಕ್ರಿಯೆಗಳ ಉಸ್ತುವಾರಿ ಮಾಡಲು, ಕ್ರೋಢೀಕರಿಸಲು ಮತ್ತು ವರದಿಯನ್ನು ನೀಡಲು 2022–23 ಮತ್ತು 2023–24 ಸಾಲಿಗಾಗಿ GST ಕೋಶವನ್ನು ತೆರೆಯಲು ನಿರ್ಧರಿಸಲಾಗಿದೆ.

ಈ ನಿಟ್ಟಿನಲ್ಲಿ ಅಧಿಕೃತ Charted Accountant ಸಂಸ್ಥೆಗಳಿಂದ ನಿಗದಿಪಡಿಸಿದ ನಿಯಮಗಳಂತೆ ಇ–ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಸಂಸ್ಥೆಗಳು/ಕಂಪನಿಗಳು ಟೆಂಡರ್ ದಾಖಲೆ ಮತ್ತು ವಿವರಗಳನ್ನು ಇ–ಆಡಳಿತ ಸಚಿವಾಲಯದ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿನಾಂಕ: **08.02.2022** ರಿಂದ ಪಡೆಯಬಹುದಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–46010000 / 8068948777. ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ: ಮುಖ್ಯ ಹಣಕಾಸು ಅಧಿಕಾರಿಗಳು, ಕೆಆರ್‌ಐಡಿಎಲ್, ಬೆಂಗಳೂರು. ದೂರವಾಣಿ: 080–28015609

ಸಹಿ/– ಮುಖ್ಯ ಹಣಕಾಸು ಅಧಿಕಾರಿಗಳು
ಕೆಆರ್‌ಐಡಿಎಲ್, ಬೆಂಗಳೂರು

ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ–ಪ.ಜಾತಿ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶ
(ಸರ್ಕಾರದ ಆದೇಶ ಸಂಖ್ಯೆ: ಸಕಇ/10/ಎಸ್‌ಎಲ್‌ಪಿ/2015/ಬೆಂಗಳೂರು ದಿನಾಂಕ: 12.01.2016)
4ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
ಫೋನ್: 080–22868069 | ಇ–ಮೇಲ್:scstntdntcell@gmail.com

2021–22ನೇ ಸಾಲಿನ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯದ ಫಲಾಪೇಕ್ಷಿಗಳಿಂದ ನಿವೇಶನವಿರುವ ವಸತಿ ರಹಿತರಿಗೆ ಅರ್ಜಿ ಆಹ್ವಾನ

–: ವಸತಿ ಯೋಜನೆ :–

ಫಲಾಪೇಕ್ಷಿಗಳಿಗೆ ಆನ್‌ಲೈನ್ / ಆಫ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವೆಬ್‌ಸೈಟ್ **www.adcl.karnataka.gov.in** ಮೂಲಕ ಸಲ್ಲಿಸಬಹುದು ಅಥವಾ ವೆಬ್‌ಸೈಟ್ ಮೂಲಕವು ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಅಗತ್ಯ ದಾಖಲಾತಿಗಳೊಂದಿಗೆ ಆಯಾ ಜಿಲ್ಲಾ ಕಛೇರಿಗೆ ಸಲ್ಲಿಸಬಹುದು. ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಫಲಾಪೇಕ್ಷಿಗಳು ಆಯಾ ಜಿಲ್ಲೆಯಲ್ಲಿನ ನಿಗಮ/ಕೋಶದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯನ್ನು ಸಂಪರ್ಕಿಸಿ ಉಚಿತವಾಗಿ ಅರ್ಜಿಯನ್ನು ಪಡೆದು, ಅರ್ಜಿಯನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ / ಪ.ಜಾತಿ ಅಲೆಮಾರಿ ಅಭಿವೃದ್ಧಿ ಕೋಶ ರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಅರ್ಹತೆ ಇತ್ಯಾದಿಗಳ ಬಗ್ಗೆ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ : 10.02.2022
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 28.02.2022

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ,
ಪ.ಜಾತಿ ಅಲೆಮಾರಿ ಅಭಿವೃದ್ಧಿ ಕೋಶ

ವಾಸಾಸಂಇ/ಬೆಂನ/3259/2021–22

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479/278168 ಫ್ಯಾಕ್ಸ್: 08392–273477
ವೆಬ್‌ಸೈಟ್: www.ballaricity.mrc.gov.in ಇ–ಮೇಲ್: bellarycommissioner@yahoo.co.in

ಸಂಖ್ಯೆ: ಮನಪಾಬ/ತಾಂ/ಡಿ.ಎಂ/ ಡಿ.ಎಂ.ಎಫ್–20–21/18/ಬದಲಿ ಕಾಮಗಾರಿ/ಶಾಂತಿದಾಮ/2020–21 ದಿನಾಂಕ:05.02.2022

ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ **2020–21** ನೇ ಸಾಲಿನ ಅವಧಿಗಾಗಿ ಅನುಮೋದನೆಗೊಂಡ ಬದಲಿ ಕಾಮಗಾರಿಯ ಕ್ರಿಯಾಯೋಜನೆಯ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಪ್ರದೇಶಗಳ ಅಭಿವೃದ್ಧಿ (ಜಿಲ್ಲಾ ಖನಿಜ ಫೌಂಡೇಶನ್ ನಿಧಿ) **(District Mineral Foundation Fund)** ರಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಪ್ರಚಲಿತ ಅವಧಿಗೆ ನೊಂದಾಯಿತ, ಸೂಕ್ತ ದರ್ಜೆಯ ಅರ್ಹ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–4 ರಂತೆ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಇಂಡೆಂಟ್‌ನಂ: DMA/2021-22/OW/Work_ Indent _ 127922. **ಕಾಮಗಾರಿ ಹೆಸರು:** Upgradation of Shanthidhama. **ಅಂದಾಜು ವೆಚ್ಚ** (ರೂ.ಲಕ್ಷಗಳಲ್ಲಿ): 150.00. **ಕೆಲಸದ ಅವಧಿ:** 06 Months (including Rainy Season)

1. ಕಾಮಗಾರಿಯ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ:09.02.2022 ರಿಂದ 25.02.2022ರ 16.30 ಗಂಟೆ ಒಳಗಾಗಿ** ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ **ದಿನಾಂಕ:25.02.2022 ರಂದು 17.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.** **2.** ಕಾಮಗಾರಿಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**28.02.2022** ರ ಬೆಳಿಗ್ಗೆ 11.30 ಗಂಟೆ ನಂತರ. **3.** ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದವರ ಆರ್ಥಿಕ ಬಿಡ್ ತೆರೆಯುವ ದಿನಾಂಕ:**05.03.2022** ರ ಬೆಳಿಗ್ಗೆ 11.30 ಗಂಟೆ ನಂತರ. **4.** ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೊಂದಿರುವ ಕರ್ನಾಟಕ ಸರ್ಕಾರದ ಸೆಂಟ್ರಲ್ ಪೂಲಿಂಗ್ ಅಕೌಂಟ್‌ನಲ್ಲಿ, ಡಾಕ್ಯೂಮೆಂಟ್‌ರಲ್ಲಿ ತಿಳಿಸಿರುವ ಯಾವುದಾದರೂ ಒಂದು ಮಾದರಿಯಲ್ಲಿ ಸಂದಾಯ ಮಾಡುವುದು. **5.** ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ.ನಂ.08392–273479ಗೆ ಪಡೆಯಬಹುದು ಹಾಗೂ ವೆಬ್‌ಸೈಟ್: **http://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/727/ಎಂಸಿಎ/2021–22

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in

ಅಧಿಸೂಚನೆ ಸಂ: ಎನ್.ಹೆಚ್.ಎಂ/ಪಿಆರ್‌ಓಸಿ/06/2021–22 ದಿನಾಂಕ: 05.02.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
For Providing of Manpower Services (Package-I)

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ರವರು ಅರ್ಹ ಮಾನವ ಸಂಪನ್ಮೂಲ ಒದಗಿಸುವ ಏಜೆನ್ಸಿಯಿಂದ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಆಹ್ವಾನಿಸಿದೆ. ಟೆಂಡರ್ ದಾಖಲಾತಿಯನ್ನು ವೆಬ್‌ಸೈಟ್: **www.eproc.karnataka.gov.in** ನಲ್ಲಿ ನೀಡಲಾಗಿದೆ. ಇ–ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯನ್ನು ದಿನಾಂಕ: **08.02.2022 ರಂದು ಬೆಳಿಗ್ಗೆ 11.30 ಗಂಟೆಯ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತಿಯುಳ್ಳ ಏಜೆನ್ಸಿಯು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25.02.2022 ಸಂಜೆ 5.30 ಗಂಟೆಯೊಳಗೆ.** ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರಿಂದ ಕಚೇರಿ ಸಮಯ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
For Providing of Manpower Services (Package-II)

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ರವರು ಅರ್ಹ ಮಾನವ ಸಂಪನ್ಮೂಲ ಒದಗಿಸುವ ಏಜೆನ್ಸಿಯಿಂದ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಆಹ್ವಾನಿಸಿದೆ. ಟೆಂಡರ್ ದಾಖಲಾತಿಯನ್ನು ವೆಬ್‌ಸೈಟ್: **www.eproc.karnataka.gov.in** ನಲ್ಲಿ ನೀಡಲಾಗಿದೆ. ಇ–ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯನ್ನು ದಿನಾಂಕ: **08.02.2022 ರಂದು ಬೆಳಿಗ್ಗೆ 11.30 ಗಂಟೆಯ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತಿಯುಳ್ಳ ಏಜೆನ್ಸಿಯು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25.02.2022 ಸಂಜೆ 5.30 ಗಂಟೆಯೊಳಗೆ.** ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರಿಂದ ಕಚೇರಿ ಸಮಯ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್‌ಸಿಹೆಚ್)
DIPR/DDU/YC/3257/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ,
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 01,
ಬಾಗಲಕೋಟೆ–587102. ದೂರವಾಣಿ ಸಂಖ್ಯೆ: 08354–233372

ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ–1/ಪಿಬಿ–04/ಟೆ.ಪ್ರ. ಸಂಖ್ಯೆ–08/2021–22/2945 ದಿನಾಂಕ: 05/02/2022

ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ವಿವಿಧ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 9.32 ಲಕ್ಷಗಳಿಂದ ರೂ. 221.36 ಲಕ್ಷಗಳ ವರೆಗೆ ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: 22.02.2022 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 23.02.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 25.02.2022 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233372 ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 01, ಬಾಗಲಕೋಟೆ.
DIPR/BGK/RO-NO-540/MCA/2021-22

ಪಟ್ಟಣ ಪಂಚಾಯತ್ ಕಾರ್ಯಾಲಯ, ಕನಕಗಿರಿ.

ಸಂ:ಪ.ಪಂ.ಕ/ಅಮೃತ ನಿರ್ಮಲ ನಗರ ಯೊಜನೆ/2021–22 ದಿನಾಂಕ:– 01.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕನಕಗಿರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಕನಕಗಿರಿ ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000 ರನ್ವಯ ಮತ್ತು ಕೆ.ಡ್ಬ್ಲ್ಯೂ 1 & 2ರ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ http://www.eproc.karnataka.gov.in ನಲ್ಲಿ ಪಿ.ಡಬ್ಲ್ಯೂ.ಡಿ.ಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	2	3
1	Amruth Nirmala Nagar 2021-22 KNKG/MP/AMRUTH/2021-22/	
1	ಘನ ತ್ಯಾಜ್ಯ ವಸ್ತು ವಿಲೇವಾರಿಗಾಗಿ ಸಂಬಂಧಪಟ್ಟಂತೆ ಮಾನವ ಸಂಪನ್ಮೂಲ ನಿಯೋಜನೆ ಮಾಡುವುದು	13.4
2	Amruth Nirmala Nagar 2021-22 DMA/2021-22/OW/WORK_INDENT126591	
1	ಕನಕಗಿರಿ ಪಟ್ಟಣ ವ್ಯಾಪ್ತಿಯಲ್ಲಿನ ವಾರ್ಡ ಸಂ. 8 & 9ರ ರೆಡ್ಡೆರ ಓಣಿಯಲ್ಲಿ ಸಾರ್ವಜನಿಕ ಶೌಚಾಲಯ ಕೂಡು ರಸ್ತೆ ಹಾಗೂ ಸುತ್ತಲೂ ಫೇವರ್ಸ್ ಅಳವಡಿಸುವುದು	28.00
3	Amruth Nirmala Nagar 2021-22 DMA/2021-22/OW/WORK_INDENT126592	
1	ಕನಕಗಿರಿ ನಗರದ ಹಸೀರಿಕರಣ ಹಾಗೂ ಟೀ–ಗಾರ್ಡ್ ಅಳವಡಿಸುವುದು.	5.00
4	15th Finance 2021-22DMA/2021-22 /EL/WORK_INDENT126593	
1	ಕನಕಗಿರಿ ಪಟ್ಟಣ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಸೋಲಾರ್ ವಿದ್ಯೂತ್ ದೀಪ ಅಳವಡಿಸುವ ಕುರಿತು	15.00
5	15th Finance 2021-22DMA/2021-22 /OM/WORK_INDENT126594	
1	ಕನಕಗಿರಿ ಪಟ್ಟಣ ವ್ಯಾಪ್ತಿಯ ವಾಡ್ ಸಂ. 7 ರಲ್ಲಿನ ಸರಕಾರಿ ಪದವಿ ಪೂರ್ವ ಕಾಲೇಜ್ ನಲ್ಲಿ ಹೆಣ್ಣಿ ಮಕ್ಕಳ ಅನುಕೂಲಕ್ಕಾಗಿ ಶೌಚಾಲಯ ನಿರ್ಮಾನ ಕಾಮಗಾರಿ ಕುರಿತು (ಅಂದಾಜು ಮೊತ್ತ 8.00 ಲಕ್ಷಗಳು)	14.00
2	ಕನಕಗಿರಿ ಪಟ್ಟಣ ವ್ಯಾಪ್ತಿಯ ವಾಡ್ ಸಂ. 4 ರಲ್ಲಿ ಕೆ.ಇ.ಬಿ. ಎದರುಗಡೆ ಇರುವ ಸಂಪು ಅಭಿವೃದ್ದಿ ಕಾಮಗಾರಿ(ಅಂದಾಜು ಮೊತ್ತ 6.00 ಲಕ್ಷಗಳು)	
6	15th Finance 2021-22DMA/2021-22 /OM/WORK_INDENT127652	
1	ಕನಕಗಿರಿ ಪಟ್ಟಣದ ಕಲುಷಿತ ನೀರು ಕೊಳಚೆ ನೀರು ಸಂಸ್ಕರಣ ಹಾಗೂ ಘನತ್ಯಾಜ್ಯ ವಿಂಗಡಣೆಗೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಮಾಹಿತಿ ಶಿಕ್ಷಣ ಹಾಗೂ ಸಂವಹನ ಚಟುವಟಿಕೆಗೆ ಹಾಗೂ ನಗರದ ಸೌಂಧರ್ಯಕರಕ್ಕಾಗಿ ಎಸ್.ಬಿ.ಎಮ್. ಕುರಿತು. ಗೀಡೆ ಬರಹ ಬರೆಸುವ ಕುರಿತು. (ಅಂದಾಜು ಮೊತ್ತ ರೂ. 5 ಲಕ್ಷ)	5.00

ಷರತ್ತುಗಳು : **1)** ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:– 11.02.2022 ಸಂಜೆ 4.30 ಗಂಟೆಯವರೆಗೆ **2)** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ:– 13.02.2022 ಬೆಳಿಗ್ಗೆ 11..30 ಗಂಟೆಗೆ ತೆರೆಯಲಾಗುವುದು. **3)** ಪ್ಯಾಕೇಜ್‌ಗಳ ವಿವರಗಳು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗವನ್ನು ಅಥವಾ www.kanakagiritown.mrc.gov.in ನಲ್ಲಿ ಪಡೆಯಬಹುದಾಗಿದೆ. **4)** ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ) : 3 ತಿಂಗಳು **5)** ಪಟ್ಟಣ ಪಂಚಾಯತ್ ಕಾರ್ಯಾಲಯ, ಕನಕಗಿರಿ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ. **6)** ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://www.eproc.karnataka.gov.in) ಮೂಲಕ ಪಡೆಯಬಹುದಾಗಿದೆ. 7) As per Govt Order No. PWD65RDF2017, D:11-10-2018 ರನ್ವಯ ಶೇಕಡಾ 12%ರಷ್ಟು ಜಿ.ಎಸ್.ಟಿ. ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕನಕಗಿರಿ
ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ್ ಕನಕಗಿರಿ

ಮಹಿಳಾ ಸಮಾಖ್ಯ ಕರ್ನಾಟಕ
ನಂ. # 10, ದೀಪಕ್ ದಿವ್ಯ ನಿಲಯ, 2ನೇ ಅಡ್ಡರಸ್ತೆ,
ಆರ್‌ಎಂ.ವಿ. 2ನೇ ಹಂತ, ಸಂಜಯನಗರ, ಬೆಂಗಳೂರು–560 094.
ದೂರವಾಣಿ ಸಂಖ್ಯೆ: 080–23516745 / 46
ಇ–ಮೇಲ್: mskarnataka@gmail.com । ವೆಬ್: www.karnatakamahilasamakhya.org

ಪ್ರಕಟಣೆ

ಮಹಿಳಾ ಸಮಾಖ್ಯಾ ಕರ್ನಾಟಕ ರಾಜ್ಯ ಕಛೇರಿ ಹಾಗೂ ತನ್ನ 18 ಜಿಲ್ಲಾ ಘಟಕಗಳಲ್ಲಿರುವ 1989ರಿಂದ 2010ರ ವರೆಗಿನ ಹಳೆಯ ದಾಖಲೆಗಳ ಅವಧಿ ಪೂರ್ಣಗೊಂಡಿರುವ ಕಾರಣ ಹಾಗೂ ಸ್ಥಳಾವಭಾವದ ಕಾರಣ, ಅವುಗಳನ್ನು ನಾಶಮಾಡಲು ನಿರ್ಧರಿಸಲಾಗಿದೆ, ಇದನ್ನು ಸಾರ್ವಜನಿಕ ಗಮನಕ್ಕೆ ತರಲಾಗುತ್ತದೆ.

ವಾಸಾಸಂಇ/ಬೆಂನ/3261/2021–22
ಸಹಿ/– ರಾಜ್ಯ ಕಾರ್ಯಕ್ರಮ ನಿರ್ದೇಶಕರು.

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆರ್ಥಿಕ ಇಲಾಖೆ,
ವಿಧಾನಸೌಧ, ಬೆಂಗಳೂರು

ಸಂಖ್ಯೆ: ಆಇ 04 ಬಿಎಂಬಿ 2021 ದಿನಾಂಕ: 07.02.2022

ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2011, **ದಿನಾಂಕ: 02ನೇ ಮಾರ್ಚ್, 2012** ನಿಬಂಧನೆಯ ಮೇರೆಗೆ ಹೊರಡಿಸಲಾದ **8.92%** ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿ) 2022, (Karnataka GS, 2022) **ದಿನಾಂಕ: 06ನೇ ಮಾರ್ಚ್ 2022** ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, **ದಿನಾಂಕ: 07ನೇ ಮಾರ್ಚ್ 2022ರಂದು** ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೊಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆ್ಯಕ್ಟ್ 1881 ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **07ನೇ ಮಾರ್ಚ್ 2022ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು, ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **8.92% ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿ) 2022,** (Karnataka GS, 2022) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರು ಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

''ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ''

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರನ್ನೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಚೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಚೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/–
(ಡಾ. ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ವಾಸಾಸಂಇ/ಉನಿ.ನ/78/ಎಂಸಿಎ/2021–22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಂದಾಯ ಇಲಾಖೆ
ನಿರ್ದೇಶಕರ ಕಾರ್ಯಾಲಯ,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಕೆ.ಆರ್. ವೃತ್ತ, ಬೆಂಗಳೂರು.

ಸಂಖ್ಯೆ: ಕಂಇ/ಎಜೆಎಸ್‌ಕೆ/ಆಡಳಿತ–25/2020–21 ದಿನಾಂಕ: 04–02–2022

ಪ್ರಕಟಣೆ

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಲ್ಲಿ ಖಾಲಿ ಇರುವ 5 (ಐದು) **ಸಾಫ್ಟ್‌ವೇರ್ ಡೆವೆಲಪರ್‌ಗಳನ್ನು** ಗುತ್ತಿಗೆ ಆಧಾರದ ಮೇಲೆ ನೇಮಿಸಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗಳಿಗೆ ಮಾಸಿಕ **ರೂ. 80,000/–** ಗಳ ವೇತನವನ್ನು ನಿಗದಿಪಡಿಸಲಾಗಿದ್ದು, ಈ ಕೆಳಕಂಡಂತೆ ವಿದ್ಯಾರ್ಹತೆ ಮತ್ತು ನೈಪುಣ್ಯತೆ ಹೊಂದಿರುವವರಿಗೆ ಆದ್ಯತೆಯನ್ನು ನೀಡಲಾಗುವುದು.

1) Qualification	BE / B.Tech in Computer Science / ECE / IT / Information Science or MCA
2) Experience	4 to 5 years in .net (Asp.net) development of which at least 2 years in MVC Architecture. (C# full stack) development and development in MS SQL and should have experience in Database design, writing stored procedures / Functions, API development.
3) No. of Posts	5
4) Salary	Consolidated Pay of Rs. 80,000/- per month.

ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ದಿನಾಂಕ: **11–02–2022** ರ ಸಂಜೆ **5.30 ಗಂಟೆಯೊಳಗಾಗಿ** ಖುದ್ದಾಗಿ / ಅಂಚೆ ಮೂಲಕ / ಕೊರಿಯರ್ ಮೂಲಕ / ಇ–ಮೇಲ್ **(ajs.directorate1@gmail.com)** ಮೂಲಕ **ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಎಸ್.ಎಸ್.ಎಲ್.ಆರ್. ಕಟ್ಟಡ, ಕೆ.ಆರ್. ಸರ್ಕಲ್, ಬೆಂಗಳೂರು – 560001** ರವರ ಕಾರ್ಯಾಲಯದಲ್ಲಿ ಕಛೇರಿ ಸಮಯದಲ್ಲಿ ಸಲ್ಲಿಸತಕ್ಕದ್ದು.

ಸಹಿ/– ನಿರ್ದೇಶಕರು,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋರ್/3253/2021–22

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2021–22/6103 ದಿನಾಂಕ:04/02/2022

ಅಲ್ಪಾವಧಿ ಇ–ಟೆಂಡರ/ಮರು ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿಯ ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 2378.55 ಲಕ್ಷ ಇರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:14–02–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:15–02–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:17–02–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):19–02–2022 (ಸಾಯಂ ಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1462/MCA/2021-22



‘ಊರ ತೇರು’

‘ಕೋಡಿಯಾಲ್ ತೇರು’ ಎಂದೇ ಖ್ಯಾತವಾಗಿರುವ ಮಂಗಳೂರು ರಥೋತ್ಸವವು ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು. ಈ ಬಾರಿ 201 ನೇ ವರ್ಷದ ರಥೋತ್ಸವ ನಡೆದಿದ್ದು, ನೂತನ ಬ್ರಹ್ಮರಥ ಸಮರ್ಪಣೆ ಯಾಗಿರುವುದು ವಿಶೇಷ. –ಪ್ರಜಾವಾಣಿ ಚಿತ್ರ

ಕುಂದಾಪುರ: ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿ: ಹಲವೆಡೆ ರಜೆ ಘೋಷಣೆ

ಮುಗಿಯದ ಹಿಜಾಬ್, ಶಾಲು ವಿವಾದ

ಪ್ರಜಾವಾಣಿ ವಾರ್ತೆ

ಕುಂದಾಪುರ: ಹಿಜಾಬ್ ಹಾಗೂ ಕೇಸರಿ ಶಾಲು ವಿವಾದ ಸೋಮವಾರವೂ ಮುಂದುವರಿದಿದೆ. ನಗರದ ಸರ್ಕಾರಿ ಪದವಿಪೂರ್ವ ಕಾಲೇಜು ಹಾಗೂ ಬಸ್ರೂರು ಶಾರದಾ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯಲ್ಲಿ ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಆರ್.ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜಿಗೆ ರಜೆ ಘೋಷಣೆ ಮಾಡಲಾಗಿತ್ತು.

ಕುಂದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಕ್ಕೂ ಮೊದಲೇ, ಸಮವಸ್ತ್ರ ಕಡ್ಡಾಯಗೊಳಿಸಿ ಸರ್ಕಾರ ಶನಿವಾರ ಹೊರಡಿಸಿದ್ದ ಆದೇಶದ ಪ್ರತಿ ಅಂಟಿಸಲಾಗಿತ್ತು. ಹಿಜಾಬ್ ಧರಿಸಿ ಕಾಲೇಜಿಗೆ ಬಂದಿದ್ದ ವಿದ್ಯಾರ್ಥಿನಿಯರೊಂದಿಗೆ ಮಾತುಕತೆ ನಡೆಸಿದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು, ಆದೇಶದ ಮಾಹಿತಿಯನ್ನು ನೀಡಿ, ಹಿಜಾಬ್ ತೆಗೆದು ತರಗತಿಗಳಿಗೆ ಹಾಜರಾಗುವಂತೆ ಮನವೊಲಿಸಲು ಪ್ರಯತ್ನಿಸಿದರು. ವಿದ್ಯಾರ್ಥಿನಿಯರು ಒಪ್ಪದ ಕಾರಣ ಅವರಿಗೆ ಕುಳಿತುಕೊಳ್ಳಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಯಿತು. ಕಾಲೇಜು ಪ್ರವೇಶಕ್ಕೂ ಮೊದಲು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಕೆಲ ವಿದ್ಯಾರ್ಥಿನಿಯರು, ‘ನಮ್ಮ ಮಾನ ಮುಚ್ಚಲು ಹಿಜಾಬ್ ಹಾಗೂ ಜ್ಞಾನಾರ್ಜನೆಗಾಗಿ ಶಿಕ್ಷಣವೂ ಅಗತ್ಯ’ ಎಂದು ಹೇಳಿದರು.

ನಗರದ ವೆಂಕಟರಮಣ ಪದವಿ ಪೂರ್ವ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಹಳೆಯ ಬಸ್‌ನಿಲ್ದಾಣದಿಂದ ಕಾಲೇಜಿನ ಆವರಣದವರೆಗೆ ಕೇಸರಿ ಶಾಲು ಧರಿಸಿ ಮೆರವಣಿಗೆ ನಡೆಸಿದರು. ಕಾಲೇಜಿನ ಗೇಟ್ ಬಳಿ ವಿದ್ಯಾರ್ಥಿಗಳನ್ನು ತಡೆದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು, ಸಮವಸ್ತ್ರವನ್ನು ಹೊರತು ಪಡಿಸಿ ಬೇರೆ ಯಾವುದಕ್ಕೂ ಅವಕಾಶವಿಲ್ಲ ಎಂದು ಸ್ಪಷ್ಟ ಪಡಿಸಿದರು. ನಂತರ ವಿದ್ಯಾರ್ಥಿಗಳು ಕೇಸರಿ ಶಾಲು ತೆಗೆದು ತರಗತಿಗೆ ತೆರಳಿದರು.

ಕೋಟೇಶ್ವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರ ಸ್ಪಷ್ಟನೆಯ ನಂತರ ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಯರು ಮನೆಗೆ ತೆರಳಿದ್ದು, ವಿದ್ಯಾರ್ಥಿಗಳು ಕೇಸರಿ ಶಾಲು ತೆಗೆದು ತರಗತಿಗೆ ಹಾಜರಾದರು. ಬಸ್ರೂರಿನ ಶಾರದಾ ಪದವಿ ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಕಾಲೇಜಿಗೆ ಬಂದ ವಿದ್ಯಾರ್ಥಿನಿಯರ ಪೋಷಕರು ಮಕ್ಕಳನ್ನು ಮನೆಗೆ ಕರೆದುಕೊಂಡು ಹೋದರು.

ಹಿಜಾಬ್: ಪರ ವಿರೋಧ ಪ್ರತಿಭಟನೆ



ಶಾಲೆ, ಕಾಲೇಜುಗಳಲ್ಲಿ ಹಿಜಾಬ್ ಧರಿಸಿ ಬರುವುದನ್ನು ವಿರೋಧಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಕಲಬುರಗಿಯಲ್ಲಿ ಪ್ರತಿಭಟನೆ ನಡೆಸಿದರು

ಕಲಬುರಗಿ: ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಕೊಂಡು ಶಾಲೆ, ಕಾಲೇಜಿಗೆ ಬರುವುದನ್ನು ವಿರೋಧಿಸಿ ಶ್ರೀರಾಮ ಸೇನೆಯ ವಿದ್ಯಾರ್ಥಿ ಘಟಕದ ನೇತೃತ್ವದಲ್ಲಿ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿತು.

‘ಹಿಜಾಬ್ ಧರಿಸಿ ತರಗತಿಗೆ ಬರಲು ಸರ್ಕಾರ ಹಾಗೂ ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ಅವಕಾಶ ನೀಡಬಾರದು. ಶಿಕ್ಷಣ ಇಲಾಖೆ ರೂಪಿಸಿದ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಅವರ ಟಿ.ಸಿ. ಕಿತ್ತುಕೊಟ್ಟು ಮನೆಗೆ ಕಳುಹಿಸಬೇಕು’ ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಅಂದೋಲಾದ ಸಿದ್ಧಲಿಂಗ ಸ್ವಾಮೀಜಿ ಆಗ್ರಹಿಸಿದರು.

ಹಿಜಾಬ್‌ಗೆ ಅವಕಾಶ ನೀಡಿ: ಶಾಲಾ–ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ಅವಕಾಶ ಕಲ್ಪಿಸುವಂತೆ ಒತ್ತಾಯಿಸಿ ಮಹಿಳಾ ಸಂಘಟನೆಗಳ ಒಕ್ಕೂಟದಿಂದ ಯಾದಗಿರಿ ಜಿಲ್ಲೆಯ ಶಹಾಪುರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಮಹಿಳಾ ಸಂಘಟನೆಗಳ ಒಕ್ಕೂಟದ ಮುಖ್ಯಸ್ಥೆ ಫಿರ್ದೋಸ್ ಖಾತೂನ್, ಶಕೀರಾ ಬೇಗಂ, ಶಾಹೀನ್, ತಸ್ಲೀಮ್, ಶಕೀರಾ ಬೇಗಂ ಇದ್ದರು.

‘ಯೂಥ್ ವಾಯ್ಸ್ ಆಫ್ ರಾಯಚೂರು’ ಸಂಘಟನೆಯ ನೇತೃತ್ವದಲ್ಲಿ ರಾಯಚೂರಿನಲ್ಲಿ ಪ್ರತಿಭಟನೆ ನಡೆಸಿದ ಮಹಿಳೆಯರು ಹಾಗೂ ಪ್ರಗತಿಪರ ಸಂಘಟನೆಗಳವರು, ಹಿಜಾಬ್‌ಗೆ ಅವಕಾಶ ನೀಡುವಂತೆ ಒತ್ತಾಯಿಸಿದರು.



ಹಿಜಾಬ್ ಧರಿಸಲು ನಿರ್ಬಂಧ ವಿಧಿಸಿರುವುದನ್ನು ತೆರವುಗೊಳಿಸಲು ಆಗ್ರಹಿಸಿ ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿ ಮುಂದೆ ವಿದ್ಯಾರ್ಥಿನಿಯರು ಧರಣಿ ನಡೆಸಿದರು.

ಪ್ರತ್ಯೇಕ ಕೊಠಡಿ

ಬೈಂದೂರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿ ನೀಡಲಾಗಿತ್ತು. ಖಂಬದಕೋಣೆ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸೋಮವಾರ ರಜೆ ಘೋಷಣೆ ಮಾಡಲಾಗಿತ್ತು. ಉಪ್ಪುಂದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದಲ್ಲಿ ಪರೀಕ್ಷೆ ನಡೆಯುತ್ತಿದ್ದ ಕಾರಣ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರು ಹಾಗೂ ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗಿತ್ತು. ನಾವುಂದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗೇಟ್ ಬಳಿಯಲ್ಲಿಯೇ ಪರಿಶೀಲನೆ ನಡೆಸಿ ಸಮವಸ್ತ್ರ ಧರಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ನೀಡಲಾಗಿತ್ತು.

ತರಗತಿ ಬಹಿಷ್ಕಾರ

ಗಂಗೊಳ್ಳಿಯ ಎಸ್.ವಿ.ಎಸ್ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ಪ್ರವೇಶ ಅವಕಾಶ ನಿರಾಕರಿಸಿದ್ದು, ಹಿಜಾಬ್‌ಗೆ ಅವಕಾಶ ನೀಡುವಂತೆ ಆಗ್ರಹಿಸಿ ಕೆಲ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದರು.

ಕಾಲೇಜು ಆಡಳಿತ, ವಿದ್ಯಾರ್ಥಿಗಳ ಪೋಷಕರೊಂದಿಗೆ ಸಭೆ ನಡೆಸಿತು. ಸರ್ಕಾರದ ಆದೇಶ ಪಾಲನೆಗೆ ಕಾಲೇಜು ಬದ್ಧವಾಗಿದ್ದು, ಕಾಲೇಜು ಸಮವಸ್ತ್ರ ಹೊರತುಪಡಿಸಿ ಬೇರೆ ಯಾವುದಕ್ಕೂ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದೆ. ಸಭೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರ ಪೋಷಕರು, ‘ಈ ಶೈಕ್ಷಣಿಕ ಅವಧಿ ಮುಗಿಯಲು ಇನ್ನೂ ಎರಡು ತಿಂಗಳು ಇರುವುದರಿಂದ ಅಲ್ಲಿಯವರೆಗೆ ಹಿಜಾಬ್ ಧಾರಣೆಗೆ ಅವಕಾಶ ನೀಡುವಂತೆ’ ಬೇಡಿಕೆ ಇಟ್ಟರು.

ಶಿವಮೊಗ್ಗ: ಮುಂದುವರಿದ ಸಂಘರ್ಷ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯ ಹಲವು ಕಾಲೇಜುಗಳಲ್ಲಿ ಸೋಮವಾರ ಹಿಜಾಬ್, ಕೇಸರಿ ಶಾಲು ಸಂಘರ್ಷ ಮುಂದುವರಿದಿದ್ದು, ನಿಯಂತ್ರಣಕ್ಕೆ ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಪೊಲೀಸರು ಹರಸಾಹಸಪಟ್ಟರು.

ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಎಟಿಎನ್‌ಸಿ ಕಾಲೇಜುಗಳಲ್ಲೂ ಬೆಳಿಗ್ಗೆ ಕೇಸರಿ ಶಾಲು ಧರಿಸಿ ಬಂದ ಕೆಲವು ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರು ಪ್ರವೇಶ ನಿರಾಕರಿಸಿದರು. ಆಕ್ರೋಶಗೊಂಡ ವಿದ್ಯಾರ್ಥಿಗಳು, ‘ಸಮವಸ್ತ್ರ ಕಡ್ಡಾಯಗೊಳಿಸಬೇಕು. ಹಿಜಾಬ್ ಧರಿಸಿದ ವಿದ್ಯಾರ್ಥಿಗಳನ್ನೂ ಹೊರಗೆ ಕಳುಹಿಸಬೇಕು’ ಎಂದು ಪಟ್ಟುಹಿಡಿದರು.

ತೀರ್ಥಹಳ್ಳಿಯ ಬಾಳೆಬೈಲು ಸರ್ಕಾರಿ ಕಾಲೇಜು, ಭದ್ರಾವತಿಯ ಸರ್.ಎಂ.ವಿ ಕಾಲೇಜುಗಳಲ್ಲೂ ಇಂತಹ ಘಟನೆಗಳು ಮರುಕಳಿಸಿದವು. ತೀರ್ಥಹಳ್ಳಿಯಲ್ಲೂ ಹಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದು ಹಿಜಾಬ್ ನಿಷೇಧಿಸುವಂತೆ ಆಗ್ರಹಿಸಿದರು. ಭದ್ರಾವತಿಯಲ್ಲಿ ‘ಹಿಜಾಬ್’ ನಿಷೇಧ ಹೇರಿದ್ದನ್ನು ವಿರೋಧಿಸಿ ಕಾಲೇಜು ಪ್ರವೇಶ ದ್ವಾರದ ಬಳಿ ವಿದ್ಯಾರ್ಥಿನಿಯರು ಧರಣಿ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ: ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯ ದಮನಿಸುತ್ತಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಹಿಜಾಬ್ ಧರಿಸಲು ಸರ್ಕಾರ ನಿರ್ಬಂಧ ವಿಧಿಸಿದ ಆದೇಶವನ್ನು ಪುನರ್ ಪರಿಶೀಲಿಸಬೇಕು ಎಂದು ಆಗ್ರಹಿಸಿ ಶಿವಮೊಗ್ಗ ಮಹಿಳಾ ಒಕ್ಕೂಟದ ನೇತೃತ್ವದಲ್ಲಿ ಸಾವಿರಾರು ಮುಸ್ಲಿಂ ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿದರು.

ವಿವಾದದ ಹಿಂದೆ ಕಾಣದ ಕೈ: ತನಿಖೆ

‘ಹಿಜಾಬ್ ವಿವಾದದ ಹಿಂದೆ ಕಾಣದ ಕೈಗಳು ಕೆಲಸ ಮಾಡುತ್ತಿರುವ ಶಂಕೆ ವ್ಯಕ್ತವಾಗಿದೆ. ಈ ಕುರಿತು ತನಿಖೆ ನಡೆಸಲು ನಿರ್ದೇಶನ ನೀಡಿದ್ದೇನೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಮಾಹಿತಿ ನೀಡಿದರು.

ತೀರ್ಥಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು. ‘ಹಿಜಾಬ್ ಬಗ್ಗೆ ಯಾವಾಗಲೂ ಇಲ್ಲದ ಒಲವು ದಿಢೀರ್ ಬಂದಿದೆ. ಸರ್ಕಾರದ ಆದೇಶಕ್ಕೂ ಮನ್ನಣೆ ನೀಡದೆ ಕೆಲವು ವಿದ್ಯಾರ್ಥಿಗಳು ಶಾಲೆ ತೊರೆಯುವ ಬೆದರಿಕೆ ಹಾಕುತ್ತಿದ್ದಾರೆ. ಇದರ ಹಿಂದೆ ಯಾವುದೋ ಶಕ್ತಿ ಕೆಲಸ ಮಾಡುತ್ತಿದೆ. ಹಿಜಾಬ್, ಕೇಸರಿ ಶಾಲ್ ಸೇರಿ ಏನೇನೋ ವೇಷ ಹಾಕಿಕೊಂಡು ಬಂದು ಇದು ನನ್ನ ಧರ್ಮ, ಇದು ಅವರ ಧರ್ಮ ಎಂದು ಹೇಳಲು ಕಾಲೇಜುಗಳಲ್ಲಿ ಅವಕಾಶ ನೀಡುವುದಿಲ್ಲ. ಕಾಲೇಜು ಆಡಳಿತ ಮಂಡಳಿಗಳಿಗೆ ರಕ್ಷಣೆ ನೀಡುವಂತೆ ಪೊಲೀಸರಿಗೆ ಸೂಚಿಸಿದ್ದೇನೆ’ ಎಂದರು.

ಮಂಡ್ಯ: ಕೇಸರಿ ಶಾಲಿನೊಂದಿಗೆ ವಿದ್ಯಾರ್ಥಿಗಳು

ಮಂಡ್ಯ: ನಗರದ ಮಂಡ್ಯ ವಿಶ್ವವಿದ್ಯಾಲಯ ಮತ್ತು ಕೆ.ಆರ್.ಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಕೇಸರಿ ಶಾಲು ಧರಿಸಿ ಕಾಲೇಜಿಗೆ ಬಂದವರನ್ನು ಸಿಬ್ಬಂದಿ ಪೊಲೀಸರ ನೆರವಿನಿಂದ ವಾಪಸು ಕಳಿಸಿದರು.

ವಿಶ್ವವಿದ್ಯಾಲಯದಲ್ಲಿ, 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ‘ಭಾರತ್ ಮಾತಾ ಕೀ ಜೈ’ ಘೋಷಣೆ ಕೂಗಿದರು. ಸಿಬ್ಬಂದಿ ಸಮವಸ್ತ್ರ ಧರಿಸಿದ್ದವರಿಗೆ ಪ್ರವೇಶ ನೀಡಿದರು.

‘ಸಮವಸ್ತ್ರ ಹೊರತುಪಡಿಸಿ ಬೇರೆ ಯಾವುದೇ ವಿವಾದಾತ್ಮಕ ಉಡುಪು ಧರಿಸಿ ಬರಬಾರದು’ ಎಂದು ಕುಲಸಚಿವ ರಾಮೇಗೌಡ ಆದೇಶ ಹೊರಡಿಸಿದರು.


ಕೆ.ಆರ್.ಪೇಟೆಯಲ್ಲಿ ಕೇಸರಿ ಶಾಲು ಧರಿಸಿ ತರಗತಿಯೊಳಗೆ ಬಾರದಂತೆ ಸಿಬ್ಬಂದಿ ನೀಡಿದ ಎಚ್ಚರಿಕೆ ನಡುವೆಯೂ ವಿದ್ಯಾರ್ಥಿಗಳು ಬರಲೆತ್ನಿಸಿದಾಗ, ಪ್ರಾಚಾರ್ಯರು ಕಾಲೇಜಿಗೆ ರಜೆ ಘೋಷಣೆ ಮಾಡಿದರು.

ತಿಪಟೂರಿಗೂ ಕಾಲಿಟ್ಟ ವಿವಾದ

ತಿಪಟೂರು: ಇಲ್ಲಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೂ ಹಿಜಾಬ್ ಮತ್ತು ಕೇಸರಿ ಶಾಲು ವಿವಾದ ಕಾಲಿಟ್ಟಿದೆ.

ಪದವಿಪೂರ್ವ ಶಿಕ್ಷಣ ಇಲಾಖೆಯ ಆದೇಶದ ನಡುವೆಯೂ ಸೋಮವಾರ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಯಲ್ಲಿ ಕುಳಿತಿದ್ದರು. ಇದನ್ನು ಖಂಡಿಸಿದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮನೆಗೆ ತೆರಳಿ ಕೇಸರಿ ಶಾಲು ಧರಿಸಿ ಮತ್ತೆ ಬಂದರು. ಈ ಧೋರಣೆಯು ಕ್ಷಣಕಾಲದಲ್ಲಿ ಕಾಲೇಜಿನಲ್ಲಿ ವಾಗ್ವಾದಕ್ಕೆ ಕಾರಣವಾಯಿತು.

‘ಹಿಜಾಬ್ ವಿವಾದ: ಕರಾವಳಿಯ ಕೆಲ ದುಷ್ಟಹಿತಾಸಕ್ತಿ ಕಾರಣ’



ನವದೆಹಲಿ: ‘ಹಿಜಾಬ್ ವಿವಾದವು ವಿದ್ಯಾರ್ಥಿಗಳ ಸೃಷ್ಟಿಯಲ್ಲ. ಇದರ ಹಿಂದೆ ಕರಾವಳಿ ಕರ್ನಾಟಕ ಭಾಗದ, ದುಷ್ಟ ಹಿತಾಸಕ್ತಿ ಹೊಂದಿರುವ ಕೆಲವರ ಕೈವಾಡವಿದೆ’ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೋಮವಾರ ಹೇಳಿದರು.

‘ಈ ವಿಷಯದಲ್ಲಿ ಮುಸಲ್ಮಾನ ಮತ್ತು ಹಿಂದೂ ಸಮುದಾಯದ ವಿದ್ಯಾರ್ಥಿಗಳ ಹಾದಿತಪ್ಪಿಸುವ ಕೆಲಸವಾಗಿದೆ. ವಿದ್ಯಾರ್ಥಿಗಳು ಈ ವಿಷಯದಲ್ಲಿ ಅಮಾಯಕರು’ ಎಂದು ಸಂಸತ್ತಿನ ಹೊರಗಡೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹೇಳಿದರು. ಕರಾವಳಿ ಕರ್ನಾಟಕ ಭಾಗದ ಸಣ್ಣ ರಾಜಕೀಯ ಸಂಘಟನೆಯೊಂದು ಈ ವಿವಾದದ ಕಿಡಿಯನ್ನು ಹೊತ್ತಿಸಿದೆ. ಈಗ ಎರಡೂ ರಾಷ್ಟ್ರೀಯ ಪಕ್ಷಗಳು (ಕಾಂಗ್ರೆಸ್, ಬಿಜೆಪಿ) ಅದರಿಂದ ರಾಜಕೀಯ ಲಾಭವನ್ನು ಪಡೆಯುತ್ತಿವೆ ಎಂದು ಹೇಳಿದರು. ವಿದ್ಯಾರ್ಥಿ ಸಮುದಾಯದ ಭವಿಷ್ಯದ ದೃಷ್ಟಿಯಿಂದ ಈ ವಿವಾದವನ್ನು ಕೂಡಲೇ ಹತ್ತಿಕ್ಕಲು ಕ್ರಮಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಹುಬ್ಬಳ್ಳಿ: ವಿವಿಧ ಕಾಲೇಜುಗಳಲ್ಲಿ ಹಿಜಾಬ್, ಕೇಸರಿ ಶಾಲು ವಿವಾದ

ಕೇಸರಿ ಶಾಲು ಧರಿಸಿ ಬಂದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ ಹಾಗೂ ವಿಜಯನಗರ ಜಿಲ್ಲೆಯ ಕೆಲವು ಕಾಲೇಜುಗಳಲ್ಲಿ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿಗಳ ವಿರುದ್ಧ ಕೆಲವು ವಿದ್ಯಾರ್ಥಿಗಳು ಸೋಮವಾರ ಕೇಸರಿ ಶಾಲು ಹಾಕಿಕೊಂಡು ಬಂದಿದ್ದು ವಾಗ್ವಾದಕ್ಕೆ ಕಾರಣವಾಯಿತು. ಬೋಧಕರು ಮತ್ತು ವಿದ್ಯಾರ್ಥಿಗಳ ನಡುವೆ ಮಾತಿನ ಚಕಮಕಿಯೂ ನಡೆಯಿತು.

‘ಸಿಎಂ ತವರು ಜಿಲ್ಲೆ’ ಹಾವೇರಿಯ ಗಾಂಧಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣೆಬೆನ್ನೂರಿನ ಆರ್.ಟಿ.ಇ.ಎಸ್. ಪದವಿ ಕಾಲೇಜು ಹಾಗೂ ಸವಣೂರು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಪದವಿ ಕಾಲೇಜು ಹಾಗೂ ಕೀರ್ತಿ ಪದವಿ ಕಾಲೇಜಿನಲ್ಲಿ ಕೇಸರಿ ಶಾಲು ಹಾಕಿಕೊಂಡು ವಿದ್ಯಾರ್ಥಿಗಳು ಬಂದಿದ್ದರು.

ಗಾಂಧಿಪುರದ ಪದವಿ ಕಾಲೇಜಿಗೆ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ, ‘ಜೈ ಶ್ರೀರಾಮ್’, ‘ಜೈ ಭವಾನಿ– ಜೈ ಶಿವಾಜಿ’, ‘ಬೋಲೋ ಭಾರತ್ ಮಾತಾಕೀ ಜೈ’ ಮುಂತಾದ ಘೋಷಣೆಗಳನ್ನು ಕೂಗುತ್ತಾ ಕಾಲೇಜು ಗೇಟಿನಿಂದ ಮುಖ್ಯದ್ವಾರದವರೆಗೆ ಬಂದರು. ಕಾಲೇಜು ಪ್ರಾಂಶುಪಾಲರು ಮತ್ತು ಸಿಬ್ಬಂದಿ ವಿದ್ಯಾರ್ಥಿಗಳನ್ನು ತಡೆಯಲು ಪ್ರಯತ್ನಿಸಿದರು.

ಬೋಧಕರು ಮತ್ತು ವಿದ್ಯಾರ್ಥಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ತರಗತಿಗಳನ್ನು ಬಂದ್ ಮಾಡಿ ಬೆಳಿಗ್ಗೆ 11ಕ್ಕೆ ಎಲ್ಲರನ್ನೂ ಹೊರಗಡೆ ಕಳುಹಿಸಿದರು. 40ಕ್ಕೂ ಹೆಚ್ಚು ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಪೊಲೀಸರು ಸ್ಥಳಕ್ಕೆ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು. ಪ್ರಾಂಶುಪಾಲರ ಕಚೇರಿಯಲ್ಲಿ ಸಭೆ ನಡೆಸಲಾಯಿತು.

ವಿಜಯನಗರ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರ ಕಾಲೇಜಿಗೆ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಬಂದಿದ್ದರಿಂದ ತರಗತಿಗಳಿಗೆ ಹಾಜರಾಗಲು ಪ್ರಾಚಾರ್ಯ ಡಿ.ರವೀಂದ್ರಗೌಡ ನಿರಾಕರಿಸಿದರು. ‘ಸಮವಸ್ತ್ರ ಧರಿಸಿಕೊಂಡು ಬಂದವರಿಗಷ್ಟೇ ಕಾಲೇಜಿನೊಳಗೆ ಬರಲು ಅನುಮತಿ ನೀಡಲಾಗುವುದು’ ಎಂದು ಪ್ರಾಚಾರ್ಯರು ತಿಳಿಸಿದ ನಂತರ ವಿದ್ಯಾರ್ಥಿಗಳು ಮರಳಿದರು.

ವಿಜಯಪುರ ಜಿಲ್ಲೆ ಇಂಡಿ ಪಟ್ಟಣದ ಶಾಂತೇಶ್ವರ ಪಿಯುಸಿ ಕಾಲೇಜು ಹಾಗೂ ಜಿ.ಆರ್.ಬಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ತರಗತಿಗೆ ಹಾಜರಾಗಿದ್ದರು. ಈ ಸಂಬಂಧ ತುರ್ತು ಸಭೆ ನಡೆಸಿದ ಎರಡೂ ಕಾಲೇಜುಗಳ ಆಡಳಿತ ಮಂಡಳಿಗಳು ತಕ್ಷಣ ಕಾಲೇಜುಗಳಿಗೆ ರಜೆ ನೀಡಿದರು. ಮಂಗಳವಾರದಿಂದ ಸಮವಸ್ತ್ರ ಹಾಕಿಕೊಂಡು ಬರುವಂತೆ ಸೂಚನೆ ನೀಡಿದರು.

ಬಾಗಲಕೋಟೆ ಜಿಲ್ಲೆಯ ಅಮೀನಗಡ ಸಮೀಪದ ಗುಡೂರ ಗ್ರಾಮದ ಸರ್ಕಾರಿ ಪದವಿ ಕಾಲೇಜಿನ 36 ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಬಂದಿದ್ದರು. ಉಪನ್ಯಾಸಕರು ಮತ್ತು ಕಾಲೇಜು ಆಡಳಿತ ಮಂಡಳಿಯವರ ಸೂಚನೆ ಮೇರೆಗೆ ಶಾಲು ತೆಗೆದಿಟ್ಟು ತರಗತಿಗೆ ಹಾಜರಾದರು.

ಮುಸ್ಲಿಂ ಮಹಿಳೆಯರಿಂದ ಪ್ರತಿಭಟನೆ

ವಿಜಯಪುರ ಜಿಲ್ಲೆ ಸಿಂದಗಿ ಪಟ್ಟಣದಲ್ಲಿ ಮುಸ್ಲಿಂ ಮಹಿಳೆಯರು ಸಮಾನ ಮನಸ್ಕ ಮಹಿಳೆಯರ ವೇದಿಕೆಯಡಿ ಹಿಜಾಬ್ ಬೆಂಬಲಿಸುವ ಭಿತ್ತಿಪತ್ರಗಳನ್ನು ಕೈಯಲ್ಲಿ ಹಿಡಿದು ಸೋಮವಾರ ಪ್ರತಿಭಟನೆ ನಡೆಸಿದರು.

ದಲಿತ ವಿದ್ಯಾರ್ಥಿ ಪರಿಷತ್ ಪ್ರತಿಭಟನೆ: ರಾಜ್ಯದಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಧರಿಸುವ ಹಿಜಾಬ್ ಹೆಸರಿನಲ್ಲಿ ಶಾಂತಿ ಸುವ್ಯವಸ್ಥೆ ಹಾಳು ಮಾಡುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಲು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ವಿಜಯಪುರ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಸಿದ್ದರಾಮಯ್ಯ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋತರು. ಬಾದಾಮಿ ಕ್ಷೇತ್ರ ಮುಗಿಯಿತು. ಈಗ ಚಾಮರಾಜಪೇಟೆ ಕ್ಷೇತ್ರದ ಮೇಲೆ ಕಣ್ಣು ಬಿದ್ದಿದೆ. ಹೀಗಾಗಿ ಹಿಜಾಬ್ ವಿಷಯವನ್ನು ಎಳೆದಾಡುತ್ತಿದ್ದಾರೆ

ಆರ್.ಅಶೋಕ, ಕಂದಾಯ ಸಚಿವ

ಹಿಜಾಬ್ ವಿಷಯದಲ್ಲಿ ಸರ್ಕಾರ ಗೊಂದಲ ಮೂಡಿಸುತ್ತಿದೆ. ಈ ವಿಚಾರ ಕೋರ್ಟ್‌ನಲ್ಲಿದೆ. ತೀರ್ಪು ಬರುವ ಮುನ್ನವೇ ಸರ್ಕಾರ ಸಮಸ್ಯೆ ಬಿಗಡಾಯಿಸಲು ಹೊರಟಿದೆ

ಯು.ಟಿ. ಖಾದರ್, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

ನೀಲಿ – ಕೇಸರಿ ಶಾಲು ಧಾರಣೆ

ಚಿಕ್ಕಮಗಳೂರು: ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಹಿಜಾಬ್ ಬೆಂಬಲಿಸಿ ಮತ್ತು ವಿರೋಧಿಸಿ ಸೋಮವಾರ ಪ್ರತಿಭಟನೆಗಳು ನಡೆದವು. ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬಂದಿದ್ದರು.

ನೀಲಿ ಶಾಲು ಧರಿಸಿದ್ದ ವಿದ್ಯಾರ್ಥಿಗಳ ಗುಂಪು ಹಿಜಾಬ್‌ಗೆ ಬೆಂಬಲ ಹಾಗೂ ಕೇಸರಿ ಶಾಲು ಧರಿಸಿದ್ದ ಗುಂಪು ವಿರೋಧ ವ್ಯಕ್ತಪಡಿಸಿತ್ತು. ‘ಹಿಜಾಬ್ ನಮ್ಮ ಹಕ್ಕು, ಅದನ್ನು ಬಿಡಲ್ಲ’ ಎಂದು ಮುಸ್ಲಿಂ ವಿದ್ಯಾರ್ಥಿನಿಯರು ಪಟ್ಟು ಹಿಡಿದರು.

ಕೇಸರಿ ಶಾಲು ಧರಿಸಿದ್ದವರು ‘ಜೈ ಶ್ರೀರಾಮ್’ ಘೋಷಣೆ, ನೀಲಿ ಶಾಲು ಧರಿಸಿದ್ದವರು ‘ಜೈ ಭೀಮ್’ ಘೋಷಣೆ ಕೂಗಿದರು. ಪರಿಸ್ಥಿತಿ ಕೈಮೀರದಂತೆ ಉಪನ್ಯಾಸಕರು ತಡೆದರು. ಪೊಲೀಸರು ವಿದ್ಯಾರ್ಥಿಗಳನ್ನು ಚದುರಿಸಿ ಗೇಟಿನಿಂದ ಹೊರಕ್ಕೆ ಕಳಿಸಿದರು. ಪ್ರಾಂಶುಪಾಲ ಕೆ.ಎ. ರಾಜಣ್ಣ ಅವರು ಕಾಲೇಜಿಗೆ ರಜೆ ಘೋಷಿಸಿದರು. ‘ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಒಂದು ತೀರ್ಮಾನ ಕೈಗೊಳ್ಳಲಾಗುವುದು’ ಎಂದು ರಾಜಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮೈಸೂರಿನಲ್ಲಿ ಪ್ರತಿಭಟನೆ

ಮೈಸೂರು: ‘ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ಅವಕಾಶ ನೀಡಬೇಕು’ ಎಂದು ಆಗ್ರಹಿಸಿ ರಾಜ್ಯ ಮಹಿಳಾ ಒಕ್ಕೂಟದ ಕಾರ್ಯಕರ್ತರು ಇಲ್ಲಿನ ಫೌಂಟೇನ್ ವೃತ್ತದ ಸಮೀಪ ಸೋಮವಾರ ಪ್ರತಿಭಟನೆ ನಡೆಸಿದರು.

‘ಬಿಜೆಪಿಯಿಂದ ಮತ ರಾಜಕೀಯಕ್ಕೆ ಹಿಜಾಬ್ ಬಳಕೆ’

ಬೆಂಗಳೂರು: ‘ಹಿಜಾಬ್ ವಿಷಯವನ್ನು ಬಿಜೆಪಿಯವರು ಮತ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಹಿಜಾಬ್ ವಿಚಾರ ನ್ಯಾಯಾಲಯದಲ್ಲಿದೆ. ಆದೇಶ ಏನು ಬರುತ್ತೋ ನೋಡೋಣ’ ಎಂದರು. ‘ಹಿಜಾಬ್ ವಿಚಾರದಲ್ಲಿ ರಾಜಕೀಯ ಬೇಡ. ನಾವು ಮಕ್ಕಳಲ್ಲಿ ವಿಷ ಬೀಜ ಬಿತ್ತಬಾರದು’ ಎಂದು ಶಾಸಕ ಎಂ.ಬಿ. ಪಾಟೀಲ ಹೇಳಿದರು.

‘ಮೊದಲು ಹಿಜಾಬ್ ಇರಲಿಲ್ಲವೇ? ಅದನ್ನು ಮುಂದುವರೆಸಿಕೊಂಡು ಹೋಗಬೇಕು. ಇದರಲ್ಲಿ ರಾಜಕೀಯ ದುರುದ್ದೇಶ ಇರಬಾರದು. ನಾನು ಕೂಡ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದೇನೆ. 35 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ನಾವು ಎಂದೂ ಮಕ್ಕಳ ಮೇಲೆ ಪ್ರಭಾವ ಬೀರಿಲ್ಲ’ ಎಂದರು.

ಚಿತ್ರದುರ್ಗದಲ್ಲಿ ಹಿಜಾಬ್ ಪರ ಪ್ರತಿಭಟನೆ

ಚಿತ್ರದುರ್ಗ: ಮುಸ್ಲಿಂ ವಿದ್ಯಾರ್ಥಿನಿಯರಿಗೆ ಕಾಲೇಜು ಸಮವಸ್ತ್ರದ ಜೊತೆಗೆ ಹಿಜಾಬ್ ಧರಿಸಲು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿ ಮಹಿಳಾ ಹಕ್ಕು ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಮುಸ್ಲಿಂ ಮಹಿಳೆಯರು ಸೋಮವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಸಂಜೆ ಜಮಾಯಿಸಿದ ಮುಸ್ಲಿಂ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಹಿಜಾಬ್ ಧರಿಸಲು ಅವಕಾಶ ನೀಡಿ



ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಹಾಸನದಲ್ಲಿ ಮುಸ್ಲಿಂ ಸಮುದಾಯದ ಮಹಿಳೆಯರು ಮೆರವಣಿಗೆ ನಡೆಸಿದರು.

ಹಾಸನ: ‘ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ಅವಕಾಶ ನೀಡಬೇಕು’ ಎಂದು ಆಗ್ರಹಿಸಿ ಮುಸ್ಲಿಂ ಮಹಿಳಾ ಸಂಘಟನೆಗಳ ಒಕ್ಕೂಟದ ನೂರಾರು ಮಹಿಳೆಯರು ಸೋಮವಾರ ಹೇಮಾವತಿ ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆ ನಡೆಸಿದರು. ‘ಹಿಜಾಬ್ ನಮ್ಮ ಹಕ್ಕು, ಧರಿಸಲು ಅವಕಾಶ ನೀಡಿ’ ಎಂದು ಘೋಷಣೆ ಕೂಗಿದರು.

ಚಾಮರಾಜನಗರದಲ್ಲೂ ಪ್ರತಿಭಟನೆ: ಹಿಜಾಬ್ ಧರಿಸಲು ಅವಕಾಶ ನಿರಾಕರಿಸುವುದನ್ನು ಖಂಡಿಸಿ ಜಿಲ್ಲಾ ಮಹಿಳಾ ಒಕ್ಕೂಟದ ನೇತೃತ್ವದಲ್ಲಿ ನೂರಾರು ಮುಸ್ಲಿಂ ವಿದ್ಯಾರ್ಥಿನಿಯರು, ಮಹಿಳೆಯರು ನಗರದ ಲಾರಿ ನಿಲ್ದಾಣದಿಂದ ಜಿಲ್ಲಾಡಳಿತ ಭವನದವರೆಗೆ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಕೇಸರಿ ಶಾಲು–ಹಿಜಾಬ್ ಪರ ವಿರುದ್ಧ ವಾಗ್ವಾದ

ಮಡಿಕೇರಿ: ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಹಾಗೂ ಶನಿವಾರಸಂತೆಯ ಭಾರತಿ ವಿದ್ಯಾಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿಗೆ ಕೆಲವು ವಿದ್ಯಾರ್ಥಿಗಳು ಸೋಮವಾರ ಕೇಸರಿ ಶಾಲು ಧರಿಸಿ ಬಂದಿದ್ದರಿಂದ ಗೊಂದಲದ ಸನ್ನಿವೇಶ ನಿರ್ಮಾಣವಾಗಿತ್ತು.

‘ಎರಡೂ ಗುಂಪಿನ ವಿದ್ಯಾರ್ಥಿಗಳ ಮನವೊಲಿಸುವ ಪ್ರಯತ್ನ ಮಾಡಲಾಗಿದೆ. ಸರ್ಕಾರದ ಆದೇಶ ಪಾಲಿಸಲು ಸೂಚಿಸಲಾಗಿದೆ. ಆಡಳಿತ ಮಂಡಳಿ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಪ್ರಾಂಶುಪಾಲ ಚೌರಿರ ಜಗತ್ ತಿಮ್ಮಯ್ಯ ತಿಳಿಸಿದರು.

ಕೇಸರಿ ಶಾಲು ಮತ್ತು ಹಿಜಾಬ್ ಧರಿಸಿ ಬಂದವರು, ಅದನ್ನು ತೆಗೆದ ಬಳಿಕವಷ್ಟೇ ಭಾರತಿ ವಿದ್ಯಾಸಂಸ್ಥೆಯ ಕಾಲೇಜಿನೊಳಗೆ ಬರಲು ಅವಕಾಶ ನೀಡಲಾಯಿತು.

ಮೈಸೂರಿನಲ್ಲಿ ಸಚಿವ ನಾಗೇಶ್‌ಗೆ ಘೇರಾವ್

ಮೈಸೂರು: ಹಿಜಾಬ್ ನಿರ್ಬಂಧ ವಿಚಾರವಾಗಿ ನಗರದಲ್ಲಿ ಸೋಮವಾರ ವಿವಿಧ ಸಂಘಟನೆಗಳ ಮುಖಂಡರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಘೇರಾವ್ ಹಾಕಿದರು.

ಸ್ವರಾಜ್ ಇಂಡಿಯಾ ಪಕ್ಷದ ಉಗ್ರನರಸಿಂಹೇಗೌಡ, ರೈತ ಮುಖಂಡ ಹೊಸಕೋಟೆ ಬಸವರಾಜು, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಸಚಿವರನ್ನು ಸುತ್ತುವರಿದು ಮಾತಿನ ಚಕಮಕಿ ನಡೆಸಿದರು.

‘ಹಿಜಾಬ್ ಧರಿಸುವುದು ಅಪರಾಧವೇ? ಸಮವಸ್ತ್ರದ ಜೊತೆಗೆ ಹಿಜಾಬ್ ಧರಿಸಿದರೆ ನಿಮಗೇನು ಸಮಸ್ಯೆ’ ಎಂದು ಉಗ್ರನರಸಿಂಹೇಗೌಡ ಪ್ರಶ್ನಿಸಿದರು.

ಸಚಿವರು ಮಾತನಾಡಿ, ‘ಈ ಹಿಂದೆ ರಾಜ್ಯದ ಯಾವುದೇ ಶಾಲೆಗೆ ಯಾರೂ ಹಿಜಾಬ್ ಧರಿಸಿ ಬಂದಿಲ್ಲ. ಉಡುಪಿಯಲ್ಲಿ 15 ದಿನಗಳ ಹಿಂದೆ ಸಮಸ್ಯೆ ಉದ್ಭವಿಸಿತು. ಹೀಗಾಗಿ, ಕಾನೂನು ಪ್ರಕಾರ ಸಮವಸ್ತ್ರ ಧರಿಸಿ ಬರಬೇಕು ಎಂಬುದಾಗಿ ಸೂಚಿಸಿದ್ದೇವೆ’ ಎಂದರು.



ಮೈಸೂರಿನಲ್ಲಿ ಸೋಮವಾರ ಸಚಿವ ಬಿ.ಸಿ.ನಾಗೇಶ್ ಅವರಿಗೆ ಘೇರಾವ್ ಹಾಕಿದ ವಿವಿಧ ಸಂಘಟನೆಗಳ ಮುಖಂಡರು. ಉಗ್ರನರಸಿಂಹೇಗೌಡ, ಹೊಸಕೋಟೆ ಬಸವರಾಜು, ಕೆ.ಎಸ್.ಶಿವರಾಮು ಇದ್ದಾರೆ

‘ನ್ಯಾಯಾಲಯ ಆದೇಶದಂತೆ ಕಾನೂನು ಜಾರಿ’

‘ಹಿಜಾಬ್ ವಿವಾದ ಕುರಿತ ನ್ಯಾಯಾಲಯದ ಆದೇಶಕ್ಕೆ ಕಾಯುತ್ತಿದ್ದು, ಆದೇಶ ಬಂದ ಬಳಿಕ ಕಾನೂನು ಕ್ರಮದ ಕುರಿತು ಚರ್ಚೆ ನಡೆಸಲಾಗುವುದು’ ಎಂದು ಸಚಿವ ಬಿ.ಸಿ.ನಾಗೇಶ್ ತಿಳಿಸಿದರು. ‘ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳು ದೇಶದ ಕಾನೂನು ಪಾಲಿಸುತ್ತಿದ್ದಾರೆ. ಸಂತೋಷದಿಂದ ಶಾಲೆಗೆ ಬಂದು ಪಾಠ ಕೇಳುತ್ತಿದ್ದಾರೆ. ಹಿಜಾಬ್ ಹಾಕಿಕೊಂಡು ಬಂದವರೂ ಮನವಿ ಮೇರೆಗೆ ಬಿಚ್ಚಿಟ್ಟು ಒಳ ಹೋಗಿದ್ದಾರೆ. ಯಾವುದೋ ಎರಡು ಕಾಲೇಜಿನ ಮುಗ್ಧ ಮಕ್ಕಳ ಮನಸ್ಸನ್ನು ಕೆಲವರು ಕೆಡಿಸಿದ್ದಾರಷ್ಟೇ’ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ: ಸಂಪುಟ ಚರ್ಚೆ

ವಿಸ್ತರಣೆಯೋ, ಪುನರ್ ರಚನೆಯೋ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸೋಮವಾರ ರಾತ್ರಿ ಭೇಟಿ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚಿಸಿದ್ದಾರೆ.

ಮುಂದಿನ ವರ್ಷ ವಿಧಾನಸಭೆಗೆ ಚುನಾವಣೆ ಇರುವುದರಿಂದ ಪುನರ್ ರಚನೆ ನೆಪದಲ್ಲಿ ಕೆಲವರನ್ನು ಕೈಬಿಟ್ಟು, ಹೊಸಬರಿಗೆ ಅವಕಾಶ ನೀಡಿದಲ್ಲಿ ಬಂಡಾಯದ ಸಾಧ್ಯತೆ ಇದೆ. ಹಾಗಾಗಿ, ಸಂಪುಟ ವಿಸ್ತರಣೆಗೇ ಮುಂದಾಗುವಂತೆ ಸೂಚಿಸಿರುವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಚರ್ಚಿಸುವಂತೆಯೂ ಸೂಚಿಸಿದ್ದಾರೆ ಎಂದು ಪಕ್ಷದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಯ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ ನಡ್ಡಾ ಅವರನ್ನು ಮಂಗಳವಾರ ಭೇಟಿ ಮಾಡಲಿರುವ ಬೊಮ್ಮಾಯಿ, ಈ ಸಂಬಂಧ ಚರ್ಚಿಸುವ ಸಾಧ್ಯತೆ ಇದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿರುವ ಬೊಮ್ಮಾಯಿ, ಸಚಿವ ಸಂಪುಟದ ವಿಸ್ತರಣೆ ಅಥವಾ ಪುನರ್ ರಚನೆಗೆ ಮನವಿ ಸಲ್ಲಿಸುವ ಕುರಿತು ಚರ್ಚೆ ನಡೆಸಿದರು ಎಂದು ತಿಳಿದುಬಂದಿದೆ.

ಶೆಟ್ಟರ್ ಭೇಟಿ: ಪಕ್ಷದ ಹಿರಿಯ ಮುಖಂಡ ಜಗದೀಶ ಶೆಟ್ಟರ್ ಅವರು ಸೋಮವಾರ ಮಧ್ಯಾಹ್ನ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರೊಂದಿಗೆ ನವದೆಹಲಿಗೆ ಬಂದಿದ್ದಾರೆ.

ಬಹುಶಃ ವರಿಷ್ಠರ ಭೇಟಿಯ ಉದ್ದೇಶದಿಂದಲೇ ಇಲ್ಲಿಗೆ ಬಂದಿರುವ ಅವರು, ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ವಾಸ್ತವ್ಯ ಹೂಡಿದ್ದರಿಂದ ಖಾಸಗಿ ಹೋಟೆಲ್‌ಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ದೇವದಾಸಿಯರ ಮಕ್ಕಳಿಗೆ ವಸತಿ ಶಾಲೆಯಲ್ಲಿ ಶಿಕ್ಷಣ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವದಾಸಿಯರು ಹಾಗೂ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಾನೂನಿನ ಅರಿವಿನ ಕೊರತೆಯಿಂದಾಗಿ ಈಗಲೂ ಈ ಅನಿಷ್ಟ ಪದ್ಧತಿಯಲ್ಲಿ ನರಳುತ್ತಿದ್ದಾರೆ. ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವ ಮೂಲಕ ಅವರನ್ನು ಈ ಪಿಡುಗಿನಿಂದ ವಿಮುಖರನ್ನಾಗಿ ಮಾಡಬೇಕು. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಘಟಕ ಹಮ್ಮಿಕೊಂಡಿದ್ದ ‘ದೌರ್ಜನ್ಯದ ದೇವದಾಸಿ ಪದ್ಧತಿ ಮತ್ತು ಸರ್ಕಾರಗಳು’ ಕುರಿತ ವಿಚಾರ ಸಂಕಿರಣದಲ್ಲಿ ಸೋಮವಾರ ಮಾತನಾಡಿದರು.

‘ದೇವದಾಸಿಯರ ಮಕ್ಕಳು ಶಾಲೆಗಳಿಂದ ಹೊರಗುಳಿಯದಂತೆ ಕ್ರಮ ಕೈಗೊಳ್ಳಬೇಕು. ವಸತಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಒದಗಿಸಬೇಕು. ದೇವದಾಸಿಯರಲ್ಲಿ ಕಾನೂನಿನ ಅರಿವು ಮೂಡಿಸಬೇಕು. ಅವರಿಗೆ ಕೆಲಸ ನೀಡಿ ಅದಕ್ಕೆ ಅನುಗುಣವಾಗಿ ಕೂಲಿ ನಿಗದಿಪಡಿಸಬೇಕು. ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಆ ಮೂಲಕ ಈ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಸರ್ಕಾರ ಪ್ರಯತ್ನಿಸಬೇಕು’ ಎಂದು ಆಗ್ರಹಿಸಿದರು.

‘ದೇವದಾಸಿಯರು ಮೌಢ್ಯದಿಂದ ಹೊರಬರಬೇಕು. ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವೈಜ್ಞಾನಿಕ ಚಿಂತನೆ ರೂಢಿಸಿಕೊಳ್ಳಬೇಕು. ಎಲ್ಲದಕ್ಕೂ ಸರ್ಕಾರದ ಮೇಲೆ ಅವಲಂಬನೆಯಾಗದೆ ಸ್ವವಿವೇಚನೆಯಿಂದ ನಿರ್ಧಾರಗಳನ್ನು ಕೈಗೊಳ್ಳಬೇಕು. ರಾಜ್ಯದಲ್ಲಿರುವ ದೇವದಾಸಿಯರ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಬೇಕು’ ಎಂದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳದ ಕುರಿತು ನಾನು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಅದರಲ್ಲಿ ದೇವದಾಸಿಯರ ಸಮಸ್ಯೆಗಳ ಕುರಿತು ಉಲ್ಲೇಖಿಸಿದ್ದೆ. ಅವರ ಶ್ರೇಯೋಭಿವೃದ್ಧಿಗೆ ಅಗತ್ಯವಿರುವ ಕಾರ್ಯಕ್ರಮಗಳನ್ನೂ ಸೂಚಿಸಿದ್ದೆ’ ಎಂದರು.



ನಗರದಲ್ಲಿ ಸೋಮವಾರ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಆಯೋಜಿಸಿದ್ದ ‘ದೌರ್ಜನ್ಯದ ದೇವದಾಸಿ ಪದ್ಧತಿ ಮತ್ತು ಸರ್ಕಾರಗಳು’ ವಿಚಾರ ಸಂಕಿರಣದಲ್ಲಿ ನಿವೃತ್ತ ನ್ಯಾಯಾಧೀಶ ಎಚ್.ಎನ್.ನಾಗಮೋಹನ ದಾಸ್ ದೇವದಾಸಿ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದರು –ಪ್ರಜಾವಾಣಿ ಚಿತ್ರ

ಸಮಾಜವಾದಿ ಪಕ್ಷದ ವಿರುದ್ಧದ ಟೀಕೆ ತೀವ್ರಗೊಳಿಸಿದ ಪ್ರಧಾನಿ ಮೋದಿ, ಮುಖ್ಯಮಂತ್ರಿ ಆದಿತ್ಯನಾಥ

‘ಎಸ್‌ಪಿ ಗೆದ್ದರೆ ಅಪರಾಧಿಗಳ ಕನಸು ನನಸು’

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮೈತ್ರಿಕೂಟದ ವಿರುದ್ಧದ ವಾಗ್ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇನ್ನಷ್ಟು ಹರಿತಗೊಳಿಸಿದ್ದಾರೆ. ಎಸ್‌ಪಿ ಅಧಿಕಾರಕ್ಕೆ ಬಂದರೆ ಅಪರಾಧಿಗಳ ಕನಸು ನನಸಾದಂತಾಗುತ್ತದೆ ಎಂದು ಮೋದಿ ಆಪಾದಿಸಿದರೆ, ಎಸ್‌ಪಿಯಲ್ಲಿರುವವರು ‘ಕಳ್ಳರು’ ಎಂದು ಯೋಗಿ ಹೇಳಿದ್ದಾರೆ.

‘ಬಿಜೆಪಿ ಅಧಿಕಾರಕ್ಕೆ ಬಂದರೆ ನೀವು ಸುರಕ್ಷಿತವಾಗಿರುತ್ತೀರಿ. ಎಸ್‌ಪಿ ಅಧಿಕಾರಕ್ಕೆ ಬಂದರೆ ಗೂಂಡಾಗಳ ಕನಸು ನನಸಾಗುತ್ತದೆ’ ಎಂದು ವರ್ಚುವಲ್ ರ‍್ಯಾಲಿಯಲ್ಲಿ ಮೋದಿ ಅವರು ಹೇಳಿದ್ದಾರೆ. ಆದಿತ್ಯನಾಥ ನೇತೃತ್ವದ ಸರ್ಕಾರವು ಜೈಲಿಗೆ ಕಳುಹಿಸಿದ ಅಪರಾಧಿಗಳು ರಾಜ್ಯದಲ್ಲಿ ಸರ್ಕಾರ ಬದಲಾಗಲಿ ಎಂದು ಪ್ರಾರ್ಥಿಸುತ್ತಿದ್ದಾರೆ. ಸರ್ಕಾರ ಬದಲಾದರೆ ಅವರೆಲ್ಲರೂ ಜೈಲಿನಿಂದ ಹೊರಗೆ ಬಂದು ಲೂಟಿ ಮತ್ತು ದರೋಡೆಯ ತಮ್ಮ ಕಾರ್ಯಚಟುವಟಿಕೆ ಮುಂದುವರಿಸುತ್ತಾರೆ ಎಂದು ಮೋದಿ ಆಪಾದಿಸಿದ್ದಾರೆ.

ಈ ಅಪರಾಧಿಗಳ ಸಹಚರರು ಅಧಿಕಾರಕ್ಕೆ ಬರುವುದಕ್ಕಾಗಿ ಜಾತಿಯ ಹೆಸರಿನಲ್ಲಿ ಜನರನ್ನು ವಿಭಜಿಸುತ್ತಿದ್ದಾರೆ. ಇಂತಹ ಷಡ್ಯಂತ್ರಗಳ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಮೋದಿ ಹೇಳಿದ್ದಾರೆ.

ಎಸ್‌ಪಿ ಮತ್ತು ಬಿಎಸ್‌ಪಿ ಅಧಿಕಾರದಲ್ಲಿ ಇದ್ದಾಗ ಜನರು ಕತ್ತಲಲ್ಲಿಯೇ ಇರಬೇಕಾಗಿತ್ತು. ಏಕೆಂದರೆ, ಚಂದ್ರನ ಬೆಳಕು ಮಾತ್ರ ಇರುವುದು ಕಳ್ಳರಿಗೆ ಬೇಕಾಗಿತ್ತು ಎಂದು ಆದಿತ್ಯನಾಥ ಟೀಕಿಸಿದ್ದಾರೆ. ಕೋಮು ಗಲಭೆಯ ವಿಚಾರವನ್ನು ಅವರು ಮತ್ತೆ ಉಲ್ಲೇಖಿಸಿದ್ದಾರೆ. ಹಿಂದೂಗಳು ಕೆಲವು ಸ್ಥಳಗಳಿಂದ ವಲಸೆ ಹೋಗಬೇಕಾಯಿತು. ಜನರು ಸುರಕ್ಷಿತವಾಗಿ ಇರುವುದನ್ನು ಬಿಜೆಪಿ ನೇತೃತ್ವದ ಸರ್ಕಾರವು ಖಾತರಿಪಡಿಸಿದೆ. ಹಾಗೆಯೇ ಅಪರಾಧಿಗಳನ್ನು ಜೈಲಿಗೆ ಅಟ್ಟಲಾಗಿದೆ ಇಲ್ಲವೇ ಅವರು ರಾಜ್ಯ ಬಿಟ್ಟು ಪಲಾಯನ ಮಾಡಿದ್ದಾರೆ ಎಂದು ಯೋಗಿ ಪ್ರತಿಪಾದಿಸಿದ್ದಾರೆ.

ಉತ್ತರ ಪ್ರದೇಶದ ಬಿಜ್ನೋರ್‌ನಲ್ಲಿ ಮೋದಿ ಅವರ ಭೌತಿಕ ರ‍್ಯಾಲಿಗೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಭೌತಿಕ ರ‍್ಯಾಲಿಯನ್ನು ರದ್ದುಪಡಿಸಲಾಯಿತು. ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ರ‍್ಯಾಲಿ ನಡೆಸಿದರು.

ಬರ್ದಮಾನ್ ಕಾಲೇಜಿನ ಮೈದಾನದಲ್ಲಿ ಸಮಾವೇಶಕ್ಕೆ ಸಿದ್ಧತೆ ಮಾಡಲಾಗಿತ್ತು. ಪ್ರತಿಕೂಲ ಹವಾಮಾನದ ಕಾರಣ ರ‍್ಯಾಲಿ ರದ್ದಾಗಿದೆ ಎಂದು ಮೂಲಗಳು ಹೇಳಿವೆ.


ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮೀರಠ್‌ನಲ್ಲಿ ಸೋಮವಾರ ಚುನಾವಣಾ ಪ್ರಚಾರ ನಡೆಸಿದರು
ಪಿಟಿಐ ಚಿತ್ರ

ಕಳೆದ ಐದು ವರ್ಷಗಳಲ್ಲಿ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಒಂದೇ ಒಂದು ಕೋಮು ಗಲಭೆ ಆಗಿಲ್ಲ ಎಂಬುದು ನಮ್ಮ ಸರ್ಕಾರದ ಅತ್ಯಂತ ದೊಡ್ಡ ಸಾಧನೆ
ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ



ನಕಲಿ ಸಮಾಜವಾದಿಗಳ ವಂಶಾಡಳಿತದ ಧೋರಣೆಯಿಂದಾಗಿ ಅಭಿವೃದ್ಧಿಯ ಹೊಳೆಯು 2017ಕ್ಕೆ ಮೊದಲು ಉತ್ತರ ಪ್ರದೇಶದಲ್ಲಿ ನಿಂತು ಹೋಗಿತ್ತು
ನರೇಂದ್ರ ಮೋದಿ, ಪ್ರಧಾನಿ

ಬಿಜೆಪಿಗೆ ಪ್ರತಿಕೂಲ ಹವಾಮಾನ: ಜಯಂತ್

ಪ್ರತಿಕೂಲ ಹವಾಮಾನದ ಕಾರಣಕ್ಕೆ ಮೋದಿ ಅವರ ಭೌತಿಕ ರ‍್ಯಾಲಿ ರದ್ದು ಆಗಿದ್ದನ್ನು ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು ಲೇವಡಿ ಮಾಡಿದ್ದಾರೆ. ಬಿಜೆಪಿಗೆ ಈಗ ಹವಾಮಾನವು ಪ್ರತಿಕೂಲವಾಗಿದೆ ಎಂದು ಅವರು ಹೇಳಿದ್ದಾರೆ.

‘ಬಿಜ್ನೋರ್‌ನಲ್ಲಿ ಸೂರ್ಯ ಪ್ರಕಾಶಿಸುತ್ತಿದ್ದಾನೆ. ಆದರೆ ಬಿಜೆಪಿಗೆ ಮಾತ್ರ ಹವಾಮಾನ ಪ್ರತಿಕೂಲವಾಗಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ. ರ‍್ಯಾಲಿ ರದ್ದಾಗಿರುವ ಬಗ್ಗೆ ಸುದ್ದಿ ವಾಹಿನಿಯಲ್ಲಿ ಪ್ರಸಾರವಾದ ಸುದ್ದಿಯ ತುಣುಕು ಮತ್ತು ಗೂಗಲ್ ಹವಾಮಾನ ವರದಿಯನ್ನೂ ಟ್ವೀಟ್‌ಗೆ ಅವರು ಲಗತ್ತಿಸಿದ್ದಾರೆ. ‘ಬಿಜ್ನೋರ್‌ನಲ್ಲಿ ಶುಭ್ರ ಹವಾಮಾನ ಇರಲಿದೆ’ ಎಂದು ಗೂಗಲ್ ಹವಾಮಾನ ವರದಿಯಲ್ಲಿ ಇತ್ತು. ಆರ್‌ಎಲ್‌ಡಿ ಮುಖಂಡರನ್ನು ಬಿಜೆಪಿಗೆ ಸೆಳೆಯುವ ಯತ್ನ ನಡೆಯುತ್ತಿದೆ ಎಂದು ಜಯಂತ್ ಇತ್ತೀಚೆಗೆ ಆರೋಪಿಸಿದ್ದರು. ಆರ್‌ಎಲ್‌ಡಿಯನ್ನು ಎನ್‌ಡಿಎಗೆ ಸೇರಿಸಿಕೊಳ್ಳಲು ಸಿದ್ಧ ಎಂದು ಬಿಜೆಪಿಯ ಹಲವು ಮುಖಂಡರು ಹೇಳಿದ್ದರು.

‘ಉತ್ತರ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ಬಿಜೆಪಿ ರ‍್ಯಾಲಿಗಳಿಗೆ ರೈತರ ಆಕ್ರೋಶದ ಕಾರಣದಿಂದ ಜನರು ಸೇರುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ಪಂಜಾಬ್‌ನಲ್ಲಿ ಕಾರ್ಯಕ್ರಮ ರದ್ದುಪಡಿಸಿದ ಅದೇ ಕಾರಣಕ್ಕೆ ಬಿಜ್ನೋರ್‌ನಲ್ಲಿಯೂ ರ‍್ಯಾಲಿ ರದ್ದುಪಡಿಸಲಾಗಿದೆ’ ಎಂದು ಅಖಿಲೇಶ್ ಹೇಳಿದ್ದಾರೆ.



ಆದಿತ್ಯನಾಥ ವಿರುದ್ಧ ಶುಭವತಿ ಕಣಕ್ಕೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ವಿರುದ್ಧ ಗೋರಖಪುರ ನಗರ ಕ್ಷೇತ್ರದಿಂದ ಶುಭವತಿ ಶುಕ್ಲಾ ಅವರನ್ನು ಕಣಕ್ಕೆ ಇಳಿಸಲು ಸಮಾಜವಾದಿ ಪಕ್ಷವು (ಎಸ್‌ಪಿ) ನಿರ್ಧರಿಸಿದೆ. ಶುಭವತಿ ಅವರು ಬಿಜೆಪಿಯ ಮುಖಂಡರಾಗಿದ್ದ ಉಪೇಂದ್ರ ದತ್ ಶುಕ್ಲಾ ಅವರ ಹೆಂಡತಿ.

ಶುಭವತಿ ಮತ್ತು ಅವರ ಇಬ್ಬರು ಮಕ್ಕಳು ಎಸ್‌ಪಿ ಮುಖಂಡರನ್ನು ಕೆಲ ದಿನಗಳ ಹಿಂದೆ ಭೇಟಿಯಾಗಿದ್ದರು. ಬಳಿಕ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಗೋರಖಪುರ ಲೋಕಸಭಾ ಕ್ಷೇತ್ರದ ಸದಸ್ಯರಾಗಿದ್ದ ಯೋಗಿ ಮುಖ್ಯಮಂತ್ರಿಯಾದ ಬಳಿಕ, 2018 ರಲ್ಲಿ ಉಪೇಂದ್ರ ಶುಕ್ಲಾ ಅವರು ಗೋರಖಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಎಸ್‌ಪಿ ಅಭ್ಯರ್ಥಿ ಎದುರು ಸೋತಿದ್ದರು. ಗೋರಖಪುರ ಲೋಕಸಭಾ ಕ್ಷೇತ್ರದಿಂದ ಉಪೇಂದ್ರ ಅವರನ್ನು ಕಣಕ್ಕೆ ಇಳಿಸುವುದನ್ನು ಯೋಗಿ ವಿರೋಧಿಸಿದ್ದರು.

ಗೋರಖಪುರದಲ್ಲಿ ಬ್ರಾಹ್ಮಣ ಮತದಾರರು ಗಣನೀಯ ಪ್ರಮಾಣದಲ್ಲಿದ್ದಾರೆ. ಬ್ರಾಹ್ಮಣರಿಗೆ ಆದಿತ್ಯನಾಥ ಬಗ್ಗೆ ಅಂತಹ ಒಲವು ಇಲ್ಲ. ಅವರ ಆಳ್ವಿಕೆ ಅವಧಿಯಲ್ಲಿ ಬ್ರಾಹ್ಮಣರನ್ನು ಕಡೆಗಣಿಸಲಾಗಿದೆ ಎಂಬ ಭಾವವು ಸಮುದಾಯದಲ್ಲಿ ಇದೆ. ಈ ಎಲ್ಲವನ್ನೂ ಗಮನದಲ್ಲಿ ಇರಿಸಿಕೊಂಡೇ ಶುಭವತಿ ಅವರನ್ನು ಕಣಕ್ಕೆ ಇಳಿಸುವ ನಿರ್ಧಾರಕ್ಕೆ ಬರಲಾಗಿದೆ ಎಂದು ಎಸ್‌ಪಿ ಮುಖಂಡರೊಬ್ಬರು ಹೇಳಿದ್ದಾರೆ.

ಬ್ರಾಹ್ಮಣ ಸಮುದಾಯದ ಪ್ರಭಾವಿ ನಾಯಕ ಹರಿಶಂಕರ್ ತಿವಾರಿ ಅವರು ಈಚೆಗೆ ಎಸ್‌ಪಿಗೆ ಸೇರ್ಪಡೆಯಾಗಿದ್ದರು. ಗೋರಖಪುರದಲ್ಲಿ ತಿವಾರಿ ಭಾರಿ ಪ್ರಭಾವ ಹೊಂದಿದ್ದಾರೆ. ಹಾಗಾಗಿ, ಶುಭವತಿ ಅವರಿಗೆ ಟಿಕೆಟ್ ನೀಡಿರುವುದು ಮಹತ್ವ ಪಡೆದುಕೊಂಡಿದೆ. ಭೀಮ್ ಆರ್ಮಿಯ ಸ್ಥಾಪಕ ಚಂದ್ರಶೇಖರ ಆಜಾದ್ ಅವರು ಆದಿತ್ಯನಾಥ ವಿರುದ್ಧ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ. ಮುಸ್ಲಿಂ ಅಭ್ಯರ್ಥಿಗೆ ಬಿಎಸ್‌ಪಿ ಟಿಕೆಟ್ ಕೊಟ್ಟಿದೆ.

ಈ ಕ್ಷೇತ್ರವು ಆದಿತ್ಯನಾಥ ಅವರಿಗೆ ಅತ್ಯಂತ ಸುರಕ್ಷಿತ ಎನ್ನಲಾಗಿದೆ. 1967 ರಿಂದಲೇ ಇಲ್ಲಿ ಜನಸಂಘ ಗೆಲ್ಲುತ್ತಲೇ ಬಂದಿದೆ. ಬಿಜೆಪಿ ಸ್ಥಾಪನೆಯಾದ ಬಳಿಕ ಇದು ಬಿಜೆಪಿ ಭದ್ರಕೋಟೆಯಾಗಿ ಪರಿವರ್ತನೆಯಾಗಿದೆ. ಆದಿತ್ಯನಾಥ ಅಯೋಧ್ಯೆ ಅಥವಾ ಮಥುರಾದಿಂದ ಸ್ಪರ್ಧಿಸಲಿದ್ದಾರೆ ಎಂಬ ಸುದ್ದಿ ಹರಡಿತ್ತು. ಆದರೆ, ಗೋರಖಪುರದಿಂದಲೇ ಸ್ಪರ್ಧಿಸುವುದಾಗಿ ಘೋಷಿಸಿ ಅವರು ಆಶ್ಚರ್ಯಕ್ಕೆ ಕಾರಣರಾಗಿದ್ದರು.

ಗೋರಖಪುರದಿಂದ ಸ್ಪರ್ಧಿಸುವ ಆದಿತ್ಯನಾಥ ಅವರ ನಿರ್ಧಾರಕ್ಕೆ ವ್ಯಂಗ್ಯದ ಪ್ರತಿಕ್ರಿಯೆಗಳೂ ವ್ಯಕ್ತವಾಗಿದ್ದವು. ‘ತಮ್ಮ ಊರಿನಿಂದಲೇ ಸ್ಪರ್ಧಿಸುವ ನಿರ್ಧಾರ ಒಳ್ಳೆಯದೇ. ಏಕೆಂದರೆ, ಚುನಾವಣೆ ಬಳಿಕ ಅವರು ಊರು ಬಿಟ್ಟು ಹೋಗುವ ಅಗತ್ಯ ಬರುವುದಿಲ್ಲ. ಅವರ ಪಕ್ಷ ಸೋಲಲಿದೆ. ಹಾಗಾಗಿ ಅವರು ಊರಲ್ಲಿಯೇ ಉಳಿಯಬಹುದು’ ಎಂದು ಅಖಿಲೇಶ್ ಹೇಳಿದ್ದರು.

ಉಚಿತ, ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆಯ ಭರವಸೆ

ಎಎಪಿ: ಉತ್ತರಾಖಂಡಕ್ಕೆ 11 ಅಂಶಗಳ ಕಾರ್ಯಸೂಚಿ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ, 11 ಅಂಶಗಳ ಕಾರ್ಯಸೂಚಿ ಜಾರಿಗೊಳಿಸುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋಮವಾರ ಪ್ರಕಟಿಸಿದ್ದಾರೆ.

ಭ್ರಷ್ಟಾಚಾರವನ್ನು ಕೊನೆಗೊಳಿಸುತ್ತೇವೆ ಎಂದಿರುವ ಅವರು, ಎಲ್ಲರಿಗೂ ಉಚಿತ ಹಾಗೂ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯ ಒದಗಿಸುವ ವಾಗ್ದಾನ ಮಾಡಿದ್ದಾರೆ.

‘ನೀವು ಬಿಜೆಪಿ ಅಥವಾ ಕಾಂಗ್ರೆಸ್‌ಗೆ ಮತ್ತೊಂದು ಅವಧಿಗೆ ಅಧಿಕಾರ ನೀಡುವುದರಿಂದ ಏನೂ ಬದಲಾವಣೆ ಆಗುವುದಿಲ್ಲ. ಅವರು ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಾರಷ್ಟೇ. ಪ್ರಾಮಾಣಿಕ ಉದ್ದೇಶಗಳನ್ನು ಹೊಂದಿರುವ ಪಕ್ಷವೊಂದನ್ನು ಆಯ್ಕೆ ಮಾಡುವ ಅವಕಾಶ ನಿಮಗೆ ಈ ಚುನಾವಣೆಯಲ್ಲಿ ಇದೆ. ಕಳೆದ 21 ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ನೀಡಿದ ಭ್ರಷ್ಟ ಆಡಳಿತ ಕೊನೆಯಾಗಬೇಕಾದರೆ, ಎಎಪಿ ಏಕೈಕ ಆಯ್ಕೆಯಾಗಿದೆ’ ಎಂದು ಕೇಜ್ರಿವಾಲ್ ಹೇಳಿದರು.

ಹರಿದ್ವಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೇಜ್ರಿವಾಲ್, ಉತ್ತರಾಖಂಡದ ಜನರಿಗೆ ಎಎಪಿ ನೀಡುತ್ತಿರುವ ಉತ್ತಮ ರಸ್ತೆಗಳು, ಶಾಲೆಗಳು, ಉತ್ತಮ ಆರೋಗ್ಯ ಸೌಲಭ್ಯಗಳು, ಉದ್ಯೋಗ ಮೊದಲಾದ ಭರವಸೆಗಳನ್ನು ದೆಹಲಿಯಲ್ಲಿ ಈಗಾಗಲೇ ಈಡೇರಿಸಲಾಗಿದೆ ಎಂದು ಅವರು ಹೇಳಿದರು.

ಎಎಪಿಯ 11 ಅಂಶಗಳ ಕಾರ್ಯಸೂಚಿಯು ಉತ್ತರಾಖಂಡದ ಪಕ್ಷದ ಪ್ರಣಾಳಿಕೆಯ ಸಾರಾಂಶವಾಗಿದೆ. ಉದ್ಯೋಗ, ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ, ಉಚಿತ ಮತ್ತು ನಿರಂತರ ವಿದ್ಯುತ್, ಉತ್ತಮ ರಸ್ತೆಗಳು, ಅಯೋಧ್ಯೆ, ಅಜ್ಮೀರ್ ಷರೀಫ್ ಮತ್ತು ಕರ್ತಾರ್‌ಪುರ ಸಾಹಿಬ್‌ಗೆ ಉಚಿತ ತೀರ್ಥಯಾತ್ರೆ ಸೌಲಭ್ಯ, ನಿವೃತ್ತ ಸೈನಿಕರಿಗೆ ಸರ್ಕಾರಿ ಉದ್ಯೋಗ ಮತ್ತು ಸೇನೆ, ಪೊಲೀಸ್ ಮತ್ತು ಅರೆಸೇನಾ ಪಡೆಗಳ ಹುತಾತ್ಮರ ಕುಟುಂಬಗಳಿಗೆ ₹1 ಕೋಟಿ ಪರಿಹಾರ ನೀಡುವ ಅಂಶಗಳು ಇದರಲ್ಲಿ ಸೇರಿವೆ. ತೀರ್ಥಯಾತ್ರೆಗೆ ಅವಕಾಶ ಕಲ್ಪಿಸುವ ಮೂಲಕ ಉತ್ತರಾಖಂಡವನ್ನು ಪ್ರಪಂಚದಾದ್ಯಂತ ಹಿಂದೂಗಳ ಆಧ್ಯಾತ್ಮಿಕ ರಾಜಧಾನಿಯನ್ನಾಗಿ ಮಾಡುವ ಭರವಸೆ ನೀಡಲಾಗಿದೆ.



ನಾನು ಸುಮ್ಮನೆ ಏನನ್ನೂ ಹೇಳುತ್ತಿಲ್ಲ. ಇಲ್ಲಿ ನೀಡಿದ ಉತ್ತಮ ಸರ್ಕಾರಿ ಶಾಲೆ, ಆಸ್ಪತ್ರೆ ಭರವಸೆಗಳನ್ನು ಈಗಾಗಲೇ ದೆಹಲಿಯಲ್ಲಿ ಸಾಕಾರಗೊಳಿಸಿದ್ದೇವೆ. ಉತ್ತರಾಖಂಡದಲ್ಲಿಯೂ ಮಾಡುತ್ತೇವೆ
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ತ್ರಿಪುರಾದಲ್ಲಿ ಬಿಜೆಪಿಯ ಇಬ್ಬರು ಶಾಸಕರ ರಾಜೀನಾಮೆ

ಅಗರ್ತಲಾ (ಪಿಟಿಐ): ಬಿಜೆಪಿ ಶಾಸಕರಾದ ಸುದೀಪ್ ರಾಯ್ ಬರ್ಮನ್ ಮತ್ತು ಆಶಿಶ್ ಸಾಹಾ ಅವರು ಸೋಮವಾರ ತ್ರಿಪುರಾ ವಿಧಾನ ಸಭೆಗೆ ರಾಜೀನಾಮೆ ನೀಡಿದ್ದು, ತಮ್ಮ ಪಕ್ಷದ ಸದಸ್ಯತ್ವವನ್ನೂ ತ್ಯಜಿಸಿದ್ದಾರೆ.

ರಾಯ್ ಬರ್ಮನ್ ಮತ್ತು ಸಹಾ ಅವರು ಸ್ಪೀಕರ್ ರತನ್ ಚಕ್ರವರ್ತಿ ಅವರನ್ನು ಭೇಟಿಯಾಗಿ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ.

ಅವರು ಮಂಗಳವಾರ ಕಾಂಗ್ರೆಸ್‌ಗೆ ಸೇರಬಹುದು ಎಂಬ ಊಹಾಪೋಹಗಳ ಎದ್ದಿದೆ. ಈ ಮಧ್ಯೆ ಅವರು ಸಂಜೆ ನವದೆಹಲಿಗೆ ಪ್ರಯಾಣಿಸಲಿದ್ದು, ದೆಹಲಿಯಲ್ಲಿ ಮುಂದಿನ ನಡೆ ಅಂತಿಮಗೊಳಿಸುತ್ತೇವೆ ಎಂದು ರಾಯ್ ಬರ್ಮನ್ ಸುದ್ದಿಗಾರರಿಗೆ ತಿಳಿಸಿದರು.

‘ನಾವು ಫೆ.12ರಂದು ತ್ರಿಪುರಾಕ್ಕೆ ಹಿಂದಿರುಗುತ್ತೇವೆ. ನಾವು ಬಿಜೆಪಿ ರಾಜ್ಯಾಧ್ಯಕ್ಷ ಮಾಣಿಕ್ ಸಹಾ ಅವರಿಗೆ ರಾಜೀನಾಮೆ ಪತ್ರವನ್ನು ಕಳುಹಿಸಿದ್ದೇವೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇವೆ’ ಎಂದು ಸಹಾ ಹೇಳಿದರು.

ಶಾಸಕರ ರಾಜೀನಾಮೆಯಿಂದ 60 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿಯ ಸಂಖ್ಯೆ 33ಕ್ಕೆ ಕುಸಿದಿದೆ.

ಬಲವಂತದಿಂದ ಬಿಜೆಪಿಗೆ ಮತ ಅಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ


ಅಖಿಲೇಶ್ ಯಾದವ್

ಲಖನೌ: ಅಂಗವಿಕಲ ಹಿರಿಯ ನಾಗರಿಕರೊಬ್ಬರನ್ನು ಬಲವಂತವಾಗಿ ಬಿಜೆಪಿಗೆ ಮತ ಹಾಕಿಸಿದ ಆರೋಪ ಹೊತ್ತಿರುವ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಇದು ಅತ್ಯಂತ ಗಂಭೀರ ವಿಚಾರ. ಆ ಅಧಿಕಾರಿಯನ್ನು ಆಯೋಗವು ಅಮಾನತು ಮಾಡಬೇಕು. ಅಂತಹ ಅಧಿಕಾರಿಗಳನ್ನು ಆಯೋಗವು ಗುರುತಿಸಬೇಕು ಮತ್ತು ಅಮಾನತು ಮಾಡಬೇಕು ಎಂದು ಅಖಿಲೇಶ್ ಟ್ವೀಟ್ ಮಾಡಿದ್ದಾರೆ.

ಬಿಜೆಪಿಗೆ ಮತ ಹಾಕುವಂತೆ ಅಧಿಕಾರಿಗಳು ಬಲವಂತ ಮಾಡಿದ್ದಾರೆ ಎಂದು ಆಗ್ರಾದ ಫತೇಹಾಬಾದ್ ನಿವಾಸಿ 80 ವರ್ಷದ ಸುರೇಂದ್ರ ಸಿಂಗ್ ಆರೋಪಿಸಿದ್ದಾರೆ. ಈ ವಿಚಾರ ತಿಳಿದ ಕೂಡಲೇ ಗ್ರಾಮದ ಜನರು ಧಾವಿಸಿ ಬಂದು ಅಧಿಕಾರಿಗಳ ಮುಂದೆ ದಾಂದಲೆ ನಡೆಸಿದ್ದರು.

ಅಲ್ಲಿಗೆ ಬಂದಿದ್ದ ಹಿರಿಯ ಅಧಿಕಾರಿಯೊಬ್ಬರು ‘ಒಂದು ಮತದಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ’ ಎಂದು ಹೇಳಿರುವುದು ದಾಖಲಾಗಿರುವ ವಿಡಿಯೊವನ್ನು ಅಖಿಲೇಶ್ ಅವರು ಹಂಚಿಕೊಂಡಿದ್ದಾರೆ. ಬಲವಂತದಿಂದ ಮತ ಹಾಕಿಸಿದ ಬಗ್ಗೆ ಗ್ರಾಮದ ಜನರು ಅಧಿಕಾರಿಗಳ ಜತೆಗೆ ವಾಗ್ವಾದ ನಡೆಸಿದ್ದ ದೃಶ್ಯಗಳೂ ವಿಡಿಯೊದಲ್ಲಿ ಇವೆ.

ಅಂಗವಿಕಲರು ಮತ್ತು ಹಿರಿಯ ನಾಗರಿಕರು ಅಂಚೆ ಮೂಲಕ ಮತ ಚಲಾಯಿಸುವ ಪ್ರಕ್ರಿಯೆ ಆಗ್ರಾದಲ್ಲಿ ಭಾನುವಾರ ಆರಂಭಗೊಂಡಿದೆ.


ಗೋವಾದಲ್ಲಿ ಪ್ರಿಯಾಂಕಾ ಗಾಂಧಿ ಪ್ರಚಾರ

ಅಧಿಕಾರಕ್ಕೆ ಬಂದರೆ ಸರ್ಕಾರಿ ಕೆಲಸದಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲು

ಪಣಜಿ (ಪಿಟಿಐ): ಗೋವಾದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ಉದ್ಯೋಗ ಸೃಷ್ಟಿಗಾಗಿ ₹500 ಕೋಟಿ ಒದಗಿಸಲಾಗುವುದು ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇಕಡಾ 30ರಷ್ಟನ್ನು ಮಹಿಳೆಯರಿಗೆ ಮೀಸಲು ಇರಿಸಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಭರವಸೆ ಕೊಟ್ಟಿದ್ದಾರೆ.

ಗೋವಾದ ನ್ಯುವೆಮ್ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಪ್ರಿಯಾಂಕಾ ಅವರು ಮಾತನಾಡಿದರು.

ಸರ್ಕಾರಿ ಉದ್ಯೋಗದ ನೇಮಕಾತಿಯ ಹಗರಣಗಳನ್ನು ತಡೆಯಲು ಸಿಬ್ಬಂದಿ ಆಯ್ಕೆ ಆಯೋಗವನ್ನು ರಚಿಸಲಾಗುವುದು. ದುರ್ಬಲ ವರ್ಗಗಳ ಕುಟುಂಬಗಳಿಗೆ ತಿಂಗಳಿಗೆ ₹6,000 ನೀಡುವ ನ್ಯಾಯ ಯೋಜನೆಯನ್ನೂ ಜಾರಿ ಮಾಡಲಾಗುವುದು. ಇದು ಕುಟುಂಬಗಳಿಗೆ ನೆರವಾಗುವುದಲ್ಲದೆ, ಅರ್ಥ ವ್ಯವಸ್ಥೆಗೆ ಹಣ ಹರಿದು ಬರುವಂತೆಯೂ ಮಾಡಲಿದೆ ಎಂದು ಪ್ರಿಯಾಂಕಾ ವಿವರಿಸಿದ್ದಾರೆ.


ಪ್ರಿಯಾಂಕಾ ಗಾಂಧಿ

ಕೆಲಸ ಮಾಡುವ ಮಹಿಳೆಯರಿಗಾಗಿ ಮಾರ್ಗೋವಾ ಮತ್ತು ಪಣಜಿಯಲ್ಲಿ ಹಾಸ್ಟೆಲ್ ನಿರ್ಮಿಸಲಾಗುವುದು. ಮಹಿಳಾ ಉಸ್ತುವಾರಿಯ ಪೊಲೀಸ್ ಠಾಣೆಗಳ ಸಂಖ್ಯೆ ಹೆಚ್ಚಿಸಲಾಗುವುದು. ಪೆಟ್ರೋಲ್ ಮತ್ತು ಡೀಸೆಲ್ ದರವು ಲೀಟರ್‌ಗೆ ₹80ರಿಂದ ಹೆಚ್ಚಳ ಆಗದಂತೆ ನೋಡಿಕೊಳ್ಳಲಾಗುವುದು. ಉಳಿದ ಮೊತ್ತವನ್ನು ಸಹಾಯಧನದ ಮೂಲಕ ಭರಿಸಲಾಗುವುದುಎಂದು ಕಾಂಗ್ರೆಸ್ ಪಕ್ಷವು ಭರವಸೆ ನೀಡಿದೆ.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡುವ ನಿರ್ಧಾರವನ್ನು ಪ್ರಿಯಾಂಕಾ ಪುನರುಚ್ಚರಿಸಿದರು. ‘ಮಹಿಳೆಯರನ್ನು ರಾಜಕೀಯಕ್ಕೆ ತರಲು ನಾನು ಭಾರಿ ಪ್ರಯತ್ನ ನಡೆಸುತ್ತಿರುವುದು ನಿಮಗೆ ತಿಳಿದಿದೆ. ಇದಕ್ಕೆ ಎರಡು–ಮೂರು ಕಾರಣಗಳಿವೆ. ಮೊದಲನೆಯದಾಗಿ, ಜನಸಂಖ್ಯೆಯ ಶೇ 50ರಷ್ಟು ಮಹಿಳೆಯರು ಇದ್ದಾರೆ. ಹಾಗಾಗಿ, ಶೇ 50ರಷ್ಟು ಪ್ರಾತಿನಿಧ್ಯ ಹೊಂದುವುದು ಮಹಿಳೆಯರ ಹಕ್ಕು’ ಎಂದು ಪ್ರಿಯಾಂಕಾ ಪ್ರತಿಪಾದಿಸಿದರು.

‘ಈಗಿನ ರಾಜಕಾರಣವು ದ್ವೇಷ, ಸಿಟ್ಟಿನಿಂದ ತುಂಬಿ ಹೋಗಿದೆ. ಶೇಕಡಾ 90ರಷ್ಟು ಭಾಷಣಗಳು ನಕಾರಾತ್ಮಕವಾಗಿವೆ. ಸಕಾರಾತ್ಮಕ ಅಂಶಗಳೇ ಇಲ್ಲ. ಮಹಿಳೆಯರು ವಾಸ್ತವದ ನೆಲೆಗಟ್ಟಿನಲ್ಲಿ ಯೋಚಿಸುವುದರಿಂದ ರಾಜಕಾರಣಕ್ಕೆ ಸಕಾರಾತ್ಮಕತೆ ಮತ್ತು ಮಮತೆಯನ್ನು ತುಂಬುವುದು ಸಾಧ್ಯ ಎಂಬುದು ನನ್ನ ದೃಢವಾದ ನಂಬಿಕೆ’ ಎಂದು ಪ್ರಿಯಾಂಕಾ ಹೇಳಿದ್ದಾರೆ.

₹10 ಕೋಟಿ ಪಡೆದುದನ್ನು ಒಪ್ಪಿಕೊಂಡ ಚನ್ನಿ ಸಂಬಂಧಿ: ಇ.ಡಿ ಹೇಳಿಕೆ

ನವದೆಹಲಿ (ಪಿಟಿಐ): ₹10 ಕೋಟಿ ನಗದು ಪಡೆದುದನ್ನು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿ ಭೂಪಿಂದರ್ ಅಲಿಯಾಸ್ ಹನಿ ಒಪ್ಪಿಕೊಂಡಿದ್ದಾರೆ. ಮರಳು ಅಕ್ರಮ ಗಣಿಗಾರಿಕೆಗೆ ಅನುಕೂಲವಾಗುವಂತೆ ಮತ್ತು ಅಧಿಕಾರಿಗಳ ವರ್ಗಾವಣೆ ಅಥವಾ ಪೋಸ್ಟಿಂಗ್ ಬದಲಿಗೆ ನೆರವು ನೀಡುವುದಕ್ಕೆ ಪ್ರತಿಯಾಗಿ ಈ ಹಣ ಸ್ವೀಕರಿಸಿದ್ದಾಗಿ ಅವರು ಒಪ್ಪಿಕೊಂಡಿದ್ದಾರೆ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಪಂಜಾಬ್‌ನಲ್ಲಿ ಮರಳು ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ತನಿಖಾ ಸಂಸ್ಥೆಯು ಹನಿ ಅವರನ್ನು ಫೆಬ್ರುವರಿ 3ರಂದು ವಶಕ್ಕೆ ತೆಗೆದುಕೊಂಡಿತ್ತು. ಅವರು ಮಂಗಳವಾರದವರೆಗೆ ಇ.ಡಿ ವಶದಲ್ಲಿ ಇರಲಿದ್ದಾರೆ. ಜನವರಿ 18ರಂದು ಹನಿ ಮತ್ತು ಇತರರ ವಿರುದ್ಧ ಇ.ಡಿ. ದಾಳಿ ನಡೆಸಿ ಸುಮಾರು ₹7.9 ಕೋಟಿ ನಗದು ವಶಪಡಿಸಿಕೊಂಡಿತ್ತು. ಸಂದೀಪ್ ಕುಮಾರ್ ಎಂಬಾತನಿಂದ ₹2 ಕೋಟಿ ಜಪ್ತಿ ಮಾಡಿತ್ತು.


ಪೊಲೀಸರ ಬಂಧನದಲ್ಲಿರುವ ಭೂಪಿಂದರ್ ಸಿಂಗ್

ಕುದ್ರತ್‌ದೀಪ್ ಸಿಂಗ್, ಭೂಪಿಂದರ್ ಸಿಂಗ್, ಅವರ ತಂದೆ ಸಂತೋಖ್ ಸಿಂಗ್ ಮತ್ತು ಸಂದೀಪ್ ಕುಮಾರ್ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ವಶಪಡಿಸಿಕೊಂಡ ₹10 ಕೋಟಿ ಹಣ ಭೂಪಿಂದರ್ ಸಿಂಗ್ ಅವರಿಗೆ ಸೇರಿದ್ದು ಎಂದು ದೃಢಪಟ್ಟಿದೆ ಎಂದು ಇ.ಡಿ. ತಿಳಿಸಿದೆ.

‘ಕೆಲವು ದಾಖಲೆಗಳೊಂದಿಗೆ ಫೆಬ್ರುವರಿ 3ರಂದು ತನಿಖಾ ಸಂಸ್ಥೆಯ ಮುಂದೆ ವೈಯಕ್ತಿಕವಾಗಿ ಹಾಜರಾಗಲು ಹನಿಗೆ ಸಮನ್ಸ್ ನೀಡಲಾಗಿತ್ತು. ಈ ವೇಳೆ ಪ್ರತಿಕ್ರಿಯಿಸಿದ್ದ ಅವರು, ಗಣಿಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದಾಗಿ ತಿಳಿಸಿದ್ದರು. ಆದರೆ, ತಮ್ಮ ಮೇಲೆ ಮಾಡಲಾಗಿರುವ ಆರೋಪಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದರು’ ಎಂದು ಇ.ಡಿ. ಹೇಳಿದೆ.

ಹನಿ, ಕುದ್ರತ್‌ದೀಪ್ ಸಿಂಗ್ ಮತ್ತು ಸಂದೀಪ್ ಕುಮಾರ್ ಅವರು ಪ್ರೊವೈಡರ್ಸ್ ಓವರ್‌ಸೀಸ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ನಿರ್ದೇಶಕರು ಎಂದು ಹೇಳಲಾಗಿದೆ. ಜಾರಿ ನಿರ್ದೇಶನಾಲಯವು ಕಳೆದ ತಿಂಗಳು ಈ ಕಂಪನಿಯಲ್ಲಿ ಶೋಧ ನಡೆಸಿತ್ತು.

ಫೆ.20ರಂದು ಪಂಜಾಬ್‌ನಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, ಚನ್ನಿ ಅವರನ್ನು ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಾಗಿದೆ. 2018ರಲ್ಲಿ ಪಂಜಾಬ್ ಪೊಲೀಸರು ಗಣಿಗಾರಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡ ನಂತರ, ಕಳೆದ ವರ್ಷದ ನವೆಂಬರ್‌ನಲ್ಲಿ ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ದಾಖಲಿಸಿಕೊಂಡಿತ್ತು.

‘ಸ್ಪುಟ್ನಿಕ್ ಲೈಟ್’ ಸಿಂಗಲ್ ಡೋಸ್ ಲಸಿಕೆಗೆ ಡಿಸಿಜಿಐ ಅನುಮೋದನೆ

ನವದೆಹಲಿ (ಪಿಟಿಐ): ಭಾರತದಲ್ಲಿ ತುರ್ತು ಸಂದರ್ಭದಲ್ಲಿ ಬಳಸಲು ‘ಸ್ಪುಟ್ನಿಕ್ ಲೈಟ್’ ಲಸಿಕೆಗೆ ಭಾರತೀಯ ಔಷಧ ನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದಾರೆ. ಇದು ಒಂದು ಡೋಸ್ ಲಸಿಕೆಯಾಗಿದೆ ಎಂದು ಡಾ. ರೆಡ್ಡೀಸ್ ಲ್ಯಾಬ್ ಸೋಮವಾರ ತಿಳಿಸಿದೆ.

ಭಾರತದಲ್ಲಿ ‘ಸ್ಪುಟ್ನಿಕ್– ವಿ’ ಲಸಿಕೆಯ ತುರ್ತು ಬಳಕೆಗೆ ಡಿಸಿಜಿಐ 2021ರ ಏಪ್ರಿಲ್‌ನಲ್ಲಿ ಅನುಮೋದನೆ ನೀಡಿತ್ತು. ‘ಸ್ಪುಟ್ನಿಕ್ ಲೈಟ್’ ಲಸಿಕೆಯ 3ನೇ ಹಂತದ ಕ್ಲಿನಿಕಲ್ ಪ್ರಯೋಗದ ಬಳಿಕ, ರೆಡ್ಡೀಸ್ ಲ್ಯಾಬ್ ಡಿಸಿಜಿಐ ಅನುಮೋದನೆಗೆ ಅರ್ಜಿ ಸಲ್ಲಿಸಿತ್ತು. ರಷ್ಯಾದಲ್ಲಿ ಈ ಲಸಿಕೆಯ ಕುರಿತು ನಡೆದಿದ್ದ ಕ್ಲಿನಿಕಲ್ ಪ್ರಯೋಗಗಳ ದತ್ತಾಂಶವನ್ನೂ ಅರ್ಜಿಯೊಂದಿಗೆ ಲಗತ್ತಿಸಿತ್ತು.

ಸ್ಪುಟ್ನಿಕ್–ವಿ ಲಸಿಕೆಯು ಕೋವಿಡ್‌ನ ಓಮೈಕ್ರಾನ್ ರೂಪಾಂತರ ತಳಿಯ ವಿರುದ್ಧ ಪ್ರತಿಕಾಯಗಳನ್ನು ಬೆಳೆಸುವುದರಲ್ಲಿ ಪರಿಣಾಮಕಾರಿಯಾಗಿದೆ ಎಂದು ‘ಗಮಾಲೆ ಸೆಂಟರ್’ ಇತ್ತೀಚಿನ ಪ್ರಯೋಗಗಳು ತಿಳಿಸಿವೆ. ‘ಸ್ಪುಟ್ನಿಕ್ ಲೈಟ್’ ಲಸಿಕೆಯನ್ನು ‘ಬೂಸ್ಟರ್’ ಆಗಿ ಬಳಸಬಹುದಾಗಿದೆ ಎನ್ನಲಾಗಿದೆ.

ಅರ್ಜೆಂಟೀನಾ, ಯುಎಇ, ಫಿಲಿಪ್ಪೀನ್ಸ್ ಮತ್ತು ರಷ್ಯಾ ಸೇರಿದಂತೆ ವಿಶ್ವದ 30 ದೇಶಗಳಲ್ಲಿ ‘ಸ್ಪುಟ್ನಿಕ್ ಲೈಟ್’ ಬಳಕೆಗೆ ಅನುಮೋದನೆ ದೊರೆತಿದೆ.


‘ಸ್ಪುಟ್ನಿಕ್– ವಿ’ ಲಸಿಕೆಯ ಕ್ಲಿನಿಕಲ್ ಪ್ರಯೋಗ ಮತ್ತು ಭಾರತ ದಲ್ಲಿ ಈ ಲಸಿಕೆಯನ್ನು ವಿತರಿಸುವ ಪಾಲುದಾರಿಕೆಯನ್ನು ಡಾ. ರೆಡ್ಡೀಸ್ ಲ್ಯಾಬ್ ಹೊಂದಿದೆ.

ನುಡಿ-ಕಿಡಿ



ಕೇಜ್ರಿವಾಲ್ ಆಮ್ ಆದ್ಮಿ (ಬಡ ಮನುಷ್ಯ) ಆಗಲು ಹೇಗೆ ಸಾಧ್ಯ? ಅವರು ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ತಂಗುತ್ತಾರೆ, ದೆಹಲಿಯ ಐಷಾರಾಮಿ ಮನೆಯಲ್ಲಿ ವಾಸಿಸುತ್ತಾರೆ. ದೇಶದ ಎಲ್ಲಾ ಮುಖ್ಯಮಂತ್ರಿಗಳಿಗಿಂತ ಅತಿಹೆಚ್ಚು ವೇತನವನ್ನು ದೆಹಲಿ ಮುಖ್ಯಮಂತ್ರಿಯಾದ ಕೇಜ್ರಿವಾಲ್ ಪಡೆಯುತ್ತಿದ್ದಾರೆ. ಪಂಜಾಬ್ ಅನ್ನು ಲೂಟಿ ಮಾಡಲಷ್ಟೇ ಅವರು ಇಲ್ಲಿಗೆ ಬಂದಿದ್ದಾರೆ
ಚರಣ್‌ಜಿತ್ ಸಿಂಗ್ ಚನ್ನಿ, ಪಂಜಾಬ್ ಮುಖ್ಯಮಂತ್ರಿ



ಪಂಜಾಬ್‌ನಲ್ಲಿ ದುರಾಡಳಿತದ ಪರಿಣಾಮ ಕಾಂಗ್ರೆಸ್ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ತೀವ್ರ ಭ್ರಷ್ಟಾಚಾರ, ಆಂತರಿಕ ಕಲಹದಿಂದ ಪಕ್ಷವು ನೆಲಕಚ್ಚಿದೆ. ಯಾವ ಪವಾಡವೂ ಕಾಂಗ್ರೆಸ್ ಅನ್ನು ಬಚಾವು ಮಾಡಲಾರದು. ಮುಖ್ಯಮಂತ್ರಿ ಅಭ್ಯರ್ಥಿ ಘೋಷಿಸಿದ ತಕ್ಷಣ ಯಾವ ಪವಾಡವೂ ನಡೆಯುವುದಿಲ್ಲ
ಗಜೇಂದ್ರ ಸಿಂಗ್ ಶೆಖಾವತ್, ಪಂಜಾಬ್ ಬಿಜೆಪಿ ಉಸ್ತುವಾರಿ

ಈ ಚುನಾವಣೆಯು ಉತ್ತರಾಖಂಡ ಸೃಷ್ಟಿಕರ್ತರು ಮತ್ತು ಉತ್ತರಾಖಂಡ ಸೃಷ್ಟಿಯ ವಿರೋಧಿಗಳ ನಡುವೆ ನಡೆಯುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರ ಮತ್ತು ರಾಜ್ಯದ ಬಿಜೆಪಿ ಸರ್ಕಾರದ ಡಬಲ್ ಎಂಜಿನ್, ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ದಿದೆ. ಆದರೆ ಎರಡೂ ಕಡೆ ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಅದು ಅಭಿವೃದ್ಧಿಗೆ ಡಬಲ್ ಬ್ರೇಕ್ ಹಾಕುತ್ತಿತ್ತು
ನರೇಂದ್ರ ಮೋದಿ, ಪ್ರಧಾನಿ


ಶಿಕ್ಷಣ ಪಡೆದ, ಉದ್ಯೋಗ ಕೇಳುವ, ಸರ್ಕಾರವನ್ನು ಪ್ರಶ್ನಿಸುವ ಯುವಕರಿದ್ದರೆ ಸಂಘ ಪರಿವಾರಕ್ಕೆ ತನ್ನ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದ ಯುವಜನರನ್ನು ಕಣ್ಣಿಗೆ ಬಟ್ಟೆ ಕಟ್ಟಿದ ಕುರಿಮಂದೆಯಾಗಿಸಲು ಯತ್ನಿಸುತ್ತಿದೆ
ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ನಾಯಕ


ಉತ್ತರ ಪ್ರದೇಶಕ್ಕೆ ಅವಮಾನ ಮಾಡಿದ್ದ ಮಮತಾ ಬ್ಯಾನರ್ಜಿ ಅವರನ್ನು ತನ್ನ ಪ್ರಚಾರಕ್ಕೆ ಸಮಾಜವಾದಿ ಪಕ್ಷವು ಕರೆಸಿಕೊಳ್ಳುತ್ತಿದೆ. ಅಖಿಲೇಶ್ ಯಾದವ್ ತಮ್ಮ ಸ್ವಂತ ಬಲದಿಂದ ಜನರ ಬೆಂಬಲ ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಅವರೇ ಈ ಮೂಲಕ ಸಾಬೀತು ಮಾಡುತ್ತಿದ್ದಾರೆ
ಸ್ಮೃತಿ ಇರಾನಿ, ಕೇಂದ್ರ ಸಚಿವೆ



ಸಮಾಜವಾದಿ ಪಕ್ಷವು ಅಧಿಕಾರದಲ್ಲಿ ಇದ್ದಾಗ ವಿದ್ಯುತ್ ತಂತಿಗಳನ್ನು ಬಟ್ಟೆ ಒಣಗಿಸಲು ಮಾತ್ರ ಬಳಸಲಾಗುತ್ತಿತ್ತು. ಆದರೆ, ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 300 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುತ್ತೇವೆ ಎಂದು ಸಮಾಜವಾದಿ ಪಕ್ಷವು ಈಗ ಹೇಳುತ್ತಿದೆ
ಕೇಶವ ಪ್ರಸಾದ್ ಮೌರ್ಯ, ಉತ್ತರ ಪ್ರದೇಶ ಉಪಮುಖ್ಯಮಂತ್ರಿ


ಅಭಿವೃದ್ಧಿಯ ಬಗ್ಗೆ ಮಾತನಾಡಲು ಉತ್ತರ ಪ್ರದೇಶದ ಪಶ್ಚಿಮ ಭಾಗದ ಜನರು ಬಯಸಿದ್ದಾರೆ. ಹಿಂದೂ, ಮುಸ್ಲಿಂ, ಜಿನ್ನಾ, ಧರ್ಮದ ಬಗ್ಗೆ ಮಾತನಾಡುವವರು ಸೋಲಲಿದ್ದಾರೆ. ಮುಜಫ್ಫರ್‌ನಗರವು ಹಿಂದೂ–ಮುಸ್ಲಿಮರ ನಡುವಣ ಪಂದ್ಯದ ಕ್ರೀಡಾಂಗಣ ಅಲ್ಲ
ರಾಕೇಶ್ ಟಿಕಾಯತ್, ಭಾರತೀಯ ಕಿಸಾನ್ ಯೂನಿಯನ್‌ನ ವಕ್ತಾರ

ಕ್ಷೇಮ ಕುಶಲ



ಕೋವಿಡ್ ಸುಸ್ತಿಗೆ ಪರಿಹಾರಗಳು



ಡಾ. ಕಿರಣ್ ವಿ. ಎಸ್.

'ಈಚೆಗೆ ಕೋವಿಡ್ ಹೊಸ ತಳಿಯ ಸೋಂಕು ಉಂಟಾಯಿತು. ಪುಣ್ಯಕ್ಕೆ ಆಸ್ಪತ್ರೆಗೆ ದಾಖಲಾಗುವ ಪರಿಸ್ಥಿತಿ ಬರಲಿಲ್ಲ. ಒಂದು ವಾರದೊಳಗೆ ಜ್ವರ ನಿಂತು, ಚೇತರಿಸಿಕೊಂಡೆ. ಆದರೆ, ಸುಸ್ತು ಮಾತ್ರ ಹಾಗೆಯೇ ಇದೆ. ಸಂಜೆ ನಾಲ್ಕು ಗಂಟೆ ಸುಮಾರಿಗೆ ಸ್ವಲ್ಪ ನಿದ್ರೆ ಮಾಡೋಣವೆನಿಸುತ್ತದೆ. ಮೊದಲಿನ ಹಾಗೆ ಚುರುಕಿಲ್ಲ. ಇದಿನ್ನೂ ಎಷ್ಟು ಕಾಲ ಇರುತ್ತದೆ?' ಎನ್ನುವ ಮಾತುಗಳು ಆಗಾಗ ಕೇಳಿಬರುತ್ತವೆ. ಕೋವಿಡ್ ಚೇತರಿಕೆಯ ನಂತರ ಈ ಸುಸ್ತು ಏಕಾಗುತ್ತಿದೆ? ಇದಕ್ಕೆ ಪರಿಹಾರಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರಗಳ ಹುಡುಕಾಟ ನಡೆಯುತ್ತಿದೆ.

ಕೋವಿಡ್ ಕಾಯಿಲೆಗೆ ತುತ್ತಾದವರ ಪೈಕಿ ಅರ್ಧಕ್ಕಿಂತ ಹೆಚ್ಚು ಮಂದಿಗೆ ಚೇತರಿಕೆಯ ನಂತರವೂ ಸುಸ್ತಿನ ಲಕ್ಷಣಗಳು ಕಾಣುತ್ತವೆ. ಇಂತಹ ಬಹುತೇಕ ಮಂದಿ ಸುಮಾರು ಮೂರು ವಾರಗಳಲ್ಲಿ ಸಂಪೂರ್ಣವಾಗಿ ಗುಣ ಹೊಂದುತ್ತಾರೆ. ಆದರೆ, ತೀವ್ರ ಕಾಯಿಲೆಗೆ ತುತ್ತಾದ ಕೆಲವರಲ್ಲಿ ಈ ಸುಸ್ತು ದೀರ್ಘಕಾಲಿಕ ಸಮಸ್ಯೆಯಾಗಿ ಕಾಡುತ್ತದೆ. ಕೋವಿಡ್-19 ಮನುಷ್ಯರ ಪಾಲಿಗೆ ಹೊಚ್ಚಹೊಸ ಕಾಯಿಲೆ. ನಮ್ಮ ಶರೀರಕ್ಕೆ ಇದನ್ನು ನಿರ್ವಹಿಸುವ ಕಲೆ ಇನ್ನೂ ಸಂಪೂರ್ಣವಾಗಿ ಸಿದ್ಧಿಸಿಲ್ಲ. ಹೀಗಾಗಿ, ಇದರ ವಿರುದ್ಧ ಸೆಣಸಲು ಶರೀರ ನಡೆಸುವ ಸಿದ್ಧತೆಯ ಭಾಗವಾಗಿ ಸುಸ್ತು ಕಾಣಬಹುದು. ಜೊತೆಗೆ, ಕೋವಿಡ್-ಪೂರ್ವದಲ್ಲಿ ಇದ್ದ ವೈಯಕ್ತಿಕ ಆರೋಗ್ಯ ಪರಿಸ್ಥಿತಿ, ಶಾರೀರಿಕ ವ್ಯಾಯಾಮ, ವಿಶ್ರಾಂತಿಯ ಅನುಕೂಲತೆ, ನಿದ್ರೆ, ಕೆಲಸದ ಒತ್ತಡಗಳು, ಸಾಮಾಜಿಕ ಜವಾಬ್ದಾರಿಗಳು, ಕೌಟುಂಬಿಕ ಸಮಸ್ಯೆಗಳು, ಆತಂಕ – ಇವುಗಳೆಲ್ಲವೂ ಆರೋಗ್ಯದ ಪುನಶ್ಚೇತನದಲ್ಲಿ ಪಾತ್ರ ವಹಿಸುತ್ತವೆ.

> ಕೋವಿಡ್‌ಗೆ ತುತ್ತಾದವರ ಪೈಕಿ ಅರ್ಧಕ್ಕಿಂತ ಹೆಚ್ಚು ಮಂದಿಗೆ ಚೇತರಿಕೆಯ ನಂತರವೂ ಸುಸ್ತಿನ ಲಕ್ಷಣಗಳು ಕಾಣುತ್ತವೆ. ಕೋವಿಡ್ ಚೇತರಿಕೆಯ ನಂತರ ಈ ಸುಸ್ತು ಏಕಾಗುತ್ತಿದೆ? ಇದಕ್ಕೆ ಪರಿಹಾರಗಳೇನು?



ಕೋವಿಡ್ ನಂತರದ ಸುಸ್ತನ್ನು ನಿರ್ವಹಿಸುವುದು ಹೇಗೆ? ಈ ಸುಸ್ತು ವಾಸ್ತವ ಎಂಬ ಸತ್ಯವನ್ನು ಮನಗಾಣಬೇಕು. ಅನೇಕ ವೈರಸ್ ಸೋಂಕುಗಳು ಇಂತಹ ಸುಸ್ತನ್ನು ಉಂಟುಮಾಡುತ್ತವೆ. ಅದೇ ರೀತಿಯಲ್ಲಿ ಪ್ರಸ್ತುತ ಕೋವಿಡ್ ಕೂಡ. ಇದರಿಂದ ಸುಧಾರಿಸಿಕೊಳ್ಳಲು ಮೈ-ಮನಸ್ಸುಗಳಿಗೆ ವಿಶ್ರಾಂತಿ ಬೇಕಾಗುತ್ತದೆ. ಹೀಗಾಗಿ, ತೀರಾ ಒತ್ತಡದ, ಶ್ರಮವನ್ನು ಬಯಸುವ ಕೆಲಸಗಳನ್ನು ಮುಂದೂಡಬೇಕು. ಸಾಕಷ್ಟು ನಿದ್ರೆ, ವಿಶ್ರಾಂತಿಗಳ ಮೂಲಕ ಚೇತರಿಕೆಗೆ ಅವಕಾಶ ನೀಡಬೇಕು.

ಸುಸ್ತಿನ ವೇಳೆ ತೀವ್ರತರವಾದ ವ್ಯಾಯಾಮ ಸಲ್ಲದು. ಸರಳವಾದ ಯೋಗ, ಪ್ರಾಣಾಯಾಮ, ಒಳ್ಳೆಯ ಕೃತಿಗಳ ಓದು, ಧ್ಯಾನಗಳು ದೇಹದ ಚೇತರಿಕೆಯ ಅಗತ್ಯಗಳಿಗೆ ಪೂರಕವಾಗುತ್ತವೆ. ದೈನಂದಿನ ಸ್ನಾನದಿಂದ ಮಾಂಸಖಂಡಗಳ ಸೆಡವು ಕಡಿಮೆಯಾಗುತ್ತದೆ; ವಿಶ್ರಾಂತಿಗೆ ಬೇಕಾದ ಹಿನ್ನೆಲೆ ದೊರೆಯುತ್ತದೆ. ಶರೀರಕ್ಕೆ ಸಾಮಾನ್ಯವಾಗಿ ಅಗತ್ಯವಿರುವ ಚಟುವಟಿಕೆಗಳನ್ನು ತಪ್ಪದೇ ಮಾಡುವುದು ಸರಿಯಾದ ವಿಧಾನ. ಇದನ್ನು ಕ್ರಮೇಣ, ಹಂತಹಂತವಾಗಿ ಹೆಚ್ಚಿಸುತ್ತಾ ಹೋಗಬೇಕು. ಸಮತೋಲಿತ ಆಹಾರ, ಸಾಕಷ್ಟು ನೀರಿನ ಸೇವನೆ ಮುಖ್ಯ.

ದಿನನಿತ್ಯದಲ್ಲಿ ನಮಗೆ ತಿಳಿಯದಂತೆಯೇ ಸಾಕಷ್ಟು ಸಂಕೀರ್ಣವಾದ ಕೆಲಸಗಳನ್ನು ಮಾಡುತ್ತಿರುತ್ತೇವೆ. ಇದರ ಅರಿವು ಮೂಡುವುದು ಸುಸ್ತಿನ ಸ್ಥಿತಿಯಲ್ಲಿಯೇ. ಇಂತಹ ಸಂಕೀರ್ಣ ಕೆಲಸಗಳನ್ನು ಘಟಕಗಳಾಗಿ ವಿಂಗಡಿಸಿ, ಒಂದೊಂದಾಗಿ ಮಾಡಬೇಕು. ಉದಾಹರಣೆಗೆ, ಮೆಟ್ಟಿಲು ಹತ್ತಬೇಕಾದಾಗ ಬದಿಯಲ್ಲಿರುವ ಆಸರೆಯನ್ನು ಬಳಸಿಕೊಳ್ಳಬೇಕು; ಕೆಲವು ಮೆಟ್ಟಿಲುಗಳನ್ನು ಹತ್ತಿದ ನಂತರ ಒಂದೆಡೆ ನಿಂತು, ಹತ್ತಾರು ಬಾರಿ ದೀರ್ಘವಾಗಿ ಉಸಿರಾಡಿ, ನಂತರ ಮುಂದುವರೆಯಬೇಕು; ಒಮ್ಮೆಗೇ ಎರಡು-ಮೂರು ಮಹಡಿ ಹತ್ತಬೇಕಾದ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಸ್ವಲ್ಪ ಕಾಲ ತಡೆಯುವುದು ಸೂಕ್ತ. ಹೀಗೆ, ಒಂದು ಸಂಕೀರ್ಣ ಕೆಲಸವನ್ನು ಅನೇಕ ಭಾಗಗಳಾಗಿ ವಿಂಗಡಿಸಿ ಮಾಡುವುದರಿಂದ ಆಯಾಸ ಕಡಿಮೆಯಾಗುತ್ತದೆ.

ಸುಸ್ತು ಎನ್ನುವುದು ಕೇವಲ ಶರೀರದ ಭೌತಿಕ ಕ್ರಿಯೆಗಳ ಪರಿಣಾಮ ಮಾತ್ರವಲ್ಲ; ಅದು ಮಾನಸಿಕ ಸ್ಥಿತಿಗೂ ಸಂಬಂಧಿಸಿದ್ದು. 'ಮುಂದೇನಾಗುವುದೋ' ಎಂಬ ಆಲೋಚನೆಯೇ ಹಲವರಲ್ಲಿ ಸುಸ್ತಿನ ಲಕ್ಷಣಗಳನ್ನು ಕಾಣಿಸುತ್ತದೆ. ಹೀಗಾಗಿ, ಆಯಾ ದಿನದ ಚಟುವಟಿಕೆಗಳನ್ನು ಸಾಧ್ಯವಾದಷ್ಟೂ ಯೋಜಿಸಿಕೊಳ್ಳಬೇಕು. ಯಾವ ಕೆಲಸಗಳನ್ನು ಕುಟುಂಬದ ಅಥವಾ ಕಚೇರಿಯ ಇತರರು ಮಾಡಬಹುದೋ, ಅದನ್ನು ಅವರಿಗೆ ವಹಿಸಬೇಕು. ತೀರಾ ಅಗತ್ಯ ಅನಿಸಿದ ಕೆಲಸಗಳನ್ನು ಮಾತ್ರ ಪ್ರಾಮುಖ್ಯಕ್ಕೆ ಅನುಸಾರವಾಗಿ ಮಾಡಬೇಕು. ಸಾಮಾನ್ಯ ದಿನಚರಿಯ ಧಾಂ-ಧೂಂ ಮಾದರಿಯ ಕೆಲಸಗಳನ್ನು ದೂರವಿಡಬೇಕು. ಎಲ್ಲೆಲ್ಲಿ ಭೌತಿಕ ಶ್ರಮದ ಅಗತ್ಯವಿಲ್ಲವೋ, ಅಲ್ಲಿ ಅದನ್ನು ಮಾಡದಿರುವುದೇ ಲೇಸು. ಆಯಾ ದಿನ ಮಾಡಿದ ಕೆಲಸಗಳನ್ನು ಒಂದೆಡೆ ನಮೂದಿಸುವುದು ಒಳಿತು. ಇದರಿಂದ ಯಾವ ಕೆಲಸ ಶ್ರಮದಾಯಕ; ಯಾವ ಕೆಲಸವನ್ನು ಇತರರಿಗೆ ವಹಿಸಬಹುದು; ಎಷ್ಟು ಶ್ರಮ ಸಹಿಸಲು ನಮಗೆ ಸಾಮರ್ಥ್ಯವಿದೆ; ಕೆಲಸ ಮಾಡುವ ಶಕ್ತಿ ಹೇಗೆ ಹೆಚ್ಚು/ಕಡಿಮೆ ಆಗುತ್ತಿದೆ ಎಂಬ ಮಾಹಿತಿಗಳು ದೊರೆಯುತ್ತವೆ. ಇವನ್ನೆಲ್ಲಾ ಅನುಸರಿಸಿದ ನಂತವೂ ಒಂದು ವೇಳೆ ಸುಸ್ತಿನ ಪ್ರಮಾಣ ಹೆಚ್ಚುತ್ತಲೇ ಇದ್ದರೆ, ವೈದ್ಯರನ್ನು ಭೇಟಿ ಮಾಡಬೇಕು.

ಸುಸ್ತಿನ ಪರಿಹಾರದಲ್ಲಿ ಮಾನಸಿಕ ಸಿದ್ಧತೆ ಬೇಕು. ಚೇತರಿಕೆ ಎಂಬುದು ಸ್ಪರ್ಧೆಯ ವಿಷಯವಲ್ಲ. ಯಾರು ಎಷ್ಟು ಬೇಗ ಚೇತರಿಸಿಕೊಂಡರು ಎನ್ನುವುದು ತುಲನೆ ಮಾಡುವ ಸಂಗತಿಯಲ್ಲ. ಹೀಗಾಗಿ, ಇತರರ ಜೊತೆ ಹೋಲಿಕೆ ಬೇಕಿಲ್ಲ. ಸುಧಾರಿಕೊಳ್ಳುವ ಪ್ರಕ್ರಿಯೆಯಲ್ಲಿ ಹಲವಾರು ಅಂಶಗಳು ಕಾರ್ಯಗತವಾಗುತ್ತವೆ. ಇದು ಪ್ರತಿಯೊಬ್ಬರಲ್ಲೂ ವಿಭಿನ್ನ. ಹೀಗಾಗಿ, ಯಾರೊಡನೆಯೂ ಹೋಲಿಸಿಕೊಂಡು ಬೇಸರಿಸಬೇಕಿಲ್ಲ. ಕೋವಿಡ್ ನಂತರದ ಸುಸ್ತು ಬಹುಮಟ್ಟಿಗೆ ತಾನೇತಾನಾಗಿ ಸರಿಹೋಗುವ ವಿಷಯ. ಈ ಪ್ರಕ್ರಿಯೆಯಲ್ಲಿ ಶರೀರ ಮತ್ತು ಮನಸ್ಸುಗಳಿಗೆ ಕಾಲಾವಕಾಶ ಮತ್ತು ಸಾಂತ್ವನ ನೀಡುವುದು ಅಗತ್ಯ. ❖



ಬದುಕಿನ ತುಡಿತದಲ್ಲಿ ರಾಗಭಾವ

ದೀಪಾ ಫಡ್ಕೆ

ಈ ಎರಡು–ಮೂರು ವರ್ಷದಲ್ಲಿ ನಮ್ಮನ್ನು ಕಾಡಿದ ಈ ಒತ್ತಡ, ಪ್ರಾಯಶಃ ಶತಮಾನದಲ್ಲಿ ಕಾಡಿಲ್ಲವೇನೋ! ಪ್ರತಿ ಕುಟುಂಬದ, ಸ್ನೇಹಿತರ ಗುಂಪಿನಲ್ಲಿ ಸಾವು–ನೋವಿನಿಂದ ಕಣ್ಮರೆಯಾದವರ ಸುದ್ದಿ ಬಂದಾಗಲೆಲ್ಲ ಮನಸ್ಸು ಮೂಕವಾಗುತ್ತಿತ್ತು. ಆದರೂ ಮನುಷ್ಯನ ಬದುಕಿನ ಛಲ ದೊಡ್ಡದು. ನಮ್ಮ ಬದುಕುಗಳು ಒತ್ತಡದ ನಡುವೆಯೂ ಬೆಳಕನ್ನು ಅರಸಿದ ರೀತಿ ಚೇತೋಹಾರಿ. ಮನ ತಣಿಸುವ ಸಂಗೀತ, ಸುತ್ತಲ ಬದುಕುಗಳ ಕತೆ ಹೇಳುವ ಪುಸ್ತಕಪ್ರಪಂಚ, ಮನಸ್ಸು ಮತ್ತು ದೇಹ ಎರಡನ್ನೂ ಸಂತೈಸುವ ಹೂದೋಟ, ಅಕ್ಕರೆಯಿಂದ ಬೇಯಿಸಿದಾಗ ಅಮೃತವೆನಿಸುವ ಆಹಾರ ಅಡುಗೆ, ಅನಿವಾರ್ಯವಾದರೂ ಮನೆಯಿಂದಲೇ ಕೆಲಸ ಮಾಡಿದ ಹೊಸ ಅನುಭವ – ಈ ಎಲ್ಲ ಹತ್ತು ಹಲವು ದಾರಿಗಳು ಈ ಒತ್ತಡದ ವೈರಿಯಾಗಿ ಹೋರಾಡಿದ್ದು ನಮ್ಮೊಳಗಿನ ಬದುಕಿನೆಡೆಗಿನ ತುಡಿತವನ್ನು ಹೇಳುತ್ತವೆ.

ಸ್ವರಗಳ ಲೋಕದ ಯಾನ. ಇದು ಮನುಷ್ಯನನ್ನು ಲೌಕಿಕ ಅಲೌಕಿಕಗಳ ನಡುವೆ ಸೇತುವೆಯಂತೆ ಕೈ ಹಿಡಿದು ಸಂತೈಸುವ ಅದ್ಭುತ ಮಾರ್ಗ. ಸಂಗೀತದೊಂದಿಗೆ ಮನುಷ್ಯನ ಸಂಬಂಧ, ಲೋಕದ ವಿಕಾಸದೊಂದಿಗೆ ವಿಕಾಸ ಕಂಡಿದೆ. ಇಹಕ್ಕೆ ಇಂಪು ತುಂಬುವ ಪರಕ್ಕೂ ದಾರಿ ತೋರುವ ಸ್ವರಸಂಗೀತ ಮನದ ಸಣ್ಣ ಗೀರನ್ನೂ ಮಾಯಿಸುವ ಮುಲಾಮೂ ಆಗಬಹುದು. 'ಪರ'ದ ಹಂಗೇ ಬೇಡವೆಂದರೂ ಈ ಲೋಕದ ಪ್ರತಿಕ್ಷಣವನ್ನು ರಸಮಯವಾಗಿಸುವ, ಮೈಮರೆಸಿ ಹಗುರವಾಗಿಸುವ ಶಕ್ತಸಾಧನವದು.

ಅಕ್ಷರಲೋಕವಂತೂ ಸಂಗೀತದಂತೆಯೇ ನಮ್ಮನ್ನು ಮೈದಡವಿ ಸದ್ದಿಲ್ಲದೇ ನಮ್ಮೊಂದಿಗೆ ಇರುವ ಭಾವಲೋಕ. ಪುಸ್ತಕಗಳು ತಮ್ಮೊಡಲಲ್ಲಿ ಹುದುಗಿಸಿಟ್ಟುಕೊಂಡ ಅನುಭವದ ಜೀವಂತಿಕೆ, ಓದುವಾಗ ನಮ್ಮನ್ನು ಮುಟ್ಟದೇ ತಟ್ಟದೇ ಇದ್ದೀತೇ!

ಇಷ್ಟೇ ಅನೂಹ್ಯವಾದ, ದಿನದಿಂದ ದಿನಕ್ಕೆ ನಮ್ಮನ್ನು ನೈಜ ಅಚ್ಚರಿಗೆ ತಳ್ಳುವ ಇನ್ನೊಂದು ಲೋಕವೆಂದರೆ, ಗಾರ್ಡನಿಂಗ್ ಎಂಬ ಮೈಕೈ ಮಣ್ಣಾಗಿಸುವ ಕಾಯಕದ ಲೋಕ. ಸ್ವಲ್ಪ ಮಣ್ಣು, ಸ್ವಲ್ಪ ತೇವ ಕೊಟ್ಟು ಹಸಿರಿನ ಮೂಲವನ್ನು ಊರಿ ನೋಡಿ, 'ನೀನೊಲಿದರೆ ಕೊರಡು ಕೊನರುವುದಯ್ಯ' ಎಂದು ಅಕ್ಕ ಹಾಡಿದಂತೆ ನೋಡನೋಡುತ್ತಿದ್ದಂತೇ ಪುಟ್ಟ ಪಾಟಿನಲ್ಲಿಯೂ ಹಸಿರೊಡೆಯುತ್ತದೆ. ಇನ್ನು ನಮ್ಮ ಸೂರ್ಯದೇವನ ಒಲವೂ ಸೇರಿದರೆ ಕುಂಡದಲ್ಲೂ ಬಣ್ಣಬಣ್ಣದ ಹೂಗಳು ಪ್ರತ್ಯಕ್ಷ.

ಸಂಗೀತ, ಅಕ್ಷರ ಮತ್ತು ಗಾರ್ಡನಿಂಗ್ ಇಂತಹ ಅನೇಕ ಮಾಯಕದ ಲೋಕಗಳಿಗೆ ಪ್ರವೇಶ ತೆಗೆದುಕೊಂಡರೆ ನಮ್ಮನ್ನು ಆಗೊಮ್ಮೆ ಈಗೊಮ್ಮೆ ಕಾಡುವ ನಿತ್ಯದ ಒತ್ತಡ, ನೀರಬೊಬ್ಬುಳಿಯಂತೆ ಮಾಯವಾಗುವುದರಲ್ಲಿ ಸಂದೇಹವೇ ಇಲ್ಲ.

ಒತ್ತಡ; ಇದು ಬದುಕಿನ ಒಂದು ಅನಿವಾರ್ಯ ಭಾಗ. ಅದನ್ನು ಜೀವನಪ್ರೀತಿಯೊಳಗಿನ ಕೆಲವೊಂದು ಸೂತ್ರಗಳಿಂದ ನಮ್ಮ ಹೆಜ್ಜೆಗಳಿಗೆ ಅಡ್ಡಿಯಾಗದಂತೇ ಅತ್ತ ಅಟ್ಟಬಹುದು. ಬದುಕಿಗೆ ಅತಿ ಅಗತ್ಯವಾದ ಆರ್ಥಿಕಶಕ್ತಿಯನ್ನು ಶ್ರಮದಿಂದ ಸಂಪಾದಿಸಿ ಜಾಗರೂಕತೆಯಿಂದ ಬಳಸುವುದು ಒಂದು ಜಾಣ ಹೆಜ್ಜೆ; ಬದುಕಿನ ವಾಸ್ತವವನ್ನು ಪರಿಸ್ಥಿತಿಗಳನ್ನು ಒಪ್ಪಿಕೊಳ್ಳುವುದೂ ಇನ್ನೊಂದು ಪ್ರಬುದ್ಧ ಹೆಜ್ಜೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಅನಿವಾರ್ಯವಲ್ಲದ ಅನಗತ್ಯ ಖರ್ಚು ಮಾಡದೇ ಆಹಾರ, ಬಟ್ಟೆಬರಗಳಲ್ಲಿ ಆದಷ್ಟು ಸರಳತೆಯನ್ನು ಮೈಗೂಡಿಸಿಕೊಳ್ಳುವುದು ಉತ್ತಮವೇ. ಮಂಕು ಬಡಿಯುವಂತೇ ಇರುವ ಈ ಪರಿಸ್ಥಿತಿಯಲ್ಲಿ ಆದಷ್ಟು ಚಟುವಟಿಕೆಯಿಂದ ಇರುವಂತೆ ನೋಡಿಕೊಳ್ಳುವುದು ಜಾಣನಡೆ. ತೀರಾ ಮುಂದಿನ ಅಲ್ಲದಿದ್ದರೂ ಅಲ್ಪಕಾಲದ ಗುರಿಗಳಿಗಾಗಿ ಸಮಯ ಹಾಳು ಮಾಡದೇ ಸಕಾರಾತ್ಮಕವಾಗಿ ಶ್ರಮ ಪಡೋಣ. ಹಿತಮಿತವಾದ, ಆರೋಗ್ಯಪೂರ್ಣ ಆಹಾರ ನಮ್ಮದಾಗಿದ್ದರೆ ಒತ್ತಡ ಎನ್ನುವ ಸುಳಿಯಿಂದ ಸುಲಭದಲ್ಲಿ ದೂರ ದೂರಕ್ಕೆ ಈಸಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ನಿಯಂತ್ರಣ ಮತ್ತು ಸಹಭಾಗಿತ್ವ

ಜೀವಶಾಸ್ತ್ರ | ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು


- ನರ ಅಂಗಾಂಶದ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಮೂಲ ಘಟಕ ನರಕೋಶ.
- ಒಂದು ಪ್ರಚೋದನೆಗೆ ತಾನೇ ತಾನಾಗಿ ಉಂಟಾಗುವ ಪ್ರತಿಕ್ರಿಯೆಯೇ ಪರಾವರ್ತಿತ ಪ್ರತಿಕ್ರಿಯೆ. ಇದರ ಕೇಂದ್ರ ಮೆದುಳುಬಳ್ಳಿ.
- ಹಾರ್ಮೋನ್‌ಗಳು ರಾಸಾಯನಿಕಗಳಾಗಿದ್ದು, ಅಂತಃಸ್ರಾವಕ ಗ್ರಂಥಿಗಳಿಂದ ಸ್ರವಿಕೆಯಾಗುತ್ತವೆ.
- ಅಡ್ರಿನಲಿನ್ ಹಾರ್ಮೋನ್ ಅನ್ನು ತುರ್ತುಪರಿಸ್ಥಿತಿಯ ಹಾರ್ಮೋನ್ ಎನ್ನುವರು.
- ಮಾನವನ ಮೆದುಳಿನ 3 ಪ್ರಮುಖ ಭಾಗಗಳೆಂದರೆ- ಮುಮ್ಮೆದುಳು, ಮಧ್ಯಮೆದುಳು & ಹಿಮ್ಮೆದುಳು.
- ಇನ್ಸುಲಿನ್ ಹಾರ್ಮೋನ್‌ನ ಕೊರತೆಯಿಂದ ಮಧುಮೇಹ ರೋಗ ಉಂಟಾಗುತ್ತದೆ.
- ಆಹಾರದಲ್ಲಿ ಅಯೋಡಿನ್ ಕೊರತೆಯು ಗಳಗಂಡ ರೋಗಕ್ಕೆ ಕಾರಣವಾಗುತ್ತದೆ.
- ಮಕ್ಕಳಲ್ಲಿ ಪಿಟ್ಯುಟರಿ ಹಾರ್ಮೋನ್‌ನ ಕೊರತೆಯಿಂದ ಕುಬ್ಜತೆ, ಅತಿಯಾದ ಸ್ರವಿಕೆಯಿಂದ ದೈತ್ಯತೆ ಉಂಟಾಗುತ್ತದೆ.
- ಸಸ್ಯಗಳಲ್ಲಿ ಕಂಡುಬರುವ ಎರಡು ರೀತಿಯ ಚಲನೆಗಳೆಂದರೆ-ಅನುವರ್ತನಾ ಮತ್ತು ಅಂತರೊತ್ತಡ ಚಲನೆಗಳು.
- ಮಾನವನ ಪರಿಧಿ ನರವ್ಯೂಹವು ಮೆದುಳಿನ 12 ಜೊತೆ ನರಗಳು ಹಾಗೂ ಮೆದುಳುಬಳ್ಳಿಯ 31 ಜೊತೆ ನರಗಳನ್ನು ಒಳಗೊಂಡಿದೆ.

ಮಾದರಿ ಪ್ರಶ್ನೆ-ಉತ್ತರಗಳು


1. **ಪರಾವರ್ತಿತ ಚಾಪ ಎಂದರೇನು? ಇದರ ಘಟಕಗಳನ್ನು ಹೆಸರಿಸಿ. ಅವುಗಳ ಕಾರ್ಯಗಳನ್ನು ತಿಳಿಸಿ.**
-ಪರಾವರ್ತಿತ ಪ್ರತಿಕ್ರಿಯೆಯು ಉಂಟಾಗುವಾಗ ನರ ಸಂದೇಶವು ಹಾದುಹೋಗುವ ಮಾರ್ಗ.
ಇದರ 5 ಪ್ರಮುಖ ಘಟಕಗಳೆಂದರೆ,
i)**ಗ್ರಾಹಕಗಳು**- ಜ್ಞಾನೇಂದ್ರಿಯಗಳು- ಪ್ರಚೋದನೆಯನ್ನು ಸ್ವೀಕರಿಸುತ್ತವೆ.
ii)**ಜ್ಞಾನವಾಹಿ ನರಕೋಶ**- ನರ ಆವೇಗಗಳನ್ನು ಮೆದುಳುಬಳ್ಳಿಯೆಡೆಗೆ ಕೊಂಡೊಯ್ಯುತ್ತದೆ.
iii)**ಸಂಬಂಧ ಕಲ್ಪಿಸುವ ನರಕೋಶ**- ಪ್ರಚೋದನೆಯನ್ನು ಗ್ರಹಿಸಿ ಸೂಕ್ತ ಪ್ರತಿಕ್ರಿಯೆಯನ್ನು ರವಾನಿಸುತ್ತದೆ.
iv)**ಕ್ರಿಯಾವಾಹಿ ನರಕೋಶ**- ಪ್ರತಿಕ್ರಿಯೆಯ ಸಂದೇಶವನ್ನು ಕಾರ್ಯನಿರ್ವಾಹಕದೆಡೆಗೆ ಕೊಂಡೊಯ್ಯುತ್ತದೆ.
v)**ಕಾರ್ಯನಿರ್ವಾಹಕ**- ಸ್ನಾಯುಗಳು, ಗ್ರಂಥಿಗಳು- ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ.
2. **ಮಾನವನ ಮೆದುಳಿನ ಈ ಕೆಳಗಿನ ಭಾಗಗಳ ಕಾರ್ಯಗಳನ್ನು ಬರೆಯಿರಿ.**
ಎ)**ಮಹಾಮಸ್ತಿಷ್ಕ:** ಜ್ಞಾಪಕಶಕ್ತಿ, ಬುದ್ಧಿಶಕ್ತಿ, ಕಲ್ಪನೆ, ಆಲೋಚನೆ
ಬಿ)**ಅನುಮಸ್ತಿಷ್ಕ:** ದೇಹದ ಸಮತೋಲನ, ಐಚ್ಛಿಕ ಕ್ರಿಯೆಗಳಾದ ನಡೆಯುವುದು, ಓಡುವುದು
ಸಿ)**ಪಾನ್ಸ್:** ಆಹಾರ ಅಗಿಯುವುದು, ಮುಖದ ಭಾವ, ಉಸಿರಾಟ
ಡಿ)**ಹೈಪೋಥಲಾಮಸ್:** ಹಸಿವು, ನಿದ್ರೆ, ದೇಹದ ಉಷ್ಣತೆ, ನೀರಿನ ಸಮತೋಲನ.
ಇ)**ಮೆಡುಲ್ಲಾ:** ಅನೈಚ್ಛಿಕ ಕ್ರಿಯೆಗಳಾದ ಉಸಿರಾಟ, ಹೃದಯ ಬಡಿತ, ರಕ್ತದೊತ್ತಡ, ಕಿಣ್ವಗಳ ಸ್ರವಿಕೆ, ಜೀರ್ಣನಾಳದ ಚಲನೆಗಳ ನಿಯಂತ್ರಣ.
3. **ನ್ಯೂರಾನ್(ನರಕೋಶ)ನ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.**
- ನರಕೋಶವು ನರ ಅಂಗಾಂಶದ ರಚನಾತ್ಮಕ ಕಾರ್ಯನಿರ್ವಾಹಕ ಮೂಲ ಘಟಕವಾಗಿದ್ದು, ವಿದ್ಯುತ್ ಆವೇಗಗಳ ರೂಪದಲ್ಲಿ ಸಂದೇಶ ಕೊಂಡೊಯ್ಯುತ್ತದೆ.
- ನರಕೋಶವು ಕೋಶಕಾಯ ಮತ್ತು ಆಕ್ಸಾನ್ ಎಂಬ 2 ಭಾಗಗಳನ್ನು ಹೊಂದಿದೆ.
- ಕೋಶಕಾಯ ಭಾಗವು ನ್ಯೂಕ್ಲಿಯಸ್ ಅನ್ನು ಹೊಂದಿದ್ದು, ಅದರ ಸುತ್ತಲೂ ಬೆರಳಿನಾಕಾರದ ಡೆಂಡ್ರೈಟ್‌ಗಳೆಂಬ ರಚನೆಗಳನ್ನು ಹೊಂದಿದೆ. ಇವು ಪ್ರಚೋದನೆಯ ಸಂದೇಶಗಳನ್ನು ಸ್ವೀಕರಿಸುತ್ತವೆ.
- ಉದ್ದವಾದ ರಚನೆಯನ್ನು ಆಕ್ಸಾನ್ ಎನ್ನುವರು.
- ಸಂದೇಶಗಳು ಕೋಶಕಾಯದಿಂದ ಆಕ್ಸಾನ್, ನರತುದಿಗಳ ಮೂಲಕ ಹರಿದು ಮುಂದಿನ ಕೋಶಕ್ಕೆ ರವಾನೆಯಾಗುತ್ತವೆ.
4. **ಅನುವರ್ತನಾ ಚಲನೆಗಳು ಎಂದರೇನು? ಸಸ್ಯಗಳಲ್ಲಿ ಕಂಡುಬರುವ ನಾಲ್ಕು ಬಗೆಯ ಅನುವರ್ತನೆಗಳ ಬಗ್ಗೆ ತಿಳಿಸಿ. ಉದಾಹರಣೆ ಕೊಡಿ.**
-ಪರಿಸರದ ಕೆಲವು ಪ್ರಚೋದನೆಗಳಿಂದ ನಿರ್ದೇಶಿಸಲ್ಪಟ್ಟ, ಸಸ್ಯಗಳಲ್ಲಿನ ಬೆಳವಣಿಗೆಯನ್ನಾಧರಿಸಿದ ಚಲನೆಗಳನ್ನು ಅನುವರ್ತನಾ ಚಲನೆಗಳು ಎನ್ನುವರು.
ಇವುಗಳ ಪ್ರಮುಖ ಬಗೆಗಳೆಂದರೆ,
- **ದ್ಯುತಿ ಅನುವರ್ತನೆ:** ಬೆಳಕಿನ ಕಡೆಗೆ ಸಸ್ಯಭಾಗಗಳ ಅನುವರ್ತನೆ
ಉದಾ|| ಕಾಂಡ ಬೆಳಕಿನ ಕಡೆಗೆ(ಧನ), ಬೇರು ಬೆಳಕಿನ ವಿರುದ್ಧ(ಋಣ)
- **ಗುರುತ್ವಾನುವರ್ತನೆ:** ಭೂಮಿಯ ಗುರುತ್ವದೆಡೆಗೆ ಸಸ್ಯಭಾಗಗಳ ಅನುವರ್ತನೆ
ಉದಾ|| ಬೇರು ಗುರುತ್ವದ ಕಡೆಗೆ(ಧನ), ಕಾಂಡ ಗುರುತ್ವದ ವಿರುದ್ಧ(ಋಣ).
- **ಜಲಾನುವರ್ತನೆ:** ನೀರಿನ ಕಡೆಗೆ ಸಸ್ಯಭಾಗಗಳ ಅನುವರ್ತನೆ
ಉದಾ|| ಬೇರು ನೀರಿನ ಕಡೆಗೆ(ಧನ), ಕಾಂಡ ನೀರಿನ ವಿರುದ್ಧ(ಋಣ).
- **ರಾಸಾಯನಿಕ ಅನುವರ್ತನೆ:** ರಾಸಾಯನಿಕ ವಸ್ತುಗಳ ಕಡೆಗೆ ಸಸ್ಯಭಾಗಗಳ ಅನುವರ್ತನೆ
ಉದಾ||ಅಂಡಾಣುವಿನ ಕಡೆಗೆ ಪರಾಗ ನಳಿಕೆಯ ಬೆಳವಣಿಗೆ.
5. **ಮೆದುಳು ಮತ್ತು ಮೆದುಳುಬಳ್ಳಿ ಹೇಗೆ ಸಂರಕ್ಷಿಸಲ್ಪಟ್ಟಿವೆ?**
- ಮೆದುಳನ್ನು ತಲೆಬುರುಡೆಯು ಸಂರಕ್ಷಿಸಿದೆ
- ಮೆದುಳುಬಳ್ಳಿಯನ್ನು ಬೆನ್ನುಮೂಳೆಯು ಸಂರಕ್ಷಿಸಿದೆ
- ಮೆದುಳು ಮತ್ತು ಮೆದುಳುಬಳ್ಳಿಯನ್ನು ಮೆನೆಂಜಿಸ್ ಎಂಬ ಪೊರೆಗಳು ಹಾಗೂ ಅದರೊಳಗಿನ ದ್ರವವು(ಸೆರಿಬ್ರೋ-ಸ್ಪೈನಲ್ ದ್ರವ) ಸಂರಕ್ಷಿಸುತ್ತದೆ.
6. **ಪ್ರಮುಖ ಸಸ್ಯಹಾರ್ಮೋನ್‌ಗಳನ್ನು ಹೆಸರಿಸಿ. ಅವುಗಳ ಕಾರ್ಯ ತಿಳಿಸಿ.**
- ಬೆಳವಣಿಗೆ ವೃದ್ಧಿಸುವ ಹಾರ್ಮೋನ್‌ಗಳು
i)**ಆಕ್ಸಿನ್‌ಗಳು**- ಜೀವಕೋಶಗಳ ಉದ್ದ ಹೆಚ್ಚಿಸುತ್ತವೆ.
ii)**ಜಿಬ್ಬರ್‌ಲಿನ್‌ಗಳು**- ಕಾಂಡದ ಬೆಳವಣಿಗೆ
iii)**ಸೈಟೋಕೈನಿನ್‌ಗಳು**- ಕೋಶವಿಭಜನೆಯನ್ನು ಉತ್ತೇಜಿಸುತ್ತವೆ.
- ಬೆಳವಣಿಗೆ ಪ್ರತಿಬಂಧಕ ಹಾರ್ಮೋನ್
iv)**ಅಬ್ಸಿಸಿಕ್ ಆಮ್ಲ**- ಬೆಳವಣಿಗೆಯನ್ನು ಪ್ರತಿಬಂಧಿಸುತ್ತದೆ.
7. **ಈ ಕೆಳಗಿನ ಅಂತಃಸ್ರಾವಕ ಗ್ರಂಥಿಗಳು ಸ್ರವಿಸುವ ಪ್ರಮುಖ ಹಾರ್ಮೋನ್‌ಗಳು ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.**
ಎ)**ಪಿಟ್ಯುಟರಿ**-ಬೆಳವಣಿಗೆಯ ಹಾರ್ಮೋನ್- ದೇಹದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
ಬಿ)**ಥೈರಾಯ್ಡ್-ಥೈರಾಕ್ಸಿನ್**– ದೇಹದ ಚಯಾಪಚಯ ಕ್ರಿಯೆಗಳ ನಿಯಂತ್ರಣ
ಸಿ)**ಅಡ್ರಿನಲ್-ಅಡ್ರಿನಲಿನ್**- ಭಯ, ಕೋಪ, ಭಾವೋದ್ವೇಗದ ತುರ್ತುಪರಿಸ್ಥಿತಿಯನ್ನು ಎದುರಿಸಲು ದೇಹವನ್ನು ಸಿದ್ಧಪಡಿಸುತ್ತದೆ.
ಡಿ)**ಮೇದೋಜೀರಕ(ಲ್ಯಾಂಗರ್ ಹ್ಯಾನ್ಸನ ಕಿರುದ್ವೀಪಗಳು)**- ಇನ್ಸುಲಿನ್- ರಕ್ತದಲ್ಲಿ ಗ್ಲೂಕೋಸ್ ಪ್ರಮಾಣದ ನಿಯಂತ್ರಣ.
ಇ)**ಅಂಡಾಶಯಗಳು**- ಈಸ್ಟ್ರೋಜನ್‌ಗಳು-ಸ್ತ್ರೀ ಲಕ್ಷಣಗಳ ಬೆಳವಣಿಗೆ ಮತ್ತು ಋತುಚಕ್ರ ನಿಯಂತ್ರಣ.
ಎಫ್)**ವೃಷಣಗಳು**- ಟೆಸ್ಟೋಸ್ಟಿರಾನ್-ಪುರುಷ ಲಕ್ಷಣಗಳ ಬೆಳವಣಿಗೆ.

ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:

ಎ)ನರಕೋಶದ ರಚನೆ(ಚಿತ್ರ-7.1 a)




ಬಿ) ಮಾನವನ ಮಿದುಳು(ಚಿತ್ರ-7.3)



ಬಾಲರಾಜು.ಎ ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಘನಸ್ಥಿತಿ: ಮುಖ-ಕೇಂದ್ರಿತ ಘನಾಕೃತಿ ಘಟಕ ಕೋಶ

ರಸಾಯನ ಶಾಸ್ತ್ರ | ಪಿಯುಸಿ



ಮೇಲಿನ ಚಿತ್ರದಲ್ಲಿ ಕಾಣುವಂತೆ. ಮುಖ-ಕೇಂದ್ರಿತ ಘನಾಕೃತಿ (fcc) ಘಟಕ ಕೋಶವು ಘನದ ಎಲ್ಲಾ ಮುಖಗಳ ಮಧ್ಯಭಾಗದ ಜೊತೆಗೆ ಎಲ್ಲಾ ಮೂಲೆಗಳಲ್ಲೂ ಮತ್ತು ಎಲ್ಲಾ ಮುಖಗಳ ಮಧ್ಯಭಾಗದಲ್ಲಿ ಪರಮಾಣುಗಳನ್ನು ಹೊಂದಿರುತ್ತದೆ.


ಮುಖದ ಕೇಂದ್ರದಲ್ಲಿ ನೆಲೆಗೊಂಡಿರುವ ಪ್ರತಿ ಪರಮಾಣು ಎರಡು ಪಕ್ಕದ ಘಟಕ ಕೋಶಗಳ ನಡುವೆ ಹಂಚಿಕೊಳ್ಳಲ್ಪಡುತ್ತದೆ ಮತ್ತು ಪ್ರತಿ ಪರಮಾಣುವಿನ ಕೇವಲ 1 ಭಾಗ ಮಾತ್ರ ಒಂದು ಘಟಕ ಕೋಶಕ್ಕೆ ಸೇರಿದೆ. ಕೆಳಗಿನ

ಚಿತ್ರದಲ್ಲಿ (a) ತೆರೆದ ರಚನೆ (b) ಜಾಗವನ್ನು ತುಂಬುವ ಮಾದರಿ ಮತ್ತು (c) ಪರಮಾಣುಗಳು ಘಟಕ ಕೋಶಕ್ಕೆ ಸೇರಿರುವ ನಿಜವಾದ ಭಾಗವನ್ನು ತೋರಿಸುತ್ತದೆ. ಆದ್ದರಿಂದ, ಮುಖ-ಕೇಂದ್ರಿತ ಘನಾಕೃತಿಯ (fcc) ಘಟಕ ಕೋಶದಲ್ಲಿ

(i) 8 ಮೂಲೆಗಳ ಪರಮಾಣುಗಳು $\times \frac{1}{8}$ ಪ್ರತಿ ಘಟಕ ಕೋಶದ ಪರಮಾಣು $= 8 \times \frac{1}{8} =$ 1 ಪರಮಾಣು

(ii) 6 ಮುಖ ಕೇಂದ್ರಿತ ಅಣುಗಳು $\times \frac{1}{2}$ ಪರಮಾಣು ಪ್ರತಿ ಘಟಕ ಕೋಶಕ್ಕೆ $= 6 \times \frac{1}{2} = 3$ ಪರಮಾಣುಗಳು

$\therefore$ ಪ್ರತಿ ಘಟಕ ಕೋಶದ ಒಟ್ಟು ಪರಮಾಣುಗಳು = 4 ಪರಮಾಣುಗಳು




ಮುಖ ಕೇಂದ್ರಿತ ಘನಘಟಕ ಕೋಶ (a) ತೆರೆದ ರಚನೆ (b) ಖಾಲಿ ಜಾಗ ತುಂಬುವ ವಿನ್ಯಾಸ (c) ಒಂದು ಘಟಕ ಕೋಶಕ್ಕೆ ಸೇರಿರುವ ಪರಮಾಣುವಿನ ನಿಜವಾದ ಭಾಗ. ತುಂಬುವ ವಿನ್ಯಾಸ (c) ಒಂದು ಘಟಕ ಕೋಶಕ್ಕೆ ಸೇರಿರುವ ಪರಮಾಣುವಿನ ನಿಜವಾದ ಭಾಗ.

ನಿಕಟ ಜೋಡಣೆಯ ರಚನೆಗಳು

ಘನವಸ್ತುಗಳಲ್ಲಿ ಘಟಕ ಕಣಗಳು ತುಂಬಾ ಒತ್ತೊತ್ತಾಗಿ ಜೋಡಣೆಯಾಗಿದ್ದು, ಕನಿಷ್ಠ ಖಾಲಿ ಜಾಗವನ್ನು ಬಿಟ್ಟು ಕೊಡುತ್ತವೆ. ಘಟಕ ಕಣಗಳನ್ನು ಏಕರೂಪದ ಗಟ್ಟಿ ಗೋಳಗಳೆಂದು ಪರಿಗಣಿಸಿ, 3 ಹಂತಗಳಲ್ಲಿ ಮೂರು ಆಯಾಮದ ರಚನೆಯನ್ನು ನಿರ್ಮಿಸುವುದನ್ನು ನೋಡೋಣ.

(a) ಒಂದು ಆಯಾಮದಲ್ಲಿನ ನಿಕಟ ಜೋಡಣೆ: ಒಂದು ಆಯಾಮದ ನಿಕಟ ಜೋಡಣೆಯ ರಚನೆಯಲ್ಲಿ ಗೋಳಗಳನ್ನು ಜೋಡಿಸುವ ಏಕೈಕ ಮಾರ್ಗವೆಂದರೆ ಅದು ಅಡ್ಡ ಸಾಲಿನಲ್ಲಿ ಅವುಗಳನ್ನು ಜೋಡಣೆಗೊಳಿಸುವುದು ಮತ್ತು ಪರಸ್ಪರ ಸ್ಪರ್ಶಿಸುವುದು




ಈ ಜೋಡಣೆಯಲ್ಲಿ, ಪ್ರತಿಯೊಂದು ಗೋಳವು ಎರಡು ನೆರೆಯ ಗೋಳಗಳೊಂದಿಗೆ ಸಂಪರ್ಕವನ್ನು ಹೊಂದಿದೆ. ಕಣಕ್ಕೆ ಅತಿ ಹತ್ತಿರದ ನೆರೆಯ ಸಂಖ್ಯೆಯನ್ನು ಅದರ ಸಮನ್ವಯ ಸಂಖ್ಯೆ 2.

ಎರಡು ಆಯಾಮಗಳಲ್ಲಿ ನಿಕಟ ಜೋಡಣೆ:

ಎರಡು ಆಯಾಮದ ನಿಕಟ ಜೋಡಣೆ ರಚನೆಯನ್ನು ನಿಕಟ ಗೋಳಗಳ ಸಾಲುಗಳನ್ನು ಇಟ್ಟು ಸೃಷ್ಟಿಸಬಹುದು, ಇದನ್ನು ಎರಡು ವಿಭಿನ್ನ ರೀತಿಗಳಲ್ಲಿ ಮಾಡಬಹುದು.

(i) ಎರಡನೇ ಸಾಲಿನಲ್ಲಿನ ಗೋಳಗಳು ಮೊದಲ ಸಾಲುಗಳ ಮೇಲೆ ಯಥಾವತ್ತಾಗಿ ಎರಡನೆಯ ಸಾಲನ್ನು ಮೊದಲನೆಯದರೊಂದಿಗೆ ಸಂಪರ್ಕದಲ್ಲಿ ಇಡಬಹುದು. ಎರಡು ಸಾಲುಗಳ ಗೋಳಗಳನ್ನು ಅಡ್ಡವಾಗಿ ಮತ್ತು ಲಂಬವಾಗಿ ಜೋಡಿಸಲಾಗುತ್ತದೆ. ನೀವು ಮೊದಲ ಸಾಲನ್ನು A ವಿಧದ ಸಾಲು ಎಂದು ಕರೆದರೆ, ಎರಡನೇ ಸಾಲು ಯಥಾವತ್ತಾಗಿ ಮೊದಲನೆಯ ರೀತಿಯದ್ದಾಗಿರುತ್ತದೆ, ಅದು ಕೂಡ A ರೀತಿಯದ್ದಾಗಿದೆ. ಅಂತೆಯೇ ಚಿತ್ರ (ಎ)ನಲ್ಲಿ ತೋರಿಸಿರುವಂತೆ AAA ರೀತಿಯ ಜೋಡಣೆಯನ್ನು ಪಡೆಯಲು ನಾವು ಹೆಚ್ಚು ಸಾಲುಗಳನ್ನು ಇರಿಸಬಹುದು.



ಈ ಜೋಡಣೆಯಲ್ಲಿ ಪ್ರತಿ ಗೋಳವು ತನ್ನ ನೆರೆಯ 4 ಗೋಳಗಳೊಂದಿಗೆ ಸಂಪರ್ಕದಲ್ಲಿದೆ. ಹೀಗಾಗಿ ಎರಡು ಆಯಾಮದಲ್ಲಿ ಸಮನ್ವಯ ಸಂಖ್ಯೆಯು 4 ಆಗಿದೆ. ಅಲ್ಲದೆ ಈ ನಾಲ್ಕು ನೆರೆಯ ಗೋಳಗಳ ಕೇಂದ್ರಗಳು ಸೇರಿಕೊಂಡರೆ, ಒಂದು ಚೌಕವು ರೂಪುಗೊಳ್ಳುತ್ತದೆ. ಆಗ ಈ ಜೋಡಣೆಯನ್ನು ಎರಡು ಆಯಾಮಗಳಲ್ಲಿ ಚೌಕನಿಕಟ ಜೋಡಣೆ ಎಂದು ಕರೆಯಲಾಗುತ್ತದೆ.

(ii) ಎರಡನೆಯ ಅಡ್ಡ ಸಾಲನ್ನು ಮೊದಲನೆಯದರ ಮೇಲೆ ಮೊದಲನೆಯ ಸಾಲಿನ ಗೋಳಗಳ ನಡುವಿನ ತಗ್ಗಿನಲ್ಲಿ ಸರಿಯಾಗಿ ಕೂರುವಂತೆ ಸಾಂತರಿಕ ಮಾದರಿಯಲ್ಲಿ ಇಡಬಹುದಾಗಿದೆ. ಮೊದಲ ಸಾಲಿನಲ್ಲಿರುವ ಗೋಳಗಳ ಜೋಡಣೆಯನ್ನು A ವಿಧವೆಂದು ಕರೆದರೆ, ಎರಡನೆಯ ಸಾಲು ವಿಭಿನ್ನವಾಗಿರುವುದರಿಂದ ಅದನ್ನು B ವಿಧವೆಂದು ಕರೆಯಬಹುದು. ಮೂರನೆಯ ಸಾಲನ್ನು ಎರಡನೆಯ ಸಾಲಿನ ಪಕ್ಕದಲ್ಲಿ ಹಿಡಿದಾಗ, ಅದರ ಗೋಳಗಳು ಮೊದಲನೆಯ ಪದರದ ಸಾಲಿನಲ್ಲೇ ಜೋಡಿಸಲ್ಪಟ್ಟಿರುತ್ತವೆ. ಆದ್ದರಿಂದ ಈ ಪದರವೂ ಸಹ A ವಿಧವಾಗಿದೆ. ಇದೇ ರೀತಿ ನಾಲ್ಕನೇ ಸಾಲಿನಲ್ಲಿರುವ ಗೋಳಗಳು ಎರಡನೇ ಸಾಲಿನ ರೀತಿಯಲ್ಲಿ ಜೋಡಿಸಲ್ಪಡುತ್ತದೆ. ಆದ್ದರಿಂದ ಈ ಜೋಡಣೆಯು ABAB ರೀತಿಯದ್ದಾಗಿದೆ. ಈ ವ್ಯವಸ್ಥೆಯಲ್ಲಿ ಕಡಿಮೆ ಮುಕ್ತ ಜಾಗವಿದೆ ಮತ್ತು ಈ ಜೋಡಣೆಯು ಚೌಕ ಜೋಡಣೆಗಿಂತ ಹೆಚ್ಚು ದಕ್ಷತೆ ಉಳ್ಳದ್ದಾಗಿದೆ. ಪ್ರತಿಯೊಂದು ಗೋಳವು ಅದರ ನೆರೆಯ 6 ಗೋಳಗಳೊಂದಿಗೆ ಸಂಪರ್ಕದಲ್ಲಿದೆ ಮತ್ತು ಎರಡು ಆಯಾಮದಲ್ಲಿ ಸಮನ್ವಯಿ ಸಂಖ್ಯೆ 6 ಆಗಿದೆ. ಈ ಆರು ಗೋಳಗಳ ಕೇಂದ್ರಗಳ ನಿಯಮಿತ ಷಟ್ಕೋನದ ಮೂಲೆಗಳಲ್ಲಿವೆ. (ಚಿತ್ರ b). ಆದ್ದರಿಂದ ಈ ಜೋಡಣೆಯನ್ನು ಎರಡು ಆಯಾಮದ ಷಡ್ಭುಜೀಯ ನಿಕಟ ಜೋಡಣೆ ಎಂದು ಕರೆಯಲ್ಪಡುತ್ತದೆ. ಈ ಪದರದಲ್ಲಿ ಕೆಲವು ಖಾಲಿ ಜಾಗಗಳು (ಖಾಲಿ ಸ್ಥಳಗಳು) ಇವೆಯೆಂದು ಚಿತ್ರ(b)ರಲ್ಲಿ ನೋಡಬಹುದಾಗಿದೆ. ಇವುಗಳು ತ್ರಿಕೋನ ಆಕಾರದಲ್ಲಿರುತ್ತವೆ. ತ್ರಿಕೋನ ಖಾಲಿ ಜಾಗ ಎರಡು ವಿಭಿನ್ನ ರೀತಿಯದ್ದಾಗಿದೆ. ಒಂದು ಸಾಲಿನಲ್ಲಿ, ತ್ರಿಕೋನಗಳ ತುದಿಯು ಮೇಲ್ಮುಖವಾಗಿ ಮತ್ತು ಮುಂದಿನ ಪದರದಲ್ಲಿ ಕೆಳಮುಖವಾಗಿ ತೋರಿಸುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು



ಸುಭಾಷಿತ

ಯಾವುದೇ ಕಾರ್ಯದಲ್ಲಿ ತೊಡಗುವ ಮುನ್ನ, ಇದನ್ನೇಕೆ ಮಾಡುತ್ತಿದ್ದೇನೆ?, ಇದರ ಫಲಗಳೇನು?, ಇದರಲ್ಲಿ ಸಫಲನಾಗುತ್ತೇನೆಯೇ ಎಂದು ಕೇಳಿಕೊಳ್ಳಿ. ಪ್ರಾಮಾಣಿಕ ಮತ್ತು ಸ್ಪಷ್ಟವಾದ ಉತ್ತರ ಸಿಕ್ಕಿದರೆ ಮಾತ್ರ ಮುಂದುವರಿಯಿರಿ.

–ಚಾಣಕ್ಯ

ಹಿಜಾಬ್ ‘ಉತ್ಪಾದಿತ’ ಪ್ರಕರಣ ಪ್ರಜಾತಂತ್ರದ ಆಶಯಗಳ ಅಣಕ

ರಾಜ್ಯದ ಕೆಲವೆಡೆ ವಿಶೇಷವಾಗಿ ಕರಾವಳಿಯ ಕೆಲವು ಕಾಲೇಜುಗಳಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿಗಳಿಗೆ ಪ್ರವೇಶ ನಿರಾಕರಿಸುತ್ತಿರುವುದು ಕಳವಳ ಉಂಟುಮಾಡುವ ವಿದ್ಯಮಾನ. ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ಹತ್ತಾರು ಸರ್ಕಾರಿ ಕಾರ್ಯಕ್ರಮಗಳು ಜಾರಿಯಲ್ಲಿವೆ. ‘ಹೆಣ್ಣುಮಕ್ಕಳನ್ನು ರಕ್ಷಿಸಿ, ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿ’ ಎನ್ನುವುದು ಕೇಂದ್ರ ಸರ್ಕಾರದ ಜನಪ್ರಿಯ ಘೋಷಣೆ. ಈ ಕಾಳಜಿ ಹಾಗೂ ಘೋಷಣೆಯನ್ನು ಅಣಕಿಸುವಂತಿರುವ ‘ಹಿಜಾಬ್ ರಾಜಕೀಯ’ಕ್ಕೆ ಕರ್ನಾಟಕ ವೇದಿಕೆಯಾಗಿರುವುದು ಪ್ರಜ್ಞಾವಂತರು ತಲೆತಗ್ಗಿಸಬೇಕಾದ ವಿದ್ಯಮಾನ. ‘ಉತ್ಪಾದಿತ ಸಮಸ್ಯೆ’ಯನ್ನು ಸೌಹಾರ್ದವಾಗಿ ಬಗೆಹರಿಸಬೇಕಿದ್ದ ಸರ್ಕಾರವು ಕಾಲೇಜುಗಳ ಆಡಳಿತ ಮಂಡಳಿಯ ಬೆಂಬಲಕ್ಕೆ ನಿಂತಿರುವುದು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯವೆಂದು ಇದ್ದಕ್ಕಿದ್ದಂತೆ ಆದೇಶ ಹೊರಡಿಸಿರುವುದು ಅಲ್ಪಸಂಖ್ಯಾತರಲ್ಲಿ ಅಸುರಕ್ಷತೆ ಉಂಟು ಮಾಡುವ ಕ್ರಮವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷದ ಅಥವಾ ನಿರ್ದಿಷ್ಟ ಸಮುದಾಯದ ಅಜೆಂಡಾವನ್ನು ಜಾರಿಗೊಳಿಸಲು ಅವಕಾಶವಿಲ್ಲ. ಎಲ್ಲ ವರ್ಗದವರನ್ನು ಸೌಹಾರ್ದದಿಂದ ನಡೆಸಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ. ವಿದ್ಯಾರ್ಥಿನಿಯರ ಶೈಕ್ಷಣಿಕ ಹಿತವನ್ನು ಕಡೆಗಣಿಸಿರುವ ಸರ್ಕಾರ, ಹಿಜಾಬ್ ವಿಷಯದಲ್ಲಿ ಹಟ ಹಿಡಿದಿದೆ ಹಾಗೂ ಹೆಣ್ಣುಮಕ್ಕಳ ಭವಿಷ್ಯದ ಜೊತೆಗೆ ಕಣ್ಣಾಮುಚ್ಚಾಲೆ ಆಡುತ್ತಿದೆ. ಹಿಜಾಬ್ ಧರಿಸಿದ ಹೆಣ್ಣುಮಕ್ಕಳಿಗೆ ತರಗತಿಗೆ ಪ್ರವೇಶವಿಲ್ಲ ಎನ್ನುವುದಾದರೆ, ಪಗಡಿ ಧರಿಸಿದ ಸಿಖ್ ವಿದ್ಯಾರ್ಥಿಯನ್ನು ಸರ್ಕಾರ ಹೇಗೆ ಭಾವಿಸುತ್ತದೆ ಎನ್ನುವ ಪ್ರಶ್ನೆಗೆ ಸರ್ಕಾರ ಸ್ಪಷ್ಟನೆ ನೀಡಬೇಕಾಗಿದೆ. ಶಾಲೆಗಳ ಶೈಕ್ಷಣಿಕ ಕಾರ್ಯಕ್ರಮದ ಭಾಗವೇ ಆಗಿರುವ ಪೂಜಾ ಆಚರಣೆಗಳ ಬಗೆಗಿನ ನಿಲುವನ್ನೂ ಸರ್ಕಾರ ಬಹಿರಂಗಪಡಿಸಬೇಕು.



> ಪ್ರಜಾತಂತ್ರದ ಬಗ್ಗೆ ಮಾತನಾಡುತ್ತಲೇ, ಅದರ ಆಶಯಗಳನ್ನು ಗಾಸಿಗೊಳಿಸುವ ಕೆಲಸದಲ್ಲಿ ತೊಡಗುವ ಕೂಗುಮಾರಿಗಳನ್ನು ಸುಮ್ಮನಿರಿಸುವ ಕೆಲಸವನ್ನು ಆಯಾ ಪಕ್ಷಗಳು ಇನ್ನಾದರೂ ಮಾಡಬೇಕು

ಹಿಜಾಬ್ ಧರಿಸಿಯೇ ಕಾಲೇಜಿಗೆ ಬರುತ್ತೇವೆಂದು ಹಟ ಹಿಡಿದಿರುವ ಹೆಣ್ಣುಮಕ್ಕಳು ಕೆಲವರ ಕಣ್ಣಿಗೆ ಹಟಮಾರಿಗಳಂತೆ ಕಾಣಿಸುತ್ತಿದ್ದಾರೆ. ಆದರೆ, ಮುಸ್ಲಿಂ ಸಮುದಾಯದ ಕೆಲವು ವಿದ್ಯಾರ್ಥಿನಿಯರು ತೀರಾ ಇತ್ತೀಚಿನವರೆಗೂ ಸಮವಸ್ತ್ರದೊಂದಿಗೆ ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗುತ್ತಿದ್ದುದು ಹಾಗೂ ಅದರ ಬಗ್ಗೆ ಯಾರಿಗೂ ಆಕ್ಷೇಪ ಇಲ್ಲದಿದ್ದುದನ್ನು ಮರೆಯಬಾರದು. ಈವರೆಗೆ ಇಲ್ಲದ ವಿರೋಧವು ಧುತ್ತನೆ ಉದ್ಭವವಾದುದರ ಹಿಂದೆ ರಾಜಕೀಯ ವಾಸನೆ ಇದೆಯೇ ಹೊರತು, ಶೈಕ್ಷಣಿಕ ಹಿತಾಸಕ್ತಿಯಲ್ಲ. ಶಿಕ್ಷಣದ ಬೆಳಕಿಗೆ ಈಗಷ್ಟೇ ತೆರೆದುಕೊಳ್ಳುತ್ತಿರುವ ಹೆಣ್ಣುಮಕ್ಕಳನ್ನು ಹಿಜಾಬ್ ನೆಪದಲ್ಲಿ ತರಗತಿಗಳಿಂದ ಹೊರಗೆ ನಿಲ್ಲಿಸುವುದು ಅಮಾನವೀಯ. ಯಾರದೋ ಹಟಕ್ಕೆ ಹೆಣ್ಣುಮಕ್ಕಳ ಶಿಕ್ಷಣ ಬಲಿಯಾಗಲು ಸರ್ಕಾರ ಅವಕಾಶ ಕಲ್ಪಿಸಬಾರದು. ಹಿಜಾಬ್ ಎನ್ನುವುದು ಮುಸ್ಲಿಂ ಹೆಣ್ಣುಮಕ್ಕಳಿಗೆ ಧಾರ್ಮಿಕ ಹೇರಿಕೆಯೇ ಅಲ್ಲವೇ ಎನ್ನುವುದನ್ನು ಆ ಧರ್ಮಕ್ಕೆ ಹಾಗೂ ನ್ಯಾಯಾಲಯದ ವಿವೇಚನೆಗೆ ಬಿಡುವುದು ಎಲ್ಲರ ಹಿತದೃಷ್ಟಿಯಿಂದ ಒಳ್ಳೆಯದು. ಪುರುಷರಿಗಿಲ್ಲದ, ಹೆಣ್ಣುಮಕ್ಕಳಿಗೆ ಸೀಮಿತವಾದ ತೊಡಕುಗಳು ಎಲ್ಲ ಧರ್ಮಗಳಲ್ಲೂ ಇವೆ. ಹಾಗಾಗಿ ಧಾರ್ಮಿಕ ಚಹರೆಗಳನ್ನು ಹೊಂದುವವರನ್ನು ಅವರ ಪಾಡಿಗೆ ಬಿಟ್ಟು, ಕಲಿಸುವುದರ ಬಗ್ಗೆಯಷ್ಟೇ ಶಾಲಾ ಕಾಲೇಜುಗಳು ಗಮನಹರಿಸಬೇಕಾಗಿದೆ. ಹಿಜಾಬ್ ಅನ್ನು ವಿರೋಧಿಸುವ ನಡವಳಿಕೆಯು ಹಿಜಾಬ್ ತೊಡುವವರನ್ನೇ ಅವಮಾನಿಸುವಂತಿದೆ, ಅನುಮಾನಿಸುವಂತಿದೆ. ನಮ್ಮ ವಿದ್ಯಾರ್ಥಿಗಳು ಪಠ್ಯದ ಬಗ್ಗೆ ಚರ್ಚಿಸುವುದನ್ನು ಬಿಟ್ಟು, ಹಿಜಾಬ್ ಅಥವಾ ಕೇಸರಿ ಶಾಲಿಗೆ ಜೋತುಬೀಳುವ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದ್ದೇವೆ. ಹಿಜಾಬ್‌ಗೆ ಕೇಸರಿ ಶಾಲು ಪ್ರತ್ಯುತ್ತರ ಎನ್ನುವ ನಡವಳಿಕೆಯ ಮೂಲಕ ವಿದ್ಯಾರ್ಥಿಗಳಲ್ಲಿ ಸೇಡಿನ ಮನೋಭಾವ ಉಂಟುಮಾಡುತ್ತಿದ್ದೇವೆ. ಈ ಪರಿಸ್ಥಿತಿ ರೂಪುಗೊಳ್ಳುವುದಕ್ಕೆ ರಾಜಕಾರಣಿಗಳು ಹಾಗೂ ಮತೀಯ ಸಂಘಟನೆಗಳು ನೇರ ಕಾರಣ. ಕ್ಷುಲ್ಲಕ ರಾಜಕೀಯ ನಡೆಗಳನ್ನು ಬೆಂಬಲಿಸದೆ, ಎಲ್ಲ ಸಮುದಾಯಗಳ ವಿದ್ಯಾರ್ಥಿಗಳು ಒಟ್ಟಿಗೆ ಕಲಿಯುವುದಕ್ಕೆ ಅಗತ್ಯವಾದ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ‘ಕ್ರಿಯೆಗೆ ತಕ್ಕ ಪ್ರತಿಕ್ರಿಯೆ’ ಎನ್ನುವ ಸೇಡಿನ ಭಾಷೆ ಸರ್ಕಾರದ್ದಾಗಬಾರದು.

ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯದ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದವರಂತೆ ಮಾತನಾಡುತ್ತಿರುವ ರಾಜಕಾರಣಿಗಳು ತಾವು ಪ್ರತಿನಿಧಿಸುವ ಸ್ಥಾನಮಾನಗಳ ಮರ್ಯಾದೆಯನ್ನು ಕಳೆಯುವಂತೆ ವರ್ತಿಸುತ್ತಿದ್ದಾರೆ. ‘ಹಿಜಾಬ್ ಬೆಂಬಲಿಸುವವರು ಪಾಕಿಸ್ತಾನಕ್ಕೆ ಹೋಗಲಿ’, ‘ದಕ್ಷಿಣ ಕನ್ನಡವನ್ನು ತಾಲಿಬಾನ್ ಆಗಲು ಬಿಡುವುದಿಲ್ಲ’ ಎಂದು ಪದೇ ಪದೇ ಮಾತನಾಡುವ ಪ್ರಜಾಪ್ರತಿನಿಧಿಗಳು ಜನರಲ್ಲಿ ಭಾವನೆಗಳನ್ನು ಕೆರಳಿಸಲು ಪ್ರಯತ್ನಿಸುವ ಮೂಲಕ ತಮ್ಮ ಸ್ಥಾನಗಳಿಗೆ ಹಾಗೂ ಸಂವಿಧಾನದ ಆಶಯಗಳಿಗೆ ದ್ರೋಹ ಬಗೆಯುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಧರ್ಮನಿರಪೇಕ್ಷತೆ ಜಾರಿಯಲ್ಲಿರಬೇಕೆಂದು ಅಪೇಕ್ಷಿಸುವುದು ಸ್ವಾಗತಾರ್ಹ. ಆದರೆ, ಸಮಾಜದಲ್ಲಿ ಧರ್ಮನಿರಪೇಕ್ಷತೆಯ ನಿಜವಾದ ರಾಯಭಾರಿಗಳಂತೆ ಕಾರ್ಯನಿರ್ವಹಿಸಬೇಕಾದವರು ರಾಜಕಾರಣಿಗಳು, ವಿಶೇಷವಾಗಿ ಶಾಸನಸಭೆಗಳಲ್ಲಿ ಜನರನ್ನು ಪ್ರತಿನಿಧಿಸುವವರು. ದುರದೃಷ್ಟವಶಾತ್, ಪ್ರಜಾಪ್ರತಿನಿಧಿಗಳಲ್ಲಿ ಹೆಚ್ಚಿನವರು ಒಂದಲ್ಲಾ ಒಂದು ಬಗೆಯಲ್ಲಿ ತಮ್ಮನ್ನು ನಿರ್ದಿಷ್ಟ ಕೋಮುಗಳಿಗೆ ಸೀಮಿತಗೊಳಿಸಿಕೊಂಡಿದ್ದಾರೆ. ಧರ್ಮದ ಲಾಂಛನಗಳನ್ನು ಎಗ್ಗಿಲ್ಲದೆ ಪ್ರದರ್ಶಿಸುತ್ತಿದ್ದಾರೆ. ಮುಸ್ಲಿಂ ಧರ್ಮೀಯರಲ್ಲಿ ಅಸುರಕ್ಷತೆ ಮೂಡಿಸುವ ಕೆಲಸದಲ್ಲೂ ತೊಡಗಿದ್ದಾರೆ. ಸಂವಿಧಾನದ ಆಶಯಗಳನ್ನು ಮರೆತು, ತಮ್ಮ ವೈಯಕ್ತಿಕ ಭಾವನೆಗಳನ್ನೇ ಸಮಾಜದಲ್ಲಿ ಮುಂದು ಮಾಡಲು ಹೊರಟಿದ್ದಾರೆ. ಇಲ್ಲದ ಬಿಕ್ಕಟ್ಟುಗಳನ್ನು ಸೃಷ್ಟಿಸುವ ಮೂಲಕ ಸಮಾಜದಲ್ಲಿನ ನೈಜ ಸಮಸ್ಯೆಗಳನ್ನು ಹಿನ್ನೆಲೆಗೆ ಸರಿಸುತ್ತಿದ್ದಾರೆ. ಜನರ ಸಂಕಟ–ಸಮಸ್ಯೆಗಳ ಬಗ್ಗೆ ಮಾತನಾಡಬೇಕಾದವರು ಧರ್ಮಾಧಾರಿತ ವಿಷಯಗಳನ್ನು ತಮ್ಮ ಮೂಗಿನ ನೇರಕ್ಕೆ ತಕ್ಕಂತೆ ವ್ಯಾಖ್ಯಾನಿಸುತ್ತಿದ್ದಾರೆ, ಕಿಡಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ನಿರ್ದಿಷ್ಟ ಧರ್ಮದ ಬಗ್ಗೆ ಕಾಳಜಿಯಿರುವವರು ರಾಜಕಾರಣವನ್ನು ತೊರೆದು, ಧಾರ್ಮಿಕ ಚಟುವಟಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳುವುದಕ್ಕೆ ಯಾರ ಅಡ್ಡಿಯೂ ಇಲ್ಲ. ಪ್ರಜಾತಂತ್ರದ ಬಗ್ಗೆ ಮಾತನಾಡುತ್ತಲೇ, ಅದರ ಆಶಯಗಳನ್ನು ಗಾಸಿಗೊಳಿಸುವ ಕೆಲಸದಲ್ಲಿ ತೊಡಗುವ ಕೂಗುಮಾರಿಗಳನ್ನು ಸುಮ್ಮನಿರಿಸುವ ಕೆಲಸವನ್ನು ಆಯಾ ಪಕ್ಷಗಳು ಇನ್ನಾದರೂ ಮಾಡಬೇಕು.

ದಿನದ ಟ್ವೀಟ್

ಪರಿವರ್ತನೆಯ ಹಿಂದೆ...



ಸರಿಯಾದುದರ ಪರವಾಗಿ ಮಾತನಾಡುವುದು ಮತ್ತು ಅಲ್ಪಸಂಖ್ಯಾತರ ಪರವಾಗಿ ಮಾತನಾಡುವುದು ಭಾರತದಲ್ಲಿ ರಾಜಕೀಯವಾಗಿ ಉಪಯೋಗಕ್ಕೆ ಬರುವಂಥದ್ದಲ್ಲ ಎಂಬುದನ್ನು ಅರವಿಂದ ಕೇಜ್ರಿವಾಲ್ ಅವರಲ್ಲಿನ ಪರಿವರ್ತನೆಯು ತೋರಿಸುತ್ತಿದೆ.

ಅಶೋಕ್ ಸ್ವೈನ್, ಪ್ರಾಧ್ಯಾಪಕ

ಕಿಡಿನುಡಿ



ಶಾಲಾ ಮಕ್ಕಳಲ್ಲಿ ಸಂಕುಚಿತ ಮನೋಭಾವ ಉಂಟುಮಾಡಿ ದ್ವೇಷ ರಾಜಕಾರಣದ ಬೆಂಕಿ ಹಚ್ಚಬೇಡಿ. ಧರ್ಮವನ್ನು ಉದ್ಧಾರ ಮಾಡುವ ಕೆಲಸ ರಾಜಕಾರಣಿಗಳಿಗೆ ಬೇಡ. ಅದನ್ನು ಜನಸಾಮಾನ್ಯರೇ ಮಾಡುತ್ತಾರೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 8-2-1997

• ಜಿ.ಪಂ. ಅಧ್ಯಕ್ಷರ ಅವಧಿ ಮೊಟಕಿಗೆ ಕೋರ್ಟ್ ಅಸ್ತು

ಬೆಂಗಳೂರು, ಫೆ. 7– ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯನ್ನು ತಿದ್ದುಪಡಿ ಮಾಡಿ ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷರ ಅವಧಿಯನ್ನು 20 ತಿಂಗಳುಗಳಿಗೆ ನಿಗದಿ ಮಾಡಿರುವುದರ ಕ್ರಮಬದ್ಧತೆಯನ್ನು ಪ್ರಶ್ನಿಸಿದ್ದ ರಿಟ್ ಅರ್ಜಿಗಳನ್ನು ಹೈಕೋರ್ಟ್ ಇಂದು ವಜಾ ಮಾಡಿತು.

ತಿದ್ದುಪಡಿ ಕಾಯ್ದೆಯಿಂದ ಅರ್ಜಿದಾರರ ಯಾವುದೇ ಹಕ್ಕನ್ನು ಕಿತ್ತುಕೊಂಡಂತಾಗಿಲ್ಲ ಎಂದೂ ತಿದ್ದುಪಡಿ ಕಾಯ್ದೆ ರಚಿಸುವ ಅಧಿಕಾರ ಶಾಸಕಾಂಗಕ್ಕೆ ಇದೆ ಎಂದೂ ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿತು.

50 ವರ್ಷಗಳ ಹಿಂದೆ

ಮಂಗಳವಾರ, 8-2-1972

• ಬಾಂಗ್ಲಾದೇಶದಿಂದ ಮಾರ್ಚ್ ಅಂತ್ಯಕ್ಕೆ ಭಾರತ ಸೇನೆ ವಾಪಸ್

ಕೋಲ್ಕತ್ತ, ಫೆ. 7– ಈಗ ಬಾಂಗ್ಲಾದೇಶದಲ್ಲಿರುವ ಭಾರತದ ಸೇನೆಯನ್ನು ಮಾರ್ಚ್ ತಿಂಗಳ ಕೊನೆಯೊಳಗಾಗಿ ವಾಪಸು ಕರೆಸಿಕೊಳ್ಳುವ ಬಗ್ಗೆ ಭಾರತ ಮತ್ತು ಬಾಂಗ್ಲಾದೇಶಗಳ ಪ್ರಧಾನಿಗಳು ಇಂದು ಅಂಗೀಕಾರ ಸೂಚಿಸಿದರು.


ಈಗಾಗಲೇ ಅರ್ಧದಷ್ಟು ಸೇನೆ ವಾಪಸು ಆಗಿದ್ದು, ಉಳಿದ ಸುಮಾರು 40 ಸಾವಿರ ಸೈನಿಕರನ್ನು ಹಂತ ಹಂತವಾಗಿ ವಾಪಸು ಕರೆಸಿಕೊಳ್ಳಲಾಗುವುದು ಎಂದು ನಂಬಲರ್ಹವಾದ ವಲಯಗಳು ತಿಳಿಸಿವೆ.

• ಬಾಹ್ಯಾಕಾಶ: ಬೇಡವಾದ ವಸ್ತುಗಳ ಉಗ್ರಾಣವೇ?

ವಾಷಿಂಗ್ಟನ್, ಫೆ. 7– ಬಾಹ್ಯಾಕಾಶವು ಭೂಮಿಯ ಮೇಲೆ ಅಪಾಯಕಾರಿ ಎನ್ನಿಸುವ ವಸ್ತುಗಳ ಉಗ್ರಾಣವಾಗಬಹುದೇ? ಅಮೆರಿಕ ಅಣುಶಕ್ತಿ ಆಯೋಗದ ಅಧ್ಯಕ್ಷರು ಇದು ಸಾಧ್ಯವೆನ್ನುತ್ತಾರೆ. ಅಣುಶಕ್ತಿ ಕೇಂದ್ರಗಳು ಹೊರ ಚೆಲ್ಲುವ ನಿರುಪಯೋಗಿಯಾದ ರೇಡಿಯೊ ವಿಕಿರಣಗಳನ್ನು ರಾಕೆಟ್‌ಗಳಲ್ಲಿ ತುಂಬಿ ಬಾಹ್ಯಾಕಾಶದಲ್ಲಿ ಬಿಸಾಡಬಹುದೆಂದು ಅಣುಶಕ್ತಿ ಆಯೋಗ ಸಲಹೆ ಮಾಡಿದೆ.

ಮಾನವ ಎಷ್ಟೇ ದುಷ್ಟತನಕ್ಕೆ ಒಳಗಾದರೂ ಕಾಲಧರ್ಮ ನಿಯಂತ್ರಿಸುತ್ತದೆ

ಸಾತ್ವಿಕರಿಲ್ಲದ ಸಮಾಜ ಮೃಗೀಯ



ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ಸಂವಿಧಾನ, ಸರ್ಕಾರ, ಸಂಘ-ಸಂಸ್ಥೆ ಮತ್ತು ಸರ್ವಧರ್ಮಗಳ ಪ್ರಮುಖ ಆಶಯವು ಉತ್ತಮ ಸಮಾಜವನ್ನು ನಿರ್ಮಿಸುವುದು. ಉತ್ತಮ ಸಮಾಜವೆಂದರೆ, ಹಾರ್ದಿಕವಾದ ಹಾಗೂ ಆರೋಗ್ಯಪೂರ್ಣ ಸಮಾಜ. ಆರೋಗ್ಯಪೂರ್ಣ ಸಮಾಜದ ಲಕ್ಷಣವು ಒಳ್ಳೆಯತನ. ಒಳ್ಳೆಯತನವನ್ನು ಜೀವನದಲ್ಲಿ ರೂಢಿಸಿಕೊಂಡಾಗ ಸಮಾಜವು ಉತ್ತಮ ಆಗುತ್ತದೆ.

ಕೆಲ ರಾಜಕೀಯ ಪಂಡಿತರು ಮತ್ತು ವಿಚಾರವಂತರ ಪ್ರಕಾರ, ಆರ್ಥಿಕ ಸಮಾನತೆ ಬಂದಾಗ ಸದೃಢ ಸಮಾಜ ರಚನೆ ಆಗುತ್ತದೆ. ಅದು ನಿಜ. ಆರ್ಥಿಕ ಸಮಾನತೆಯಿಂದ ವ್ಯಷ್ಟಿ ಮತ್ತು ಸಮಷ್ಟಿಯ ಬದುಕಿನ ಬಹಿರಂಗದ ಉದ್ಧಾರ. ಅದನ್ನು ಸಮ ಸಮಾಜವೆಂತಲೂ ಕರೆಯಬಹುದು. ಆರ್ಥಿಕ ದೃಢತೆಯಿಂದ ಸಮಸಮಾಜ ಸ್ಥಾಪನೆ. ಅದರೊಟ್ಟಿಗೆ ಸುಸಂಸ್ಕೃತ ಸಮಾಜ ರಚನೆಯತ್ತಲೂ ಗಮನಹರಿಸಬೇಕಾಗುತ್ತದೆ. ಆರ್ಥಿಕ ದೃಢತೆ ಉಂಟಾದಂತೆಲ್ಲ, ಸಮಾಜದಲ್ಲಿ ಅದಕ್ಕೆ ಸಂಬಂಧಿಸಿದ ಅಪರಾಧಗಳು ಅಧಿಕ ಆಗುತ್ತವೆ. ಅಂದಮಾತ್ರಕ್ಕೆ ಆರ್ಥಿಕ ದೃಢತೆ ಇರಬಾರದೆಂದು ಅರ್ಥವಲ್ಲ.

ಆರ್ಥಿಕತೆಯೊಂದೇ ಎಲ್ಲವನ್ನೂ ಸರಿದೂಗಿಸುತ್ತದೆ ಎಂಬುದು ಭ್ರಮೆ. ಹಣ ಇಲ್ಲದಿದ್ದರೆ ಒಂದೇ ಚಿಂತೆ, ಹಣ ಇದ್ದರೆ ಹಲವಾರು ಚಿಂತೆ. ಹಾಗೆಂದು ಹಣ ಅಮುಖ್ಯವೆಂದು ಪ್ರತಿಪಾದಿಸುತ್ತಿಲ್ಲ. ಅಗತ್ಯಕ್ಕಿಂತ ಅಧಿಕ ಹಣವು ಕೆಲವರ ಬಳಿ ಶೇಖರಣೆ ಆಗುವುದರಿಂದ ಆರ್ಥಿಕ ಅಸಮಾನತೆ. ಸಂಪತ್ತಿನ ಸಮನಾದ ಹಂಚಿಕೆ ಆಗದಿರುವುದರಿಂದ ಇನ್ನಿಲ್ಲದ ಅಸಮಾನತೆ.

12ನೇ ಶತಮಾನದ ಶರಣರು ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುತ್ತಿದ್ದರು. ಅದರ ಕೆಲಭಾಗವನ್ನು ದಾಸೋಹಕ್ಕೆ ಬಳಸುತ್ತಿದ್ದರು. ದಾಸೋಹ ಪರಿಕಲ್ಪನೆಯೆಂದರೆ, ಅಸಹಾಯಕರಿಗೆ ಮಾಡುವ ಸಹಾಯ. ತನ್ಮೂಲಕ ಸಮಸಮಾಜ ರಚನೆ. ಒಂದೆಡೆ ಉತ್ಪಾದನೆ-ಕಾಯಕ, ಮತ್ತೊಂದೆಡೆ ವಿತರಣೆ-ದಾಸೋಹ. ಇದರೊಂದಿಗೆ ಸಮಾನತೆ. ಸದ್ಯದ ದಿನಗಳಲ್ಲಿ ಇಂಥ ಸನ್ನಿವೇಶ ಕಾಣಬರುತ್ತಿಲ್ಲ. ಪ್ರತಿಯೊಬ್ಬರೂ ಧನಾಗಮನದತ್ತ ಕೇಂದ್ರೀಕರಿಸುತ್ತಿರುವುದು. ಮಕ್ಕಳು, ಮನೆತನಕ್ಕಾಗಿ ಹೇರಳವಾದ ಹಣ ಶೇಖರಣೆ ಮಾಡುತ್ತಿರುವುದು. ಧನ ಶೇಖರಣೆಯತ್ತ ಒತ್ತಾಸೆ ಇದೆ, ಅದರ ವಿತರಣೆಯತ್ತ ನಿರ್ಲಕ್ಷ್ಯ.

ಆಸ್ತಿವಂತ ಸಮಾಜವು ಸುಸಂಸ್ಕೃತ ಸಮಾಜದೆಡೆಗೂ ಗಮನಹರಿಸಬೇಕಾಗುತ್ತದೆ. ಆರ್ಥಿಕ ಬಲಾಢ್ಯರು ದುರ್ಬಲರ ಮೇಲೆ ದಬ್ಬಾಳಿಕೆ ಮಾಡುವ ಸಂದರ್ಭ ಸಾಮಾನ್ಯ ಎಂಬಂತೆ ಆಗುತ್ತಿದೆ. ಇದಕ್ಕೆಲ್ಲ ಪರಿಹಾರ ಸುಸಂಸ್ಕೃತ ಸಮಾಜ. ಅಂದರೆ ಉತ್ತಮ ಸಮಾಜ. ಉತ್ತಮ ಸಮಾಜ ರಚನೆಯಾದಲ್ಲಿ ದರ್ಪ-ದಬ್ಬಾಳಿಕೆ ಇರುವುದಿಲ್ಲ. ಯಾರು ಯಾರನ್ನೂ ಶೋಷಿಸುವುದಿಲ್ಲ. ಉತ್ತಮ ತಿಳಿವಳಿಕೆ ಮತ್ತು ಉತ್ತಮ ನಡವಳಿಕೆಯಿಂದ ಸುಸಂಸ್ಕೃತ ಹಾಗೂ ನಾಗರಿಕ ಸಮಾಜ.

ಮಾನವ ಇಂದು ಮೌಲ್ಯದ ಹಿಂದೆ ಬೀಳುವುದಕ್ಕಿಂತ ಹಣ ಮಾಡುವ ದಂಧೆಯಲ್ಲಿ ನಿರತನಾಗಿದ್ದಾನೆ. ಹಣ ಮಾಡಲು ಸರ್ವರಿಗೂ ಅವಕಾಶ ಇದೆ. ಒಬ್ಬರ ಚಾರಿತ್ರ್ಯವಧೆ ಮಾಡುವಲ್ಲಿ, ಅನ್ಯರ ಆಸ್ತಿಯನ್ನು ಕಬಳಿಸುವಲ್ಲಿ, ಹಣಕ್ಕಾಗಿ ಲಂಚಗುಳಿತನಕ್ಕೆ ಒಳಗಾಗುವಲ್ಲಿ ಮಾನವ ಏನೆಲ್ಲ ಷಡ್ಯಂತ್ರಗಳನ್ನು ರೂಪಿಸುತ್ತಾನೆ. ಈ ಷಡ್ಯಂತ್ರದಲ್ಲಿ ಉತ್ತಮರೇ ಗುರಿ ಆಗುತ್ತಿರುವುದು ದುರಂತ. ದುಷ್ಟನನ್ನು ಮತ್ತು ಧನಪಿಶಾಚಿಯನ್ನು ಯಾರೂ ಪ್ರಶ್ನಿಸುವುದಿಲ್ಲ. ಇಂದಿನ ಗುರಿ ಎಂದರೆ ಸಾತ್ವಿಕ. ಸಾತ್ವಿಕನು ಜಿಂಕೆಯಿದ್ದಂತೆ. ಅದರ ಮೇಲೆ ಎರಗುವವರು ವ್ಯಾಘ್ರಗಳಂತೆ ಭಾಸವಾಗುತ್ತಾರೆ.

ಸಾತ್ವಿಕರು, ಸಂಪನ್ನರು ಹೆಜ್ಜೆ ಹೆಜ್ಜೆಗೆ ಕೆಲ ದುಷ್ಟರಿಂದ ದೌರ್ಜನ್ಯ ಮತ್ತು ಕಿರುಕುಳ ಅನುಭವಿಸುತ್ತಾರೆ. ಆಧುನಿಕ ಜಗತ್ತಿನಲ್ಲಿ ಮೊಬೈಲ್ ಫೋನ್‌ನಲ್ಲಿ ಏನೆಲ್ಲ ಅನುಕೂಲಗಳು. ಅದರೊಟ್ಟಿಗೆ ಸಾಮಾಜಿಕ ಜಾಲತಾಣ. ಸಾಮಾಜಿಕ ಜಾಲತಾಣವು ಜಾಣರ ತಾಣ ಆಗಬೇಕು. ವಿಪರ್ಯಾಸವೆಂದರೆ, ಅದು ಅಜ್ಞರು ಹಾಗೂ ದುಷ್ಟರ ತಾಣ ಆಗುತ್ತಿರುವುದು. ಆಧುನಿಕ ಸೌಲಭ್ಯಗಳಿಂದ ಸಾರ್ವಜನಿಕರ ಆಸ್ತಿ, ಪ್ರಾಣ-ಮಾನ ಸಂರಕ್ಷಣೆ ಮಾಡುವುದಕ್ಕಿಂತ ಅವುಗಳ ಹರಣವೇ ಅಧಿಕ.

ಉತ್ತಮ ಬೆಳವಣಿಗೆ, ಉತ್ತಮ ವ್ಯಕ್ತಿತ್ವ, ಉತ್ತಮ ಸಾಧನೆ, ಉತ್ತಮ ನಡವಳಿಕೆಯನ್ನು ನೋಡಿ ಖುಷಿಪಡುವುದರ ಬದಲು ಅಂಥವರ ವಿರುದ್ಧ ಸಮಸ್ಯೆ ಸೃಷ್ಟಿಸಿ, ಕೃತಕ ಸಂತೋಷ ಅನುಭವಿಸುತ್ತಿರುವುದು ಸರ್ವೇಸಾಮಾನ್ಯ. ಉತ್ತಮರು ಅರ್ಥಾತ್ ಸಜ್ಜನರು ತಮಗೆ ಸೂಕ್ತ ಸಹಕಾರ ಸಿಗದಿರುವುದರಿಂದ ಖಿನ್ನತೆಗೆ ಒಳಗಾಗುತ್ತಿರುವುದನ್ನು ಕಾಣಬಹುದು. ದಿನವೂ ಕಿರುಕುಳ ಅನುಭವಿಸುವುದಕ್ಕಿಂತ ಒಂದು ಸಾರಿ ಸಾವನ್ನು ತಂದುಕೊಳ್ಳುವುದು ಸೂಕ್ತ ಎಂದು ಕೆಲವರು ಭಾವಿಸುವುದುಂಟು. ಖಿನ್ನತೆಗೆ ಒಳಗಾಗಿ ಸಾವನ್ನು ತಂದುಕೊಳ್ಳುವುದು ಪಲಾಯನವಾದ ಅನಿಸಿಕೊಳ್ಳುತ್ತದೆ.

ನಮ್ಮ ನಡುವೆ ಒಬ್ಬ ವ್ಯಕ್ತಿ ಮಾನಸಿಕ ಸಮತೋಲನ ಕಳೆದುಕೊಳ್ಳುವಂತಹ ವಾತಾವರಣ ಸೃಷ್ಟಿ ಆಗಬಾರದು. ಸಮತೋಲನ ಕಾಯ್ದುಕೊಂಡು ಬದುಕುವಂತಾಗಬೇಕು. ಸಾವಿಗೆ ಶರಣಾಗಲು ಹೊರಟವನು ಬದುಕನ್ನು ಸಮರ್ಪಕವಾಗಿ ಕಟ್ಟಿಕೊಳ್ಳುವಂತಾಗಬೇಕು. ಆಗಲೇ ಸುಸಂಸ್ಕೃತ ಸಮಾಜ ರಚನೆ. ಸುಸಂಸ್ಕೃತ ವ್ಯಕ್ತಿಗಳನ್ನು ಸಂರಕ್ಷಿಸಲು ಆಗದಿದ್ದರೆ ಸುಸಂಸ್ಕೃತ ಸಮಾಜವು ಹೇಗೆ ತಾನೇ ರಚನೆ ಆಗುತ್ತದೆ? ಅದರಲ್ಲೂ ಸಾತ್ವಿಕತೆ, ಸಂಪನ್ನತೆ, ಬದ್ಧತೆಯ ಜತೆ ಬದುಕನ್ನು ನಡೆಸುವವರ



ಸ್ಥಿತಿಯು ದಿನದಿಂದ ದಿನಕ್ಕೆ ಗಂಭೀರ ಆಗುತ್ತದೆ.

ಸಂತರ ಬದುಕಿನಲ್ಲಿ ಸಂಕಷ್ಟಗಳು ಎದುರಾದರೆ, ಅವನ್ನು ಅವರು ಸಮತೋಲನದಿಂದ ಎದುರಿಸುತ್ತಾರೆ. ಆ ಶಕ್ತಿ ಅವರಲ್ಲಿರುತ್ತದೆ. ಸಂಕಷ್ಟದ ಸಂದರ್ಭದಲ್ಲಿ ಸಂತರು ಸುಮ್ಮನೇ ಕೂಡುವುದಿಲ್ಲ. ಸುಮ್ಮನೆ ಕುಳಿತರೆ ಅವರು ಸಂತರಲ್ಲ. ಸಂಕಷ್ಟದಲ್ಲಿ ಅವರು ಮುಂದೆ ಬಂದು ಸಹಕರಿಸುತ್ತಾರೆ. ಆದರೆ ಜನಸಾಮಾನ್ಯರ ಬದುಕಿನಲ್ಲಿ ಸಂಕಷ್ಟಗಳು ಎದುರಾದರೆ ಅದರಿಂದ ಅವರು ಹೊರಬರುವುದು ಕಷ್ಟಕರ. ಅಂಥವರಿಗೆ ಸಮಾಜವು ಸಾಂತ್ವನ ನೀಡಬೇಕು, ಧೈರ್ಯ ಹೇಳಬೇಕು. ಸಾಧ್ಯವಾದರೆ ಅಂಥವರಿಗೆ ಸಹಕರಿಸಬೇಕು. ಸಾತ್ವಿಕರನ್ನು ಕಳೆದುಕೊಂಡ ಸಮಾಜವು ಮೃಗೀಯ ಆಗುವುದರಲ್ಲಿ ಸಂದೇಹವಿಲ್ಲ.

ಒಳ್ಳೆಯವರಿಗೆ ಇದು ಕಾಲವಲ್ಲ ಎಂದು ಹೇಳಲಾಗುತ್ತದೆ. ಉತ್ತಮರ ಕಾಲ, ಕೆಟ್ಟವರ ಕಾಲವೆಂದು ಪರಿಗಣಿಸಲು ಬರುವುದಿಲ್ಲ. ಕಾಲವು ಒಂದೇ, ಕಾಲದಲ್ಲಿ ನಡೆಯುವ ವಿದ್ಯಮಾನಗಳು ಬಗೆಬಗೆ. ಎಲ್ಲ ವಿದ್ಯಮಾನಗಳನ್ನು ಕಾಲವು ಸಾಕ್ಷೀಕರಿಸುತ್ತದಷ್ಟೆ. ಅದೇ ಸೂರ್ಯ, ಅದೇ ಚಂದ್ರ, ನಕ್ಷತ್ರ-ತಾರೆಗಳು, ಅದೇ ಭೂಮಿ. ಭೂಮಿಯು ತನ್ನ ಅಕ್ಷದ ಸುತ್ತ ಸುತ್ತುವುದರಿಂದ ಹಗಲು-ರಾತ್ರಿಗಳು ಉಂಟಾಗುತ್ತವೆ. ಭೂಮಿಯ ಚಲನೆಯಲ್ಲಿ ಒಂದಿಷ್ಟು ವ್ಯತ್ಯಾಸ ಆಗುವುದು. ವರ್ಷದಲ್ಲಿ ಕೆಲ ದಿನಗಳು ದೀರ್ಘವಾಗಿರುತ್ತವೆ, ಕೆಲ ರಾತ್ರಿಗಳು ದೀರ್ಘವಾಗಿರುತ್ತವೆ.

ಅಲಾಸ್ಕಾದಂತಹ ಪ್ರದೇಶದಲ್ಲಿ ಕೆಲವೇ ಗಂಟೆಗಳವರೆಗೆ ಹಗಲು, ಕೆಲವೇ ಗಂಟೆಗಳವರೆಗೆ ರಾತ್ರಿ. ಅದು ನಿಸರ್ಗದ ವಿಸ್ಮಯ. ಅದನ್ನು ಹೊರತುಪಡಿಸಿದರೆ ಪೃಥ್ವಿಯ ಚಲನೆಯಲ್ಲಿ ಮಳೆಗಾಲ, ಬೇಸಿಗೆಕಾಲ ಮತ್ತು ಚಳಿಗಾಲ. ಋತುಮಾನಕ್ಕೆ ತಕ್ಕಂತೆ ಅನುಸರಿಸಿದಂತಹ ವಾತಾವರಣ. ಋತುಮಾನ ಬದಲಾವಣೆ ಆಗಿದ್ದರೆ, ಅದಕ್ಕೆ ಮಾನವ ಕೃತ್ಯಗಳೇ ಕಾರಣ. ನಿಸರ್ಗದ ಮೇಲಿನ ದೌರ್ಜನ್ಯದಿಂದಾಗಿ ಪ್ರತಿಕೂಲ ವಾತಾವರಣ.

ಮಾನವ ನಡವಳಿಕೆಗಳಲ್ಲಿ ಬದಲಾವಣೆಗಳು ಕಾಣಬರುತ್ತಿದ್ದು, ಅವು ಕಾಲಕ್ಕೆ ಸಂಬಂಧಿಸಿದವಲ್ಲ. ಕಾಲವು ಒಂದೇ ಆದರೂ ಮಾನವ ನಡವಳಿಕೆ ಒಂದೇ ಆಗಿರುವುದಿಲ್ಲ. ಕಾಲಕ್ಕೆ ತಕ್ಕಂತೆ ಮಾನವ ತನ್ನ ನಡವಳಿಕೆಯನ್ನು ಬದಲಿಸುತ್ತಾ ಹೋಗುತ್ತಿದ್ದಾನೆ. ಹಿಂದಿನ ದಿನಗಳಲ್ಲಿ ಕೆಡುಕುತನದಿಂದ ಒಳ್ಳೆಯತನದೆಡೆಗೆ ಪ್ರಯಾಣಿಸಿದವರ ಸಂಖ್ಯೆಯು ಗಣನೀಯವಾಗಿತ್ತು. ಸಮಕಾಲೀನ ಕಾಲಘಟ್ಟದಲ್ಲಿ ಒಳ್ಳೆಯತನದಿಂದ ದುಷ್ಟತನದೆಡೆಗೆ ಸಾಗುತ್ತಿರುವವರ ಸಂಖ್ಯೆಯು ಅಧಿಕವಾಗುತ್ತಿದೆ. ಇದು ಈ ಕಾಲದ ದುರಂತವೂ ಅಹುದು, ಸಮಸ್ಯೆಯೂ ಅಹುದು.

ಮಾನವ ತಾನೆತ್ತ ಕಡೆಗೆ ಹೋದರೂ ನಿಸರ್ಗವು ಕೆಲವೊಂದು ನಿಯಮಗಳನ್ನು ಕಾಲಕ್ಕೆ ತಕ್ಕಂತೆ ಸೃಷ್ಟಿಸುತ್ತಾ ಹೋಗುತ್ತದೆ. ನಿಸರ್ಗವನ್ನು ಬ್ರಹ್ಮಾಂಡವೆಂದು ಕರೆಯಲಾಗುತ್ತದೆ. ಬ್ರಹ್ಮಾಂಡವು ಜೀವಸಂಕುಲದ ಸೃಷ್ಟಿ ಕೇಂದ್ರ. ಅದಕ್ಕೆ ಸೃಷ್ಟಿಸುವ ಅಧಿಕಾರವೂ ಇದೆ, ಸಂಹಾರ ಮಾಡುವ ಶಕ್ತಿಯೂ ಇದೆ. ಯಾವುದೇ ಅಹಿತಕರ ವಿದ್ಯಮಾನಗಳನ್ನು ನೋಡುತ್ತ ಕೂಡುವುದಿಲ್ಲ. ಸೂಕ್ತ ಕಾಲಕ್ಕಾಗಿ ಅದು ಕಾಯುತ್ತದೆ. ಮಾನವ ತಾನೆಷ್ಟೇ ದುಷ್ಟತನಕ್ಕೆ ಒಳಗಾದರೂ ಕಾಲಧರ್ಮವು ತನ್ನದೇ ಆದ ವಿಧಾನದಲ್ಲಿ ನಿಯಂತ್ರಿಸುತ್ತದೆ. ಮಾನವಮಾತ್ರರಿಗೆ ಇದು ತಿಳಿದಿದ್ದರೆ ಲೇಸು.

ಚುರುಮುರಿ



ಹುಲಿಯ ವ್ಯಾಕರಣ

• ಲಿಂಗರಾಜು ಡಿ.ಎಸ್.

‘ಹುಲಿ ಸಾ, ನಮಸ್ಕಾರ! ನೀವು ವ್ಯಾಕರಣದಲ್ಲಿ ಭಾಳಾ ಫೇಮಸ್ ಅಂತೆ. ನಮಗೂ ಸ್ವಲ್ಪ ಹೇಳಿಕೊಡಿ ಸಾ!’

‘ಆಯ್ತು ಕನಾ, ಅದೇನು ಕೇಳ್ರಿ’.

‘ಸಾ, ಸಂಧಿ ಅಂದರೇನು?’

‘ನೋಡಪ್ಪ, ನಮ್ಮ ಪಕ್ಷಕ್ಕೆ ವಿಜಯನಗರ ಸಿಂಗಂ ಬಂದ್ರೆ ಅದು ಆಗಮ ಸಂಧಿ. ಜಮೀರು, ಇಬ್ರಾಹಿಂ ವೋದ್ರೆ ಲೋಪ ಸಂಧಿಯಾಯ್ತದೆ. ರಾಜಾವುಲಿ ಮಾಜಿಯಾದದ್ದು ಆದೇಶ ಸಂಧಿಯಿಂದ ಕನ್ರಿ!’

‘ವಿಭಕ್ತಿ ಅಂದ್ರೇನು ಹೇಳಿ ಸಾ?’

‘ರಾಜಕಾರಣಿಗಳು ಹೈಕಮಾಂಡಿಗೆ ತೋರಿಸೋ ಪಕ್ಷನಿಷ್ಠೆಗೆ ವಿಭಕ್ತಿ ಅಂತರೆ ಕಪ್ಪಾ’!

‘ಸರಿ ಸಾ, ಸ್ವರ ಅಂದ್ರೇನು?’

‘ನೋಡ್ರಿ, ಹೈಕಮಾಂಡು ಜೋರಾಗಿದ್ದಾಗ ಸ್ವರ ಅಲ್ಪಪ್ರಾಣವಾಗಿರಬಕು. ಹೈಕಮಾಂಡು ವೀಕಾಗಿದ್ರೆ ಮಹಾಪ್ರಾಣ ಆಗಿದ್ರೂ ನಡೀತದೆ’.

‘ಆಯ್ತು ಸಾ, ಸಮಾಸ ಅಂದ್ರೇನು?’

‘ಸಮಾಸ ಅಂದ್ರೆ ಕೂಡುನುಡಿ ಅಂತ ಕನ್ರೀ. ರಾಜಕೀಯದೇಲಿ ಒಂದು ಪಕ್ಷಕ್ಕೂ ಇನ್ನೊಂದು ಪಕ್ಷಕ್ಕೂ ಕೂಡಿಕೆಯಾಗಲ್ಲ! ಹಂಗೇನಾದರೂ ಕೂಡಿಕೆಯಾದ್ರೆ ಅದು ದೋಷಪೂರಿತ 20-20 ಸ-ಮೋಸವಾಯ್ತದೆ’.

‘ಕ್ರಿಯಾಪದ, ನಾಮಪದ ಅಂದ್ರೇನು?’

‘ರಾಜಕಾರಣಿಗಳು ಕೊಡೋ ಸುಳ್ಳು ಆಶ್ವಾಸನೆಗೆ ಕ್ರಿಯಾಪದ ಅಂತರೆ. ಅಕ್ರಮ-ಸಕ್ರಮ ಮಾಡಿಕೊಡ್ತೀನಿ ಅಂತ ಯಾರಿಗಾದ್ರೂ ನಾಮವ ತೇದು ಮಡಗಿದಾಗ ಅವನು ತಾರಾಮಾರ ಬೈತನಲ್ಲಾ ಅದೇ ನಾಮಪದ!’

‘ವಿರುದ್ಧಾರ್ಥಕ ಪದಗಳು ಅಂದ್ರೇನು ಸಾ?’

‘ಬೀಜೆಪಿ-ಕಾಂಗ್ರೇಸ್ಸು-ಜೆಡಿಎಸ್ಸು ಈಥರದವು ವಿರುದ್ಧಾರ್ಥಕ ಪದಗಳು. ಅವುಗಳನ್ನ ಸಜಾತಿ ಪದ ಮಾಡಿದ್ರೆ ಸಮ್ಮಿಶ್ರ ಆಯ್ತದೆ ಕಯ್ಯಾ!’

‘ಹಿಜಾಬ್-ಕೇಸರಿಶಾಲು ಅನ್ನೋವು ಶಬ್ದಾಲಂಕಾರಗಳಾ ಸಾ?’

‘ವಡೀರಿ ಅವನಿಗ ಕಪಾಳಕ. ಅವು ವಸ್ತ್ರಾಲಂಕಾರಗಳು ಕಾ ಬಡ್ಡೆತ್ತುದೇ! ನಾವು ಅವುನ್ನ ಉತ್ಪ್ರೇಕ್ಷಾಲಂಕಾರದಲ್ಲೂ ಬಳಸ್ತೀವಿ!’

‘ತುಂಬಾ ತಿಳಕಂಡಂಗಾಯ್ತು ಸಾ, ನಮಸ್ಕಾರ!’

ಸಂಗತ

ಇತಿಹಾಸ ಮತ್ತು ಅಧಿಕಾರ ಬಲ

ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿಯಲು ಅಧಿಕಾರದ ಬಲ ಬೇಕಾಗಿಲ್ಲ

• ಡಾ. ಜ್ಯೋತಿ

ಇತಿಹಾಸ ಮತ್ತು ಅಧಿಕಾರಕ್ಕಿರುವ ನಂಟು, ನಮ್ಮ ಸಾಮಾನ್ಯ ಗ್ರಹಿಕೆಗೆ ಅರ್ಥವಾಗುವಂಥದ್ದು. ಇತಿಹಾಸ ನಮಗೆ ದಕ್ಕಿರುವುದು ಕೂಡ ಆಯಾ ಕಾಲದಲ್ಲಿ ಅಧಿಕಾರದಲ್ಲಿದ್ದ ಶಕ್ತಿಕೇಂದ್ರಗಳ ನಿರೂಪಣೆಯ ಮೂಲಕ. ಅದಕ್ಕಾಗಿಯೇ, ಇತಿಹಾಸವನ್ನು ಗೆದ್ದವರ ಇತಿಹಾಸ ಎನ್ನುವುದು. ಹೀಗೆ, ಬಲಶಾಲಿಗಳು ಇತಿಹಾಸವನ್ನು ತಮ್ಮ ಹಿತಕ್ಕನುಸಾರವಾಗಿ ಮುಂದಿನ ಪೀಳಿಗೆಗಳಿಗೆ ತೆರೆದಿಟ್ಟಿದ್ದಾರೆ. ಹಾಗಾಗಿ, ಅಲ್ಲಿರುವುದನ್ನು ಸಂಪೂರ್ಣ ಸತ್ಯವೆಂದು ಒಪ್ಪಿಕೊಳ್ಳಲಿಕ್ಕಾಗುವುದಿಲ್ಲ.

ಒಂದುವೇಳೆ ಇತಿಹಾಸವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಸತ್ಯಶೋಧನೆ ಮಾಡುವ ಹಂಬಲ ಇದ್ದಲ್ಲಿ, ನಮ್ಮ ಹುಡುಕಾಟದ ವಿಷಯದ ಕುರಿತು ವಿವಿಧ ಆಯಾಮಗಳಿಂದ ಇನ್ನಷ್ಟು ಮಾಹಿತಿ ಕಲೆ ಹಾಕಿ, ಹೊಸ ವ್ಯಾಖ್ಯಾನಗಳನ್ನು ಕಂಡುಕೊಂಡು, ಅವನ್ನು ವರ್ತಮಾನ ಪ್ರಪಂಚದಲ್ಲಿ ಹಂಚಿಕೊಳ್ಳಬಹುದು. ಹಾಗೆಂದ ಮಾತ್ರಕ್ಕೆ, ನಮಗೊಪ್ಪದ ಸಂಗತಿಗಳ ಕುರುಹುಗಳನ್ನು ಅಳಿಸಿಹಾಕುವ, ನಮಗೊಪ್ಪುವ ಇತಿಹಾಸವನ್ನು ಮರುಸೃಷ್ಟಿಸುವ ಹಕ್ಕು ನಮಗಿದೆಯೇ?

ಇತಿಹಾಸದ ಪ್ರಸ್ತುತತೆ ಎಲ್ಲಿರುತ್ತದೆಂದರೆ, ಅಲ್ಲಿ ನಡೆದಿರುವ ತಪ್ಪುಗಳಿಂದ ಪಾಠ ಕಲಿತು, ಅವು ವರ್ತಮಾನದ ಪ್ರಪಂಚದಲ್ಲಿ ಮರುಕಳಿಸದಂತೆ ನೋಡಿಕೊಳ್ಳುವುದರಲ್ಲಿ ಹಾಗೂ ಅಲ್ಲಿರುವ ಆದರ್ಶ ಪರಂಪರೆಗಳನ್ನು ನಮ್ಮ ದೈನಂದಿನ ಸಂಸ್ಕೃತಿಯನ್ನಾಗಿಸಿ ಮುಂದುವರಿಸಿಕೊಂಡು ಹೋಗುವುದರಲ್ಲಿ.


ಒಂದು ವೇಳೆ, ನಮ್ಮ ಕೈಯಲ್ಲಿರುವ ಅಧಿಕಾರದ ಬಲದಿಂದ ಇತಿಹಾಸವನ್ನು ತಿದ್ದಬಹುದು ಎಂದುಕೊಳ್ಳೋಣ. ಆದರೆ, ಅನಿಶ್ಚಿತವಾಗಿರುವ ಅಧಿಕಾರ ಕೈತಪ್ಪಿಹೋದಾಗ, ನಾವು ಸ್ಥಾಪಿಸಿದ ಹೊಸ ಇತಿಹಾಸದ ಗತಿಯೇನಾಗುತ್ತದೆ? ಕಾಲಚಕ್ರದಲ್ಲಿ, ಇಂತಹ ಅಳಿಸಿಹಾಕಿದ, ಹೊಸ ಇತಿಹಾಸ ಸೃಷ್ಟಿಸಿದ ಎಷ್ಟು ಉದಾಹರಣೆಗಳಿಲ್ಲ? ಹೀಗೆ ಇತಿಹಾಸವು ಸ್ವಾಯತ್ತತೆ ಪಡೆಯದೆ ಇನ್ನೂ ಅಧಿಕಾರದ ಕೈಗೊಂಬೆಯಾಗಿಯೇ ಮುಂದುವರಿಯುತ್ತಿರುವುದು ಶೋಚನೀಯ ಸಂಗತಿ.

ನಮ್ಮ ದೇಶದ ಇತಿಹಾಸದಲ್ಲಿಯೂ ಅಧಿಕಾರದಲ್ಲಿರುವವರ ಸಿದ್ಧಾಂತ, ಮನೋಧರ್ಮಕ್ಕೆ ಅನುಗುಣವಾಗಿ ಐತಿಹಾಸಿಕ ವ್ಯಕ್ತಿಗಳು ಮತ್ತು ಕುರುಹುಗಳು ಕಾಲಕಾಲಕ್ಕೆ ಪ್ರಾಶಸ್ತ್ಯ ಗಳಿಸುವುದು ಹಾಗೂ ಮೂಲೆ ಸೇರುವುದನ್ನು ಕಾಣುತ್ತೇವೆ. ಇದನ್ನು ಗಮನಿಸುವಾಗ, 1818ರಲ್ಲಿ ಆಂಗ್ಲ ಕವಿ ಪಿ.ಬಿ.ಶೆಲ್ಲಿ ಪ್ರಕಟಿಸಿದ ‘ಓಜಿಮಾಂಡಿಯಾಸ್’ ಕವನದ ಮರುಓದು ಬಹಳ ಪ್ರಸ್ತುತವೆನಿಸುತ್ತದೆ.

ಓಜಿಮಾಂಡಿಯಾಸ್ ಕ್ರಿ.ಪೂ. 13ನೇ ಶತಮಾನದಲ್ಲಿ ಈಜಿಪ್ಟನ್ನು ಆಳಿದ ರಾಜ. ಈ ಕವನವು ಓಜಿಮಾಂಡಿಯಾಸ್ ಪ್ರತಿಮೆಯ ವರ್ತಮಾನದ ದುಃಸ್ಥಿತಿಯನ್ನು ವಿವರಿಸುವ ಮೂಲಕ ಮನುಷ್ಯನ ಭೌತಿಕ ಸಾಧನೆಗಳ ನಶ್ವರತೆಯನ್ನು ಓದುಗರ ಮುಂದಿಡುತ್ತದೆ. ಮಹಾನ್‌ಪುರುಷರು ಕಟ್ಟಿದ ಸಾಮ್ರಾಜ್ಯಗಳು, ಪರಂಪರೆಗಳು ನಶ್ವರವಾದವು, ಕಾಲಗರ್ಭದಲ್ಲಿ ಅವು ಹೇಗೆ ಮರೆತುಹೋಗುತ್ತವೆ ಎನ್ನುವುದು ಇದರ ಮುಖ್ಯ ತಿರುಳು.

ತನ್ನ ಪ್ರತಿಮೆ ಸ್ಥಾಪನೆಯ ಮೂಲಕ ತನ್ನನ್ನು ಅಮರನನ್ನಾಗಿಸಬೇಕೆಂಬ ಓಜಿಮಾಂಡಿಯಾಸ್‌ನ ಅಹಂಕಾರ, ಪ್ರತಿಷ್ಠೆ, ಹುಚ್ಚು ಬಯಕೆಯ ಕುರಿತಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ವರ್ತಮಾನದಲ್ಲಿ ಆ ಪ್ರತಿಮೆಯ ದುರ್ಗತಿಯನ್ನು ನೋಡಿದ ಪ್ರವಾಸಿಯೊಬ್ಬ ನಿರೂಪಕನಿಗೆ ಹೀಗೆ ಹೇಳುತ್ತಾನೆ- ‘ನಾನು ಮರುಭೂಮಿಯ ಮಧ್ಯದಲ್ಲಿ ಒಂದು ಹಳೆಯ, ಛಿದ್ರಗೊಂಡ ಪ್ರತಿಮೆಯನ್ನು ನೋಡಿದೆ. ಅದರ ದೇಹವು ಸಂಪೂರ್ಣವಾಗಿ ಕಾಣೆಯಾಗಿದ್ದು, ಕೇವಲ ಎರಡು ದೊಡ್ಡ ಕಾಲುಗಳು ಮತ್ತು ಮರಳಿನಲ್ಲಿ ಅರ್ಧ ಹೂತಿರುವ ಮುಖವಷ್ಟೇ ಉಳಿದುಕೊಂಡಿತ್ತು’.

ಆದಾಗ್ಯೂ, ಮುಖದಲ್ಲಿನ ದುರಹಂಕಾರ ಮತ್ತು ಪ್ರತಿಷ್ಠೆಯ ಕುರುಹುಗಳು ಸ್ಪಷ್ಟವಾಗಿ ಉಳಿದುಕೊಂಡಿದ್ದು, ಅದನ್ನು ಕೆತ್ತಿದ ಶಿಲ್ಪಿಯ ಕೈಚಳಕ, ಅವನು ರಾಜನ ಭಾವನೆಗಳನ್ನು ಅದೆಷ್ಟು ನಿಖರವಾಗಿ ಅರ್ಥಮಾಡಿಕೊಂಡಿದ್ದ ಎನ್ನುವುದನ್ನು ಸೂಚಿಸುತ್ತಿದ್ದವು. ಕುಚೋದ್ಯವೆಂಬಂತೆ, ಧ್ವಂಸವಾಗಿರುವ ಪ್ರತಿಮೆಯ ಪೀಠದಲ್ಲಿ ಕೆತ್ತಿರುವ ‘ನನ್ನ ಹೆಸರು ಓಜಿಮಾಂಡಿಯಾಸ್. ನಾನು ರಾಜರ ರಾಜ. ನೀವು ಎಷ್ಟೇ ಪರಾಕ್ರಮಿಗಳಾಗಿದ್ದರೂ ನನ್ನ ಸಾಧನೆಗಳನ್ನು ನೋಡಿದರೆ ಹತಾಶರಾಗುತ್ತೀರಿ’ ಎನ್ನುವ ಪದಗಳು ಮಾಸಿರಲಿಲ್ಲ. ಪ್ರಸಕ್ತ, ಅದರ ಸುತ್ತಲೂ ಮೈಲಿಗಟ್ಟಲೆ ಮರಳಿನ ರಾಶಿಯಷ್ಟೇ ಪಸರಿಸಿಕೊಂಡಿದ್ದು, ಅದು ರಾಜನ ಅಹಂಕಾರವನ್ನು ಅಣಕಿಸುವಂತಿತ್ತು. ಈ ರೀತಿ, ಓಜಿಮಾಂಡಿಯಾಸನ ಪ್ರತಿಮೆಗಾದ ಗತಿ, ಜನರಿಗೆ ಅವನ ಕಾಲದಲ್ಲಿ ಭಯವೆಷ್ಟಿತ್ತು ಹಾಗೂ ಅವನ ಕಾಲಾನಂತರ ಹೇಗೆ ಅದು ಆಕ್ರೋಶವಾಗಿ ಮಾರ್ಪಟ್ಟಿತು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.



ಈ ಕವನದಿಂದ, ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿಯಲು ಅಧಿಕಾರದ ಬಲ ಬೇಕಾಗಿಲ್ಲ, ಬದಲಾಗಿ, ಅಂತರಾಳದಿಂದ ಮಾಡುವ ಜನಹಿತ ಕಾರ್ಯಗಳಿಂದ ಸಾಧ್ಯವೆನ್ನುವುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಅಧಿಕಾರದ ಅಹಂಕಾರದಿಂದ ತಮ್ಮ ಕುರುಹುಗಳನ್ನು ಸ್ಥಾಪಿಸಲು ಪ್ರಯತ್ನಿಸಿದರೂ ಕಾಲಾನಂತರ ಅವು ಮಣ್ಣು ಸೇರುತ್ತವೆ. ಆದರೆ, ತಮ್ಮ ಹೆಸರನ್ನು ಅಮರವಾಗಿಸಲು ಯಾವುದೇ ಪ್ರಯತ್ನ ಮಾಡದ ಮತ್ತು ನಿಜಾರ್ಥದಲ್ಲಿ ಸಮಾಜಕಲ್ಯಾಣ ಮಾಡಿದ ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಅವರಂತಹ ಮಹಾಪುರುಷರು ಕಾಲಾತೀತವಾಗಿ ನಮ್ಮ ಮನಸ್ಸಿನಲ್ಲಿ ಇಂದಿಗೂ ಉಳಿದಿದ್ದಾರೆ ಹಾಗೂ ನಮ್ಮನ್ನು ಮರುಓದಿಗೆ ಒತ್ತಾಯಿಸುತ್ತಲೇ ಇರುತ್ತಾರೆ.

ಹೀಗೆ, ಕಾಲ ಮತ್ತು ಪ್ರಾದೇಶಿಕ ಪರಿಮಿತಿಗಳನ್ನು ಮೀರಿ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯಬೇಕೆಂದರೆ, ಅಪ್ರತಿಮ ಸಮಾಜಮುಖಿ ಸಾಧನೆಯಿಂದಷ್ಟೇ ಸಾಧ್ಯ, ಅಧಿಕಾರ ಬಲದಿಂದಲ್ಲ.

ವಾಚಕರ ವಾಣಿ

ಮನುಷ್ಯಧರ್ಮ ಮೆರೆಯಿರಿ

ಸಂವಿಧಾನದತ್ತವಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಸಮಾನತೆ, ವಿವಿಧತೆಯಲ್ಲಿ ಏಕತೆ, ವರ್ಗ ಸಮಾನತೆಯನ್ನು ಸಾಧಿಸಲು ಸಮವಸ್ತ್ರ ಜಾರಿಯಾಗಿದೆ. ಆದರೆ ಸಮವಸ್ತ್ರದ ಹೆಸರಿನಲ್ಲಿ ಮಹಿಳಾ ಶಿಕ್ಷಣಕ್ಕೆ ಕುತ್ತು ತರುವ ವಿದ್ಯಮಾನ ಈಗ ಸಂಭವಿಸುತ್ತಿದೆ. ಚುನಾವಣೆಗಳು ಹತ್ತಿರ ಬಂದಾಗಲೆಲ್ಲ ಒಂದಲ್ಲ ಒಂದು ಧಾರ್ಮಿಕ ಅಸ್ಮಿತೆಯನ್ನು ವಿವಾದಗೊಳಿಸುವ ಆಳುವವರ ನಡತೆಗೆ ಮುಸ್ಲಿಂ ಹೆಣ್ಣುಮಕ್ಕಳು ತಲೆಯ ಮೇಲೆ ಹಾಕಿಕೊಳ್ಳುವ ಹಿಜಾಬ್ ಈ ಬಾರಿ ಗುರಿಯಾಗಿದೆ.

ಸಿಖ್ ಧರ್ಮದವರು ತಲೆಗೆ ಹಾಕಿಕೊಳ್ಳುವ ಪಗಡಿ, ಹಿಂದೂಗಳು ಇಡುವ ಕುಂಕುಮ, ವಿಭೂತಿ, ನಾಮಗಳು ಧಾರ್ಮಿಕ ಸಂಕೇತಗಳೇ ಆಗಿವೆ. ಬಹುತೇಕ ಸರ್ಕಾರಿ ಶಿಕ್ಷಣ ಸಂಸ್ಥೆ, ಕಚೇರಿ, ನ್ಯಾಯಾಲಯದ ಕಚೇರಿಗಳಲ್ಲಿ ನಡೆಯುವ ಆಯುಧಪೂಜೆ, ಸರಸ್ವತಿಪೂಜೆ, ಗಣೇಶೋತ್ಸವ, ಲಕ್ಷ್ಮಿಪೂಜೆಯೂ ಧಾರ್ಮಿಕ ಆಚರಣೆಗಳೇ ಆಗಿವೆ. ಆದರೆ ಅಲ್ಲೆಲ್ಲ ಅಡ್ಡಬರದ ಧಾರ್ಮಿಕತೆಯ ಪ್ರಶ್ನೆಯು ಮುಸ್ಲಿಂ ಹೆಣ್ಣುಮಕ್ಕಳು ತೊಡುವ ಹಿಜಾಬ್ ವಿಷಯದಲ್ಲಿ ಮುನ್ನೆಲೆಗೆ ಬಂದಿದೆ. ಹಾಗೆ ನೋಡಿದರೆ ಶಿಕ್ಷಣದ ಕಡೆಗೆ ಮುಖ ಮಾಡುತ್ತಿರುವ ಎಲ್ಲ ಜಾತಿ, ಮತ, ಜನಾಂಗದ ಹೆಣ್ಣುಮಕ್ಕಳನ್ನು ಘನತೆಯಿಂದ, ಅಕ್ಕರೆಯಿಂದ ಬರಮಾಡಿಕೊಳ್ಳಬೇಕಾದದ್ದು ಸಾರ್ವಜನಿಕರ ಕರ್ತವ್ಯ. ವಿದ್ಯೆಯ ಮೂಲಕ ಜಾತಿ, ಧರ್ಮದ ಅಸ್ಮಿತೆಗಳಾಚೆಗೆ ಮನುಷ್ಯರನ್ನು ರೂಪಿಸಬೇಕಾದದ್ದು ಶಿಕ್ಷಣ ಇಲಾಖೆಯ ಮುಖ್ಯ ಜವಾಬ್ದಾರಿ. ಅದುಬಿಟ್ಟು ಧರ್ಮದ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ಕೆರಳಿಸಲು, ಎತ್ತಿಕಟ್ಟಲು ಅವಕಾಶ ನೀಡುವುದು ಎಪ್ಪತ್ತೈದರ ಸ್ವಾತಂತ್ರ್ಯೋತ್ಸವ ಆಚರಿಸುವ ದೇಶಕ್ಕೆ ಏನೂ ಶೋಭೆಯಲ್ಲ.

ಒಂದೆಡೆ ಮುಸ್ಲಿಂ ಪುರುಷಶಾಹಿಯು ‘ಇಂತಹುದೇ ಬಟ್ಟೆ ತೊಟ್ಟುಕೊಳ್ಳಿ’ ಎಂದು ಮುಸ್ಲಿಂ ಮಹಿಳೆಯರ ಮೇಲೆ ನಿರ್ಬಂಧ ಹೇರಿದರೆ, ಇನ್ನೊಂದೆಡೆ ಸಾಮಾಜಿಕ ಪುರುಷಶಾಹಿಯು ‘ಅದನ್ನು ಧರಿಸಬೇಡಿ’ ಎಂದಬ್ಬರಿಸುತ್ತದೆ. ಈ ಅಡಕತ್ತರಿಯಲ್ಲಿ ಸಿಕ್ಕ ಮುಸ್ಲಿಂ ಹೆಣ್ಣುಮಕ್ಕಳು ತಮ್ಮ ಹಕ್ಕುಗಳಿಗಾಗಿ ಹೋರಾಡಲೇಬೇಕಿದೆ. ತೊಡುವುದು, ತೊಟ್ಟುಕೊಳ್ಳದೇ ಇರುವುದು ತಮ್ಮ ಆಯ್ಕೆಯೆಂದು ದನಿಯೆತ್ತಿ ಹೇಳಬೇಕಿದೆ. ಬಟ್ಟೆ ನಮ್ಮ ಆಯ್ಕೆ, ಆದರೆ ಶಿಕ್ಷಣ ಪ್ರತೀ ಪೀಳಿಗೆಯ ಸಾಂವಿಧಾನಿಕ ಹಕ್ಕು. ಈ ವಾಸ್ತವವನ್ನು ಅರಿತು ಸಮಾಜವು ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಬೇಕು. ಸಾವಿತ್ರಿಬಾಯಿ ಫುಲೆಯವರನ್ನು ನೆನೆದು ಮಕ್ಕಳನ್ನು ಮನುಷ್ಯರನ್ನಾಗಿಸಬೇಕು.

ಸಬಿಹಾ ಭೂಮಿಗೌಡ, ದು.ಸರಸ್ವತಿ, ವಾಣಿ ಪೆರಿಯೋಡಿ, ಲಿನೆಟ್ ಡಿಸಿಲ್ವಾ, ಸಬಿತಾ ಬನ್ನಾಡಿ, ಮಲ್ಲಿಗೆ ಸಿರಿಮನೆ, ಸುಮನಾ ಮೈಸೂರು, ರೇಖಾಂಬಾ, ರತಿ ರಾವ್, ಕೆ.ವಿ.ನೇತ್ರಾವತಿ, ಅಖಿಲಾ ವಿದ್ಯಾಸಂದ್ರ, ಸುನಂದಾ ಕಡಮೆ, ಎಚ್.ಎಸ್.ಅನುಪಮಾ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪರವಾಗಿ

ಕೆಪಿಎಸ್‌ಸಿ ಮಾಸಿಕ ವರದಿ ಹಾಸ್ಯಾಸ್ಪದ

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ವಿವಿಧ ಹುದ್ದೆಗಳಿಗೆ ತಾನು ನಡೆಸಿರುವ ಅನೇಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಹಂತದ ಮಾಹಿತಿಯನ್ನು ಒಳಗೊಂಡ ಪ್ರಗತಿ ವರದಿಯನ್ನು ಪ್ರತೀ ತಿಂಗಳು ಬಿಡುಗಡೆ ಮಾಡುತ್ತಿರುವುದು ಹಾಸ್ಯಾಸ್ಪದ ಎನಿಸುತ್ತದೆ. ಏಕೆಂದರೆ, ಹೀಗೆ ಬಿಡುಗಡೆ ಮಾಡುವ ವರದಿಯು ಕಳೆದ ಆರು ತಿಂಗಳಿನಿಂದಲೂ ಇರುವಂತೆಯೇ ಇದ್ದು, ದಿನಾಂಕ ಮಾತ್ರ ಬದಲಾಗಿರುತ್ತದೆ. ಪರೀಕ್ಷೆ ಮುಗಿದಿದೆ, ಪರೀಕ್ಷೋತ್ತರ ಕಾರ್ಯ ಪ್ರಗತಿಯಲ್ಲಿದೆ ಎಂಬಂತಹ ಮಾಹಿತಿಗಳನ್ನಷ್ಟೇ ಪ್ರತೀ ತಿಂಗಳು ಪ್ರಕಟಿಸುವ ಬದಲು, ನೇಮಕಾತಿಗಳನ್ನು ನಿರ್ದಿಷ್ಟ ಕಾಲಮಾನದೊಳಗೆ ಪೂರ್ಣಗೊಳಿಸುತ್ತೇವೆ ಎಂಬ ದಿನಾಂಕವನ್ನು ನಮೂದಿಸಿದರೆ ಆ ವರದಿಗೆ ಒಂದು ಮೌಲ್ಯ ಸಿಗಬಹುದು. ಇಲ್ಲವೆಂದರೆ ಇಂತಹ ವರದಿಗಳು ಅಳುವ ಮಕ್ಕಳಿಗೆ ತಿನಿಸುಗಳ ಆಸೆ ತೋರಿಸಿ ಸಮಾಧಾನಪಡಿಸಲು ಪ್ರಯತ್ನಿಸಿದಂತೆಯೇ ಸರಿ. ಈ ರೀತಿಯ ನಿಸ್ಸಾರವಾದ ವರದಿಯನ್ನು ಪ್ರಕಟಿಸುವ ಬದಲು ಆಯೋಗವು ತನ್ನ ಇಷ್ಟ ಬಂದಾಗ ಮಾತ್ರ ನೇಮಕಾತಿ ಪೂರ್ಣಗೊಳಿಸಲಿ ಎಂದು ಬಹಳ ನೋವಿನಿಂದ ಹೇಳುವಂತಾಗಿದೆ.

ಸುಜ್ಜಲೂರು ವಿಜಿ, ಟಿ.ನರಸೀಪುರ

ಖೊಟ್ಟಿ ಸಂಸ್ಥೆಗಳ ಬಗ್ಗೆ ನಿಗಾ ವಹಿಸಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಹಾಗೂ ಗುತ್ತಿಗೆ ನೌಕರರಲ್ಲಿ ಕೆಲವರು ಖೊಟ್ಟಿ ಸಂಘ ಸಂಸ್ಥೆಗಳನ್ನು ರಚಿಸಿಕೊಂಡಿದ್ದಾರೆ. ಇಲಾಖೆಯ ಬಹುಪಾಲು ಯೋಜನೆಗಳು, ಪ್ರಾಯೋಜನೆಗಳು, ಧನಸಹಾಯ ಮುಂತಾದವುಗಳ ಹೆಚ್ಚಿನ ಲಾಭ ಪಡೆಯುತ್ತಿರುವುದು ಈ ಸಂಸ್ಥೆಗಳೇ. ಇದರಿಂದ ನಿಜವಾದ ಕಲಾಕಾರರಿಗೆ ಅನ್ಯಾಯವಾಗುತ್ತಲೇ ಇದೆ. ಇಲಾಖೆಯ ಸಚಿವರು, ನಿರ್ದೇಶಕರು ಧನಸಹಾಯಕ್ಕೆ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡುವ ಸದಸ್ಯರು ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಜರುಗಿಸಬೇಕು.

ಮಹಾದೇವ ಹಡಪದ, ಧಾರವಾಡ

ಅತ್ತ ಅವ್ಯವಹಾರ, ಇತ್ತ ಬದುಕು ಕಷ್ಟಕರ

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದಲ್ಲಿ ಸಿಬಿಐ ಬೀಸಿರುವ ಬಲೆಗೆ ದೊಡ್ಡ ದೊಡ್ಡ ವ್ಯಕ್ತಿಗಳೇ ಸಿಲುಕಿರುವುದು ಆಶ್ಚರ್ಯದ ವಿಷಯವೇನಲ್ಲ. ಜೊತೆಗೆ ದೊಡ್ಡ ವ್ಯಕ್ತಿಗಳು ಈ ರೀತಿಯ ಹಗರಣಗಳಲ್ಲಿ ಸಿಲುಕುವುದು ಒಂದು ರೀತಿಯ ವಾಡಿಕೆಯಂತೆಯೇ ಆಗಿಹೋಗಿದೆ ಎಂದರೆ ತಪ್ಪಾಗಲಾರದು.

ಕೋಟ್ಯಂತರ ಮೌಲ್ಯದ ಇಂತಹ ಹಗರಣಗಳಲ್ಲಿ ಆರೋಪ ಎದುರಿಸುವ ಆ ದೊಡ್ಡ ವ್ಯಕ್ತಿಗಳೇನೋ ಇಂತಹ ಸಂದರ್ಭಗಳನ್ನು ಬಹಳ ಸುಲಭವಾಗಿ ಎದುರಿಸುತ್ತಾರೆ. ಆದರೆ ವ್ಯವಸಾಯಕ್ಕೆಂದು 50 ಸಾವಿರ ಅಥವಾ ಒಂದು ಲಕ್ಷ ರೂಪಾಯಿ ಸಾಲ ಮಾಡಿದ ಕೃಷಿಕ, ಬೆಳೆ ನಷ್ಟವಾಗಿ ಸಾಲ ತೀರಿಸಲು ನರಳಾಡುವ ಕಷ್ಟ ನೆನೆದರೆ ತುತ್ತು ಅನ್ನ ಗಂಟಲಲ್ಲಿ ಇಳಿಯಲು ಕಷ್ಟಪಡುತ್ತದೆ. ಆರೋಪಿಗಳು ಸುಲಭವಾಗಿ ತಪ್ಪಿಸಿಕೊಳ್ಳಲು ಬಿಡದೆ ಉಪ್ಪು ತಿಂದವರಿಗೆ ನೀರು ಕುಡಿಸಲು ಕ್ರಮ ಕೈಗೊಳ್ಳಬೇಕು.

ಮಂಜುನಾಥ್, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕುಬೇರ ರಾಜಕೀಯ ಪಕ್ಷ ಬಿಜೆಪಿ

● ಜಯಸಿಂಹ ಆರ್.


ದೇಶದ ಅತ್ಯಂತ ಶ್ರೀಮಂತ ರಾಜಕೀಯ ಪಕ್ಷ ಎನಿಸಿರುವ ಬಿಜೆಪಿಯ ಸಂಪತ್ತು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 2015-16ನೇ ಸಾಲಿಗೆ ಹೋಲಿಸಿದರೆ, 2019-20ರಲ್ಲಿ ಬಿಜೆಪಿಯ ಸಂಪತ್ತು ಶೇ 442ರಷ್ಟು ಏರಿಕೆಯಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಪಕ್ಷದ ಸಂಪತ್ತು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2016-17ರಲ್ಲಿ ಸಂಪತ್ತಿನ ಪ್ರಮಾಣವು ಶೇ 35ರಷ್ಟು ಏರಿಕೆಯಾಗಿದ್ದರೆ, 2017-18ರಲ್ಲಿ ಶೇ 22ರಷ್ಟು ಏರಿಕೆಯಾಗಿತ್ತು.


2018ರಲ್ಲಿ ಚುನಾವಣಾ ಬಾಂಡ್ ಅನ್ನು ಜಾರಿಗೆ ತಂದ ನಂತರ ಬಿಜೆಪಿಯ ಸಂಪತ್ತು ಹಲವು ಪಟ್ಟು ಏರಿಕೆಯಾಗಿದೆ. 2017-18ಕ್ಕೆ ಹೋಲಿಸಿದರೆ, 2018-19ರಲ್ಲಿ ಬಿಜೆಪಿಯ ಸಂಪತ್ತು ಶೇ 99.80ರಷ್ಟು ಏರಿಕೆಯಾಗಿತ್ತು. 2019-20ರಲ್ಲೂ ಪಕ್ಷದ ಸಂಪತ್ತು ಶೇ 66.9ರಷ್ಟು ಏರಿಕೆಯಾಗಿದೆ.

2018-19ರಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಯು ₹1,450.89 ಕೋಟಿ ದೇಣಿಗೆ ಸಂಗ್ರಹಿಸಿತ್ತು. 2019-20ರಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಯು ₹2,555 ಕೋಟಿ ದೇಣಿಗೆ ಸಂಗ್ರಹಿಸಿದೆ. ಹೀಗೆ ಸಂಗ್ರಹಿಸಿದ ದೇಣಿಗೆಯಲ್ಲಿ ಸಾಕಷ್ಟು ಮೊತ್ತವನ್ನು ಬಿಜೆಪಿಯು ವಿವಿಧ ಚುನಾವಣೆಗಳಿಗಾಗಿ ವೆಚ್ಚ ಮಾಡಿದೆ.

ದೇಶದಲ್ಲಿ ನಡೆಯುವ ವಿವಿಧ ಚುನಾವಣೆಗಳ ಸಂದರ್ಭದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡುತ್ತದೆ. ಈ ಬಾಂಡ್‌ಗಳನ್ನು ಸಾರ್ವಜನಿಕರು ಖರೀದಿಸಿ, ತಮ್ಮಿಷ್ಟದ ರಾಜಕೀಯ ಪಕ್ಷಕ್ಕೆ ದೇಣಿಗೆ ನೀಡಬಹುದು. ಈ ಬಾಂಡ್‌ಗಳನ್ನು ಖರೀದಿಸುವ ವೇಳೆ ಯಾವುದೇ ದಾಖಲಾತಿ ನೀಡುವ ಅವಶ್ಯಕತೆ ಇಲ್ಲ. ಹೀಗಾಗಿ ಯಾರು ಬಾಂಡ್ ಖರೀದಿಸಿದರು, ನಗದು ನೀಡಿ ಖರೀದಿಸಿದರೆ ಅಥವಾ ಚೆಕ್ ಮೂಲಕ ಖರೀದಿಸಿದರೆ ಎಂಬ ವಿವರವನ್ನು ಎಸ್‌ಬಿಐ ಸಂಗ್ರಹಿಸುವುದಿಲ್ಲ. ಈ ಬಾಂಡ್‌ಗಳನ್ನು ರಾಜಕೀಯ ಪಕ್ಷಗಳು ನಗದೀಕರಿಸಿಕೊಳ್ಳಬೇಕು.

ಚುನಾವಣಾ ಬಾಂಡ್‌ಗಳ ಮೂಲಕ ನಗದೀಕರಿಸಿಕೊಳ್ಳಲಾದ ದೇಣಿಗೆಯನ್ನು 'ವಿವರಗಳಿಲ್ಲದ ಮೂಲದ ದೇಣಿಗೆ' ಎಂದು ವರ್ಗೀಕರಿಸಲಾಗುತ್ತದೆ. ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಸಲ್ಲಿಸುವ ಆದಾಯದ ವಿವರದಲ್ಲೂ ಇದನ್ನು 'ವಿವರಗಳಿಲ್ಲದ ಮೂಲದ ದೇಣಿಗೆ' ಎಂದೇ ನಮೂದಿಸಲಾಗುತ್ತದೆ. 'ಚುನಾವಣಾ ಬಾಂಡ್‌ಗಳಿಂದ ಬಿಜೆಪಿಗೆ ಹೆಚ್ಚು ಲಾಭವಾಗುತ್ತಿದೆ' ಎಂದು ವಿರೋಧ ಪಕ್ಷಗಳು ಹಲವು ಬಾರಿ ಆರೋಪಿಸಿವೆ.






ಬಿಜೆಪಿಯದ್ದೇ ಸಿಂಹಪಾಲು

ದೇಶದ ಎಲ್ಲಾ ರಾಜಕೀಯ ಪಕ್ಷಗಳಿಗೆ ಹೋಲಿಸಿದರೆ ಬಿಜೆಪಿ ಅತ್ಯಂತ ಶ್ರೀಮಂತ ಪಕ್ಷ ಎನಿಸಿದೆ. ದೇಶದ ಎಲ್ಲಾ ರಾಷ್ಟ್ರೀಯ ಪಕ್ಷಗಳ ಒಟ್ಟು ಸಂಪತ್ತಿನಲ್ಲಿ ಬಿಜೆಪಿಯ ಸಂಪತ್ತಿನ ಪ್ರಮಾಣ ಶೇ 70ರಷ್ಟು. ದೇಶದ ಎಲ್ಲಾ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಒಟ್ಟು ಸಂಪತ್ತಿನಲ್ಲಿ ಶೇ 53ಕ್ಕೂ ಹೆಚ್ಚು ಸಂಪತ್ತನ್ನು ಬಿಜೆಪಿ ಹೊಂದಿದೆ. 2018-19ಕ್ಕೆ ಹೋಲಿಸಿದರೆ, 2019-20ರಲ್ಲಿ ಸಂಪತ್ತು ಏರಿಕೆಯಾದ ಪಕ್ಷಗಳಲ್ಲಿ ಬಿಜೆಪಿ ಮೊದಲ ಸಾಲಿನಲ್ಲಿ ನಿಲ್ಲುತ್ತದೆ.


- ಈ ಅವಧಿಯಲ್ಲಿ ಬಿಜೆಪಿಯ ಸಂಪತ್ತು ₹2,904 ಕೋಟಿಯಿಂದ ₹4,847 ಕೋಟಿಗೆ ಏರಿಕೆಯಾಗಿದೆ. ಅಂದರೆ ಒಂದು ವರ್ಷದಲ್ಲಿ ಬಿಜೆಪಿಯ ಸಂಪತ್ತು ₹1,943 ಕೋಟಿಯಷ್ಟು ಹೆಚ್ಚಳವಾಗಿದೆ
- ದೇಶದ ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಎಸ್‌ಪಿಯ ಸಂಪತ್ತು ಈ ಅವಧಿಯಲ್ಲಿ ಇಳಿಕೆಯಾಗಿದೆ
- ಮಹಾರಾಷ್ಟ್ರದಲ್ಲಿ ಈಗ ಶಿವಸೇನಾ-ಕಾಂಗ್ರೆಸ್ ಜತೆ ಮೈತ್ರಿ ಸರ್ಕಾರದ ಪಾಲುದಾರನಾಗಿರುವ ಎನ್‌ಸಿಪಿಯ ಸಂಪತ್ತು ಈ ಅವಧಿಯಲ್ಲಿ ಶೇ 74ರಷ್ಟು ಇಳಿಕೆಯಾಗಿದೆ. ಜತೆಗೆ ಎನ್‌ಸಿಪಿ ದೇಶದ ಅತ್ಯಂತ ಬಡ ರಾಷ್ಟ್ರೀಯ ಪಕ್ಷ ಎನಿಸಿದೆ. ಎನ್‌ಸಿಪಿಯ ಸಂಪತ್ತು ಪ್ರಮುಖ ಪ್ರಾದೇಶಿಕ ಪಕ್ಷಗಳ ಸಂಪತ್ತಿಗಿಂತ ಹಲವು ಪಟ್ಟು ಕಡಿಮೆ ಇದೆ
- ಎಲ್ಲಿಯೂ ಅಧಿಕಾರದಲ್ಲಿ ಇರದ ಬಿಎಸ್‌ಪಿ ದೇಶದ ಎರಡನೇ ಅತ್ಯಂತ ಶ್ರೀಮಂತ ರಾಷ್ಟ್ರೀಯ ಪಕ್ಷ ಎನಿಸಿದೆ. 2018-19ರಲ್ಲಿ ಕಾಂಗ್ರೆಸ್ ಎರಡನೇ ಶ್ರೀಮಂತ ರಾಷ್ಟ್ರೀಯ ಪಕ್ಷ ಎನಿಸಿತ್ತು. 2019-20ರ ವೇಳೆಗೆ ಈ ಎರಡೂ ಪಕ್ಷಗಳ ಸಂಪತ್ತು ಇಳಿಕೆಯಾಗಿದ್ದರೂ, ಹೆಚ್ಚು ಕಳೆದುಕೊಂಡಿದ್ದು ಕಾಂಗ್ರೆಸ್. ಹೀಗಾಗಿ ಬಿಎಸ್‌ಪಿ ಎರಡನೇ ಅತಿ ಶ್ರೀಮಂತ ರಾಷ್ಟ್ರೀಯ ಪಕ್ಷ ಎನಿಸಿದೆ. ಆದರೆ, ಈಗ ಚುನಾವಣೆ ಎದುರಿಸುತ್ತಿರುವ ಐದು ರಾಜ್ಯಗಳಲ್ಲಿ ದೊಡ್ಡ ಮಟ್ಟದಲ್ಲಿ ಪ್ರಚಾರ ನಡೆಸಲು ತನ್ನ ಬಳಿ ಸಾಕಷ್ಟು ಹಣ ಇಲ್ಲ ಎಂದು ಬಿಎಸ್‌ಪಿ ಹೇಳಿತ್ತು

ಕರಗುತ್ತಿದೆ ಪ್ರಾದೇಶಿಕ ಪಕ್ಷಗಳ ಗಂಟು

2018-19ಕ್ಕೆ ಹೋಲಿಸಿದರೆ, 2019-20ರಲ್ಲಿ ಹಲವು ಪ್ರಾದೇಶಿಕ ಪಕ್ಷಗಳ ಸಂಪತ್ತು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕೆಲವೇ ಪ್ರಾದೇಶಿಕ ಪಕ್ಷಗಳ ಸಂಪತ್ತು ಏರಿಕೆಯಾಗಿದೆ. ಹೀಗೆ ಸಂಪತ್ತು ಏರಿಕೆಯಾದ ಪ್ರಾದೇಶಿಕ ಪಕ್ಷಗಳಲ್ಲಿ ಬಿಜೆಡಿ ಮೊದಲ ಸಾಲಿನಲ್ಲಿದೆ. ಅಧಿಕಾರದಲ್ಲಿ ಇರುವ ಕೆಲವು ಪಕ್ಷಗಳ ಸಂಪತ್ತು ಇಳಿಕೆಯಾಗಿದ್ದರೆ, ಅಧಿಕಾರದಲ್ಲಿ ಇಲ್ಲದೇ ಇರುವ ಕೆಲವು ಪಕ್ಷಗಳ ಸಂಪತ್ತು ಸ್ವಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ



- ತೆಲಂಗಾಣದಲ್ಲಿ ಎರಡು ಅವಧಿಯಿಂದ ಅಧಿಕಾರದಲ್ಲಿರುವ ತೆಲುಗು ರಾಷ್ಟ್ರ ಸಮಿತಿಯ (ಟಿಆರ್‌ಎಸ್) ಸಂಪತ್ತು ಈ ಅವಧಿಯಲ್ಲಿ ಇಳಿಕೆಯಾಗಿದೆ. ಅಧಿಕಾರದಲ್ಲಿದ್ದೂ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತು ಕಳೆದುಕೊಂಡ ಪ್ರಾದೇಶಿಕ ಪಕ್ಷಗಳಲ್ಲಿ ಟಿಆರ್‌ಎಸ್ ಮೊದಲ ಸಾಲಿನಲ್ಲಿ ನಿಲ್ಲುತ್ತದೆ
- ಮಹಾರಾಷ್ಟ್ರದಲ್ಲಿ ಈಗ ಅಧಿಕಾರದಲ್ಲಿರುವ ಶಿವಸೇನಾದ ಸಂಪತ್ತು ಸ್ವಲ್ಪ ಕರಗಿದೆ. ಶಿವಸೇನಾವು ಈ ಹಿಂದಿನ ಅವಧಿಯಲ್ಲೂ ಬಿಜೆಪಿ ಜತೆಗಿನ ಮೈತ್ರಿಕೂಟದಲ್ಲಿ ಸರ್ಕಾರದ ಭಾಗವಾಗಿತ್ತು
- ಬಿಹಾರದಲ್ಲಿ ಅಧಿಕಾರದಲ್ಲಿ ಇರುವ ಜೆಡಿಯುವಿನ ಸಂಪತ್ತು ಸಹ ಕರಗಿದೆ. ಆಂಧ್ರಪ್ರದೇಶದಲ್ಲಿ ಈಗ ಅಧಿಕಾರದಲ್ಲಿ ಇರುವ ವೈಎಸ್‌ಆರ್ ಕಾಂಗ್ರೆಸ್‌ನ ಸಂಪತ್ತು ಸಹ ಶೇ 34ರಷ್ಟು ಇಳಿಕೆಯಾಗಿದೆ
- ಎಲ್ಲಿಯೂ ಅಧಿಕಾರದಲ್ಲಿ ಇಲ್ಲದ ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ತೆಲುಗು ದೇಶಂ ಪಾರ್ಟಿಯ (ಟಿಡಿಪಿ) ಸಂಪತ್ತು ಏರಿಕೆಯಾಗಿದೆ
- ಒಡಿಶಾದಲ್ಲಿ ಅಧಿಕಾರದಲ್ಲಿರುವ ಬಿಜು ಜನತಾ ದಳದ (ಬಿಜೆಡಿ) ಸಂಪತ್ತು ಈ ಅವಧಿಯಲ್ಲಿ ಶೇ 62.23ರಷ್ಟು ಏರಿಕೆಯಾಗಿದೆ. ಪ್ರಾದೇಶಿಕ ಪಕ್ಷಗಳಲ್ಲಿ ಸಂಪತ್ತು ಏರಿಕೆಯಾದ ಗರಿಷ್ಠ ಪ್ರಮಾಣ ಇದಾಗಿದೆ. ರಾಷ್ಟ್ರೀಯ ಪಕ್ಷಗಳಿಗೆ ಹೋಲಿಸಿದರೂ, ಸಂಪತ್ತು ಏರಿಕೆಯ ಪ್ರಮಾಣದಲ್ಲಿ ಬಿಜೆಡಿ ಎರಡನೇ ಸ್ಥಾನದಲ್ಲಿದೆ



ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ 'ರಾಜಕೀಯ ಪಕ್ಷಗಳ ಸಂಪತ್ತಿನ ವಿಶ್ಲೇಷಣೆ ವರದಿಗಳು:2015-2020', 'ರಾಜಕೀಯ ಪಕ್ಷಗಳ ಆದಾಯದ ಮೂಲ ವರದಿಗಳು:2018-2020, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 39

ಸದಾಚಾರದಿಂದ ಜೀವನೋದ್ಧಾರ

ಋಷಿಗಳು 'ಓ ಸೂತಮುನಿ! ಪುಣ್ಯಲೋಕಗಳನ್ನು ಜಯಿಸುವಂತಹ ಸದಾಚಾರಗಳು ಯಾವುವು? ಧರ್ಮ ಮತ್ತು ಅಧರ್ಮ ಸ್ವರೂಪಗಳಾದ ಸ್ವರ್ಗ ಮತ್ತು ನರಕಗಳನ್ನುಂ ಉಂಟುಮಾಡುವಂತಹ ಆಚಾರಗಳಾವುವು?' ಎಂದು ಕೇಳಿದಾಗ ಸೂತಮುನಿ ಹೀಗೆ ಹೇಳುತ್ತಾನೆ.

ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಏಳುವಾಗ, ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯವ್ಯ, ಉತ್ತರ, ಈಶಾನ್ಯ ಎಂಬ ಎಂಟು ದಿಕ್ಕುಗಳಲ್ಲಿ ಅಭಿಮುಖವಾಗಿ ಎದ್ದರೆ ಕ್ರಮವಾಗಿ ಆಯುಸ್ಸು, ದ್ವೇಷ, ಮರಣ, ಪಾಪ, ಭಾಗ್ಯ, ರೋಗ, ಪುಷ್ಟಿ, ಶಕ್ತಿ ಎಂಬ ಫಲಗಳು ಉಂಟಾಗುವುದು. ಎಲ್ಲ ಪುರುಷರೂ ಉಷಃಕಾಲದಲ್ಲಿ ಪೂರ್ವಾಭಿಮುಖವಾಗಿ ಎದ್ದುನಿಂತು ದೇವತೆಗಳನ್ನು ಧ್ಯಾನಿಸಿ, ಧರ್ಮ-ಅರ್ಥಗಳನ್ನು ಚಿಂತಿಸಬೇಕು. ರಾತ್ರಿಯ ಕೊನೆಯ ಯಾಮಕ್ಕೆ ಉಷಃಕಾಲವೆಂದು ಹೆಸರು. ಆ ಯಾಮದ ಅರ್ಧಭಾಗಕ್ಕೆ ಸಂಧಿಯೆಂದು ಹೆಸರು. ಆ ಸಂಧಿಕಾಲದಲ್ಲೆದ್ದು ಜಲಬಾಧೆ ಮತ್ತು ಮಲಬಾಧೆಗಳನ್ನು ತೀರಿಸಬೇಕು. ದೇಹಬಾಧೆಗಾಗಿ ಮನೆಯಿಂದ ದೂರಪ್ರದೇಶಕ್ಕೆ ಹೋಗಬೇಕು. ಶಿರಸ್ಸನ್ನು ಬಟ್ಟೆಯಿಂದ ಮುಚ್ಚಿಕೊಳ್ಳಬೇಕು. ಉತ್ತರ ದಿಕ್ಕಿಗೆದುರಾಗಿ ಕುಳಿತುಕೊಳ್ಳಬೇಕು. ತೊಂದರೆ ಇದ್ದರೆ ಮಿಕ್ಕ ಯಾವುದಾದರೂ ದಿಕ್ಕಿಗೆ ಎದುರಾಗಿ ಕುಳಿತುಕೊಳ್ಳಬಹುದು. ಮಲವನ್ನು (ಅಮೇಧ್ಯವನ್ನು) ವಿಸರ್ಜನೆಮಾಡಿ ಎದ್ದಮೇಲೆ ತಿರುಗಿ ಆ ಮಲವನ್ನು ನೋಡಬಾರದು. ತಂಬಿಗೆಯಿಂದ ಪೃಷ್ಠಶೌಚವನ್ನು (ಶುದ್ಧಿಯನ್ನು) ಮಾಡಬೇಕು. ಜಲಾಶಯದ ನೀರಿನಲ್ಲಿಯೇ ತೊಳೆಯಬಾರದು. ನೀರಿನ ಹೊರಪ್ರದೇಶದ ಬಯಲಲ್ಲಿ ತೊಳೆಯಬೇಕು.

ಯಾವುದಾದರೂ ಎಲೆಯಿಂದ ಅಥವಾ ಕಡ್ಡಿಯಿಂದ ನೀರಿನ ಹೊರಗೆ ನಿಂತು ಹಲ್ಲುಗಳನ್ನುಜ್ಜಬೇಕು, ತರ್ಜನೀ ಅಂದರೆ, ಎರಡನೆಯ ಬೆರಳಿನಿಂದ ಹಲ್ಲನ್ನು ಉಜ್ಜಬಾರದು. ಅಶಕ್ತನಾದವನು, ಕಂಠಪರ್ಯಂತವಾಗಲೀ, ಸೊಂಟದ ಪರ್ಯಂತವಾಗಲೀ ಸ್ನಾನಮಾಡಬಹುದು. ಅದಕ್ಕೂ ಶಕ್ತಿಯಿಲ್ಲದವರು, ಮೊಳಕಾಲುಗಳ ಪರ್ಯಂತ ಜಲವನ್ನು ಪ್ರೋಕ್ಷಿಸಿಕೊಂಡು, ಮಂತ್ರಸ್ನಾನವನ್ನು ಮಾಡಬೇಕು. ತೀರ್ಥಜಲದಿಂದ ದೇವಋಷಿಪಿತೃಗಳಿಗೆ ತರ್ಪಣವನ್ನು ಮಾಡಬೇಕು. ಒಗೆದು ಮಡಿಯಾಗಿರುವ ಬಟ್ಟೆಯನ್ನು, ಪಂಚಕಚ್ಚೆಯನ್ನು ಹಾಕಿ ಉಟ್ಟುಕೊಳ್ಳಬೇಕು. ನದಿಗಳಲ್ಲಿ ಸ್ನಾನಮಾಡಿದ ಬಟ್ಟೆಯನ್ನು ತೊಳೆಯಬಾರದು. ಸ್ನಾನವಾದ ಮೇಲೆ ಬಾವಿ, ಕೊಳ, ಮನೆಗಳಲ್ಲಿ ಬಟ್ಟೆಯನ್ನು ಒಗೆಯಬೇಕು. ನದಿಗಳನ್ನು ಶುದ್ಧವಾಗಿಟ್ಟುಕೊಳ್ಳುವುದರಿಂದ ಪಿತೃಗಳು ತೃಪ್ತರಾಗುವರು.

ಜಾಬಾಲೋಪನಿಷತ್ತಿನಲ್ಲಿ ಹೇಳಿರುವ ಮಂತ್ರದಿಂದ ಭಸ್ಮವನ್ನು ಮೂರು ಪಟ್ಟೆಯಾಗಿ ಹಣೆಯಲ್ಲಿ ಹಚ್ಚಬೇಕು. ಇದಕ್ಕೆ ವಿಪರೀತವಾಗಿ ಆಚರಿಸಿದರೆ ಜಲದಲ್ಲಿ ಮರಣವೂ, ಮರಣದ ನಂತರ ನರಕವೂ ಪ್ರಾಪ್ತಿಯಾಗುವುದು. 'ಅಪೋಹಿಷ್ಠಾ' ಎಂಬ ಮಂತ್ರದಿಂದ ಶಿರಸ್ಸಿನಲ್ಲಿ ಜಲವನ್ನು ಪ್ರೋಕ್ಷಿಸಿಕೊಳ್ಳಬೇಕು. 'ಯಸ್ಯಕ್ಷಯಾಯ ಜಿನ್ವಥ' ಎಂಬ ಮಂತ್ರದಿಂದ ಕಾಲಿನಲ್ಲಿ ಸಂಧಿಗಳನ್ನು ಪ್ರೋಕ್ಷಿಸಬೇಕು. ಪಾದ, ಶಿರಸ್ಸು, ಹೃದಯ; ನಂತರ ಶಿರಸ್ಸು, ಹೃದಯ, ಪಾದ; ನಂತರ ಹೃದಯ, ಪಾದ, ಶಿರಸ್ಸು, ಹೀಗೆ ಕ್ರಮವಾಗಿ ಮೂರು ಬಾರಿ ಪ್ರೋಕ್ಷಿಸಬೇಕು. ಇದಕ್ಕೆ ಮಂತ್ರಸ್ನಾನವೆಂದು ಹೆಸರು.

ಸಾಮಾನ್ಯವಾದ ಅಶುದ್ಧಿ ವಸ್ತುಸ್ಪರ್ಶ, ಅನಾರೋಗ್ಯ, ರಾಜಭಯ ಮತ್ತು ರಾಜ್ಯಭಯ, ಅನಿರೀಕ್ಷಿತ ಪ್ರಯಾಣಕಾಲಗಳಲ್ಲಿ ವಿಧಿವತ್ತಾಗಿ ಸ್ನಾನಮಾಡಲು ಕಾಲಾವಕಾಶವಿಲ್ಲದಿರುವಾಗ ಮಂತ್ರಸ್ನಾನವನ್ನು ಮಾಡಬಹುದು. ಪ್ರಾತಃಕಾಲದಲ್ಲಿ 'ಸೂರ್ಯಶ್ಚ ಮಾಮನ್ಯುಶ್ಚ' ಎಂಬ ಸೂರ್ಯಾನುವಾಕದಿಂದ, ಸಾಯಂಕಾಲದಲ್ಲಿ 'ಅಗ್ನಿಶ್ಚ ಮಾಮನ್ಯುಶ್ಚ' ಎಂಬ ಅಗ್ನ್ಯನುವಾಕದಿಂದ ಜಲಪ್ರಾಶನೆ ಮಾಡಿ, ಪುನಃ 'ಅಪೋಹಿಷ್ಠಾ' ಎಂಬ ಮಂತ್ರದಿಂದ ಪ್ರೋಕ್ಷಣೆ ಮಾಡಿಕೊಳ್ಳಬೇಕು. ಜಪವಾದ ಮೇಲೆ, ಗಾಯತ್ರೀಮಂತ್ರದಿಂದ ಮೂರು ಬಾರಿ ಪೂರ್ವಾಭಿಮುಖವಾಗಿ ನಿಂತು, ಊರ್ಧ್ವಮುಖವಾಗಿ ನೀರನ್ನು ಎರಚಬೇಕು. ಮಧ್ಯದಲ್ಲಿ ಗಾಯತ್ರೀಮಂತ್ರದಿಂದಲೇ ಸೂರ್ಯನಿಗೆ ಒಂದು ಅರ್ಘ್ಯವನ್ನು ಕೊಡಬೇಕು.

ಬಳಿಕ ಸಾಯಂಕಾಲದಲ್ಲಿ ಪಶ್ಚಿಮದಿಕ್ಕಿಗೆ ಎದುರಾಗಿ ನಿಂತು ಭೂಮಿಯಲ್ಲಿ ಕೆಳಮುಖವಾಗಿ ಅರ್ಘ್ಯವನ್ನು ಕೊಡಬೇಕು. ಪ್ರಾತಃಕಾಲದಲ್ಲಿ ಮೇಲು ಮುಖವಾಗಿಯೂ ಮಧ್ಯಾಹ್ನದಲ್ಲಿ ಬೆರಳುಗಳಿಂದಲೂ ಅರ್ಘ್ಯವನ್ನು ಕೊಡಬೇಕು. ಬೆರಳುಗಳ ರಂಧ್ರದಿಂದ ಸೂರ್ಯಬಿಂಬವನ್ನು ನೋಡಬೇಕು. ತಾನೇ ತನ್ನ ಪ್ರದಕ್ಷಿಣವನ್ನು ಮಾಡಿ ಬಳಿಕ ಶುದ್ಧಾಚಮನವನ್ನು ಮಾಡಬೇಕು. ಸಂಧ್ಯಾಕಾಲದಲ್ಲಿ ನಿತ್ಯವೂ ನೂರು ಬಾರಿ ಗಾಯತ್ರೀಜಪವನ್ನು ಮಾಡಬೇಕು. ಹತ್ತು ದಿನಗಳವರೆಗೆ ಸಂಧ್ಯಾವಂದನೆಯನ್ನು ಮಾಡದಿದ್ದರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ಪಕ್ಷಗಾಯತ್ರೀಜಪವನ್ನು ಮಾಡಬೇಕು. ಇದೂ ಮಾಡದಿದ್ದರೆ, ಒಂದು ತಿಂಗಳು ಸಂಧ್ಯಾವಂದನೆ ಮಾಡಬೇಕು. ಇದೂ ಆಗದಿದ್ದರೆ, ಮತ್ತೆ ಉಪನಯನವನ್ನೇ ಮಾಡಿಕೊಳ್ಳಬೇಕು.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ, ಬಿತ್ತೂರ್ ಎಂಬಲ್ಲಿ ಸಮಾಜವಾದಿ ಪಕ್ಷದ ನಾಯಕರು ಪಾಕಿಸ್ತಾನದ ಪರವಾಗಿ ಘೋಷಣೆ ಕೂಗಿದ್ದಾರೆ. ಅವರು 'ಸೈಕಲ್ ದಬಾಕೆ, ಪಾಕಿಸ್ತಾನ ಬನಾನಾ ಹೇ' (ಸೈಕಲ್ ಚಿಹ್ನೆ ಒತ್ತಿ, ಪಾಕಿಸ್ತಾನವನ್ನು ಸೃಷ್ಟಿಸಿ) ಎಂದು ಘೋಷಣೆ ಕೂಗಿದ್ದಾರೆ. ಇಂತಹ ದೇಶದ್ರೋಹಿಗಳಿಗೆ ಮತ ನೀಡಬೇಡಿ' ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ವೈ.ಸತ್ಯಂ ಕುಮಾರ್ ಟ್ವೀಟ್ ಮಾಡಿದ್ದಾರೆ. ಬಿಜೆಪಿಯ ವಕ್ತಾರ ಸಂಬಿತ್ ಪಾತ್ರಾ ಸೇರಿ ಹಲವರು ಈ ಟ್ವೀಟ್ ಮತ್ತು ವಿಡಿಯೊವನ್ನು ರಿಟ್ವೀಟ್ ಮಾಡಿದ್ದರು. ಈ ಟ್ವೀಟ್‌ನಲ್ಲಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ. 'ಬಿತ್ತೂರ್‌ನಲ್ಲಿ ಸಮಾಜವಾದಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು 'ಸೈಕಲ್ ದಬಾಕೆ, ಮಾತಿ ಚೋರ್ ಬಗಾನಾ ಹೇ' ಎಂದು (ಸೈಕಲ್ ಚಿಹ್ನೆ ಒತ್ತಿ, ಭೂಗಳ್ಳನನ್ನು ಓಡಿಸಬೇಕು) ಎಂದು ಘೋಷಣೆ ಕೂಗಿದ್ದಾರೆ. ಬಿತ್ತೂರ್‌ನ ಬಿಜೆಪಿ ಶಾಸಕ ಅಭಿಜಿತ್ ಸಿಂಗ್ ಅವರ ಮೇಲೆ ಅಕ್ರಮ ಗಣಿಗಾರಿಕೆ ಆರೋಪಗಳಿದ್ದು, ಅದನ್ನು ಗುರಿ ಮಾಡಿ ಈ ಘೋಷಣೆ ಕೂಗಲಾಗಿದೆ. ಬಿಜೆಪಿ ನಾಯಕರು ವಿಡಿಯೊವನ್ನು ತಿರುಚಿ, ಸುಳ್ಳುಸುದ್ದಿ ಹರಡಿದ್ದಾರೆ. ಇದು ಸುಳ್ಳು ಸುದ್ದಿ ಎಂದು ಗೊತ್ತಾದ ತಕ್ಷಣ ಸಂಬಿತ್ ಪಾತ್ರಾ ಅವರು ತಮ್ಮ ಟ್ವೀಟ್ ಅಳಿಸಿದ್ದಾರೆ' ಎಂದು ದಿ ಲಾಜಿಕಲ್ ಇಂಡಿಯನ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಮಂಗಳವಾರ ಫೆಬ್ರುವರಿ 8, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಮಕರ ಮಾಸದ 25 ನೇ ದಿನ
ತಿಥಿ: (ಮಾಘ ಶುಕ್ಲ) ಅಷ್ಟಮಿ ಅಹೋರಾತ್ರ ನಕ್ಷತ್ರ: ಭರಣಿ ಗಂ. 21-27 ಯೋಗ: ಶುಕ್ಲ ಗಂ. 17-05, ಕರಣ: ವಿಷ್ಟಿ ಗಂ. 19-20.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-59 ಸೂರ್ಯಾಸ್ತ : 06-30 ಮುಸ್ಲಿಂ ದಿನಾಂಕ : 06 ರಜಬ್ ದಿನ ವಿಶೇಷ : ಭೀಷ್ಮಾಷ್ಟಮಿ ಅದೃಷ್ಟ ಸಂಖ್ಯೆ: 4, 12

ಮೇಷ: ಅಕ್ಕಪಕ್ಕದವರಿಗೆ ಅನುಮಾನಕ್ಕೆ ಎಡೆಮಾಡಿಕೊಡುವಂತಹ ಹಲವಾರು ವಿಷಯಗಳು ಈ ದಿನ ನಿಮ್ಮಿಂದ ನಡೆಯಲಿದೆ. ಆದಷ್ಟು ಜಾಗ್ರತೆಯಿಂದಿರಿ. ವ್ಯಾಪಾರದಲ್ಲಿ ಹಣವನ್ನು ಪಡೆಯಲು ಕಷ್ಟವಾಗಬಹುದು.

ವೃಷಭ: ಯೋಜನೆಯ ಬೆಳವಣಿಗೆಯಲ್ಲಿ ಸಂಬಂಧಿಸಿದವರೊಂದಿಗೆ ಚರ್ಚೆ ನಡೆಸದೇ ಯಾವ ತೀರ್ಮಾನಗಳಿಗೂ ಬರುವುದು ಸರಿಯಲ್ಲ. ಕಾರ್ಯದ ಒತ್ತಡ ತೀವ್ರವಾದ ಕಾರಣ ಶಿರೋವೇದನೆಯು ಕಾಡಲಿದೆ.

ಮಿಥುನ: ವೃತ್ತಿರಂಗದಲ್ಲಿ ಹಿತೈಷಿಗಳ ಅಥವಾ ಅಕ್ಕಪಕ್ಕದವರ ಮಾತುಗಳನ್ನು ಲೆಕ್ಕಿಸದೇ ಮುನ್ನುಗ್ಗುವುದು ಸರಿ. ನಿಮ್ಮ ಮಾರ್ಗದಲ್ಲಿ ಮತ್ತು ಪ್ರಯತ್ನದಲ್ಲಿ ನಿಮಗೆ ನಂಬಿಕೆ ಇರಲಿ. ನಿಮ್ಮ ತೀರ್ಮಾನಗಳು ಭಾಗಶಃ ಸರಿಯಾಗಿರುವುದು.

ಕರ್ಕಾಟಕ: ಸಾಲ ಅಥವಾ ಸಹಾಯದ ರೂಪದಲ್ಲಿ ನಿಮಗೆ ಹಣ ದೊರೆಯಲಿದೆ. ವ್ಯವಸಾಯಗಾರರಾಗಿರುವ ನೀವು ಇಲಾಖೆಯವರಿಂದ ಸಹಾಯವನ್ನು ಪಡೆದುಕೊಳ್ಳಬಹುದು.

ಸಿಂಹ: ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ಕೌಟುಂಬಿಕ ನೆಮ್ಮದಿಗೆ ಕೊರತೆ ಕಾಣುವುದಿಲ್ಲ. ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ.

ಕನ್ಯಾ: ಶ್ರಮದ ದುಡಿಮೆ ನಿಮ್ಮ ಮುಖ್ಯ ಧ್ಯೇಯವಾಗಿರಲಿ, ಅದರಿಂದಾಗಿ ಶತ್ರುಗಳು ಮಿತ್ರರಾಗುವರು. ವೈಯಕ್ತಿಕ ಬೆಳವಣಿಗೆಗಳಿಗೂ ಗಮನ ಕೊಡಿ. ಸಂಸ್ಥೆಯ ಆದಾಯವನ್ನು ಹೆಚ್ಚಿಸುವತ್ತ ಚಿಂತನೆ.

ತುಲಾ: ಈ ದಿನವನ್ನು ಶ್ರೀ ಲಕ್ಷ್ಮೀ ವೆಂಕಟರಮಣ ದೇವರ ದರ್ಶನದಿಂದ ಪ್ರಾರಂಭಿಸಿ. ಅದರಿಂದಾಗಿ ನಿಮ್ಮ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಬಂಧುಗಳಲ್ಲಿ ವ್ಯವಹರಿಸಿದ ಸಾಲ ಮರುಪಾವತಿ ಮಾಡುವ ಬಗ್ಗೆ ಹೆಚ್ಚಿನ ಗಮನಕೊಡಿ.

ವೃಶ್ಚಿಕ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಪೌಷ್ಟಿಕವಾದ ಆಹಾರ ಸೇವನೆ ಮತ್ತು ಕೆಲಸದ ತೀವ್ರತೆಯ ಸಡಿಲಿಕೆಯಂತಹ ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ನಿಮ್ಮ ಹೆಸರಿಗೆ ಕೇಡನ್ನು ಬಯಸುವ ಸಾಧ್ಯತೆ.

ಧನು: ವ್ಯಾವಹಾರಿಕ ವಿಷಯದಲ್ಲಿ ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ಈ ದಿನ ತಿಳಿಯುವುದು. ನಿಧಾನವಾಗಿಯಾದರೂ ಅದರ ಲಾಭ ಬಂದು ಕೈ ಸೇರಿದ ಸಂತಸ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಬೆಳೆಸಿಕೊಳ್ಳಿ.

ಮಕರ: ಎಲ್ಲರೊಂದಿಗೆ ಸಹಕಾರ ಮನೋಭಾವನೆಯಲ್ಲಿ ಮುಂದುವರೆಯುವುದರಿಂದ ಯಶಸ್ಸು. ಯಾರಿಂದಲೂ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕವಿಲ್ಲ. ದಾಂಪತ್ಯ ಜೀವನ ಸುಖಮಯ.

ಕುಂಭ: ಸ್ವಂತ ಉದ್ಯೋಗದವರು ತಮ್ಮ ಕ್ಷೇತ್ರವನ್ನು ಹೆಚ್ಚು ವಿಸ್ತರಿಸಿಕೊಂಡು ಉನ್ನತ ಮಟ್ಟಕ್ಕೇರಿ ಅಭಿವೃದ್ಧಿ ಹೊಂದುವರು. ಮಕ್ಕಳು ವಿದ್ಯಾಭ್ಯಾಸದಲ್ಲಿ ಬಹಳ ಉತ್ಸಾಹವನ್ನು ತೋರಿ ಮುನ್ನಡೆಯುವುದನ್ನು ನೋಡಬಹುದು.

ಮೀನ: ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ನ್ಯಾಯಾಲಯ- ಕಚೇರಿಗಳ ಅಲೆದಾಟವೂ ಹೆಚ್ಚಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಎರಡು ಅರ್ಥಗಳು

ಆಳವನು ನೋಡಿ ಬಗೆದಾಡುವಾ ಮಾತಿಂಗೆ |
ರೂಢಿಯರ್ಥವದೊಂದು ಗೂಢಾರ್ಥವೊಂದು ||
ವಾರಿಧಿಯ ದಾಂಟುವುದುಪಕೆ ಗಾಳಿಪಟವೊಂದು|
ಕೋಲು ಹುಟ್ಟೊಂದು ಬಲ - ಮಂಕುತಿಮ್ಮ
|| 558 ||

ಪದ-ಅರ್ಥ: ಬಗೆದಾಡುವಾ = ಬಗೆದು (ತಿಳಿದು) + ಆಡುವಾ, ರೂಢಿಯರ್ಥವದೊಂದು = ರೂಢಿಯ + ಅರ್ಥವು + ಅದೊಂದು, ವಾರಿಧಿಯ = ಸಮುದ್ರವ, ದಾಂಟುವುದುಪಕೆ = - ದಾಂಟುವ + ಉಡುಪಕೆ(ದೋಣಿಗೆ)

ವಾಚ್ಯಾರ್ಥ: ಆಳವಾದ ಯೋಚನೆ ಮಾಡಿ ಆಡಿದ ಮಾತಿಗೆ ಎರಡು ಅರ್ಥಗಳಿರುತ್ತವೆ. ಒಂದು ರೂಢಿಯ ಅರ್ಥ, ಮತ್ತೊಂದು ಗಹನವಾದ ಅರ್ಥ. ಸಮುದ್ರವನ್ನು ದಾಟಲು ಹೊರಟಿರುವ ನಾವೆಗೆ ಗಾಳಿಯ ಪಟ ಮತ್ತು ಹುಟ್ಟುಗೋಲು ಇದ್ದಂತೆ.

ವಿವರಣೆ: ಅಲ್ಲಮಪ್ರಭುವಿನ ಒಂದು ವಚನ ಹೀಗಿದೆ:-

ಭೂತ ಭೂತವ ಕೂಡಿ ಅದ್ಭುತವಾಯಿತ್ತು;
ಕಿಚ್ಚು ಕೋಡಿತ್ತು, ನೀರು ನೀರಡಿಸಿತ್ತು |
ಉರಿಪವನದೋಷದೊಳಗಿದ್ದು
ವಾಯುವಿಮ್ಮಡಿಸಿತ್ತ ಕಂಡೆ ಗುಹೇಶ್ವರ

ನಮಗೆ ಈ ವಚನದಲ್ಲಿಯ ಹೆಚ್ಚಿನ ಪದಗಳು ಗೊತ್ತು. ಭೂತ, ಅದ್ಭುತ, ಕಿಚ್ಚು, ನೀರಡಿಸಿತ್ತು, ಉರಿ, ಪವನ, ವಾಯು ಇವುಗಳ ಸಾಮಾನ್ಯ ಅರ್ಥ ನಮಗೆ ತಿಳಿದಿದೆ. ಆದರೆ ವಚನದ ಒಟ್ಟಾರೆ ಅರ್ಥ ಗೋಚರವಾಗಲಿಲ್ಲ. ಇದೇ ಆಳದ ಮಾತಿನ ವಿಶೇಷ. ಮಾತಿಗೆ ಒಂದು ರೂಢಿಯ ಅರ್ಥವಿದ್ದರೆ ಇನ್ನೊಂದು ಗೂಢವಾದ ಅರ್ಥವಿರುತ್ತದೆ. ಅದನ್ನು ತಿಳಿದಾಗ ವಚನದ ಅರ್ಥ ಒಡಮೂಡುತ್ತದೆ. ಪಂಚಭೂತಗಳು-ಮಣ್ಣು, ನೀರು, ಅಗ್ನಿ, ವಾಯು ಮತ್ತು ಆಕಾಶ. ಈ ಭೂತಗಳು ಕೂಡಿ ಅದ್ಭುತವಾದದ್ದು ದೇಹ. ಕಿಚ್ಚು ಎಂದರೆ ಜ್ಞಾನದ ಬೆಂಕಿ. ಅದು ಬಿಸಿಕೊಡುವ ಬೆಂಕಿಯಲ್ಲ. ತಂಪು ನೀಡುವ ಬೆಂಕಿ. ಮನಸ್ಸು ನೀರು. ಅದಕ್ಕೆ ಯಾವಾಗಲೂ ದಾಹ. ಅದಕ್ಕೇ ನೀರು ನೀರಡಿಸಿತ್ತು ಎಂದದ್ದು! ಚಿಂತೆಯ ಉರಿ, ಚಾಂಚಲ್ಯವೆಂಬ ಪವನದೋಷದಿಂದ ಹೆಚ್ಚಿ, ತಾಪವನ್ನು ಇಮ್ಮಡಿಗೊಳಿಸುತ್ತದೆ.

ಹೀಗೆ ತಿಳಿದು ಆಡಿದ ಮಾತಿಗೆ ಎರಡು ಅರ್ಥಗಳು. ಕನಕದಾಸರು ಹೇಳಿದ, 'ನಾನು ಹೋದರೆ ಹೋದೇನು' ಎಂಬ ಮಾತು ಸಾಮಾನ್ಯರಿಗೆ 'ನಾನು ಹೋದರೆ ಹೋಗಬಹುದು' ಎಂತಾದರೆ ಅಧ್ಯಾತ್ಮ ಚಿಂತಕರಿಗೆ 'ನಾನು ಎಂಬ ಅಹಂಕಾರ ಹೋದರೆ ಮಾತ್ರ ಮುಕ್ತಿ ಪಡೆದೇನು' ಎಂದರ್ಥವಾಗುತ್ತದೆ. ಪ್ರತಿಯೊಂದು ಮಾತಿಗೆ ವಾಚ್ಯಾರ್ಥ ಮತ್ತು ಧ್ವನ್ಯಾರ್ಥಗಳೆಂಬ ಎರಡು ಅರ್ಥಗಳಿರುತ್ತವೆ. ಉದಾಹರಣೆಗೆ –
1.ಬೇಸಿಗೆಯಲ್ಲಿ ಮಡಕೆಯ ನೀರು ಕುಡಿದರೆ ಮೈ ತಂಪಾಗುತ್ತದೆ.
2.ರೋಗಿಯ ಕೈಕಾಲು ತಣ್ಣಗಾಗುತ್ತಿವೆ.

ತಂಪಾಗುವುದು, ತಣ್ಣಗಾಗುವುದು ಎರಡೂ ಒಂದೇ ಅರ್ಥವನ್ನು ಕೊಡುವಂಥವು. ಆದರೆ ಸಂದರ್ಭವನ್ನು ಗಮನಿಸಿದರೆ ಮೊದಲನೆಯದು ಸಂತೋಷವನ್ನು ತರುವುದು ಮತ್ತು ಎರಡನೆಯದು ಅನಾಹುತವನ್ನು ಸೂಚಿಸುವುದು.


ಕಗ್ಗ ಒಂದು ಸುಂದರ ಉಪಮೆಯನ್ನು ನೀಡುತ್ತದೆ. ಸಮುದ್ರದಲ್ಲಿ ಹೊರಟ ನಾವೆಗೆ ಎರಡು ಉಪಕರಣಗಳು. ಗಾಳಿಯನ್ನು ಬಳಸಿಕೊಳ್ಳಲು ಹಾಯಿ ಮತ್ತು ಸರಿಯಾದ ದಿಕ್ಕಿಗೆ ಹೋಗಲು ಹುಟ್ಟಿನ ಕೋಲು. ಬರೀ ಹಾಯಿಯಿಂದ ಪ್ರಯೋಜನವಿಲ್ಲ. ಯಾಕೆಂದರೆ ಅದು ಗಾಳಿಯ ದಿಕ್ಕಿಗೆ ನಾವೆಯನ್ನು ಎಳೆದುಕೊಂಡು ಹೋಗುತ್ತದೆಯೇ ವಿನಃ ಬೇಕಾದ ದಿಕ್ಕಿಗಲ್ಲ. ಬರೀ ಹುಟ್ಟು ಶ್ರಮದಾಯಕ. ಅದು ಗುರಿಯೆಡೆಗೆ ಕರೆದೊಯ್ದೀತು. ಆದರೆ ಗಾಳಿಯ ಬಲವಿದ್ದರೆ ವೇಗ ದೊರೆತೀತು. ಇದರಂತೆ ಪ್ರತಿಯೊಂದು ಮಾತಿನ ಎರಡರ್ಥಗಳನ್ನು ಗಮನಿಸುವುದು ನಿಜಾರ್ಥಕ್ಕೆ ಸಹಕಾರಿ.

ಪದಬಂಧ 4863

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಪಶಕುನದ ನುಡಿ (3)
3.ಇದು ಮುಖ್ಯವಾದುದು (3)
5.ಈತ ಬುದ್ಧಿಗೆಟ್ಟವನು! (5)
6.ಮನೆತನದವರೆಲ್ಲಾ ವಾಸವಿರುವ ಸದನ (2)
8.ಸಂಗತಿಯಲ್ಲಿಯೇ ಮೈತ್ರಿಯನ್ನು ಹುಡುಕಿ! (2)
9.ನಾಗರೀಕರು ಹಿಡಿದಿರುವ ಗುಂಜು (2)
10.ಅಧಿಕೃತ ದಾಖಲೆಗಳಲ್ಲಿ ಗಮನಿಸಬೇಕೆಂದು ಸೇರಿಸುವ ವಿಶೇಷ ಅಂಶ (2)
14.ಅಕ್ಷರಗಳು ಬದಲಾಗುವುದು (5)
15.ಈತ ಗ್ರೀಸ್ ದೇಶದವನು (3)
16.ಕಬ್ಬಿಣದ ಕೆಲಸಗಾರ (3)

ಮೇಲಿಂದ ಕೆಳಕ್ಕೆ
1.ಶ್ರೇಷ್ಠವಾದ ನೆಲೆ (4)
2.ನ್ಯಾಯವಲ್ಲದ ಚರ್ಚೆ (3)
3.ಮುಚ್ಚುಮರೆ ಇಲ್ಲದೆ ನಿಚ್ಚಳವಾದುದು (3)
4.ದೇವಾಲಯದ ಸಭಾಮಂಟಪ (4)
7.ರಕ್ತ ಇಲ್ಲಿ ಕಾಣುತ್ತಿದೆ (3)
8.ಆನಂದ ಹೀಗೆ ಬಂದಿದೆ (3)
9.ನಾಮ ಧರಿಸಿದವನ ಹೆಸರು (4)
11.ರಾಯರು ನಡೆಸಿದ ಸಂಧಾನ (4)
12.ವನದ ಬಳಿಯಿರುವ ಆಲಯ (3)
13.ಕಟಕಟೆಯ ಹತ್ತಿರ ಏಡಿ ಕಾಣುತ್ತಿದೆಯಲ್ಲಾ! (3)



4862ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನವಜಾತ 5.ರಮಣಿ6.ಸುಧಾರಕ 8.ಸಮಾಗಮ 12.ಮತದಾನ 14.ರಣಹೇಡಿ15.ಕಣಜ16.ತಳಮಳ

ಮೇಲಿಂದ ಕೆಳಕ್ಕೆ: 1.ಪರಮಹಂಸ2.ರಾಣಿವಾಸ 3.ನವಸುಮ4.ತವಕ7.ರಪ್ತು 9.ಗಣಿತ10.ಅಪ್ರಯೋಜಕ 11.ಕಣ12.ಮಡಿವಾಳ13.ನವ್ಯಕವಿ 14.ರವತ

ಸುಡೊಕು 5249

2		8		7			6	
			4		2			1
	3	1		5		2		
6		4		3			5	
5	7	2	6		9			8
				2			4	
3				1			9	
		5	8		3	6		7
1				6				3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5248 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಶರಣಬಸವೇಶ್ವರ ಸಂಸ್ಥಾನದಲ್ಲಿ ಪಟ್ಟಾಧಿಕಾರ ಮಹೋತ್ಸವ

9ನೇ ಪೀಠಾಧಿಪತಿಯಾಗಿ ದೊಡ್ಡಪ್ಪ ಅಪ್ಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಶರಣಬಸವೇಶ್ವರ ದಾಸೋಹ ಸಂಸ್ಥಾನದ 8ನೇ ಪೀಠಾಧಿಪತಿ ಡಾ. ಶರಣಬಸವಪ್ಪ ಅಪ್ಪ ಅವರು, 9ನೇ ಪೀಠಾಧಿಪತಿಯಾಗಿರುವ ತಮ್ಮ ಪುತ್ರ, ಚಿರಂಜೀವಿ ದೊಡ್ಡಪ್ಪ ಅಪ್ಪ ಅವರಿಗೆ ವಿಧ್ಯುಕ್ತವಾಗಿ ಪಟ್ಟಾಧಿಕಾರ ಹಸ್ತಾಂತರಿಸಿದರು.

ಚಿರಂಜೀವಿ ದೊಡ್ಡಪ್ಪ ಅಪ್ಪ 2017ರ ನವೆಂಬರ್ 1ರಂದು ಜನಿಸಿದ್ದು, 200 ವರ್ಷಗಳ ಇತಿಹಾಸ ಹೊಂದಿರುವ ಶರಣಬಸವೇಶ್ವರ ದಾಸೋಹ ಸಂಸ್ಥಾನ ಪೀಠಕ್ಕೆ ಆಯ್ಕೆಯಾದ ಪೀಠಾಧಿಪತಿಗಳ ಪೈಕಿ ಅತ್ಯಂತ ಕಿರಿಯರು.

ಸೋಮವಾರ ನಡೆದ ಸರಳ ಸಮಾರಂಭದಲ್ಲಿ ಸುಲಫಲ ಮಠದ ಡಾ. ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಹಾರಕೂಡ ಮಠದ ಡಾ. ಚನ್ನವೀರ ಶಿವಾಚಾರ್ಯರ ಸಮ್ಮುಖದಲ್ಲಿ ಸಂಸ್ಥಾನದ ಪರಂಪರೆಯಾದ ಪರುಷ ಬಟ್ಟಲು, ಲಿಂಗ ಸಜ್ಜಿಕೆ ಹಾಗೂ ಮನೆಯ ಸಂಪೂರ್ಣ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸುವ ಜವಾಬ್ದಾರಿಯನ್ನು ಅವರಿಗೆ ವಹಿಸಲಾಯಿತು.

ಬಳಿಕ ಮಾತನಾಡಿದ ಡಾ.ಶರಣಬಸವಪ್ಪ ಅಪ್ಪ, 'ನಾನು 1983ರಿಂದ 8ನೇ ಪೀಠಾಧಿಪತಿಯಾಗಿದ್ದೇನೆ. ಅನ್ನ ದಾಸೋಹದ ಆಚರಣೆ ಮತ್ತು ಸಂಪ್ರದಾಯವನ್ನು ಮುಂದುವರಿಸುವ ಉದ್ದೇಶದಿಂದ ನನ್ನ ಮಗ ಚಿರಂಜೀವಿ ದೊಡ್ಡಪ್ಪ ಅಪ್ಪ ಅವರನ್ನು ನನ್ನ ಉತ್ತರಾಧಿಕಾರಿಯಾಗಿ 2019ರಲ್ಲಿ ಪ್ರತಿಷ್ಠಾಪಿಸಿದ್ದೇನೆ. ಈಗ ಅವರು 9ನೇ ಪೀಠಾಧಿಪತಿಯಾಗಿದ್ದಾರೆ' ಎಂದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರ್‌ಪರ್ಸನ್‌ರಾದ ದಾಕ್ಷಾಯಣಿ ಎಸ್. ಅಪ್ಪ ಇದ್ದರು.



ಕಲಬುರಗಿಯ ಶರಣಬಸವೇಶ್ವರ ದಾಸೋಹ ಸಂಸ್ಥಾನದ 9ನೇ ಪೀಠಾಧಿಪತಿಯಾದ ದೊಡ್ಡಪ್ಪ ಅಪ್ಪ ಅವರಿಗೆ 8ನೇ ಪೀಠಾಧಿಪತಿ ಡಾ. ಶರಣಬಸವಪ್ಪ ಅವರು ಪೇಟ ತೊಡಿಸುವ ಮೂಲಕ ಪಟ್ಟಾಧಿಕಾರ ಹಸ್ತಾಂತರಿಸಿದರು. ದೊಡ್ಡಪ್ಪ ಅಪ್ಪ ತಾಯಿ ದಾಕ್ಷಾಯಣಿ ಎಸ್‌ ಅಪ್ಪ ಇದ್ದರು

ಕೇಂದ್ರ ಬಜೆಟ್: ಕರ್ನಾಟಕಕ್ಕೆ ಸಿಕ್ಕಿದ್ದೇನು?

ಪ್ರಜಾವಾಣಿ ಸಂವಾದ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇದೇ 1ರಂದು ಮಂಡಿಸಿದ ಬಜೆಟ್‌ನಿಂದ ಕರ್ನಾಟಕಕ್ಕೆ ಲಾಭವಾಗಿದೆಯೆ? ಇಲ್ಲವೆ? ಎಂಬುದರ ಕುರಿತು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆ ನಡೆಯುತ್ತಿದೆ. ಇದೇ ವಿಷಯದ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಷಯ ತಜ್ಞರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.


ರಾಜ್ಯಕ್ಕೆ ಅನ್ಯಾಯವಾಗಿರುವುದು ಸತ್ಯ

15ನೇ ಹಣಕಾಸು ಆಯೋಗದಿಂದ ಕರ್ನಾಟಕಕ್ಕೆ ಹೆಚ್ಚು ನಷ್ಟವಾಗಿದೆ. ಒಕ್ಕೂಟ ವ್ಯವಸ್ಥೆಯನ್ನು ಮರೆತು ಬಜೆಟ್ ಮಂಡಿಸಿದ್ದಾರೆ ಎಂಬ ವಾದವನ್ನು ಭಾಗಶಃ ಒಪ್ಪಬಹುದು. ಕರ್ನಾಟಕಕ್ಕೆ ರೈಲ್ವೆ ಯೋಜನೆಗಳಿಗೆ ₹ 6,091 ಕೋಟಿ ನೀಡಲಾಗಿದೆ. ಉಳಿದಂತೆ ದೊಡ್ಡ ಯೋಜನೆಗಳು ರಾಜ್ಯಕ್ಕೆ ಲಭಿಸಿಲ್ಲ.

ಸಾಕಷ್ಟು ವಿಚಾರಗಳಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪ ಕಂಡುಬರುತ್ತಿದೆ. ಕರ್ನಾಟಕಕ್ಕೆ ಈ ಬಜೆಟ್‌ನಲ್ಲಿ ನಷ್ಟ ಆಗಿರುವುದು ನಿಜ. 15ನೇ ಹಣಕಾಸು ಆಯೋಗದ ಕಾರಣದಿಂದ ಕೊರತೆ ಆಗಿದೆ. ಆದರೆ, ರಾಜ್ಯದಲ್ಲಿ ಅಭಿವೃದ್ಧಿಗೆ ಹಣವೇ ಇಲ್ಲ ಎಂಬ ವಾದ ಒಪ್ಪಲಾಗದು.

ಕರ್ನಾಟಕದ ನ್ಯಾಯಯುತ ಪಾಲನ್ನು ಪಡೆಯಲು ನಮ್ಮ ಜನಪ್ರತಿನಿಧಿಗಳು ಗಟ್ಟಿಯಾಗಿ ಧ್ವನಿ ಎತ್ತಬೇಕು. ರಾಜ್ಯ ಸರಕು ಮತ್ತು ಸೇವಾ ತೆರಿಗೆಯ ಪಾಲು (ಎಸ್‌ಜಿಎಸ್‌ಟಿ) ತಕ್ಷಣವೇ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ವ್ಯವಸ್ಥೆ ಆಗಬೇಕು. ಎಲ್ಲ ರಾಜ್ಯಗಳೂ ಒಟ್ಟಾಗಿ ಈ ಕುರಿತು ಮಾತನಾಡಬೇಕಿದೆ. ವರಮಾನದ ಕೊರತೆ ಮೀರುವುದಕ್ಕೂ ಅವಕಾಶವಿದೆ. ರಾಜ್ಯದ ತೆರಿಗೆಗಳನ್ನು ಹೆಚ್ಚಿಸಿಕೊಳ್ಳಲೂಬಹುದು.

ನದಿ ಜೋಡಣೆ ಯೋಜನೆ ಕುರಿತು ವಿಸ್ತೃತವಾದ ಚರ್ಚೆ ಆಗಬೇಕು. ಆ ಬಳಿಕವೇ ಸ್ಪಷ್ಟತೆ ಮೂಡಬಹುದು.




– ಪ್ರೊ. ಬಿ.ಆರ್. ಕೇಶವ್, ಅರ್ಥಶಾಸ್ತ್ರ ಪ್ರಾಧ್ಯಾಪಕರು, ಬೆಂಗಳೂರು ವಿ.ವಿ

'ಕಿವಿ ಮೇಲೆ ಹೂ ಇಟ್ಟ ಕೇಂದ್ರ'

ಬಜೆಟ್ ವಿಚಾರದಲ್ಲಿ ಒಂದಷ್ಟು ಗೋಜಲುಗಳಿವೆ. ಉದ್ಯೋಗ ಸೃಷ್ಟಿ, ಬೆಂಬಲ ಬೆಲೆಯಡಿ ಕೃಷಿ ಉತ್ಪನ್ನಗಳ ಖರೀದಿ, ನೇರವಾಗಿ ಜನರನ್ನು ತಲುಪುವ ಯೋಜನೆಗಳ ಅನುಷ್ಠಾನದ ವಿಚಾರದಲ್ಲಿ ಬಜೆಟ್‌ನಲ್ಲಿ ಸ್ಪಂದನೆ ಇಲ್ಲ. ನದಿ ಜೋಡಣೆ ಯೋಜನೆಯಂತಹ ಘೋಷಣೆಗಳ ಮೂಲಕ ಜನರ ಕಿವಿ ಮೇಲೆ ಹೂ ಇಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ.

ನಮ್ಮದು ರಾಜ್ಯಗಳ ಒಕ್ಕೂಟ. ತೆರಿಗೆ ವರಮಾನದ ಹಂಚಿಕೆಯಲ್ಲಿ ಈ ತತ್ವ ಪಾಲನೆ ಆಗುತ್ತಿಲ್ಲ. ದಕ್ಷಿಣದ ನಾಲ್ಕು ರಾಜ್ಯಗಳು ಶೇ 60ರಷ್ಟು ತೆರಿಗೆ ಪಾಲು ನೀಡುತ್ತಿವೆ. ಕರ್ನಾಟಕ ಸರ್ಕಾರ ಕಳೆದ ವರ್ಷ ₹70,000 ಕೋಟಿ ಸಾಲ ಮಾಡಿದೆ. ತೆರಿಗೆಯಲ್ಲಿ ಸರಿಯಾದ ಪಾಲು ದೊರೆಯದೇ ಇರುವುದೇ ಇದಕ್ಕೆ ಕಾರಣ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನವನ್ನೂ ₹25,000 ಕೋಟಿಯಷ್ಟು ಕಡಿತ ಮಾಡಲಾಗಿದೆ. ಆಹಾರ ಭದ್ರತೆಗೆ ಒದಗಿಸುವ ಅನುದಾನವನ್ನೂ ಕಡಿತ ಮಾಡಲಾಗಿದೆ. ನಿನ್ನ ತಲೆಗೆ ನಿನ್ನ ಕೈ ಎಂದು ರಾಜ್ಯ ಸರ್ಕಾರಗಳನ್ನು ಸಂಕಷ್ಟಕ್ಕೆ ಸಿಲುಕಿಸುವ ಪ್ರಯತ್ನ ಬಜೆಟ್‌ನಲ್ಲಿದೆ.



– ಕೆ.ಪಿ. ಸುರೇಶ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಜ್ಞ, ಮೈಸೂರು

ರಾಜ್ಯಕ್ಕೆ ಸಾಕಷ್ಟು ಅನುಕೂಲಗಳಿವೆ

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಸೂತ್ರವಿದೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲೂ ಭಾರತ ಜಗತ್ತಿನಲ್ಲೇ ಹೆಚ್ಚು ಅಭಿವೃದ್ಧಿ ದರ ಹೊಂದಿದೆ. ಆಶಾದಾಯಕ ಸ್ಥಿತಿಯಲ್ಲಿ ಭಾರತ ಇದೆ. ವಿತ್ತೀಯ ಕೊರತೆ ನಿರೀಕ್ಷೆಗಿಂತ ಜಾಸ್ತಿ ಇದೆ. ಆದರೂ, ಅಭಿವೃದ್ಧಿಗೆ ಅಡ್ಡಿಯಾಗದಂತೆ ಬಜೆಟ್ ಮಂಡಿಸಲಾಗಿದೆ.

ದೇಶದಲ್ಲಿ ಬಂಡವಾಳ ವೆಚ್ಚ ಜಾಸ್ತಿಯಾಗುತ್ತಿದೆ. ಸರಕು ಮತ್ತು ಸೇವಾ ತೆರಿಗೆ ಸಂಗ್ರಹದಲ್ಲಿ ಗಣನೀಯ ಏರಿಕೆ ಆಗುತ್ತಿದೆ. ತೆರಿಗೆಗಳಲ್ಲಿ ಯಾವುದೇ ಇಳಿಕೆ ಮಾಡದೇ ಇರಬಹುದು. ಆದರೆ, ಸಂಕಷ್ಟದ ಸ್ಥಿತಿಯಲ್ಲೂ ಯಾವುದೇ ಹೊಸ ತೆರಿಗೆ ಹೇರಿಕೆ ಮಾಡಿಲ್ಲ. ಇದಕ್ಕಾಗಿ ಜನರು ಖುಷಿಪಡಬೇಕು. ಇದು ವಾಸ್ತವಿಕ ನೆಲೆಗಟ್ಟಿನ ಮತ್ತು ಸಂಪೂರ್ಣವಾಗಿ ಅಭಿವೃದ್ಧಿಗೆ ಪೂರಕವಾದ ಬಜೆಟ್.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ನೆರವು ಘೋಷಿಸಲಾಗಿದೆ. ಇದರಿಂದ ರಾಜ್ಯಕ್ಕೆ ಹೆಚ್ಚಿನ ಲಾಭ ಆಗಲಿದೆ. ತೆರಿಗೆ ವರಮಾನದ ಹಂಚಿಕೆ ಕುರಿತು ಕೆಲವರು ತಕರಾರು ಎತ್ತುತ್ತಾರೆ. ಆದರೆ, ವರಮಾನಕ್ಕೆ ಮಾತ್ರ ಹಂಚಿಕೆಯಲ್ಲ, ವೆಚ್ಚದಲ್ಲೂ ಹಂಚಿಕೆ ಆಗುತ್ತದೆ ಎಂಬುದನ್ನು ನೋಡಬೇಕು.



– ಸಿಎ ರುದ್ರಮೂರ್ತಿ, ಲೆಕ್ಕಪತ್ರ ಪರಿಶೋಧಕರು ಬೆಂಗಳೂರು

'ಕೃಷಿ, ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿಲ್ಲ'

ಡಿಜಿಟಲೀಕರಣಕ್ಕೆ ಬಜೆಟ್‌ನಲ್ಲಿ ಹೆಚ್ಚು ಆದ್ಯತೆ ನೀಡಲಾಗಿದೆ. ಶೇ 82ರಷ್ಟು ರೈತರು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು. ಅವರಿಂದ ಡಿಜಿಟಲೀಕರಣ ಸಾಧ್ಯವೆ? ಬಹುತೇಕ ಸಹಾಯಧನ ಯೋಜನೆಗಳನ್ನು ಕೈಬಿಡಲಾಗಿದೆ. ಈಗ ಕೃಷಿ ಡಿಜಿಟಲೀಕರಣ ಸಾಧ್ಯವಾಗಬೇಕಾದರೆ ಸಹಾಯಧನದ ನೆರವು ಅಗತ್ಯ.

₹29,000 ಕೋಟಿ ಕೃಷಿಗೆ ಕರ್ನಾಟಕಕ್ಕೆ ದೊರಕಿದೆ. ನಿರೀಕ್ಷೆಗಿಂತ ತುಸು ಕಡಿಮೆ ಮೊತ್ತವೇ ಕೃಷಿ ಕ್ಷೇತ್ರಕ್ಕೆ ಲಭಿಸಿದೆ. ಈ ಬಜೆಟ್‌ನಿಂದ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವೇಗ ಪಡೆಯುವ ನಿರೀಕ್ಷೆ ಇಲ್ಲ.

ಕ್ರಿಪ್ಟೋ ಕರೆನ್ಸಿ ಮೇಲೆ ಶೇ 30 ತೆರಿಗೆ ವಿಧಿಸಿರುವುದು ಸ್ವಾಗತಾರ್ಹ. 2023 ಅನ್ನು ಸಿರಿಧಾನ್ಯದ ವರ್ಷ ಎಂದು ಘೋಷಿಸಿರುವುದು ಕೂಡ ಒಳ್ಳೆಯ ಬೆಳವಣಿಗೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯಕ್ಕೆ ಹೆಚ್ಚು ನೆರವು ಘೋಷಿಸಲಾಗಿದೆ. ಅದರಿಂದ ರಾಜ್ಯಕ್ಕೆ ಅನುಕೂಲ ಆಗಬಹುದೆ? ಎಂಬುದು ಪ್ರಶ್ನೆ.

ಐದು ನದಿಗಳ ಜೋಡಣೆ ಯೋಜನೆ ಘೋಷಣೆ ಮಾಡಲಾಗಿದೆ. ನದಿ ಜೋಡಣೆ ಸುಲಭವಾಗಿ ಆಗುವಂತಹದ್ದಲ್ಲ. ಇದರಿಂದ ರಾಜ್ಯಕ್ಕೆ ಹೆಚ್ಚು ಲಾಭವಾಗುವ ಸಾಧ್ಯತೆ ಕಡಿಮೆ



– ಡಾ. ದಾಕ್ಷಾಯಿಣಿ ಎಂ. ಡೋಂಗ್ರೆ, ಅರ್ಥಶಾಸ್ತ್ರ ಪ್ರಾಧ್ಯಾಪಕಿ, ಸರ್‌.ಎಂ.ವಿ. ಸರ್ಕಾರಿ ಪದವಿ ಕಾಲೇಜು, ಭದ್ರಾವತಿ

ಬಜೆಟ್‌ನಲ್ಲಿ ಸೌಲಭ್ಯಗಳ ಘೋಷಣೆಗೆ ಪೊಲೀಸರ ಮನವಿ

ಬೆಂಗಳೂರು: 'ಪೊಲೀಸ್ ಇಲಾಖೆಗೆ ಪ್ರತ್ಯೇಕ ವೇತನ ಶ್ರೇಣಿ ಜಾರಿಗೆ ಪೂರಕವಾಗುವಂತೆ ರಾಜ್ಯ ಬಜೆಟ್‌ನಲ್ಲಿ ಘೋಷಿಸಬೇಕು' ಎಂದು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ), ಹೆಡ್ ಕಾನ್‌ಸ್ಟೆಬಲ್ (ಎಚ್‌ಸಿ), ಪೊಲೀಸ್ ಕಾನ್‌ಸ್ಟೆಬಲ್‌ಗಳು (ಪಿಸಿ) ಮನವಿ ಸಲ್ಲಿಸಿದ್ದಾರೆ.

ಈ ಬಾರಿ ರಚನೆಯಾಗಲಿರುವ 7ನೇ ವೇತನ ಆಯೋಗದಲ್ಲಿ ಕೇಂದ್ರ ನೌಕರರು, ಹೈಕೋರ್ಟ್ ಸಿಬ್ಬಂದಿಗೆ ನೀಡುವ ವೇತನ ಮತ್ತು ಭತ್ಯೆಯನ್ನು ಪೊಲೀಸ್ ಸಿಬ್ಬಂದಿಗೂ ನೀಡಬೇಕು. ರಾಘವೇಂದ್ರ ಔರಾದ್ಕರ ವರದಿಯಲ್ಲಿರುವ ಎಲ್ಲ ಶಿಫಾರಸುಗಳ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ₹ 500 ಕೋಟಿ ಮೀಸಲಿಡುವ ಜೊತೆಗೆ, ವರದಿಯ ಅನುಷ್ಠಾನಕ್ಕೆ ಉನ್ನತಮಟ್ಟದ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಔರಾದ್ಕರ ವರದಿಯಲ್ಲಿ ಶಿಫಾರಸು ಮಾಡಿರುವಂತೆ ಕೊಡಲು ಬಾಕಿ ಇರುವ ₹ 3,600 ವಿವಿಧ ಭತ್ಯೆಗಳನ್ನು ಮಂಜೂರು ಮಾಡಬೇಕು. ಏಳು ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ಪೊಲೀಸರ (ಎಎಸ್‌ಐ, ಎಚ್‌ಸಿ, ಪಿಸಿ) ಮೂಲ ವೇತನದಲ್ಲಿ ಶೇ 40ರಿಂದ 45ರಷ್ಟು ಹೆಚ್ಚಳ ಮಾಡಬೇಕು ಅಥವಾ ಮೂಲವೇತನದಲ್ಲಿ ಎಲ್ಲರಿಗೂ ಕನಿಷ್ಠ 5 ವೇತನ ಬಡ್ತಿ ನೀಡಬೇಕು. ಹೆಡ್ ಕಾನ್‌ಸ್ಟೆಬಲ್ ಮತ್ತು ಕಾನ್‌ಸ್ಟೆಬಲ್‌ಗಳಿಗೆ ನೀಡಲಾಗುವ ಉಚಿತ ಪಡಿತರ ಮತ್ತು ಸಾರಿಗೆ ಭತ್ಯೆಯನ್ನು ತಲಾ ₹ 2 ಸಾವಿರಕ್ಕೆ ಹೆಚ್ಚಿಸಬೇಕು, ವಾರದ ರಜೆ ಭತ್ಯೆಯನ್ನು ₹ 200ರಿಂದ ₹ 1000ಕ್ಕೆ ಅಥವಾ ಒಂದು ದಿನದ ವೇತನಕ್ಕೆ ಸರಿಸಮನಾಗಿ ಹೆಚ್ಚಿಸಬೇಕು' ಎಂದೂ ಆಗ್ರಹಿಸಿದ್ದಾರೆ.

ಶಾಸಕ ತನ್ವೀರ್‌ಸೇಠ್ ಆಸ್ಪತ್ರೆಗೆ ದಾಖಲು

ಮೈಸೂರು: ಶಾಸಕ ತನ್ವೀರ್‌ಸೇಠ್ ಅವರನ್ನು ಇಲ್ಲಿನ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಅಸಿಡಿಟಿ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಅವರು ಆಸ್ಪತ್ರೆಗೆ ಬಂದರು. ಕೆಲ ಪರೀಕ್ಷೆಗಳನ್ನು ಮಾಡಬೇಕಿರುವು ದರಿಂದ ದಿನದ ಮಟ್ಟಿಗೆ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆರೋಗ್ಯ ಸ್ಥಿರವಾಗಿದೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಶೆಣೈ ಹೇಳಿದರು.

ಕಾಂಗ್ರೆಸ್‌ಗೆ ಸೇರಿಕೊಳ್ಳುವಂತೆ ಸಿದ್ದರಾಮಯ್ಯ ಅವರಿಗೆ ಮನವಿ

ಅಹವಾಲು ಸಲ್ಲಿಸಿದ ದತ್ತ ಬೆಂಬಲಿಗರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕಡೂರು ಕ್ಷೇತ್ರದ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವಂತೆ ದತ್ತ ಬೆಂಬಲಿಗರು ಸೋಮವಾರ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ತಾಲ್ಲೂಕಿನ ರಾಗಿ ಬೆಳೆಗಾರರ ಸಮಸ್ಯೆ ಬಗ್ಗೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುವ ಸಂದರ್ಭದಲ್ಲಿ ದತ್ತ ಬೆಂಬಲಿಗರು, 'ಇವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಿ' ಎಂದು ಮನವಿ ಮಾಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ದತ್ತ, 'ರಾಗಿ ಬೆಳೆಗಾರರ ಸಮಸ್ಯೆಯ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪ ಸಲ್ಲಿಸುವಂತೆ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲು ಬಂದಿದ್ದೆವು' ಎಂದು ಹೇಳಿದರು. ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಬಗ್ಗೆ ಬೆಂಬಲಿಗರು ಮನವಿ ಮಾಡಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಭಿಮಾನದಿಂದ ಆ ರೀತಿ ಹೇಳಿದ್ದಾರೆ. ಕಾಂಗ್ರೆಸ್ ಸೇರುವ ಬಗ್ಗೆ ಈಗಲೇ ಏನೂ ಮಾತನಾಡುವುದಿಲ್ಲ' ಎಂದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸದೇ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ರೈತರು ಸಂಕಷ್ಟದಲ್ಲಿ: ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ದತ್ತ, ಸರ್ಕಾರದ ನಿರ್ಧಾರದಿಂದ ರೈತರು ಸಂಕಷ್ಟದಲ್ಲಿದ್ದಾರೆ. ರಾಗಿ ಬೆಳೆ ಖರೀದಿ ಕಡಿತ ಮಾಡಿರುವುದು ಸರಿಯಲ್ಲ. ರೈತರು ಬೆಳೆದ ಉಳಿಕೆ ರಾಗಿಯನ್ನು ಏನು ಮಾಡಬೇಕು ಎಂದು ಪ್ರಶ್ನಿಸಿದರು.

'ಬಯಲುಸೀಮೆ ರಾಗಿ ಬೆಳೆಗಾರರ ಸಮಸ್ಯೆ ಘನ ಘೋರವಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಪ್ರಶ್ನಿಸಿದರೆ, ಇದು ಸರ್ಕಾರದ ಆದೇಶ ನಾವು ಏನು ಮಾಡಲು ಸಾಧ್ಯವಿಲ್ಲ. ಬೆಂಗಳೂರಿನಲ್ಲೇ ಬದಲಾವಣೆ ಆಗಬೇಕಿದೆ ಎನ್ನುತ್ತಾರೆ. ಕಡೂರಿನಲ್ಲಿ ಈ ವಿಚಾರವಾಗಿ ಈಗಾಗಲೇ ಪ್ರತಿಭಟನೆ ನಡೆಸಲಾಗಿದೆ' ಎಂದು ಹೇಳಿದರು.

ರಾಗಿ ಖರೀದಿಗೆ ಬೆಂಬಲ ಬೆಲೆ ಘೋಷಣೆ ಮಾಡಿ ಖರೀದಿ ಕೇಂದ್ರಗಳನ್ನು ಸರ್ಕಾರ ತೆರೆದಿದೆ. ಈ ಹಿಂದೆ ರೈತರು ಬೆಳೆದಷ್ಟು ರಾಗಿಯನ್ನು ಖರೀದಿಸಲು ಅವಕಾಶವಿತ್ತು. 2021ರಲ್ಲಿ 52 ಲಕ್ಷ ಕ್ವಿಂಟಲ್ ರಾಗಿ ಖರೀದಿಸಲಾಗಿತ್ತು. ಅದರಲ್ಲಿ ಕಡೂರು ಕ್ಷೇತ್ರದಲ್ಲಿ 4 ಲಕ್ಷ ಕ್ವಿಂಟಲ್ ಖರೀದಿಸಲಾಗಿತ್ತು. ಈ ಬಾರಿ ರೈತರಿಗೆ 20 ಕ್ವಿಂಟಲ್ ಮಾತ್ರ ಖರೀದಿಸಲಾಗಿದೆ. ಒಟ್ಟು 1.90 ಲಕ್ಷ ಟನ್ ಮಾತ್ರ ಖರೀದಿಯಾಗಿದೆ ಎಂದರು.



ಜೆಡಿಎಸ್ ನಾಯಕ ವೈ.ಎಸ್‌.ವಿ.ದತ್ತ ನೇತೃತ್ವದಲ್ಲಿ ಕಡೂರಿನ ರೈತರು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಪಕ್ಷದ ಜಾತ್ಯತೀತ ನಿಲುವು ಸಡಿಲ: ದತ್ತ

'ಜೆಡಿಎಸ್‌ನಲ್ಲಿ ಜಾತ್ಯತೀತ ನಿಲುವು ಸಡಿಲವಾಗಿದೆ. ಬಿಜೆಪಿ ವಿರುದ್ಧದ ಹೋರಾಟದ ತೀವ್ರತೆಯೂ ಕಡಿಮೆ ಆಗಿದೆ' ಎಂದು ವೈ.ಎಸ್‌.ವಿ.ದತ್ತ ಹೇಳಿದರು.

'ಜೆಡಿಎಸ್ ಸಿದ್ಧಾಂತದ ಬಗ್ಗೆ ಸ್ಪಷ್ಟ ನಿಲುವು ಹೊಂದಿರಬೇಕು. ಜಾತ್ಯತೀತ ನಿಲುವಿಗೆ ಬದ್ಧವಾಗಿರಬೇಕು. ಎರಡೂ ರಾಷ್ಟ್ರೀಯ ಪಕ್ಷಗಳನ್ನು ಸಮಾನ ದೂರದಲ್ಲಿ ಇಡಬೇಕು. ಇದನ್ನು ಪಕ್ಷದ ವೇದಿಕೆಯಲ್ಲೂ ಹೇಳಿದ್ದೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಜೆಡಿಎಸ್ ಬಿಜೆಪಿಯನ್ನು ಸ್ಪಷ್ಟವಾಗಿ ವಿರೋಧಿಸುತ್ತಿಲ್ಲ ಎಂಬ ಅಭಿಪ್ರಾಯ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದಲ್ಲಿ ಮೂಡಿದೆ. ಇತ್ತೀಚಿನ ದಿನಗಳಲ್ಲಿ ಸೈದ್ಧಾಂತಿಕ ನಿಲುವಿನಲ್ಲಿ ರಾಜಿ ಮಾಡಿಕೊಳ್ಳಲಾಗಿದೆ.

ಆದರೆ, ಎಚ್‌.ಡಿ.ದೇವೇಗೌಡರಲ್ಲಿ ಆ ನಿಲುವು ಇಂದಿಗೂ ಸ್ಪಷ್ಟವಾಗಿದೆ ಎಂದ ದತ್ತ, ಕುಮಾರಸ್ವಾಮಿ ಕುರಿತು ಏನನ್ನೂ ಹೇಳಲು ಬಯಸಲಿಲ್ಲ.

ಜೀವನಾಂಶ ಕೇಳಿದ್ದಕ್ಕೆ ಶಾಸಕರಿಂದ ಬೆದರಿಕೆ: ಆರೋಪಿತ ಮಹಿಳೆ


ಠಾಣೆ ಮೆಟ್ಟಿಲೇರಿದ ಬಿಜೆಪಿ ಶಾಸಕ ತೇಲ್ಕೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: '₹ 2 ಕೋಟಿ ನೀಡುವಂತೆ ಮಹಿಳೆಯೊಬ್ಬರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ' ಎಂದು ಆರೋಪಿಸಿ ಸೇಡಂ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ರಾಜಕುಮಾರ್ ಪಾಟೀಲ ತೇಲ್ಕೂರ ಅವರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ. ಈ ಆರೋಪವನ್ನು ಅಲ್ಲಗಳೆದಿರುವ ಮಹಿಳೆ, 'ಶಾಸಕರಿಂದಲೇ ನನಗೆ ಮಗು ಹುಟ್ಟಿದೆ. ಜೀವನಾಂಶ ಕೋರಿದ್ದಾಗಿ ಅವರು ಈ ರೀತಿ ಆರೋಪ ಮಾಡುತ್ತಿದ್ದು, ನನಗೆ ನ್ಯಾಯ ಬೇಕು' ಎಂದಿದ್ದಾರೆ.

ಶಾಸಕನ ದೂರಿನಡಿ 40 ವರ್ಷದ ಮಹಿಳೆ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಮಹಿಳೆಯನ್ನು ವಶಕ್ಕೆ ಪಡೆದಿದ್ದ ಪೊಲೀಸರು, ವಿಚಾರಣೆ ಮಾಡಿ ಕಳುಹಿಸಿದ್ದಾರೆ. ಮಹಿಳೆ ಸಹ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ಹಿಂದೇಟು ಹಾಕುತ್ತಿರುವ ಆರೋಪ ವ್ಯಕ್ತವಾಗಿದೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, 'ಕ್ರಿಮಿನಲ್ ಪಿತೂರಿ (ಐಪಿಸಿ 120 ಬಿ), ಸುಲಿಗೆ (ಐಪಿಸಿ 384), ಜೀವಕ್ಕೆ ಕುತ್ತು ತಂದ (ಐಪಿಸಿ 387) ಆರೋಪದಡಿ ಮಹಿಳೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರ ಹೇಳಿಕೆ ಪಡೆದು ಪರಿಶೀಲಿಸಲಾಗುತ್ತಿದೆ' ಎಂದರು.



ಕಾನೂನಿನ ಮೇಲೆ ನನಗೆ ಅಪಾರ ನಂಬಿಕೆ ಇದೆ. ಕಾನೂನು ಏನು ಕ್ರಮ ಜರುಗಿಸುತ್ತದೆಯೋ ಅದನ್ನು ತಲೆಬಾಗಿ ಸ್ವೀಕರಿಸುತ್ತೇನೆ
ರಾಜಕುಮಾರ ಪಾಟೀಲ ತೆಲ್ಕೂರ, ಸೇಡಂ ಶಾಸಕ

ಶಾಸಕನ ದೂರಿನಲ್ಲಿ ಏನಿದೆ?

'ಕಲಬುರ್ಗಿ ನಿವಾಸಿಯಾದ ಮಹಿಳೆ ಹಾಗೂ ಅವರ ಪತಿ, 2009ರಲ್ಲಿ ಪರಿಚಯವಾಗಿದ್ದರು. ತಮ್ಮ ಜಮೀನು ವ್ಯಾಜ್ಯವನ್ನು ನನ್ನ ಮೂಲಕ ಇತ್ಯರ್ಥಪಡಿಸಿಕೊಂಡಿದ್ದರು. ಅವರ ಮಗನ ಶಾಲಾ ದಾಖಲಾತಿಗೂ ಸಹಾಯ ಮಾಡಿದ್ದೆ. ಅದನ್ನೇ ದುರುಪಯೋಗಪಡಿಸಿಕೊಂಡ ಮಹಿಳೆ, 2018ರಲ್ಲಿ ನನ್ನ ವಿರುದ್ಧವೇ ಹಣದ ಆರೋಪ ಮಾಡಿದ್ದಳು. ರಾಷ್ಟ್ರೀಯ ಮಹಿಳಾ ಆಯೋಗ ಹಾಗೂ ಹಲವೆಡೆ ದೂರುಗಳನ್ನು ಕೊಟ್ಟು ಮರ್ಯಾದೆಗೆ ಧಕ್ಕೆ ತಂದಿದ್ದರು. ಜೊತೆಗೆ, ಜೀವ ಬೆದರಿಕೆಯೊಡ್ಡಿದ್ದರು' ಎಂದು ರಾಜಕುಮಾರ್ ಪಾಟೀಲ ತೇಲ್ಕೂರ ದೂರಿನಲ್ಲಿ ತಿಳಿಸಿದ್ದಾರೆ.

'ತಮ್ಮ ಬಳಿ ಖಾಸಗಿ ಫೋಟೊ ಇರುವುದಾಗಿ ಹೇಳಿದ್ದ ಮಹಿಳೆ, ₹ 2 ಕೋಟಿಗೆ ಬೇಡಿಕೆ ಇರಿಸಿದ್ದರು. ಹಣ ನೀಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದಾರೆ. ನನ್ನ ರಾಜಕೀಯ ವಿರೋಧಿಗಳೂ ಇದಕ್ಕೆ ಸಹಕಾರ ನೀಡುತ್ತಿದ್ದಾರೆ. ಮಹಿಳೆ, ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದೂ ಒತ್ತಾಯಿಸಿದ್ದಾರೆ.

'ಬಾಲ್ಯದಿಂದಲೂ ಪರಿಚಯ'

'ರಾಜಕುಮಾರ ಪಾಟೀಲ ತೇಲ್ಕೂರ ನನಗೆ ಬಾಲ್ಯದಿಂದಲೂ ಪರಿಚಯ. ಅವರಿಂದಲೇ ನನಗೆ ಗಂಡು ಮಗುವಾಗಿದ್ದು, ಆತನಿಗೆ ಇದೀಗ 14 ವರ್ಷ. ಅದು ತಮ್ಮದೇ ಮಗುವೆಂದು ಈ ಹಿಂದೆ ರಾಜಕುಮಾರ್ ಒಪ್ಪಿಕೊಂಡಿದ್ದರು' ಎಂದು ಬ್ಲ್ಯಾಕ್‌ಮೇಲ್ ಪ್ರಕರಣದ ಆರೋಪಿತ ಮಹಿಳೆ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, 'ನನಗೆ ಹಾಗೂ ಮಗನಿಗೆ ಜೀವನಾಂಶ ನೀಡುವಂತೆ ಕೋರಿದ್ದೆ. ಅದಕ್ಕೆ ಒಪ್ಪದ ರಾಜಕುಮಾರ್, ಈ ರೀತಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಪೊಲೀಸರಿಗೆ ಇದೇ ಹೇಳಿಕೆ ನೀಡಿದ್ದೇನೆ. ಕಮಿಷನರ್ ಅವರಿಗೂ ದೂರು ನೀಡಿದ್ದೇನೆ' ಎಂದರು.

ಝೆಡ್ ಶ್ರೇಣಿಯ ಭದ್ರತೆ ಒಪ್ಪಿಕೊಳ್ಳಿ: ಒವೈಸಿಗೆ ಶಾ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರ ಒದಗಿಸಿರುವ 'ಝೆಡ್' ಶ್ರೇಣಿಯ ಭದ್ರತೆಯನ್ನು ಎಐಎಂಐಎಂ ಸಂಸದ ಅಸಾದುದ್ದೀನ್ ಒವೈಸಿ ಅವರು ಒಪ್ಪಿಕೊಳ್ಳಬೇಕು ಎಂದು ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ಸೋಮವಾರ ಮನವಿ ಮಾಡಿದ್ದಾರೆ.

ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರ ಮುಗಿಸಿ ದೆಹಲಿಗೆ ವಾಪಸಾಗುತ್ತಿದ್ದ ಒವೈಸಿ ಬೆಂಗಾವಲು ವಾಹನದ ಮೇಲೆ ಫೆ. 3ರಂದು ಗುಂಡಿನ ದಾಳಿ ನಡೆದಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಒವೈಸಿ ಅವರಿಗೆ 'ಝೆಡ್' ಶ್ರೇಣಿಯ ಭದ್ರತೆ ಒದಗಿಸಿತ್ತಾದರೂ, ಅವರು ಅದನ್ನು ಪಡೆಯಲು ನಿರಾಕರಿಸಿದ್ದರು.

ಈ ಬಗ್ಗೆ ರಾಜ್ಯಸಭೆಯಲ್ಲಿ ಮಾತನಾಡಿರುವ ಅಮಿತ್ ಶಾ 'ಈ ಹಿಂದೆಯೂ ಅವರಿಗೆ ಭದ್ರತೆ ಒದಗಿಸುವ ವ್ಯವಸ್ಥೆ ಮಾಡಿದ್ದರೂ ಅವರು ಅದನ್ನೆಲ್ಲಾ ನಿರಾಕರಿಸಿದ್ದಾರೆ. ಈಗಲೂ ಅವರಿಗೆ ಜೀವ ಬೆದರಿಕೆ ಇದೆಯೆಂದು ತಿಳಿದು ಬಂದಿದ್ದು ಅವರಿಗೆ ಬುಲೆಟ್ ಪ್ರೂಫ್ ವಾಹನ ಮತ್ತು 'ಝೆಡ್' ಶ್ರೇಣಿಯ ಭದ್ರತೆಯನ್ನು ನೀಡಲಾಗಿದೆ. ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಅವರಿಗೆ ಈ ಸದನದ ಮೂಲಕ ವಿನಂತಿಸುತ್ತೇನೆ' ಎಂದು ಶಾ ಹೇಳಿದರು.

ರಾಜ್ಯಸಭೆ: ವಂದನಾ ನಿರ್ಣಯದ ಮೇಲೆ 11.25 ಗಂಟೆ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯ ಕುರಿತು ರಾಜ್ಯಸಭೆಯಲ್ಲಿ ಮೂವರು ಮಹಿಳೆಯರು ಸೇರಿ 41 ಸದಸ್ಯರು ಮಾತನಾಡಿದ್ದಾರೆ. ಇವರಲ್ಲಿ ಒಬ್ಬರು ಪಕ್ಷೇತರ ಸದಸ್ಯರು, ಉಳಿದವರು ವಿವಿಧ 20 ಪಕ್ಷಗಳಿಗೆ ಸೇರಿದವರು.

ಚರ್ಚೆ ಕಳೆದ ಬುಧವಾರ ಆರಂಭವಾಗಿದ್ದು, 11.25 ಗಂಟೆ ನಡೆಯಿತು. ಚರ್ಚೆಗೆ 12 ಗಂಟೆ ಅವಧಿ ನಿಗದಿಪಡಿಸಲಾಗಿತ್ತು. ಪ್ರಧಾನಮಂತ್ರಿ ಅವರ ಉತ್ತರದೊಂದಿಗೆ ಈ ಮಿತಿ ದಾಟುವ ಸಂಭವವಿದೆ.

ಪ್ರಧಾನಮಂತ್ರಿ ಉತ್ತರದ ಬಳಿಕ ಬಜೆಟ್ ಮೇಲಿನ ಚರ್ಚೆ ಆರಂಭವಾಗಲಿದೆ. ಬಜೆಟ್ ಮೇಲಿನ ಚರ್ಚೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ. 11ರಂದು ಉತ್ತರ ನೀಡಲಿದ್ದಾರೆ.

ಲೋಕಸಭೆಯಲ್ಲಿ ಪ್ರಧಾನಿ ಮೋದಿ ಟೀಕೆ

'ತುಕ್ಡೆ, ತುಕ್ಡೆ ಗ್ಯಾಂಗ್‌ನ ನಾಯಕ ಕಾಂಗ್ರೆಸ್'

ನವದೆಹಲಿ (ಪಿಟಿಐ): ಸರ್ಕಾರದ ಕಾರ್ಯವೈಖರಿಯನ್ನು ಸಂಸತ್ತಿನಲ್ಲಿ ಬಲವಾಗಿ ಸಮರ್ಥಿಸಿಕೊಂಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಕಾಂಗ್ರೆಸ್ ಪಕ್ಷವನ್ನೇ ಗುರಿಯಾಗಿಸಿ ವ್ಯಂಗ್ಯದ ಮಾತುಗಳಿಂದ ತೀವ್ರ ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಪಕ್ಷದ್ದು ಒಡೆದು ಆಳುವ ನೀತಿ. ಅದೇ ಕಾರಣಕ್ಕೆ ಈಗ ಅದು 'ತುಕ್ಡೆ ತುಕ್ಡೆ ಗ್ಯಾಂಗ್'ಗೆ ನಾಯಕನಾಗಿದೆ. ಆ ಪಕ್ಷದ ಮುಖಂಡರ ಹೇಳಿಕೆ, ನಡವಳಿಕೆ ಗಮನಿಸಿದರೆ 100 ವರ್ಷ ಅಧಿಕಾರದಿಂದ ದೂರವಿರಲು ನಿರ್ಧರಿಸಿದಂತಿದೆ' ಎಂದು ಮೋದಿ ಹೇಳಿದರು.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಅವರು ಸೋಮವಾರ ಲೋಕಸಭೆಯಲ್ಲಿ ಉತ್ತರಿಸಿದರು.

'ದಶಕದಿಂದ ವಿವಿಧ ರಾಜ್ಯಗಳಲ್ಲಿ ಜನಾದೇಶ ಪಡೆಯಲು ಕಾಂಗ್ರೆಸ್ ವಿಫಲವಾಗಿದೆ. 'ಅಂಧ ಪ್ರತಿಪಕ್ಷ'ವಾಗಿಯೇ ಕೆಲಸ ಮಾಡುತ್ತಿದೆ. ಅದಕ್ಕೀಗ ಅಧಿಕಾರದ ಹಸಿವಿಲ್ಲ. ಪ್ರತ್ಯೇಕತಾವಾದಿ ಗುಂಪುಗಳನ್ನು ಬಲಪಡಿಸಲು ಬೀಜ ಬಿತ್ತುವ ಕಾರ್ಯದಲ್ಲಿ ನಿರತವಾಗಿದೆ' ಎಂದೂ ತರಾಟೆಗೆ ತೆಗೆದುಕೊಂಡರು. ಆಡಳಿತ ಪಕ್ಷದ ಸದಸ್ಯರು ಮೇಜುಕುಟ್ಟಿ ಪ್ರಧಾನಿ ಮಾತಿಗೆ ಸಹಮತ ವ್ಯಕ್ತಪಡಿಸಿದರು.

'1971ರಿಂದಲೂ ಕಾಂಗ್ರೆಸ್ 'ಬಡತನ ನಿರ್ಮೂಲನೆ'



ನರೇಂದ್ರ ಮೋದಿ

ಘೋಷಣೆಯಡಿ ಚುನಾವಣೆ ಗೆಲ್ಲುತ್ತಿತ್ತು. ಬಡತನ ನಿರ್ಮೂಲನೆ ಆಗಲಿಲ್ಲ. ಜನರು ಕಾಂಗ್ರೆಸ್ ಅನ್ನೇ ಅಧಿಕಾರದಿಂದ ಕಿತ್ತೊಗೆದರು. ಒಂದು ವೇಳೆ ಈಗ ಕಾಂಗ್ರೆಸ್ ಪಕ್ಷವೇನಾದರೂ ಅಧಿಕಾರದಲ್ಲಿ ಇದ್ದಿದ್ದರೆ ಹಣದುಬ್ಬರಕ್ಕೆ ಕೋವಿಡ್ ಪರಿಸ್ಥಿತಿಯೇ ಕಾರಣ ಎಂದು ನೆಪ ಹೇಳುತ್ತಿತ್ತು' ಎಂದು ಪ್ರಧಾನಿ ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಕಾಂಗ್ರೆಸ್ ಎಲ್ಲ ಮಿತಿಗಳನ್ನು ದಾಟಿತು. ಮೊದಲ ಅಲೆ ಸಂದರ್ಭದಲ್ಲಿ ಜನರಲ್ಲಿ ಭೀತಿ ಮೂಡಿಸಿತು. ಆದರೆ, ಕೋವಿಡ್ ಸ್ಥಿತಿಯನ್ನು ಭಾರತವು ನಿರ್ವಹಿಸಿದ ಪರಿಯು ವಿಶ್ವಕ್ಕೇ ಮಾದರಿಯಾದುದಾಗಿದೆ' ಎಂದರು.

'ಕೋವಿಡ್ ಪರಿಸ್ಥಿತಿಯ ನಂತರವು ದೇಶದಲ್ಲಿ ಹಣದುಬ್ಬರ ಕೈಮೀರದಂತೆ ನಿಯಂತ್ರಿಸಿದ್ದೇವೆ. ಯುಪಿಎ ಆಡಳಿತಾವಧಿಯಲ್ಲಿ ಭಾರತ ಎರಡಂಕಿಯ ಹಣದುಬ್ಬರ ಎದುರಿಸಿತ್ತು. ಆಗ ಸರ್ಕಾರ ಹಣದುಬ್ಬರ ನಿಯಂತ್ರಿಸಲಾಗದು ಎಂದು ಒಪ್ಪಿಕೊಂಡಿತ್ತು' ಎಂದರು.

'ಇಲ್ಲಿ ಪ್ರಶ್ನೆ ಚುನಾವಣೆಯದ್ದಲ್ಲ, ಉದ್ದೇಶದ್ದು. 50 ವರ್ಷ ಆಡಳಿತ ನಡೆಸಿದ್ದರೂ ಜನ ಮತ್ತೆ, ಮತ್ತೆ ಕಾಂಗ್ರೆಸ್ ತಿರಸ್ಕರಿಸುತ್ತಿದ್ದಾರೆ. ಅವರು ಕೆಳಹಂತದಲ್ಲಿ ಜನರ ಜೊತೆ ಸಂಪರ್ಕ ಕಡಿದುಕೊಂಡಿದ್ದಾರೆ. ಕಡತಗಳಲ್ಲಿ ಕಳೆದುಹೋಗಿದ್ದಾರೆ' ಎಂದರು.

ಟೀಕೆ ಪ್ರಜಾಪ್ರಭುತ್ವದ ಭಾಗ: 'ನಮಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ವಿಶ್ವಾಸವಿದೆ. ಟೀಕೆಗಳು ಪ್ರಜಾಪ್ರಭುತ್ವದ ಭಾಗ ಎಂದೇ ನಾವು ನಂಬಿದ್ದೇವೆ. ಆದರೆ, ವಿರೋಧಪಕ್ಷವು ತನ್ನ ಸುತ್ತಲಿನ ಬೆಳವಣಿಗೆಗಳ ಬಗ್ಗೆ ಕುರುಡಾಗಿದೆ' ಎಂದು ಪ್ರತಿಪಾದಿಸಿದರು.


'130 ಕೋಟಿ ಭಾರತೀಯರ ಬದುಕಿನಲ್ಲಿ ಬದಲಾವಣೆ ತರಲು ನಾನು ಕಾರ್ಯತತ್ಪರರಾಗಿದ್ದೇವೆ. ಜಾಗತಿಕ ನಾಯಕತ್ವದ ಪ್ರಶ್ನೆ ಬಂದಾಗ ಭವಿಷ್ಯದಲ್ಲಿ ಭಾರತದ ಪಾತ್ರವೇನು ಎಂದು ಮಂಥನ ನಡೆಸಲು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅವಧಿ ಸಕಾಲ. ಕೋವಿಡೋತ್ತರದಲ್ಲಿ ಜಗತ್ತು ಹೊಸದರತ್ತ ವೇಗವಾಗಿ ಸಾಗುತ್ತಿದೆ. ಭಾರತ ಈ ಅವಕಾಶ ಕಳೆದುಕೊಳ್ಳಬಾರದು' ಎಂದರು.



ನೀರಾಟ... ತಿರುವನಂತಪುರದ ಗ್ರೋವ್ ಬೀಚ್‌ನಲ್ಲಿ ಯುವಕರು ಸೋಮವಾರ ನೀರಾಟದಲ್ಲಿ ಮಗ್ನರಾಗಿದ್ದರು —ಪಿಟಿಐ ಚಿತ್ರ

ರಥಸಪ್ತಮಿ: ಸೂರ್ಯನ ಹಬ್ಬ

• ತನ್ಮಯಿ ಪ್ರೇಮ್‌ಕುಮಾರ್



ಇಂದು ರಥಸಪ್ತಮಿ

ಬೆಳಕಿನ ನಿಜಸ್ವರೂಪ, ಶಕ್ತಿಯ ನಿಜಸ್ವರೂಪ ಸೂರ್ಯ. ಸೂರ್ಯನಿಗೆ ಭಾರತೀಯ ಪರಂಪರೆಯಲ್ಲಿ ಅತ್ಯುತ್ಕೃಷ್ಟವಾದ ಸ್ಥಾನ ನೀಡಿ ಆರಾಧಿಸಲಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡುವುದು, ಸೂರ್ಯನಿಗೆ ನಮಸ್ಕಾರ ಮಾಡುವುದು ನಮ್ಮ ಪರಂಪರೆಯಲ್ಲಿ ನಡೆದುಕೊಂಡು ಬಂದಿದೆ. ಸೂರ್ಯನನ್ನು ಜ್ಞಾನಕ್ಕೆ, ಬೆಳಕಿಗೆ, ನಡೆಸುವ ದೇವರು ಎಂದು ಭಾವಿಸಲಾಗುತ್ತದೆ.

ಸೂರ್ಯ ಕಣ್ಣಿಗೆ ಕಾಣುವ ಆರಾಧ್ಯದೈವ. ಸೂರ್ಯನನ್ನು ಆರಾಧಿಸುವ ದಿನವೇ ರಥಸಪ್ತಮಿ. ಈ ದಿನವನ್ನು ಕಶ್ಯಪಮುನಿ ಹಾಗೂ ಅವರ ಪತ್ನಿ ಅದಿತಿಯ ಮಗನಾಗಿ ಸೂರ್ಯನು ಜನ್ಮ ತಾಳಿದ ದಿನವೆಂದು ಭಾವಿಸಲಾಗುತ್ತದೆ. ಶುಕ್ಲಪಕ್ಷದ ಮಾಘಮಾಸದ ಸಪ್ತಮಿಯಂದು ಆಚರಿಸುವ ಈ ಉತ್ಸವವನ್ನು ಸೂರ್ಯ ಜಯಂತಿಯೆಂದೂ ಕರೆಯುತ್ತಾರೆ. ಇದಕ್ಕೆ ಆರೋಗ್ಯಸಪ್ತಮಿ, ಅಚಲ ಸಪ್ತಮಿಯೆಂದೂ ಕರೆಯುತ್ತಾರೆ.

ಈ ದಿನ ಸೂರ್ಯದೇವನ ಏಳು ರಥಗಳನ್ನು ಏರಿ ಬಂದು ಭೂಮಿಗೆ ಬೆಳಕು ನೀಡಿದನಂತೆ. ಸೂರ್ಯನ ಏಳು ರಥಗಳು ಭೂಮಿಯ ಉತ್ತರಪಥದ ಉತ್ತರದಿಕ್ಕಿಗೆ ಚಲಿಸುತ್ತವೆ. ಇವು ಏಳು ಬಣ್ಣಗಳ ಕಾಮನ ಬಿಲ್ಲಿನ ಬಣ್ಣಗಳನ್ನು, ವಾರದ ಏಳು ದಿನಗಳನ್ನು ಸೂಚಿಸುತ್ತವೆ. ಸೂರ್ಯನ ರಥದಲ್ಲಿ 12 ಚಕ್ರಗಳಿದ್ದು ಅದು ಹನ್ನೆರಡು ರಾಶಿಗಳನ್ನು ಸೂಚಿಸುತ್ತದೆ. ಮನುಷ್ಯ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಮಾಡಿರುವ ಎಲ್ಲ ಪಾಪಕರ್ಮಗಳನ್ನು ರಥಸಪ್ತಮಿಯಂದು ಸೂರ್ಯನನ್ನು ಆರಾಧನೆ ಮಾಡುವುದರಿಂದ ಕಳೆದುಕೊಳ್ಳಬಹುದೆಂಬ ನಂಬಿಕೆಯಿದೆ.

ರಥಸಪ್ತಮಿಯಂದು ಸೂರ್ಯಸ್ನಾನ ಮಾಡಲಾಗುತ್ತದೆ. ಆ ದಿನ ಅರುಣೋದಯದ ಸಮಯಕ್ಕೆ ಸೂರ್ಯನಿಗೆ ಅರ್ಘ್ಯ ನೀಡಿ, ಭಕ್ತಿಯಿಂದ ನಮಿಸಿ ನದಿಯಲ್ಲಿ ಸ್ನಾನಾದಿಗಳನ್ನು ಮಾಡಿದರೆ ಸರ್ವರೋಗವೂ ನಿವಾರಣೆಯಾಗುತ್ತದೆ ಎನ್ನುವ ನಂಬಿಕೆಯೂ ಇದೆ. 'ಓಂ ಭಾಸ್ಕರಾಯ ವಿದ್ಮಹೇ ದಿವಾಕರಾಯ ಧೀಮಹೇ ತನ್ನೋ ಸೂರ್ಯ ಪ್ರಚೋದಯಾತ್' ಎನ್ನುವ ಸೂರ್ಯಗಾಯತ್ರೀ ಮಂತ್ರವನ್ನು ನಮ್ಮ ಧೀಶಕ್ತಿಯನ್ನು ಪ್ರಚೋದಿಸಲು ಕೇಳಿಕೊಳ್ಳಲಾಗುತ್ತದೆ.


ಭಾರತದ ಅನೇಕ ಕಡೆಗಳಲ್ಲಿ ಸೂರ್ಯನಿಗಾಗಿ ದೇವಸ್ಥಾನಗಳೂ ಇದೆ. ಅದರಲ್ಲೂ ವಿಶ್ವಪ್ರಸಿದ್ಧವಾದ ಒಡಿಶಾದ ಕೋನಾರ್ಕ್ ದೇವಾಲಯ, ಬಿರಂಚಿನಾರಾಯಣ ದೇವಾಲಯ, ಇನ್ನು ಅನೇಕ ನವಗ್ರಹ ದೇವಸ್ಥಾನಗಳಲ್ಲಿವೆ.

ಆಧ್ಯಾತ್ಮಿಕ ಸಾಧಕರಿಗೆ ಸೂರ್ಯನ ಶಕ್ತಿ ಅತ್ಯಂತ ಸಹಜವಾಗಿಯೇ ಪುಷ್ಟಿ ನೀಡುವಂಥದ್ದು. ಆರೋಗ್ಯದ ದೃಷ್ಟಿಯಿಂದಲೂ ಸೂರ್ಯ ನಮಗೆ ಸಹಕಾರಿಯೇ. ಇನ್ನು ಸೂರ್ಯನಮಸ್ಕಾರವು ಯೋಗಸಾಧನೆಯ ಪ್ರಮುಖವಾದ ಭಾಗ. 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಹಿತಂ ಮುಖಂ ತತ್ವಂ ಪೂಷನ್ ಅಪಾವೃಣು ಸತ್ಯ ಧರ್ಮಾಯ ದೃಷ್ಟಯೇ' ಎನ್ನುವುದು ಈಶಾವಾಸ್ಯೋಪನಿಷತ್ ವಾಕ್ಯ. 'ಪಾತ್ರೆಯನ್ನು ಮುಚ್ಚಳ ಮುಚ್ಚಿದಂತೆ ಸತ್ಯದ ಮೇಲೆ ಮುಸುಕು ಮುಚ್ಚಿದೆ, ಓ ಸೂರ್ಯದೇವ ನಿನ್ನ ಬೆಳಕಿನಿಂದ ಸತ್ಯ ಧರ್ಮಗಳನ್ನು ನಮಗೆ ದರ್ಶನ ಮಾಡಿಸು' ಎನ್ನುತ್ತದೆ ಈ ಮಂತ್ರ. ಹೀಗೆ ಸೂರ್ಯನನ್ನು ಸತ್ಯ ಧರ್ಮಗಳ ದರ್ಶನಕ್ಕಾಗಿ ಪ್ರಾರ್ಥನೆ ಮಾಡಲಾಗುತ್ತದೆ.

ಒಟ್ಟಾರೆ ಸೂರ್ಯ ನಮ್ಮ ಜೀವನದ ಅಭಿನ್ನ ಅಂಗ. ಅವನನ್ನು ಹೀಗೆ ದೈವತ್ವಕ್ಕೇರಿಸಿ, ಅವನ ಶಕ್ತಿ, ಬೆಳಕು, ಜ್ಞಾನಗಳಿಗೆ ಕೃತಜ್ಞರಾಗಿ ನೆನೆದು ಕೈಮುಗಿದು ಸೃಷ್ಟಿಯೊಂದಿಗೆ, ಪ್ರಕೃತಿಯೊಂದಿಗೆ ಒಂದಾಗುವ ಈ ರಥಸಪ್ತಮಿಯ ಆಚರಣೆಯನ್ನು ಮಾಡೋಣ; ಆ ಮೂಲಕ ನಮ್ಮೊಳಗೂ ಶಕ್ತಿಯ ಸೂರ್ಯೋದಯಕ್ಕೆ ಕಾರಣವಾಗಲಿ.

ಟ್ರೋಲ್‌ಗೊಳಗಾದ ಶಾರುಕ್ ಖಾನ್

ಪ್ರಜಾವಾಣಿ ವಾರ್ತೆ



ಶಾರುಕ್ ಖಾನ್

ಮುಂಬೈ: ಗಾನ ಕೋಗಿಲೆ ಲತಾ ಮಂಗೇಶ್ಕರ್ ಅವರ ಅಂತ್ಯಕ್ರಿಯೆ ಸಂದರ್ಭದಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಪ್ರಾರ್ಥಿಸಿದ ರೀತಿಯು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಆಗಿದ್ದು, ವಾಗ್ವಾದಕ್ಕೆ ಕಾರಣವಾಗಿದೆ.

ಶಿವಾಜಿ ಪಾರ್ಕ್‌ನಲ್ಲಿ ಭಾನುವಾರ ನಡೆದ ಅಂತ್ಯಕ್ರಿಯೆಯಲ್ಲಿ ಶಾರುಕ್ ತಮ್ಮ ಮ್ಯಾನೇಜರ್ ಪೂಜಾ ದದ್ಲಾನಿ ಅವರೊಂದಿಗೆ ಪಾಲ್ಗೊಂಡು ಪ್ರಾರ್ಥನೆ ಸಲ್ಲಿಸಿದ್ದರು. ಈ ವೇಳೆ ಅವರು ಮಾಸ್ಕ್ ತೆರೆದು ದುಷ್ಟಶಕ್ತಿಗಳನ್ನು ದೂರವಿಡಲು ಗಾಳಿಯಲ್ಲಿ ಊದಿದರು. ಈ ವಿಡಿಯೊ ವೈರಲ್ ಆಗಿದ್ದು ವಾಗ್ವಾದಕ್ಕೆ ಕಾರಣವಾಗಿದೆ. ಹರಿಯಾಣದ ಬಿಜೆಪಿ ಐಟಿ ಘಟಕದ ಉಸ್ತುವಾರಿ ಅರುಣ್ ಯಾದವ್ ಅವರು 'ಕ್ಯಾ ಇಸ್ನೆ ಥೂಕಾ ಹೈ' (ಅವರು ಉಗುಳಿದ್ದಾರೆಯೇ?) ಎಂದು ಪ್ರಶ್ನಿಸಿ ವಿವಾದ ಸೃಷ್ಟಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಲಸಿಕೆ: ಆಧಾರ್ ನೋಂದಣಿ ಕಡ್ಡಾಯವಲ್ಲ'

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆಗಾಗಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಲು ಆಧಾರ್ ಕಾರ್ಡ್ ಕಡ್ಡಾಯವಲ್ಲ ಎಂದು ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿದೆ.

ಆಧಾರ್ ಬದಲಿಗೆ ಲಸಿಕೆ ಪಡೆಯಲು ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಮತದಾರರ ಚೀಟಿ, ಪಡಿತರ ಚೀಟಿ ಸೇರಿದಂತೆ ಒಂಬತ್ತು ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಸೂರ್ಯ ಕಾಂತ್ ಅವರ ಪೀಠಕ್ಕೆ ಮಾಹಿತಿ ನೀಡಿದೆ.

ಸರ್ಕಾರದ ಮಾಹಿತಿಯನ್ನು ಪರಿಗಣಿಸಿದ ಸುಪ್ರೀಂಕೋರ್ಟ್ ಕೋವಿಡ್ ಲಸಿಕೆ ಪಡೆಯಲು ಕೋವಿನ್ ಪೋರ್ಟಲ್‌ನಲ್ಲಿ ನೋಂದಾಯಿಸಲು ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಒತ್ತಾಯಿಸಲಾಗುತ್ತಿದೆ ಎಂದು ಸಿದ್ಧಾರ್ಥ ಶಂಕರ್ ಶರ್ಮಾ ಅವರು ಸಲ್ಲಿಸಿದ ಅರ್ಜಿಯನ್ನು ವಿಲೇವಾರಿ ಮಾಡಿತು.

ಫೆ.21ರಿಂದ ಪ್ರವಾಸಿಗರಿಗೆ ಆಸ್ಟ್ರೇಲಿಯಾ ಮುಕ್ತ

ಕ್ಯಾನ್‌ಬೆರಾ (ಎಪಿ): ಲಸಿಕೆ ಪಡೆದ ಪ್ರವಾಸಿಗರಿಗೆ ಹಾಗೂ ಉದ್ಯಮಿಗಳಿಗೆ ಫೆ.21ರಿಂದ ಆಸ್ಟ್ರೇಲಿಯಾ ಗಡಿಯನ್ನು ಮುಕ್ತಗೊಳಿಸುವುದಾಗಿ ಸರ್ಕಾರ ಘೋಷಿಸಿದೆ.

2020ರ ಮಾರ್ಚ್‌ನಲ್ಲಿ ಜಗತ್ತಿನಲ್ಲೇ ಅತಿ ಕಠಿಣ ಕೋವಿಡ್ ನಿಯಮಗಳನ್ನು ಹೇರಿದ್ದ ಆಸ್ಟ್ರೇಲಿಯಾ ಸೋಮವಾರ ಹಲವು ಸಡಿಲಿಕೆಗಳನ್ನು ಪ್ರಕಟಿಸಿದೆ.

ಕಠ್ಮಂಡು: ಕೋವಿಡ್ ನಿರ್ಬಂಧ ತೆರವು


ಕಠ್ಮಂಡು (ಎಪಿ): ಕೋವಿಡ್ ಸೋಂಕು ಗಣನೀಯ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಶಾಲೆ–ಕಾಲೇಜು ಪುನರಾರಂಭ ಸೇರಿದಂತೆ ನಿರ್ಬಂಧಗಳನ್ನು ತೆರವುಗೊಳಿಸಲಾಗಿದೆ.

ಚಿತ್ರಮಂದಿರ, ಜಿಮ್ ಮತ್ತು ಇತರೆ ಸಾರ್ವಜನಿಕ ಸ್ಥಳಗಳ ಮೇಲಿನ ನಿರ್ಬಂಧ ಸಡಿಲಗೊಳಿಸಲಾಗಿದೆ. ಆದರೆ ಕ್ರೀಡಾಂಗಣಕ್ಕೆ ಮಾತ್ರ ಶೇ 50ರಷ್ಟು ಪ್ರೇಕ್ಷಕರಬ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಡೇರಾ ಸಚ್ಚಾ ಸೌದಾದ ಮುಖ್ಯಸ್ಥಗೆ 3 ವಾರಗಳ ಫರ್ಲೋ

ಚಂಡೀಗಡ (ಪಿಟಿಐ): ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲುಶಿಕ್ಷೆ ಅನುಭವಿಸುತ್ತಿರುವ ಡೇರಾ ಸಚ್ಚಾ ಸೌದಾದ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಮೂರು ವಾರಗಳ ಫರ್ಲೋ (ದೀರ್ಘಾವಧಿ ಶಿಕ್ಷೆಗೆ ಒಳಗಾದವರನ್ನು ಕೆಲ ದಿನಗಳ ಮಟ್ಟಿಗೆ ಬಿಡುಗಡೆ ಮಾಡುವುದು) ಮಂಜೂರು ಮಾಡಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,516
ಇಂದಿನ ಅಂತ್ಯ	17,213
▼	303
ದಿನದ ಕನಿಷ್ಠ	17,119

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹455

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1330 (1330)
ಸೋಯಾ (ರಿಫೈಂಡ್)	₹1290 (1295)
ಸೂರ್ಯಕಾಂತಿ (ರಿಫೈಂಡ್)	₹1300 (1300)
ಪಾಮೋಲಿನ್	₹1242 (1245)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ರಿವರ್ಸ್ ರೆಪೊ ದರ ಹೆಚ್ಚಳ ಸಾಧ್ಯತೆ: ತಜ್ಞರ ಅಭಿಪ್ರಾಯ

ಮುಂಬೈ (ರಾಯಿಟರ್ಸ್): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರದಲ್ಲಿ ಬದಲಾವಣೆ ತರುವ ಸಾಧ್ಯತೆ ಕಡಿಮೆ ಇದೆ. ಆದರೆ, ರಿವರ್ಸ್ ರೆಪೊ ದರವನ್ನು ಆರ್‌ಬಿಐ ತುಸು ಹೆಚ್ಚಳ ಮಾಡುವ ಸಾಧ್ಯತೆ ಇದೆ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ದೇಶದ ಮಾರುಕಟ್ಟೆಯಲ್ಲಿ ನಗದು ಲಭ್ಯತೆ ಹೆಚ್ಚಿರುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಆರ್‌ಬಿಐ ರಿವರ್ಸ್ ರೆಪೊ ದರವನ್ನು ಜಾಸ್ತಿ ಮಾಡಬಹುದು ಎಂದು ಅವರು ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು ಗುರುವಾರ ಕೊನೆಗೊಳ್ಳಲಿದೆ. ರಿವರ್ಸ್ ರೆಪೊ ದರವು ಈಗ ಶೇಕಡ 3.35ರಷ್ಟು ಇದೆ. ಈ ದರವನ್ನು ಆರ್‌ಬಿಐ ಶೇ 3.55ಕ್ಕೆ ಏರಿಕೆ ಮಾಡಬಹುದು ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ರಿವರ್ಸ್ ರೆಪೊ ಅಂದರೆ ಆರ್‌ಬಿಐ, ಬ್ಯಾಂಕ್‌ಗಳಿಗೆ ನೀಡುವ ಬಡ್ಡಿ ದರ.

ರೆಪೊ ದರ ಈಗ ಬದಲಾವಣೆ ಕಾಣಲಿಕ್ಕಿಲ್ಲವಾದರೂ, ಏಪ್ರಿಲ್‌ನಲ್ಲಿ ಇದು ಶೇ 0.25ರಷ್ಟು ಹೆಚ್ಚಳವಾಗಬಹುದು ಎಂದು ಸುದ್ದಿಸಂಸ್ಥೆಗೆ ಪ್ರತಿಕ್ರಿಯೆ ನೀಡಿರುವ ಹಲವು ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಆರ್‌ಬಿಐ ರೆಪೊ ದರಗಳನ್ನು 2020ರ ಮೇ ತಿಂಗಳಿನಿಂದಲೂ ಕಡಿಮೆ ಮಟ್ಟದಲ್ಲಿ ಉಳಿಸಿಕೊಂಡಿದೆ. ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಹೊಂದಾಣಿಕೆಯ ನಿಲುವನ್ನು ಮುಂದುವರಿಸಲಾಗುತ್ತದೆ ಎಂದು ಮತ್ತೆ ಮತ್ತೆ ಹೇಳಿದೆ.

ಟಿವಿಎಸ್ ಆದಾಯ ₹ 5,706 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಟಿವಿಎಸ್ ಕಂಪನಿಯು ₹ 5,706 ಕೋಟಿ ಕಾರ್ಯಾಚರಣೆ ಆದಾಯ ಗಳಿಸಿದೆ. ಇದು ಕಂಪನಿ ಕಂಡಿರುವ ಅತಿಹೆಚ್ಚಿನ ಆದಾಯ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 5,391 ಕೋಟಿ ಆದಾಯ ಕಂಡಿತ್ತು. ತ್ರೈಮಾಸಿಕದಲ್ಲಿ ಒಟ್ಟು 8.35 ಲಕ್ಷ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಲ್ಲದ ವಿದೇಶಿ ಬಂಡವಾಳ ಹೊರಹರಿವು

ಬಡ್ಡಿ ದರ ಹೆಚ್ಚಳ ಭೀತಿ, ಕುಸಿದ ಬಿಎಸ್‌ಇ ಸೆನ್ಸೆಕ್ಸ್

ಮುಂಬೈ (ಪಿಟಿಐ): ಹಣದುಬ್ಬರ ಪ್ರಮಾಣವು ಹೆಚ್ಚಳ ಆಗುತ್ತಿರುವ ಕಾರಣ ಬೇರೆ ಬೇರೆ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಏರಿಕೆ ಮಾಡಬಹುದು ಎಂಬ ಆತಂಕದಲ್ಲಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ ಒಟ್ಟು 1,024 ಅಂಶ ಇಳಿಕೆ ಕಂಡಿತು.

ವಿದೇಶಿ ಹೂಡಿಕೆದಾರರು ಹೂಡಿಕೆ ಹಿಂತೆಗೆಯುವುದನ್ನು ಮುಂದುವರಿಸಿದ್ದು ಕೂಡ ಸೂಚ್ಯಂಕ ಕುಸಿತಕ್ಕೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ. ದಿನದ ವಹಿವಾಟಿನ ಕೊನೆಯಲ್ಲಿ ಸೆನ್ಸೆಕ್ಸ್ 57,621 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 302 ಅಂಶ ಇಳಿಕೆಯಾಗಿ, 17,213 ಅಂಶಗಳಿಗೆ ತಲುಪಿತು.



ಮೂರು ವಹಿವಾಟು ದಿನಗಳಲ್ಲಿ ಸೆನ್ಸೆಕ್ಸ್ ಒಟ್ಟು 1,937 ಅಂಶ ಕುಸಿದಿದೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತಿನ ಒಟ್ಟು ಮೌಲ್ಯ ₹ 5.82 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

'ಹಲವು ರಾಜ್ಯಗಳಲ್ಲಿ ಚುನಾವಣೆ ಹತ್ತಿರವಾಗುತ್ತಿರುವ ಕಾರಣ ದೇಶಿ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಮೂಡಿದೆ. ಇದರ ಜೊತೆಯಲ್ಲೇ, ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಗಮನ ನೀಡುತ್ತಿರುವುದು ಕೂಡ ಸೂಚ್ಯಂಕ ಕುಸಿತಕ್ಕೆ ಕಾರಣವಾಗಿದೆ. ಆರ್‌ಬಿಐ ಬಡ್ಡಿ ದರ ಹೆಚ್ಚಳ ಮಾಡುವ ಸಾಧ್ಯತೆ ಇರುವುದರಿಂದ, ಮಾರುಕಟ್ಟೆಯಲ್ಲಿ ಅಸ್ಥಿರತೆ ಮುಂದುವರಿಯುವ ನಿರೀಕ್ಷೆ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇಕಡ 1.25ರವರೆಗೆ ಇಳಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆ ಶೇ 1.05ರಷ್ಟು ಇಳಿಕೆಯಾಗಿ ಪ್ರತಿ ಬ್ಯಾರಲ್‌ಗೆ 92.29 ಡಾಲರ್‌ಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	24019-28019
ಕೋಕ	20169-27019
ಫ್ಯಾಕ್ಟರಿ	13019-19729
ಹಳೆಚಾಲಿ	47099-48599
ಹೊಸಚಾಲಿ	36019-40599
ಕುಂದಾಪುರ	
ಹಳೆಚಾಲಿ	51500-52500
ಹೊಸಚಾಲಿ	43500-44500
ಸಿದ್ದಾಪುರ	
ಬಿಳಿಗೋಟು	21929-26999
ಚಾಲಿ	43889-47319
ಕೋಕ	20899-27199
ಹೊಸಚಾಲಿ	33499-40062
ಕೆಂಪುಗೋಟು	26699-32299
ರಾಶಿ	41099-470096
ತಟ್ಟಿಬೆಟ್ಟೆ	32499-45899
ಶಿರಸಿ	
ಬೆಟ್ಟೆ	26596-45381
ಬಿಳಿಗೋಟು	20709-37209
ಚಾಲಿ	30899-40599
ರಾಶಿ	42509-47609
ಯಲ್ಲಾಪುರ	
ಬಿಳಿಗೋಟು	24899-30130
ಕೋಕ	18899-28889
ಹಳೆಚಾಲಿ	44299-47591
ಹೊಸಚಾಲಿ	34501-39660
ಕೆಂಪುಗೋಟು	30100-36499
ರಾಶಿ	45850-50989
ತಟ್ಟಿಬೆಟ್ಟೆ	38160-44899
ಶಿವಮೊಗ್ಗ	
ಬೆಟ್ಟೆ	46099-51100
ಗೊರಬಲು	16890-34509
ರಾಶಿ	43801-45789
ಸರಕು	53000-76710
ಸಾಗರ	
ಬಿಳಿಗೋಟು	10699-28219
ಚಾಲಿ	23099-37329
ಕೋಕ	19219-29699
ಕೆಂಪುಗೋಟು	25119-39299
ರಾಶಿ	35499-47399
ತಟ್ಟಿಬೆಟ್ಟೆ	8569-18369
ರಾಮನಗರ ರೇಷ್ಮೆ	
ಮಿಶ್ರತಳಿ	344-785
ದ್ವಿತಳಿ	444-845

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15800	15950	241.85 ಸೆಂಟ್ಸ್
ಎಸಿ	7560	7250	7375	
ಆರ್‌ಪಿ	7300	7200	7500	ಲಂಡನ್
ಆರ್‌ಸಿ	4050	3900	4000	2229 ಡಾಲರ್ಸ್

ಚಿಪ್ ಕೊರತೆ: ಪ್ರಯಾಣಿಕ ವಾಹನ ರಿಟೇಲ್ ಮಾರಾಟ ಶೇ 10ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನದ ರಿಟೇಲ್ ಮಾರಾಟವು 2021ರ ಜನವರಿಗೆ ಹೋಲಿಸಿದರೆ 2022ರ ಜನವರಿಯಲ್ಲಿ ಶೇಕಡ 10ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

2021ರ ಜನವರಿಯಲ್ಲಿ 2.87 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. 2022ರ ಜನವರಿಯಲ್ಲಿ ಇದು 2.58 ಲಕ್ಷಕ್ಕೆ ಇಳಿಕೆ ಆಗಿದೆ.

ಸೆಮಿಕಂಡಕ್ಟರ್ ಚಿಪ್ ಕೊರತೆಯಿಂದಾಗಿ ಕಂಪನಿಗಳು ನಿರಂತರವಾಗಿ ತಯಾರಿಕಾ ನಷ್ಟ ಅನುಭವಿಸುವಂತಾಗಿದೆ. ಹೀಗಾಗಿ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್ಥಿಕತೆಯಲ್ಲಿ ಚೇತರಿಕೆ ಕಂಡುಬರುತ್ತಿರುವುದರಿಂದ ವಾಣಿಜ್ಯ ವಾಹನಗಳ ವಿಭಾಗವು ಬೆಳವಣಿಗೆ ಕಾಣಲಿದ್ದು, ಅದರಲ್ಲಿಯೂ ಮುಖ್ಯವಾಗಿ ಎಚ್‌ಸಿವಿ ವಿಭಾಗವು ಉತ್ತಮ ಬೆಳವಣಿಗೆ ಕಾಣಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೂಲಸೌಕರ್ಯ ಯೋಜನೆಗಳಿಗೆ ಹೆಚ್ಚು ವೆಚ್ಚ ಮಾಡುತ್ತಿರುವುದರಿಂದ ಒಟ್ಟಾರೆಯಾಗಿ ವಾಣಿಜ್ಯ ವಾಹನಗಳ ಬೇಡಿಕೆಯು ಹೆಚ್ಚಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

25 ಸಾವಿರ ಕಿಲೋ ಮೀಟರ್ ಉದ್ದದ ಹೊಸ ಹೆದ್ದಾರಿ ನಿರ್ಮಾಣ ಮಾಡುವ ಬಗ್ಗೆ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದರಿಂದಾಗಿ ಮೂಲಸೌಕರ್ಯ ಯೋಜನೆಗಳ ಮೇಲಿನ ವೆಚ್ಚಕ್ಕೆ ಇನ್ನಷ್ಟು ಉತ್ತೇಜನ ಸಿಗಲಿದ್ದು, ವಾಣಿಜ್ಯ ವಾಹನಗಳ ಮಾರಾಟವನ್ನು ಇನ್ನಷ್ಟು ಹೆಚ್ಚಿಸಲಿದೆ ಎಂದು ಗುಲಾಟಿ ತಿಳಿಸಿದ್ದಾರೆ.

ಮಾರಾಟದ ವಿವರ

ವಾಹನ	2021 ಜನವರಿ	2022 ಜನವರಿ	ಇಳಿಕೆ/ಏರಿಕೆ
ಪ್ರಯಾಣಿಕ ವಾಹನ	2.87 ಲಕ್ಷ	2.58 ಲಕ್ಷ	10.12% ▼
ದ್ವಿಚಕ್ರ ವಾಹನ	11.75 ಲಕ್ಷ	10.17 ಲಕ್ಷ	13.44% ▼
ಟ್ರ್ಯಾಕ್ಟರ್	61,485	55,421	9.86% ▼
ತ್ರಿಚಕ್ರ	31,162	40,449	29.8% ▲
ವಾಣಿಜ್ಯ ವಾಹನ	56,227	67,763	20.52% ▲
ಒಟ್ಟಾರೆ ಮಾರಾಟ	16.12 ಲಕ್ಷ	14.39 ಲಕ್ಷ	10.69% ▼

ಏನಿದು '100 ಮೈನಸ್ ಏಜ್' ಹೂಡಿಕೆ ನಿಯಮ?

ಷೇರು ಮಾತು
ಶರತ್ ಎಂ.ಎಸ್.



ನಿಮ್ಮ ವಯಸ್ಸಿಗೂ, ಷೇರುಪೇಟೆಯಲ್ಲಿ ಹೂಡಿಕೆ ಮಾಡುವ ಹಣದ ಮೊತ್ತಕ್ಕೂ ಸಂಬಂಧವಿದೆಯೇ? ಹೌದು! ಷೇರು ಮಾರುಕಟ್ಟೆಯಲ್ಲಿ ಎಷ್ಟು ಹಣ ತೊಡಗಿಸಬೇಕು ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಹೂಡಿಕೆ ವಲಯದಲ್ಲಿ '100 ಮೈನಸ್ ಏಜ್' ಎನ್ನುವ ಸೂತ್ರವೊಂದನ್ನು ಬಳಸಲಾಗುತ್ತದೆ.

ನಿಮ್ಮ ವಯಸ್ಸನ್ನು 100ರಿಂದ ಕಳೆದಾಗ ಯಾವ ಸಂಖ್ಯೆ ಬರುವುದೋ, ಶೇಕಡವಾರು ಅಷ್ಟು ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಬೇಕು ಎಂದು ಹೇಳುತ್ತದೆ ಈ ಸೂತ್ರ. ಆದರೆ ನಿಜಕ್ಕೂ ಈ ಮಾನದಂಡ ಸರಿಯೇ? ವಯಸ್ಸನ್ನೇ ಆಧಾರವಾಗಿಟ್ಟುಕೊಂಡು ಷೇರು ಹೂಡಿಕೆ ಪ್ರಮಾಣ ತೀರ್ಮಾನಿಸುವುದು ಸೂಕ್ತವೇ?

100 ಮೈನಸ್ ಏಜ್: ನಿಮ್ಮ ವಯಸ್ಸು 25 ವರ್ಷ ಎಂದಿಟ್ಟುಕೊಳ್ಳೋಣ. ವಯಸ್ಸನ್ನು 100ರಿಂದ ಕಳೆದಾಗ (100-25 = 75) 75 ಬರುತ್ತದೆ. ಅಂದರೆ ಈ ನಿಯಮದ ಪ್ರಕಾರ, ನಿಮ್ಮ ಬಳಿ ಹೂಡಿಕೆಗೆ ಇರುವ ನೂರು ರೂಪಾಯಿಯಲ್ಲಿ, ₹ 75ನ್ನು ಮಾತ್ರ ಷೇರು ಮಾರುಕಟ್ಟೆಯಲ್ಲಿ ತೊಡಗಿಸಬೇಕು. 50 ವರ್ಷ ವಯಸ್ಸಿನ ವ್ಯಕ್ತಿ ತನ್ನ ಬಳಿ ಹೂಡಿಕೆಗೆ ₹ 50ನ್ನು ಮಾತ್ರ (100–50 = 50) ಷೇರು ಮಾರುಕಟ್ಟೆಯಲ್ಲಿ ತೊಡಗಿಸಬಹುದು. ಸರಳವಾಗಿ ಹೇಳುವುದಾದರೆ, ವಯಸ್ಸಿಗೆ ಅನುಗುಣವಾಗಿ ಷೇರು ಮಾರುಕಟ್ಟೆಯಲ್ಲಿನ ಹೂಡಿಕೆ ಪ್ರಮಾಣ ತೀರ್ಮಾನಿಸಬೇಕು ಎಂದು ಈ ನಿಯಮ ಸೂಚಿಸುತ್ತದೆ.

ಆದರೆ, ಇದನ್ನು ಎಲ್ಲರೂ ಯಥಾವತ್ತಾಗಿ ಪಾಲಿಸಬೇಕಾಗಿಲ್ಲ. ಹೂಡಿಕೆದಾರನ ಆರ್ಥಿಕ ಹಿನ್ನೆಲೆ, ಆತನ ಹೂಡಿಕೆ ಉದ್ದೇಶ, ಹೂಡಿಕೆಗಿರುವ ಸಮಯಾವಕಾಶ ಸೇರಿ ಹಲವು ಅಂಶಗಳನ್ನು ಆಧರಿಸಿ ಹೂಡಿಕೆ ತೀರ್ಮಾನ ಮಾಡಬೇಕಾಗುತ್ತದೆ.

ಹೂಡಿಕೆಯು ವ್ಯಕ್ತಿ ಕೇಂದ್ರಿತ: 40 ವರ್ಷ ವಯಸ್ಸಿನ ಇಬ್ಬರು ಸ್ನೇಹಿತರಿದ್ದಾರೆ ಎಂದಿಟ್ಟುಕೊಳ್ಳೋಣ. ಮೇಲಿನ ನಿಯಮದಂತೆ ಇಬ್ಬರೂ ಹೂಡಿಕೆಗೆ ತಮ್ಮಲ್ಲಿರುವ ಶೇ 60ರಷ್ಟು ಹಣವನ್ನು ಮಾತ್ರ ಷೇರುಗಳಲ್ಲಿ ತೊಡಗಿಸಬೇಕು. ಆದರೆ, ಇಬ್ಬರ ಆರ್ಥಿಕ ಸ್ಥಿತಿ ಬೇರೆ ಬೇರೆ. ಮೊದಲನೆಯ ವ್ಯಕ್ತಿ ದೊಡ್ಡ ವಾಣಿಜ್ಯೋದ್ಯಮಿ. ಆತನ ಪತ್ನಿ ಕೂಡ ಒಳ್ಳೆಯ ಉದ್ಯೋಗದಲ್ಲಿದ್ದಾರೆ. ಅವರ ಮಗು ಅಂತರರಾಷ್ಟ್ರೀಯ ಶಾಲೆಯಲ್ಲಿ ಓದುತ್ತಿದೆ. ತಂದೆ-ತಾಯಿ ನಿವೃತ್ತ ಸರ್ಕಾರಿ ಉದ್ಯೋಗಿಗಳಾಗಿದ್ದು ಅವರಿಗೆ ಪಿಂಚಣಿ ಬರುತ್ತಿದೆ. ಎರಡನೆಯ ವ್ಯಕ್ತಿ ಖಾಸಗಿ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದು ಆತನ ಪತ್ನಿ ಗೃಹಿಣಿ. ಮಕ್ಕಳಿಬ್ಬರು ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತಂದೆ ಮತ್ತು ತಾಯಿ ಮಗನ ಆದಾಯದ ಮೇಲೆ ಅವಲಂಬಿತರಾಗಿದ್ದಾರೆ. ಎರಡೂ ಸ್ಥಿತಿಗಳು ಭಿನ್ನ ಎನ್ನುವುದನ್ನು ನೀವು ಒಪ್ಪಿಕೊಳ್ಳುವಿರಿ ಅಲ್ಲವೇ?

ಹೌದು, ಈ ಕಾರಣಕ್ಕಾಗಿಯೇ 100ರಿಂದ ನಿಮ್ಮ ವಯಸ್ಸನ್ನು ಕಳೆದಾಗ ಎಷ್ಟು ಸಂಖ್ಯೆ ಬರುವುದೋ ಅಷ್ಟು ಪ್ರಮಾಣದ ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಎಂದು ಹೇಳುವ ನಿಯಮವು ಎಲ್ಲರಿಗೂ ಅನ್ವಯ ಆಗುವಂಥದ್ದಲ್ಲ ಎಂದು ಹೇಳಿದ್ದು.

ಗುರಿ ಆಧಾರಿತ ಹೂಡಿಕೆ: ಷೇರುಪೇಟೆಯಲ್ಲಿ ಎಷ್ಟು ಹಣ ಹೂಡಿಕೆ ಮಾಡಬೇಕು ಎನ್ನುವುದನ್ನು ವಯಸ್ಸಿನ ಆಧಾರದಲ್ಲಿ ತೀರ್ಮಾನಿಸುವುದಕ್ಕಿಂತ ಹಣಕಾಸಿನ ಗುರಿ ಆಧರಿಸಿ ತೀರ್ಮಾನಿಸಬೇಕು. ನಿಮ್ಮ ಸದ್ಯದ ಆರ್ಥಿಕ ಸ್ಥಿತಿಗತಿ ಹೇಗಿದೆ? ಮನೆಯಲ್ಲಿ ಎಷ್ಟು ಮಂದಿ ದುಡಿಯುತ್ತಿದ್ದಾರೆ? ಪ್ರತಿ ತಿಂಗಳು ಎಷ್ಟು ಉಳಿತಾಯ ಮಾಡಬಹುದು? ಉಳಿತಾಯ ಮಾಡಿದ ಹಣ ಮತ್ತೆ ಯಾವಾಗ ಬೇಕಾಗುತ್ತದೆ? ಹೂಡಿಕೆ ಮಾಡುವಾಗ ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ಹೀಗೆ ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.



ಮುಂಬೈ ಧಾರಣೆ

ಶೇಂಗಾ

7-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1247 (1250)
ಪಾಮ್ ವಾರದ ಡೆಲಿವರಿ	1240 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1240)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	48,150 (47,975)
ಬೆಳ್ಳಿ ಕೆ.ಜಿ	61,400 (60,750)

ಆವರಣದಲ್ಲಿ ಶನಿವಾರದ ಧಾರಣೆ

₹ 11 ಸಾವಿರಕ್ಕೆ ಹೊಸ ಬಲೆನೊ ಬುಕಿಂಗ್ ಆರಂಭ

ನವದೆಹಲಿ (ಪಿಟಿಐ): ತನ್ನ ಪ್ರೀಮಿಯಂ ಹ್ಯಾಚ್‌ಬ್ಯಾಕ್ 'ಬಲೆನೊ'ದ ಹೊಸ ಆವೃತ್ತಿಯ ಬುಕಿಂಗ್ ಆರಂಭಿಸಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸೋಮವಾರ ತಿಳಿಸಿದೆ. ₹ 11 ಸಾವಿರ ಪಾವತಿಸಿ ಗ್ರಾಹಕರು ಬುಕಿಂಗ್ ಮಾಡಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

10 ಲಕ್ಷಕ್ಕೂ ಅಧಿಕ ಗ್ರಾಹಕರನ್ನು ಹೊಂದಿದ್ದು, ದೇಶದಲ್ಲಿ ಅತಿ ಹೆಚ್ಚು ಮಾರಾಟ ಆಗುತ್ತಿರುವ ಮುಂಚೂಣಿ ಐದು ಕಾರುಗಳಲ್ಲಿ ಬಲೆನೊ ಸ್ಥಾನ ಪಡೆದುಕೊಂಡಿದೆ ಎಂದು ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವ ಪೀಳಿಗೆಯ ಅಗತ್ಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಹೊಸ ಬಲೆನೊ ರೂಪಿಸಲಾಗಿದೆ ಎಂದು ಕಂಪನಿಯು ಹೇಳಿದೆ.

ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿ: ಮುಖ್ಯ ಸುತ್ತಿಗೆ ಅರ್ಜುನ್ ಖಾಡೆ

ಮೈನೇನಿಗೆ ಜಿಯಾನ್ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯ ಸುತ್ತು ಪ್ರವೇಶಿಸುವ ಮೂಲಕ ಅರ್ಜುನ್ ಖಾಡೆ, ತವರಿನ ಟೆನಿಸ್ ಪ್ರಿಯರಿಗೆ ಮುದ ನೀಡಿದರೆ ಇಟಲಿಯ ಜಿಯಾನ್ ಮಾರ್ಕೊ ಮೊರೊನಿಗೆ ಮಣಿದ ಸಾಕೇತ್ ಮೈನೇನಿ ನಿರಾಶೆ ಮೂಡಿಸಿದರು.

ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿಯ ಮುಖ್ಯ ಸುತ್ತಿನ ಪಂದ್ಯಗಳ ಮೊದಲ ದಿನ ಭಾರತದ ಭರವಸೆಯಾಗಿ ಸಾಕೇತ್ ಕಣಕ್ಕೆ ಇಳಿದಿದ್ದರು. ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ ಅವರು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ನಡೆದ ಪಂದ್ಯದಲ್ಲಿ ಜಿಯಾನ್‌ಗೆ 1–6, 1–6ರಲ್ಲಿ ಮಣಿದರು.

ಆರಂಭದಿಂದಲೇ ತಪ್ಪುಗಳನ್ನು ಎಸಗಿದ ಸಾಕೇತ್‌ಗೆ ಜಿಯಾನಿ ಯಾವ ಹಂತದಲ್ಲೂ ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ. ಸಾಕೇತ್ ಅವರ ದೌರ್ಬಲ್ಯದ ಸಂಪೂರ್ಣ ಲಾಭ ಪಡೆದುಕೊಂಡ ಅವರು ಸುಲಭವಾಗಿ ಪಂದ್ಯ ಗೆದ್ದುಕೊಂಡರು.

ಮೊದಲ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಆಸ್ಟ್ರೇಲಿಯಾ ಆಟಗಾರ ಅಲೆಕ್ಸಾಂಡರ್ ವುಕಿಚ್ ಮತ್ತು ನಾಲ್ಕನೇ ಶ್ರೇಯಾಂಕಿತ, ಫ್ರಾನ್ಸ್ ಆಟಗಾರ ಹ್ಯೂಗೊ ಗ್ರೀನಿಯರ್ ಅವರು ಪ್ರೀ ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿದರು. ಅಲೆಕ್ಸಾಂಡರ್ 7-5, 6-4ರಲ್ಲಿ ತಮ್ಮದೇ ದೇಶದ ಜೇಸನ್ ಕುಬ್ಲೆರ್ ಎದುರು ಜಯ ಗಳಿಸಿದರೆ ಚೆಕ್ ಗಣರಾಜ್ಯದ ವೀಟ್ ಕೊಪ್ರಿವಾ ಎದುರು ಹ್ಯೂಗೊ 6-1, 2-6, 6-4ರಲ್ಲಿ ಗೆಲುವು ಸಾಧಿಸಿದರು.



ಚೆಂಡನ್ನು ರಿಟರ್ನ್ ಮಾಡಲು ಮುಂದಾದ ಇಟಲಿಯ ಜಿಯಾನ್ ಮೊರೊನಿ – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಮೊದಲ ಸುತ್ತಿನ ಫಲಿತಾಂಶಗಳು

ಇಟಲಿಯ ಜಿಯಾನ್ ಮಾರ್ಕೊ ಮೊರೊನಿಗೆ ಭಾರತದ ಸಾಕೇತ್ ಮೈನೇನಿ ಎದುರು 6-1, 6-1ರಲ್ಲಿ ಗೆಲುವು; ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್‌ಗೆ ಆಸ್ಟ್ರೇಲಿಯಾದ ಹೇಸನ್ ಕುಬ್ಲೆರ್ ಎದುರು 7-5, 6-4ರಲ್ಲಿ ಜಯ; ಫ್ರಾನ್ಸ್‌ನ ಹ್ಯೂಗೊ ಗ್ರೀನಿಯರ್‌ಗೆ ಜೆಕ್ ಗಣರಾಜ್ಯದ ವೀಟ್ ಕೊಪ್ರಿವಾ ವಿರುದ್ಧ 6-1, 2-6, 6-4ರಲ್ಲಿ ಜಯ; ಚೀನಾ ತೈಪೆಯ ಚುನ್ ಶಿನ್ ಸೆಂಗ್‌ಗೆ ಬ್ರಿಟನ್‌ನ ಜೇ ಕ್ಲಾರ್ಕ್ ವಿರುದ್ಧ 6-3, 6-1ರಲ್ಲಿ ಗೆಲುವು; ಬೆಲ್ಜಿಯಂನ ಕಿಮ್ಮರ್ ಕೊಪೆಜನ್ಸ್‌ಗೆ ಆಸ್ಟ್ರೇಲಿಯಾದ ಮಾರ್ಕ್ ಪೋಲ್ಮನ್ಸ್ ಎದುರು 1-6, 6-2, 6-4ರಲ್ಲಿ ಜಯ. **ಅರ್ಹತಾ ಹಂತದ ಎರಡನೇ ಸುತ್ತು:** ಬ್ರೆಜಿಲ್‌ನ ಗ್ಯಾಬ್ರಿಯಲ್ ಡಿಕಾಂಪ್ಸ್‌ಗೆ ಪೋರ್ಚುಗಲ್‌ನ ಫ್ರೆಡೆರಿಕೊ ಸಿಲ್ವಾ ವಿರುದ್ಧ 7-5, 6-4ರಲ್ಲಿ, ಸ್ವಿಟ್ಜರ್ಲೆಂಡ್‌ನ ಆ್ಯಂಟೊನಿ ಬಿಲಿಯೆರ್‌ಗೆ ಕೆನಡಾದ ಸ್ಟೀವನ್ ಡೀಜ್ ವಿರುದ್ಧ 6-1, 6-3ರಲ್ಲಿ, ಕ್ರೊವೇಷಿಯಾದ ಬೋರ್ನಾ ಗೋಜೊಗೆ ಭಾರತದ ಮುಕುಂದ್ ಶಶಿಕುಮಾರ್ ವಿರುದ್ಧ 6-3, 6-2ರಲ್ಲಿ, ಜಪಾನ್‌ನ ರಿಯೊ ನೊಗುಚಿಗೆ ಇಟಲಿಯ ರೌಲ್ ಬ್ರಂಕಾಸಿಯೊ ಎದುರು 5-7, 7-6 (7), 7-5ರಲ್ಲಿ, ಟುನೀಷಿಯಾದ ಮಲೆಕ್ ಜಜಿರಿಗೆ ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಹ್ಯಾರಿಸ್ ಎದುರು 6-4, 6-4ರಲ್ಲಿ, ಭಾರತದ ಅರ್ಜುನ್ ಖಾಡೆಗೆ ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ವಿರುದ್ಧ 6-3, 6-4ರಲ್ಲಿ ಗೆಲುವು.

ಅರ್ಜುನ್ ಮುಖ್ಯ ಸುತ್ತಿಗೆ: ಭಾರತದ ಅರ್ಜುನ್ ಖಾಡೆ ಸೋಮವಾರವೂ ಜಯ ಸಾಧಿಸಿ ಮುಖ್ಯ ಸುತ್ತು ಪ್ರವೇಶಿಸಿದರು. ಆಸ್ಟ್ರಿಯಾದ ಅಲೆಕ್ಸಾಂಡರ್ ಎರ್ಲರ್ ಎದುರಿನ ಪಂದ್ಯದಲ್ಲಿ ಅವರು 6-3, 6-4ರಲ್ಲಿ ಜಯ ಸಾಧಿಸಿದರು. ಆದರೆ ಭಾರತದ ಮುಕುಂದ್ ಶಶಿಕುಮಾರ್ ಕ್ರೊವೇಷಿಯಾದ ಬೋರ್ನ ಗೋಜೊಗೆ 3–6, 2–6ರಲ್ಲಿ ಮಣಿದರು.

ಪಿಂಕ್ ಪ್ಯಾಂಥರ್ಸ್‌ಗೆ ಗೆಲುವು

ಪ್ರೊ ಕಬಡ್ಡಿ ಲೀಗ್: ದೀಪಕ್ ಹೂಡಾ 'ಸೂಪರ್ ಟೆನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಕ್ ನಿವಾಸ್ ಹೂಡಾ 'ಸೂಪರ್' ಆಟವಾಡಿ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡಕ್ಕೆ ಗೆಲುವು ತಂದುಕೊಟ್ಟರು. ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್ ಆವರಣದಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್‌ನ ಸೋಮವಾರದ ಪಂದ್ಯದಲ್ಲಿ ಜೈಪುರ್ 36–31ರಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಜಯ ಗಳಿಸಿತು.

ಆರಂಭದಲ್ಲಿ ಉಭಯ ತಂಡಗಳು ಸಮಬಲದ ಪೈಪೋಟಿ ನೀಡಿದವು. ನಂತರ ಜೈಪುರ್ ನಿಧಾನಕ್ಕೆ ಆಧಿಪತ್ಯ ಸಾಧಿಸಿತು. ಮಧ್ಯಂತರ ಅವಧಿಯ ವೇಳೆ ಆ ತಂಡ 20–14ರ ಮುನ್ನಡೆ ಸಾಧಿಸಿತು. ವಿರಾಮದ ನಂತರವೂ ಪಂದ್ಯ ಮೊದಲಾರ್ಧದ ರೀಯಲ್ಲೇ ಸಾಗಿತು. ಕೊನೆಯ ಹಂತದಲ್ಲಿ ಗುಜರಾತ್ ಸಮಬಲ ಸಾಧಿಸಿತು. ಆದರೆ ಪರಿಸ್ಥಿತಿಯನ್ನು ನಿಭಾಯಿಸಿದ ಜೈಪುರ್ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು.

ಲೀಗ್‌ನ ಎಂಟನೇ ಆವೃತ್ತಿಯ 100ನೇ ಪಂದ್ಯವಾಗಿತ್ತು ಇದು. ಪಂದ್ಯದುದ್ದಕ್ಕೂ ರೇಡಿಂಗ್‌ನಲ್ಲಿ ಮಿಂಚಿದ ದೀಪಕ್ 10 ಟಚ್ ಪಾಯಿಂಟ್ ಗಳಿಸಿದರು. ಒಂದು ಟ್ಯಾಕಲ್ ಪಾಯಿಂಟ್ ಕೂಡ ಅವರ ಪಾಲಾಯಿತು. ರೇಡಿಂಗ್‌ನಲ್ಲಿ ಅರ್ಜುನ್ ದೇಶ್ವಾಲ್ ಕೂಡ ಮಿಂಚಿದರು. ಅವರು 6 ಟಚ್ ಪಾಯಿಂಟ್‌ಗಳೊಂದಿಗೆ ಏಳು ಪಾಯಿಂಟ್ ಕಲೆ ಹಾಕಿದರು. ಸಂದೀಪ್ ಧುಳ್, ದೀಪಕ್ ಸಿಂಗ್ ಮತ್ತು ವಿಶಾಲ್ ಕೂಡ ತಂಡಕ್ಕೆ ಕಾಣಿಕೆ ನೀಡಿದರು.

ಗುಜರಾತ್ ಜೈಂಟ್ಸ್‌ಗಾಗಿ ರಾಕೇಶ್ ನರ್ವಾಲ್ ಎಂಟು ಪಾಯಿಂಟ್ ಗಳಿಸಿದರು.

ಟೈ ಪಂದ್ಯದಲ್ಲಿ ಟೈಟನ್ಸ್: ಮತ್ತೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ ಮತ್ತು ಬೆಂಗಾಲ್ ವಾರಿಯರ್ಸ್ ತಂಡಗಳು 32–32ರಲ್ಲಿ ಸಮಬಲ ಸಾಧಿಸಿದವು. ಅಂಕಿತ್ ಬೇನಿವಾಲ್ (9 ಪಾಯಿಂಟ್ಸ್) ಮತ್ತು ರಜನೀಶ್ (7 ಪಾಯಿಂಟ್ಸ್) ಅವರ ಭರ್ಜರಿ ಆಟದ ನೆರವಿನಿಂದ ಆರಂಭದಲ್ಲಿ ಮುನ್ನಡೆ ಸಾಧಿಸಿದ ಟೈಟನ್ಸ್ ಜಯದ ಭರವಸೆಯಲ್ಲಿತ್ತು. ಆದರೆ ನಾಯಕ ಮಣಿಂದರ್ ಸಿಂಗ್ (11) ಮತ್ತು ಮನೋಜ್ ಗೌಡ (6) ಅಮೋಘ ಆಟದ ಮೂಲಕ ಬೆಂಗಾಲ್ ತಿರುಗೇಟು ನೀಡಿತು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	16	11	4	1	60
ದಬಂಗ್ ಡೆಲ್ಲಿ	17	9	5	3	57
ಬೆಂಗಳೂರು ಬುಲ್ಸ್	19	9	8	2	55
ಹರಿಯಾಣ ಸ್ಟೀಲರ್ಸ್	17	8	6	3	53
ಜೈಪುರ ಪಿಂಕ್ ಪ್ಯಾಂಥರ್ಸ್	17	8	7	2	51
ಯು ಮುಂಬಾ	16	6	5	5	48
ಯು ಪಿ ಯೋಧಾ	17	6	8	3	47
ತಮಿಳ್ ತಲೈವಾಸ್	16	5	5	6	45
ಗುಜರಾತ್ ಜೈಂಟ್ಸ್	17	6	8	3	44
ಬೆಂಗಾಲ್ ವಾರಿಯರ್ಸ್	18	7	9	2	44
ಪುಣೇರಿ ಪಲ್ಟನ್	15	8	7	-	42
ತೆಲುಗು ಟೈಟನ್ಸ್	17	1	12	4	26

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಇಂದಿನ ಪಂದ್ಯ (ರಾತ್ರಿ)

ತಮಿಳ್ ತಲೈವಾಸ್ – ಹರಿಯಾಣ ಸ್ಟೀಲರ್ಸ್ 7.30

ಯು ಮುಂಬಾ – ಪಟ್ನಾ ಪೈರೇಟ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರ‍್ಯಾಂಕಿಂಗ್: ಅಗ್ರ 100ರೊಳಗೆ ರಾಮ್‌ಕುಮಾರ್

ನವದೆಹಲಿ (ಪಿಟಿಐ): ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ವಿಜೇತ, ಭಾರತದ ರಾಮ್‌ಕುಮಾರ್ ರಾಮನಾಥನ್ ಅವರು ಮೊದಲ ಬಾರಿ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಮೊದಲ ಬಾರಿಗೆ ಅಗ್ರ 100 ಪಟ್ಟಿಯೊಳಗೆ ಪ್ರವೇಶಿಸಿದ್ದಾರೆ.

ರೋಹನ್ ಬೋಪಣ್ಣ ಜೊತೆಗೂಡಿ ಪ್ರಶಸ್ತಿ ಗೆದ್ದುಕೊಂಡಿದ್ದ ರಾಮನಾಥನ್, ಡಬಲ್ಸ್ ವಿಭಾಗದಲ್ಲಿ ಸದ್ಯ 94ನೇ ಸ್ಥಾನದಲ್ಲಿದ್ದಾರೆ. ಬೋಪಣ್ಣ ಸದ್ಯ 35ನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ತಂಡಕ್ಕೆ ಕಾಲಿಂಗ್‌ವುಡ್ ಕೋಚ್



ಕಾಲಿಂಗ್‌ವುಡ್

ಲಂಡನ್ (ಎಪಿ): ಮಾಜಿ ಆಲ್‌ರೌಂಡರ್ ಪಾಲ್ ಕಾಲಿಂಗ್‌ವುಡ್ ಅವರನ್ನು ಇಂಗ್ಲೆಂಡ್ ಕ್ರಿಕೆಟ್ ತಂಡದ ಕೋಚ್ ಆಗಿ ನೇಮಕ ಮಾಡಲಾಗಿದೆ. ಮುಂದಿನ ತಿಂಗಳು ವೆಸ್ಟ್ ಇಂಡೀಸ್ ಎದುರು ನಡೆಯಲಿರುವ ಟೆಸ್ಟ್ ಸರಣಿಗಾಗಿ ತಾತ್ಕಾಲಿಕವಾಗಿ ಈ ನೇಮಕಾತಿ ಮಾಡಲಾಗಿದೆ.

ಸಹಾಯಕ ಕೋಚ್ ಆಗಿದ್ದ ಕಾಲಿಂಗ್‌ವುಡ್ ಅವರಿಗೆ ಈಗ ಪೂರ್ಣ-ಪ್ರಮಾಣದ ಜವಾಬ್ದಾರಿ ನೀಡಲಾಗಿದೆ. ಆ್ಯಷಸ್ ಸರಣಿಯಲ್ಲಿ ತಂಡ 0–4 ಅಂತರದ ಸೋಲು ಕಂಡಾಗ ಕೋಚ್ ಆಗಿದ್ದ ಕ್ರಿಸ್ ಸಿಲ್ವರ್‌ವುಡ್ ಅವರನ್ನು ಕಳೆದ ವಾರ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ವಜಾ ಮಾಡಿತ್ತು.

ಚಳಿಗಾಲದ ಒಲಿಂಪಿಕ್ಸ್: ಆರನೇ ಚಿನ್ನದ ಪದಕ ಗೆದ್ದುಕೊಂಡ ಐರಿನ್ ವೂಸ್ಟ್

ಬಯಾಥ್ಲಾನ್: ಚಿನ್ನ ಗೆದ್ದ ಹರ್ಮನ್

ಜಾಂಗ್ಜಿಯಾಕೊ, ಚೀನಾ (ರಾಯಿಟರ್ಸ್/ಎಎಫ್‌ಪಿ): ರೋಚಕ ಪೈಪೋಟಿಯಲ್ಲಿ ಪ್ರತಿಸ್ಪರ್ಧಿಗಳನ್ನು ನಿರಾಸೆಗೊಸಿದ ಜರ್ಮನಿಯ ಡೆನಿಸ್ ಹರ್ಮನ್ ಅವರು ಚಳಿಗಾಲದ ಒಲಿಂಪಿಕ್ಸ್‌ನ ಮಹಿಳೆಯರ ಬಯಾಥ್ಲಾನ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಸೋಮವಾರ ನಡೆದ 15 ಕಿಲೋಮೀಟರ್ ಪರ್ಸ್ಯೂಟ್‌ನಲ್ಲಿ ಅವರು ಮೊದಲಿಗರಾದರು. ಫ್ರಾನ್ಸ್‌ನ ಅನಾಯ್ಸ್ ಶೆವಲಿಯರ್ ಬೌಶೆಟ್ ಬೆಳ್ಳಿ ಪದಕ ಗೆದ್ದುಕೊಂಡರೆ ನಾರ್ವೆಯ ಮಾರ್ತೆ ಒಲ್‌ಸುಬು ಕಂಚು ಗೆದ್ದುಕೊಂಡರು.

ವಿಪರೀತ ಗಾಳಿಯಿಂದಾಗಿ ಹಿಂದಿನ ಎರಡು ದಿನಗಳಲ್ಲಿ ಕೆಲವು ಸ್ಪರ್ಧೆಗಳಿಗೆ ಅಡ್ಡಿಯಾಗಿತ್ತು. ಸೋಮವಾರ ಬಯಾಥ್ಲಾನ್ ಸಂದರ್ಭದಲ್ಲಿ ಗಾಳಿಯ ವೇಗ ಕಡಿಮೆಯಾಗಿತ್ತು. ಹೀಗಾಗಿ ಕ್ರೀಡಾಪಟುಗಳ ಹುಮ್ಮಸ್ಸು ಹೆಚ್ಚಿತ್ತು.

ರಾಷ್ಟ್ರೀಯ ಬಯಾಥ್ಲಾನ್ ಕೇಂದ್ರದಲ್ಲಿ ನಡೆದ 15 ಕಿಲೋಮೀಟರ್ ಪರ್ಸ್ಯೂಟ್‌ನ ಜಿದ್ದಾಜಿದ್ದಿಯ ಸ್ಪರ್ಧೆಯ ಕೊನೆಯ ಕ್ಷಣದ ವರೆಗೆ ಮೂವರೂ ಪರಸ್ಪರ ಮೇಲುಗೈ ಸಾಧಿಸುತ್ತ ಸಾಗಿದರು. ಆದರೆ ಚಿನ್ನದ ಪದಕ ಜರ್ಮನಿ ಅಥ್ಲೀಟ್ ಪಾಲಾಯಿತು.

ಆರಂಭದಲ್ಲಿ ಹರ್ಮನ್ ಅವರಿಗೆ ಸ್ವೀಡನ್‌ನ ಯುವ ಅಥ್ಲೀಟ್ ಎಲ್ವಿರಾ ಒಯ್ಬರ್ಗ್ ಪೈಪೋಟಿ ಒಡ್ಡಿದ್ದರು. ಸೋಚಿ ಒಲಿಂಪಿಕ್ಸ್‌ನ 4x5 ಕಿಮೀ ರಿಲೆಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಹರ್ಮನ್ ಇಲ್ಲಿ ಚಿನ್ನ ಗೆಲ್ಲಲು ಪ್ರತಿಕ್ಷಣವೂ ತೀವ್ರ ಪ್ರಯತ್ನ ಮಾಡಿದರು. 44 ನಿಮಿಷ 12.7 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಕೊನೆಯ ಲೆಗ್‌ನಲ್ಲಿ ಮಿಂಚಿದ ಬೌಶೆಟ್ 5.9 ಸೆಕೆಂಡುಗಳ ಅಂತರದಲ್ಲಿ ಮೊದಲ ಸ್ಥಾನ ಕಳೆದುಕೊಂಡರು. 2018ರ ಒಲಿಂಪಿಕ್ಸ್‌ನ ಚಾಂಪಿಯನ್ ಹಾಗೂ ಎಲ್ವಿರಾ ಅವರ ಅಕ್ಕ ಹನಾ ಒಯೆಬರ್ಗ್ ನಿರಾಶೆಗೆ ಒಳಗಾದರು. ಅವರು ಹರ್ಮನ್ ಅವರಿಗಿಂತ ಎರಡೂವರೆ ನಿಮಿಷ ತಡವಾಗಿ ಗುರಿ ತಲುಪಿದರು.

ಸ್ಪೀಡ್ ಸ್ಕೇಟಿಂಗ್ ಪ್ರಶಸ್ತಿ ಉಳಿಸಿಕೊಂಡ ವೂಸ್ಟ್ : ಸ್ಪೀಡ್ ಸ್ಕೇಟಿಂಗ್‌ನ 1500 ಮೀಟರ್ಸ್ ಸ್ಪರ್ಧೆಯಲ್ಲಿ ನೆದರ್ಲೆಂಡ್ಸ್‌ನ ಐರಿನ್ ವೂಸ್ಟ್ 53.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಒಲಿಂಪಿಕ್ಸ್‌ನಲ್ಲಿ ಆರನೇ ಚಿನ್ನ ತಮ್ಮದಾಗಿಸಿಕೊಂಡರು. ಕಳೆದ ಬಾರಿ ಕೂಡ ಚಾಂಪಿಯನ್ ಆಗಿದ್ದ ವೂಸ್ಟ್ ಸೋಮವಾರ ಒಲಿಂಪಿಕ್ ದಾಖಲೆಯನ್ನೂ ಬರೆದರು.

ಟಕಾಗಿ ಅವರು ಬೆಳ್ಳಿ ಪದಕ ಗೆದ್ದುಕೊಂಡರೆ ಆ್ಯಂಟೊನೀಟ್ ಡಿ ಜಾಂಗ್ ಕಂಚಿನ ಪದಕ ಗಳಿಸಿದರು. 2006ರ ಟ್ಯೂರಿನ್‌ನಲ್ಲಿ ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಿದ ವೂಸ್ಟ್ ಹಿಂದಿನ ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಐದು ಚಿನ್ನದ ಪದಕ ಗೆದ್ದುಕೊಂಡಿದ್ದರು.

ಸೈನಿಕನ ಬಳಕೆ: ಚೀನಾ ಸಮರ್ಥನೆ

ಚಳಿಗಾಲದ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಪೀಪಲ್ಸ್ ಲಿಬರೇಷನ್ ಆರ್ಮಿಯ ಸೈನಿಕನನ್ನು ಬಳಸಿಕೊಂಡಿದ್ದನ್ನು ಚೀನಾ ಸೋಮವಾರ ಸಮರ್ಥಿಸಿಕೊಂಡಿದೆ. 2020ರ ಗಾಲ್ವಾನ್ ಕಣಿವೆಯಲ್ಲಿ ನಡೆದ ಭಾರತ ಮತ್ತು ಚೀನಾ ಸೈನಿಕರ ನಡುವಿನ ಘರ್ಷಣೆಯಲ್ಲಿ ಪಾಲ್ಗೊಂಡ ಸೈನಿಕನಿಗೆ ಉದ್ಘಾಟನಾ ಸಮಾಂಭದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದ್ದಕ್ಕೆ ವಿಶ್ವದ ವಿವಿಧ ಕಡೆಯಿಂದ ಪ್ರತಿರೋಧ ವ್ಯಕ್ತವಾಗಿತ್ತು.



ಮಹಿಳೆಯರ ಬಯಾಥ್ಲಾನ್‌ನಲ್ಲಿ ಮುನ್ನುಗ್ಗಿದ ಡೆನಿಸ್ ಹರ್ಮನ್ –ರಾಯಿಟರ್ಸ್

ಮಾಸ್ಕ್ ಧರಿಸಿ ಕಣಕ್ಕೆ ಅಥ್ಲೀಟ್‌ಗಳು

ರಷ್ಯಾ ಮತ್ತು ಕೆನಡಾದ ಮಹಿಳಾ ಐಸ್ ಹಾಕಿಪಟುಗಳು ಮಾಸ್ಕ್ ಧರಿಸಿ ಕಣಕ್ಕೆ ಇಳಿದರು. ಸಮಯಕ್ಕೆ ಸರಿಯಾಗಿ ಕೋವಿಡ್ ಪರೀಕ್ಷೆಯ ವರದಿ ಬಾರದೇ ಇದ್ದುದರಿಂದ ತಂಡಗಳು ಈ ಕ್ರಮಕ್ಕೆ ಮುಂದಾಗಿದ್ದವು.

ಪಂದ್ಯದಲ್ಲಿ ಕೆನಡಾ 6–1ರಲ್ಲಿ ರಷ್ಯಾವನ್ನು ಮಣಿಸಿತು. ಗೊಂದಲಗಳಿಂದಾಗಿ ಪಂದ್ಯ ಒಂದು ತಾಸು ತಡವಾಗಿ ಆರಂಭಗೊಂಡಿತ್ತು. ಕೋವಿಡ್ ಆತಂಕದ ನಡುವೆಯೇ ನಡೆಯುತ್ತಿರುವ ಕೂಟದಲ್ಲಿ ಪಾಲ್ಗೊಳ್ಳುತ್ತಿರುವ ಕ್ರೀಡಾಪಟುಗಳು ಬಯೊಬಬಲ್‌ನಲ್ಲಿದ್ದಾರೆ. ಪ್ರತಿಯೊಬ್ಬರೂ ಪ್ರತಿ ಸಂದರ್ಭದಲ್ಲೂ ಮಾಸ್ಕ್ ಧರಿಸುವುದು ಕಡ್ಡಾಯ. ಆದರೆ ಸ್ಪರ್ಧೆಯ ಸಂದರ್ಭದಲ್ಲಿ ಮಾಸ್ಕ್ ಧರಿಸಬೇಕಾಗಿಲ್ಲ.

ಐಎಸ್‌ಎಲ್: ಒಡಿಶಾ ಜಯಭೇರಿ

ವಾಸ್ಕೊ (ಪಿಟಿಐ): ಜಿದ್ದಾಜಿದ್ದಿಯ ಹಣಾಹಣಿಯಲ್ಲಿ ಮೇಲುಗೈ ಸಾಧಿಸಿದ ಒಡಿಶಾ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಜಯ ಸಾಧಿಸಿತು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 2–1 ಗೋಲುಗಳಿಂದ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವನ್ನು ಒಡಿಶಾ ಮಣಿಸಿತು.

ಪಂದ್ಯದ 23ನೇ ನಿಮಿಷದಲ್ಲಿ ಜೊನಾಥಾಸ್ ಗೋಲು ಗಳಿಸಿ ಒಡಿಶಾಗೆ ಮುನ್ನಡೆ ತಂದುಕೊಟ್ಟರು. 64ನೇ ನಿಮಿಷದಲ್ಲಿ ಪೆರೆಸೊವಿಚ್ ಗಳಿಸಿದ ಗೋಲಿನೊಂದಿಗೆ ಈಸ್ಟ್ ಬೆಂಗಾಲ್ ಸಮಬಲ ಸಾಧಿಸಿತು. ಆದರೆ ಜೇವಿಯರ್ ಹರ್ನಾಂಡಜ್ 75ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಒಡಿಶಾಗೆ ಜಯ ತಂದುಕೊಟ್ಟರು.

ಬ್ಯಾಂಬೊಲಿಮ್‌ನಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಹೈದರಾಬಾದ್ ಎಫ್‌ಸಿಯನ್ನು ಎದುರಿಸಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹೈದರಾಬಾದ್ ತಂಡವು ಆ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳುವ ವಿಶ್ವಾಸದಲ್ಲಿದೆ.

ವಾಲಿಬಾಲ್: ಕೋಲ್ಕತ್ತಗೆ ಜಯ

ಹೈದರಾಬಾದ್: ನಾಯಕ ಅಶ್ವಲ್ ರೈ ತೋರಿದ ಅಮೋಘ ಸಾಮರ್ಥ್ಯದ ನೆರವಿನಿಂದ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ರೋಚಕ ಜಯ ಗಳಿಸಿತು.

ಇಲ್ಲಿಯ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಹಣಾಹಣಿಯಲ್ಲಿ 15–13, 12–15, 15–10, 12–15, 15–13 (3–2) ರಿಂದ ಕ್ಯಾಲಿಕಟ್ ಹೀರೋಸ್ ತಂಡವನ್ನು ಮಣಿಸಿತು.

ಟಿ20 ವಿಶ್ವಕಪ್: ಟಿಕೆಟ್ ಮಾರಾಟ ಆರಂಭ

ದುಬೈ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಇದೇ ವರ್ಷದ ಅಕ್ಟೋಬರ್ 16ರಿಂದ ನವೆಂಬರ್ 13ರವರೆಗೆ ನಡೆಯಲಿರುವ ಪುರುಷರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಟಿಕೆಟ್‌ಗಳ ಮಾರಾಟ ಆರಂಭವಾಗಿದೆ.

ಎಲ್ಲ 45 ಪಂದ್ಯಗಳ ಟಿಕೆಟ್‌ಗಳು t20worldcup.comನಲ್ಲಿ ಸೋಮವಾರದಿಂದ ಲಭ್ಯ ಇವೆ. 'ಮಕ್ಕಳಿಗಾಗಿ ಟಿಕೆಟ್‌ಗಳು ಮೊದಲ ಸುತ್ತಿನ ಮತ್ತು ಸೂಪರ್ 12 ಪಂದ್ಯಗಳಿಗೆ ₹ 375ರಿಂದ ಆರಂಭವಾಗುತ್ತವೆ. ವಯಸ್ಕರ ಟಿಕೆಟ್‌ಗಳು ಆಯ್ದ ಪಂದ್ಯಗಳಿಗೆ ₹ 1500ರಿಂದ ಲಭ್ಯವಿವೆ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ತಿಳಿಸಿದೆ.

ನೇಷನ್ಸ್ ಕಪ್: ಸೆನೆಗಲ್‌ನಲ್ಲಿ ಸಂಭ್ರಮ

ಡಕಾರ್ (ಎಎಫ್‌ಪಿ): ಮೊತ್ತಮೊದಲ ಬಾರಿ ಆಫ್ರಿಕಾದ ನೇಷನ್ಸ್ ಕಪ್‌ನ ಚಾಂಪಿಯನ್ ಪಟ್ಟಕ್ಕೇರಿದ ಸೆನೆಗಲ್ ಫುಟ್‌ಬಾಲ್ ತಂಡ ದೇಶದಲ್ಲಿ ಸಂಭ್ರಮದ ಅಲೆಯೇಳುವಂತೆ ಮಾಡಿದೆ. ತಂಡದ ಯಶಸ್ಸಿಗೆ ಸಂತಸ ವ್ಯಕ್ತಪಡಿಸಿರುವ ಅಧ್ಯಕ್ಷ ಮೆಕೆ ಸಾಲ್ ಸೋಮವಾರ ರಾಷ್ಟ್ರೀಯ ರಜೆ ಘೋಷಿಸಿದ್ದರು.

ಕ್ಯಾಮರೂನ್‌ನಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಮೊಹಮ್ಮದ್ ಸಲಾ ನಾಯಕತ್ವದ ಈಜಿಪ್ಟ್ ವಿರುದ್ಧ ಸೆನೆಗಲ್ ಪೆನಾಲ್ಟಿ ಶೂಟೌಟ್‌ನಲ್ಲಿ ಜಯ ಗಳಿಸಿತ್ತು. ನಿಗದಿತ ಅವಧಿಯಲ್ಲಿ ಮತ್ತು ಹೆಚ್ಚುವರಿ ಸಮಯದಲ್ಲಿ ತಂಡಗಳು ಗೋಲು ಗಳಿಸಲು ವಿಫಲವಾದವು. ಸ್ಯಾಡಿಯೊ ಮಾನೆ ನೇತೃತ್ವದಲ್ಲಿ ಕಣಕ್ಕೆ ಇಳಿದಿದ್ದ ಸೆನೆಗಲ್ ಪೆನಾಲ್ಟಿ ಶೂಟೌಟ್‌ನಲ್ಲಿ ಯಶಸ್ಸು ಕಂಡಿತು. ವಿಷಯ ತಿಳಿದ ಕೂಡಲೇ ರಾಷ್ಟ್ರಾಧ್ಯಕ್ಷರು ಈಜಿಪ್ಟ್, ಇಥಿಯೋಪಿಯಾ ಪ್ರವಾಸ ಮೊಟಕುಗೊಳಿಸಿ ವಾಪಸಾಗಿದ್ದಾರೆ.

ರಣಜಿ: ಅಭ್ಯಾಸ ಕಣದಲ್ಲಿ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಯದ ಪರಿಸ್ಥಿತಿಯಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಆಟಗಾರರನ್ನು ಒಗ್ಗಿಸುವುದು ಸವಾಲೇ ಸರಿ. ಆದರೆ ಇದನ್ನು ಮೀರಿ ನಿಲ್ಲುವ ಸಾಮರ್ಥ್ಯ ತಂಡಕ್ಕಿದೆ ಎಂದು ಕರ್ನಾಟಕ ಕ್ರಿಕೆಟ್ ತಂಡದಕೋಚ್‌ಯರೇಗೌಡಅಭಿಪ್ರಾಯಪಟ್ಟರು.

ಇದೇ 10ರಂದು ಆರಂಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಗಾಗಿ ಕರ್ನಾಟಕ ತಂಡ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ಆರಂಭಿಸಿದ್ದು ಈ ಸಂದರ್ಭದಲ್ಲಿ ಯರೇಗೌಡ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.

'ಮೂರು ವಿಭಾಗಗಳಲ್ಲಿ ತಂಡವನ್ನು ಬಲಪಡಿಸಲು ಪ್ರಯತ್ನಿಸಲಾಗುತ್ತಿದೆ. ಮಾನಸಿಕವಾಗಿ ಆಟಗಾರರನ್ನು ಸದೃಢಗೊಳಿಸಲು, ಫಿಟ್‌ನೆಸ್ ಉಳಿಸಿಕೊಳ್ಳಲು ಮತ್ತು ಏಕಾಗ್ರತೆಯನ್ನು ಕಾಯ್ದುಕೊಳ್ಳಲು ತರಬೇತಿ ನೀಡಲಾಗುತ್ತದೆ. ಈ ಮೂರು ವಿಷಯಗಳ ಮೇಲೆ ಗಮನವಿದ್ದರೆ ಯಾವ ಮಾದರಿಯಲ್ಲೂ ಆಡಲು ಕಷ್ಟವಾಗದು' ಎಂದು ಅವರು ಹೇಳಿದರು.

'ಮಾನಸಿಕ ಸದೃಢತೆಯು ಬ್ಯಾಟರ್‌ಗೆ ರಕ್ಷಣಾತ್ಮಕವಾಗಿ ಆಡಲು ಮತ್ತು ಯಾವುದೇ ಬಗೆಯ ಬೌಲಿಂಗ್ ದಾಳಿಯನ್ನು ಎದುರಿಸಲು ನೆರವಾಗುತ್ತದೆ' ಎಂದು ಅವರು ನುಡಿದರು.

ರಣಜಿ ಟೂರ್ನಿಯಲ್ಲಿ ಕರ್ನಾಟಕವು ಜಮ್ಮು ಮತ್ತು ಕಾಶ್ಮೀರ, ರೈಲ್ವೇಸ್ ಮತ್ತು ಪುದುಚೇರಿ ತಂಡಗಳಿರುವ ಗುಂಪಿನಲ್ಲಿದೆ. ಈ ಗುಂಪು ಅಷ್ಟು ಸುಲಭದ್ದಲ್ಲ ಎಂದು ಅಭಿಪ್ರಾಯಪಟ್ಟಿರುವ ಯರೇಗೌಡ ಒಂದು ತಂಡಕ್ಕೆ ಮಾತ್ರ ಮುಂದಿನ ಹಂತ ತಲುಪುವ ಅವಕಾಶ ಇರುವುದರಿಂದ ಜಾಗರೂಕತೆಯಿಂದ ಆಡಬೇಕಿದೆ ಎಂದರು.



ರಣಜಿ ಟೂರ್ನಿಗೆ ಸಜ್ಜಾಗುತ್ತಿರುವ ಕರ್ನಾಟಕ ತಂಡದ ಆಟಗಾರರು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸ ಆರಂಭಿಸಿದ್ದು ಈ ಸಂದರ್ಭದಲ್ಲಿ ಮನೀಷ್ ಪಾಂಡೆ (ಬಲ) ಮತ್ತು ಕೆ.ವಿ.ಸಿದ್ಧಾರ್ಥ್ ಕ್ಯಾಚಿಂಗ್ ತರಬೇತಿ ಪಡೆದರು –ಪ್ರಜಾವಾಣಿ ಚಿತ್ರ

ಹಾರ್ದಿಕ್ ಪಾಂಡ್ಯ ಅಲಭ್ಯ



ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಈ ಬಾರಿಯ ರಣಜಿ ಟೂರ್ನಿಯಲ್ಲಿ ಆಡದೇ ಇರಲು ನಿರ್ಧರಿಸಿದ್ದಾರೆ. ರಾಷ್ಟ್ರೀಯ ತಂಡದಲ್ಲಿ ನಿಗದಿತ ಓವರ್‌ಗಳ ಪಂದ್ಯಗಳಲ್ಲಿ ಆಡಲು ಸಿದ್ಧರಾಗುತ್ತಿರುವ ಅವರು ಅದರ ಕಡೆಗೆ ಗಮನ ಕೊಡುವುದಕ್ಕಾಗಿ ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ.

ರಣಜಿ ಟೂರ್ನಿ ಇದೇ 10ರಂದು ಆರಂಭಗೊಳ್ಳಲಿದ್ದು ಬರೋಡ ತಂಡವನ್ನು ಕೇದಾರ್ ದೇವಧರ್ ಅವರು ಮುನ್ನಡೆಸಲಿದ್ದಾರೆ. ಉಪನಾಯಕನನ್ನಾಗಿ ವಿಷ್ಣು ಸೋಲಂಕಿ ಅವರನ್ನು ನೇಮಕ ಮಾಡಲಾಗಿದೆ. ಟೂರ್ನಿಯ ಮೊದಲ ಹಂತದ ಪಂದ್ಯಗಳಿಗಾಗಿ ಬರೋಡ ಕ್ರಿಕೆಟ್ ಸಂಸ್ಥೆ 20 ಮಂದಿಯ ತಂಡವನ್ನು ಸೋಮವಾರ ಆಯ್ಕೆ ಮಾಡಿದೆ. ಪಟ್ಟಿಯಲ್ಲಿ ಹಾರ್ದಿಕ್ ಹೆಸರು ಇಲ್ಲ.

ಬೆನ್ನುನೋವಿನಿಂದ ಬಳಲುತ್ತಿರುವ ಹಾರ್ದಿಕ್ ಪಾಂಡ್ಯ ಅವರು ಟ್ವೆಂಟಿ20 ವಿಶ್ವಕಪ್ ಟೂರ್ನಿಯಲ್ಲಿ ಬೌಲಿಂಗ್ ಮಾಡದೇ ಇದ್ದುದರ ಬಗ್ಗೆ ಬಹಳಷ್ಟು ಚರ್ಚೆ ನಡೆದಿತ್ತು. 28 ವರ್ಷ ವಯಸ್ಸಿನ ಅವರು 2018ರಿಂದ ಟೆಸ್ಟ್ ಪಂದ್ಯಗಳಲ್ಲಿ ಆಡಲಿಲ್ಲ.

ದೀರ್ಘ ಮಾದರಿಯ ಕ್ರಿಕೆಟ್ ನಲ್ಲಿ ಆಡಲು ಗಾಯದ ಸಮಸ್ಯೆಗಳು ಅನುವು ಮಾಡುತ್ತಿಲ್ಲ ಎಂದು ಅವರು ಕೆಲವು ಸಂದರ್ಭಗಳಲ್ಲಿ ಹೇಳಿಕೊಂಡಿದ್ದಾರೆ.


ಹಾರ್ದಿಕ್ ಅವರ ಸಹೋದರ ಕೃಣಾಲ್ ಪಾಂಡ್ಯ ಅವರನ್ನು ರಣಜಿ ತಂಡಕ್ಕೆ ಆಯ್ಕೆ ಮಾಡಲಾಗಿದೆ

ಲೈಂಗಿಕ ದೌರ್ಜನ್ಯ ನಡೆದಿಲ್ಲ: ಪೆಂಗ್

ಬೀಜಿಂಗ್: ವಿವಾದಕ್ಕೆ ಒಳಗಾಗಿದ್ದ ಚೀನಾದ ಟೆನಿಸ್ ಆಟಗಾರ್ತಿ ಪೆಂಗ್ ಶುಯಿ, ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂದು ಪುನರುಚ್ಚರಿಸಿದ್ದಾರೆ. ಸೋಮವಾರ ಪ್ರಕಟಗೊಂಡ ಸಂದರ್ಶನವೊಂದರಲ್ಲಿ, 'ತಾವು ಯಾರ ಮೇಲೆಯೂ ಲೈಂಗಿಕ ದೌರ್ಜನ್ಯದ ಆರೋಪ ಹೊರಿಸಿಲ್ಲ. ಈ ಕುರಿತು ಬಂದಿದ್ದ ಸುದ್ದಿಗಳು ಕೇವಲ ವದಂತಿಗಳು' ಎಂದಿದ್ದಾರೆ.

ನವೆಂಬರ್‌ನಲ್ಲಿ ಸಾಮಾಜಿಕ ತಾಣದಲ್ಲಿ ಕಾಣಿಸಿಕೊಂಡಿದ್ದ ಪೋಸ್ಟ್ ಒಂದರಲ್ಲಿ 'ಚೀನಾದ ಮಾಜಿ ಉಪಾಧ್ಯಕ್ಷ ಜಾಂಗ್ ಗವೊಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದರು' ಎಂದು ಪೆಂಗ್ ಹೇಳಿರುವುದಾಗಿ ಪ್ರಕಟವಾಗಿತ್ತು. ವಿವಾದದ ಸ್ವರೂಪ ಪಡೆಯುತ್ತಿದ್ದಂತೆ ಪೋಸ್ಟ್ ಅಳಿಸಿ ಹಾಕಲಾಗಿತ್ತು.

ಐಪಿಎಲ್: ಹೋಲ್ಡರ್ ಮೇಲೆ ಆರ್‌ಸಿಬಿ ಕಣ್ಣು



ಜೇಸನ್ ಹೋಲ್ಡರ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ವೆಸ್ಟ್ ಇಂಡೀಸ್‌ನ ಪ್ರಮುಖ ಆಲ್‌ರೌಂಡರ್ ಜೇಸನ್ ಹೋಲ್ಡರ್ ಅವರನ್ನು ಭಾರಿ ಮೊತ್ತಕ್ಕೆ ತನ್ನದಾಗಿಸಿಕೊಳ್ಳುವ ನಿರೀಕ್ಷೆಯಿದೆ.

'ಫ್ರಾಂಚೈಸ್ ಈಗಾಗಲೇ ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಮೊಹಮ್ಮದ್ ಸಿರಾಜ್ ಅವರನ್ನು ಉಳಿಸಿಕೊಂಡಿದೆ. ಹೋಲ್ಡರ್ ಅವರನ್ನು ತನ್ನದಾಗಿಸಿಕೊಳ್ಳಲು ₹ 12 ಕೋಟಿ ವ್ಯಯಿಸುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

ಆರ್‌ಸಿಬಿ ಪರ್ಸ್‌ನಲ್ಲಿ ಸದ್ಯ ₹ 57 ಕೋಟಿ ರೂಪಾಯಿ ಇದೆ. ಹೋಲ್ಡರ್, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಾಜಿ ಬ್ಯಾಟರ್ ಅಂಬಟಿ ರಾಯುಡು ಮತ್ತು ರಾಜಸ್ಥಾನ ರಾಯಲ್ಸ್ ತಂಡದ ಯುವ ಪ್ರತಿಭೆ ರಿಯಾನ್ ಪರಾಗ್ ಅವರನ್ನು ಹೊಂದಲು ಫ್ರಾಂಚೈಸ್ ಆಸಕ್ತಿ ವಹಿಸಿದೆ.

'ಹೋಲ್ಡರ್‌ಗೆ ₹12 ಕೋಟಿ, ರಾಯುಡುಗೆ ₹ 8 ಕೋಟಿ ಮತ್ತು ಪರಾಗ್‌ಗೆ ₹ 7 ಕೋಟಿ ಕಾಯ್ದಿರಿಸಿದೆ ಎನ್ನಲಾಗಿದೆ.

ಕ್ರಿಕೆಟ್: ರೋಹನ್ ದ್ವಿಶತಕ

ಬೆಂಗಳೂರು: ರೋಹನ್ ಎಸ್. ಕೋಶಿ (205, 103ಎ, 4X29, 6X5) ಅವರ ಅಮೋಘ ದ್ವಿಶತಕದ ಬಲದಿಂದ ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ (2) ತಂಡವು ಜೆ.ಬಿ.ಮಲ್ಲಾರಾಧ್ಯ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಗುಂಪು 1ರಿಂದ ನಾಲ್ಕರವರೆಗಿನ ಡಿವಿಷನ್ ಲೀಗ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಬಿಯುಸಿಸಿ (2) 391 ರನ್‌ಗಳಿಂದ ವೈಎಂಸಿಎ ಕ್ರಿಕೆಟ್ ಕ್ಲಬ್ ತಂಡವನ್ನು ಸೋಲಿಸಿತು.

ಸಾದಿಕ್ ಕಿರ್ಮಾನಿ ಶತಕ: ಸಾದಿಕ್ ಕಿರ್ಮಾನಿ (154, 141ಎ, 4X19, 6X2) ಅವರು ಗಳಿಸಿದ ಭರ್ಜರಿ ಶತಕದ ನೆರವಿನಿಂದ ಯಂಗ್ ಲಯನ್ಸ್ ಕ್ರಿಕೆಟ್ ಕ್ಲಬ್ ತಂಡವು ಜಯ ಗಳಿಸಿತು.

ಮೆಟ್ರೊ ಶೀಲ್ಡ್ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಗುಂಪು 1ರಿಂದ 4ರ ಡಿವಿಷನ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 206 ರನ್‌ಗಳಿಂದ ಫ್ರೆಂಡ್ಸ್ ಇಲೆವನ್ ಕ್ರಿಕೆಟ್ ಕ್ಲಬ್ ದೊಡ್ಡಬಳ್ಳಾಪುರ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಬಿಯುಸಿಸಿ (2): 50 ಓವರ್‌ಗಳಲ್ಲಿ 8 ವಿಕೆಟ್‌ಗೆ 504 (ರೋಹನ್ ಆರ್. 50, ಕೃಷ್ಣ ಸಾಯಿ 79, ರೋಹನ್ ಕೋಶಿ 205; ಜಿ. ಲೋಕೇಶ್ವರನ್ 110ಕ್ಕೆ 2, ಜೆರೋಮ್ 62ಕ್ಕೆ 3). ವೈಎಂಸಿಎ ಕ್ರಿಕೆಟ್ ಕ್ಲಬ್: 25.1 ಓವರ್‌ಗಳಲ್ಲಿ 113 (ಕಿರಣ್ ಸೆಲ್ವಕುಮಾರ್ 20 ಜಗದೀಶ್ ಧಿರ್ 23, ಸಯಾನ್ ಅರ್ಜುನ್ 38ಕ್ಕೆ 2, ವಿನೀತ್ ಕೆ. 29ಕ್ಕೆ 5). ಫಲಿತಾಂಶ: ಬಿಯುಸಿಸಿ (2) ತಂಡಕ್ಕೆ 391 ರನ್‌ಗಳ ಜಯ.

ಯಂಗ್ ಲಯನ್ಸ್ ಕ್ಲಬ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 312 (ಸಾದಿಕ್ ಕರ್ಮಾನಿ 154, ಮೊಹಮ್ಮದ್ ನೂಮಾನ್ 55, ಗೋಪಿನಾಥ್ ಸಾಂಡ್ರಾ 29; ಶಿವನಗೌಡ ಪಾಟೀಲ 66ಕ್ಕೆ 3, ಮಂಕಲೇಶ್ ಆರ್.ಜೆ. 46ಕ್ಕೆ 3, ರಾಹುಲ್ ಪೂನಿಯಾ 58ಕ್ಕೆ 2). ಫ್ರೆಂಡ್ಸ್ ಇಲೆವನ್ ಕ್ರಿಕೆಟ್ ಕ್ಲಬ್, ದೊಡ್ಡಬಳ್ಳಾಪುರ: 23.1 ಓವರ್‌ಗಳಲ್ಲಿ 106 (ಪವನ್ ಕುಮಾರ್ 55ಕ್ಕೆ 5, ಕೃಷ್ಣ ಶ್ರೀವತ್ಸ 14ಕ್ಕೆ 3, ಸಂಜಯ್ ಅಶ್ವಿನ್ 2ಕ್ಕೆ2). ಫಲಿತಾಂಶ: ಫ್ರೆಂಡ್ಸ್ ಇಲೆವನ್ ಕ್ರಿಕೆಟ್ ಕ್ಲಬ್‌ಗೆ 206 ರನ್‌ಗಳ ಜಯ.